ಮಂಗಳೂರು
ಶನಿವಾರ, 2 ಮೇ 2026
ಸಂಪುಟ 48, ಸಂಚಿಕೆ 44 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಲಡಾಖ್ ಧರ್ಮದ ನೆಲೆಬೀಡು: ಶಾ |೦೭ | ದೋಣಿ ದುರಂತ: 9 ಜನ ಸಾವು |೦೭ | ಚಿನಾರ್ ಕಾರ್ಪ್ಸ್‌ಗೆ ಬಲ್ಬೀರ್ ಮುಖ್ಯಾಧಿಕಾರಿ |೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ವಿಶಾಖೆ

ದಿನದ ಮಾತು

ಮನಸ್ಸನ್ನು ಕಾಪಾಡಿಕೊಳ್ಳದವರಿಗೆ ಕೋಪವು ಅನರ್ಥವನ್ನು ತರುತ್ತದೆ.
▲ನೀತಿಮಂಜರಿ

ಸೂರ್ಯ ರೇಖೆಯ ಮೇಲಿನ ಚಿಹ್ನೆಗಳು

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಮೇನಲ್ಲಿ ಸರಾಸರಿಗೂ ಹೆಚ್ಚು ಮಳೆ, ಕೆಲವೆಡೆ ಉಷ್ಣ ಅಲೆ

• **ಹೊಸದಿಲ್ಲಿ:** ಮೇ ತಿಂಗಳು ದೇಶದಲ್ಲಿ ಸರಾಸರಿ ಪ್ರಮಾಣಕ್ಕಿಂತ ಹೆಚ್ಚಿನ ಮಳೆಯಾಗಲಿದೆ. ಇದರೊಂದಿಗೆ ದೇಶದ ಕೆಲವು ಭಾಗಗಳಲ್ಲಿ ತಾಪಮಾನವೂ ಏರಿಕೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹವಾಮಾನ ನಿರೀಕ್ಷಿಸಿದೆ.

• ಪುಟ ೭

ಸ್ವದೇಶಿ ಮಹೇಂದ್ರಗಿರಿ ನೌಕಾಪಡೆಗೆ ಸೇರ್ಪಡೆ

• **ಹೊಸದಿಲ್ಲಿ:** ಸಾಕಷ್ಟು ಸಮರ್ಥ ಶಸ್ತ್ರಾಸ್ತ್ರಸಜ್ಜಿತ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಒಳಗೊಂಡ ಸ್ವದೇಶಿ ಯುದ್ಧ ನೌಕೆ ಮಹೇಂದ್ರಗಿರಿಯನ್ನು ಶುಕ್ರವಾರ ಭಾರತೀಯ ನೌಕಾಪಡೆಗೆ ವಿಧ್ಯುಕ್ತವಾಗಿ ಹಸ್ತಾಂತರಿಸಲಾಯಿತು. ನೀಲ್‌ಗಿರಿ ದರ್ಜೆಯ (ಪ್ರಾಜೆಕ್ಟ್ 17ಎ) ಆರನೇ ನೌಕೆಯನ್ನು ಮುಂಬೈನ ಮಜಗಾಂವ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್(ಎಂಡಿಎಸ್ಎಲ್)ನಲ್ಲಿ ನೌಕಾಪಡೆಗೆ ಸೇರ್ಪಡೆ ಮಾಡಲಾಯಿತು.

• ಪುಟ ೭

ಅಭಿಮಾನಿಗಳಿಂದ ಬಿಎಸ್‌ವೈ ಅಭಿಮಾನೋತ್ಸವ

• ಪುಟ ೫

ನವಿಲುಗಳ ಸಾವಿಗೆ ಎಚ್5ಎನ್1 ಕಾರಣ

• ಪುಟ ೫

ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ 993 ರೂ. ಹೆಚ್ಚಳ

• ಪುಟ ೭

ಸದನಕ್ಕೆ ಪಾನಮತ್ತರಾಗಿ ಬಂದ ಪಂಜಾಬ್ ಸಿಎಂ

• ಪುಟ ೭



ಭಾರತದ ಹೈಸ್ಪೀಡ್ ಕನಸು ಸಾಕಾರ

• ಪುಟ ೭

ಸುದ್ದಿ ಸಮಗ್ರ

ಮಧ್ಯರಾತ್ರಿ ಸ್ಟ್ರಾಂಗ್ ರೂಂಗೆ ದೀದಿ | ಸೋಲಿನ ಭಯ ಎಂದ ಬಿಜೆಪಿ

ಮಮತಾ ಹೈಡ್ರಾಮಾ

• **ಹೊಸದಿಲ್ಲಿ/ಕೋಲ್ಕತ್ತಾ:** ಮತ ಎಣಿಕೆಗೆ ಕೆಲವೇ ಗಂಟೆಗಳು ಬಾಕಿ ಇರುವ ವೇಳೆ ಪಶ್ಚಿಮ ಬಂಗಾಳ ರಾಜಕೀಯದಲ್ಲಿ ಭಾರೀ ಹೈಡ್ರಾಮಾ ಶುರುವಾಗಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ವಿದ್ಯುನ್ಮಾನ ಮತಯಂತ್ರಗಳ(ಇವಿಎಂ) ಸುರಕ್ಷತೆ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದು, ಇವಿಎಂ ತಿರುಚುವ ಸಾಧ್ಯತೆಯಿದೆ ಎಂದು ಆರೋಪಿಸಿದ್ದಾರೆ. ಈ ಬೆಳವಣಿಗೆ ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ನಡುವೆ ತೀವ್ರ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿದೆ.

ಗುರುವಾರ ತಡರಾತ್ರಿ ನಡೆದ ನಾಟಕೀಯ ಬೆಳವಣಿಗೆಯಲ್ಲಿ ಮಮತಾ ಬ್ಯಾನರ್ಜಿ ಅವರು ಕೋಲ್ಕತ್ತಾದ ಭವಾನೀಪುರ ಪ್ರದೇಶದಲ್ಲಿರುವ ಇವಿಎಂ ಸ್ಟ್ರಾಂಗ್ ರೂಂಗೆ ಭೇಟಿ ನೀಡಿ ಪರಿಸ್ಥಿತಿ ಪರಿಶೀಲಿಸಿದರು. ಇವಿಎಂಗಳನ್ನು ಇರಿಸಿರುವ ಪ್ರದೇಶದ ಸುತ್ತ ಅನುಮಾನಾಸ್ಪದ ಚಟುವಟಿಕೆಗಳು ನಡೆಯುತ್ತಿವೆ ಎಂದು ಟಿಎಂಸಿ ನಾಯಕರು ಆರೋಪಿಸಿದ ಬಳಿಕ ಅವರು ಸ್ಟ್ರಾಂಗ್ ರೂಂಗೆ ಭೇಟಿ ನೀಡಿ, ಹೈಡ್ರಾಮಾ ಮಾಡಿದರು. ಅಪರಿಚಿತ ವ್ಯಕ್ತಿಗಳು ನಿರ್ಬಂಧಿತ ಪ್ರದೇಶಗಳಿಗೆ ಪ್ರವೇಶಿಸುತ್ತಿರುವ ದೃಶ್ಯಗಳು ಸಿಸಿಟಿವಿಯಲ್ಲಿ ಕಾಣಿಸಿಕೊಂಡಿವೆ ಎಂದು ಟಿಎಂಸಿ ಆರೋಪಿಸಿದೆ. ಫಲಿತಾಂಶ ತಿರುಚಲು ಯತ್ನವಾದರೆ ತಕ್ಕ ಪ್ರತಿಕ್ರಿಯೆ ನೀಡುವುದಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಎಚ್ಚರಿಕೆ ನೀಡಿದ್ದಾರೆ ಎನ್ನಲಾಗಿದೆ.

ಇದನ್ನು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಕರೆಯುತ್ತಿರುವ ಟಿಎಂಸಿ ನಾಯಕರು, ಚುನಾವಣಾ ಫಲಿತಾಂಶವನ್ನು ಪ್ರಭಾವಿತಗೊಳಿಸಲು ಸಂಚು ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ. ➡ಪುಟ ೪



ಇವಿಎಂ ಸಂಪೂರ್ಣ ಸುರಕ್ಷಿತ: ಇಸಿ

ಟಿಎಂಸಿ ಆರೋಪಗಳನ್ನು ಭಾರತೀಯ ಚುನಾವಣಾ ಆಯೋಗ ತಳ್ಳಿಹಾಕಿದೆ. ಸ್ಟ್ರಾಂಗ್ ರೂಂಗಳು 24 ಗಂಟೆಗಳ ಸಿಸಿಟಿವಿ ನಿಗಾದಲ್ಲಿದ್ದು, ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಜಾರಿಯಲ್ಲಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಸ್ಟ್ರಾಂಗ್ ರೂಂಗಳೊಳಗಿನ ಚಲನವಲನಗಳು ಅಂಚೆ ಮತಪತ್ರಗಳ ನಿರ್ವಹಣೆ ಸೇರಿದಂತೆ ಸಾಮಾನ್ಯ ಆಡಳಿತಾತ್ಮಕ ಕಾರ್ಯಗಳ ಭಾಗವಾಗಿದ್ದು, ಅದನ್ನು ಎಲ್ಲಾ ರಾಜಕೀಯ ಪಕ್ಷಗಳಿಗೆ ಪೂರ್ವ ಮಾಹಿತಿ ನೀಡಿ ನಡೆಸಲಾಗಿದೆ ಎಂದು ಆಯೋಗ ತಿಳಿಸಿದೆ.

ಎಣಿಕೆ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಕೊಲ್ಕತ್ತಾದ ವಿವಿಧ ಸ್ಟ್ರಾಂಗ್ ರೂಂಗಳ ಬಳಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆ, ನಗರ ಪೊಲೀಸ್ ಇಲಾಖೆ ಕಠಿಣ ಭದ್ರತಾ ಕ್ರಮ ಕೈಗೊಂಡಿದೆ. ಪೊಲೀಸ್ ಆಯುಕ್ತ ಅಜಯ್ ನಂದ ಹೊರಡಿಸಿದ ಆದೇಶದಂತೆ, ಎಲ್ಲಾ ಸ್ಟ್ರಾಂಗ್ ರೂಂಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಐದು ಅಥವಾ ಹೆಚ್ಚು ಜನ ಸೇರುವುದನ್ನು ನಿಷೇಧಿಸಲಾಗಿದೆ. ಮೆರವಣಿಗೆ, ಪ್ರತಿಭಟನೆ ಹಾಗೂ ಶಸ್ತ್ರಾಸ್ತ್ರ ಅಥವಾ ಸ್ಫೋಟಕ ವಸ್ತುಗಳ ಸಾಗಣೆಯ ಮೇಲೂ ನಿರ್ಬಂಧ ಹೇರಲಾಗಿದೆ. ಮೇ 4ರ ಮತ ಎಣಿಕೆ ಮುಗಿಯುವವರೆಗೆ ಈ ಆದೇಶ ಜಾರಿಯಲ್ಲಿರಲಿದೆ.

15 ಮತಗಟ್ಟೆಗಳಲ್ಲಿ ಇಂದು ಮರುಮತ

ಚುನಾವಣಾ ಆಯೋಗವು ಶುಕ್ರವಾರ ದಕ್ಷಿಣ 24 ಪರಗಣಾಸ್ ಜಿಲ್ಲೆಯ ಡೈಮಂಡ್ ಹಾರ್ಬರ್, ಮಗ್ರಾಹಟ್ ಪಶ್ಚಿಮ ವಿಧಾನಸಭಾ ಕ್ಷೇತ್ರಗಳ 15 ಮತಗಟ್ಟೆಗಳಲ್ಲಿ ಶನಿವಾರ ಮರು ಮತದಾನ ನಡೆಸಲು ಆದೇಶಿಸಿದೆ. ಮಗ್ರಾಹಟ್ ಪಶ್ಚಿಮ ಕ್ಷೇತ್ರದ 11 ಮತಗಟ್ಟೆಗಳಲ್ಲಿ, ಡೈಮಂಡ್ ಹಾರ್ಬರ್ ಕ್ಷೇತ್ರದ 4 ಮತಗಟ್ಟೆಗಳಲ್ಲಿ ಮತದಾನ ನಡೆಯಲಿದೆ. ➡ಪುಟ ೪

ಸುಪ್ರೀಂ ಮೆಟ್ಟಿಲೇರಿದ ಟಿಎಂಸಿ, ಇಂದು ವಿಚಾರಣೆ

ಮತ ಎಣಿಕೆಗೆ ಕೇವಲ ಕೇಂದ್ರ ಸರ್ಕಾರ ಮತ್ತು ಸಾರ್ವಜನಿಕ ವಲಯದ ನೌಕರರನ್ನೇ ಮೇಲ್ವಿಚಾರಕರಾಗಿ ನೇಮಿಸಿರುವ ಚುನಾವಣಾ ಆಯೋಗದ ನಿರ್ಧಾರವನ್ನು ಪ್ರಶ್ನಿಸಿ ಟಿಎಂಸಿ ಸುಪ್ರೀಂಕೋರ್ಟ್‌ಗೆ ದೂರು ನೀಡಿದೆ. ➡ಪುಟ ೪

ಟಿವಿಕೆ ಕಚೇರಿಗೆ ಬೆಂಕಿ

• **ಚೆನ್ನೈ:** ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಶ್ರೀರಂಗಂನಲ್ಲಿ ಸ್ಥಳೀಯ ಕಚೇರಿಯನ್ನು ಗುರುವಾರ ರಾತ್ರಿ ದುಷ್ಕರ್ಮಿಗಳು ಹಾನಿಗೊಳಿಸಿ ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆ ಪ್ರದೇಶದ ಸಿಸಿಟಿವಿ ದೃಶ್ಯಗಳಲ್ಲಿ ಇಬ್ಬರು ವ್ಯಕ್ತಿಗಳು ಕಚೇರಿ ಒಳಗೆ ಪ್ರವೇಶಿಸಿ, ಸ್ವಲ್ಪ ಹೊತ್ತಿನ ಬಳಿಕ ಹೊರಬರುವ ದೃಶ್ಯಗಳು ಕಂಡುಬಂದಿವೆ. ಶುಕ್ರವಾರ ಬೆಳಗ್ಗೆ ಪಕ್ಷದ ಪೋಸ್ಟರ್‌ಗಳು, ಪಕ್ಷದ ಮುಖ್ಯಸ್ಥ, ನಟ-ರಾಜಕಾರಣಿ ವಿಜಯ್ ಅವರ ಚಿತ್ರಗಳನ್ನು ಹರಿದು ಹಾಕಿರುವುದು ಕಂಡುಬಂದಿದೆ.

ವಿಶ್ವ ಕಾರ್ಮಿಕ ದಿನ ಕಾರ್ಯಕ್ರಮದಲ್ಲಿ ಸಿಎಂ

ನಮ್ಮದು ಯಾವಾಗಲೂ ಕಾರ್ಮಿಕ ಪರ ಸರ್ಕಾರ



• **ಬೆಂಗಳೂರು:** ನಮ್ಮ ಸರ್ಕಾರ ಯಾವಾಗಲೂ ಕಾರ್ಮಿಕರ ಪರವಾಗಿದ್ದು, ಅವರನ್ನು ಗೌರವಿಸುತ್ತದೆ. ರಾಜ್ಯ ಸರ್ಕಾರ ಕಾರ್ಮಿಕರಿಗೆ ಅನೇಕ ಸೌಲಭ್ಯಗಳನ್ನು ನೀಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಶುಕ್ರವಾರ ಕೆಪಿಸಿಸಿ ಕಚೇರಿಯಲ್ಲಿ ಆಯೋಜಿಸಿದ್ದ ವಿಶ್ವ ಕಾರ್ಮಿಕ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸರ್ಕಾರ ಕಾರ್ಮಿಕರ ಪರವಾಗಿ ಅನೇಕ ಕಾರ್ಯಕ್ರಮ ಕೈಗೊಂಡಿದ್ದು, ಕಾರ್ಮಿಕರು ಕೆಲಸದ ವೇಳೆ ಮೃತಪಟ್ಟರೆ ಅವರಿಗೆ ನೀಡುತ್ತಿದ್ದ 5 ಲಕ್ಷ ರೂ.ಗಳ ಪರಿಹಾರ ಮೊತ್ತವನ್ನು 8 ಲಕ್ಷ ರೂ.ಗೆ ಹೆಚ್ಚಿಸಿದೆ. ಸಹಜ ಮರಣ ಹೊಂದಿದವರ ಸಂಸ್ಕಾರಕ್ಕೆ ನೀಡುತ್ತಿದ್ದ 75 ಸಾವಿರ ರೂ.ಗಳನ್ನು ಒಂದೂವರೆ ಲಕ್ಷಕ್ಕೆ ಹೆಚ್ಚಿಸಿದೆ ಎಂದು ತಿಳಿಸಿದರು. ಕಾರ್ಮಿಕರು ದೇಶದ ಆರ್ಥಿಕ, ಸಾಮಾಜಿಕ, ಅಭಿವೃದ್ಧಿಯ ಶಿಲ್ಪಿಗಳು. ➡ಪುಟ ೪

ಕಾರ್ಮಿಕರ ಬೆವರು ಈ ದೇಶಕ್ಕೆ ನಿಜವಾದ ಅಡಿಪಾಯ. ಕಾರ್ಮಿಕರಿಗೆ ನ್ಯಾಯ ಸಿಕ್ಕಾಗ ಮಾತ್ರ ದೇಶದ ಪ್ರಗತಿ ಸಾಧ್ಯ.. ಬೇರೆ ಪಕ್ಷಗಳು ಈ ಕಾರ್ಮಿಕರ ಬಗ್ಗೆ ಕಾಳಜಿ ತೋರುತ್ತಿಲ್ಲ. ಕಳೆದ 12 ವರ್ಷಗಳಲ್ಲಿ ಎನ್‌ಡಿಎ ಸರ್ಕಾರ ಕಾರ್ಮಿಕರ ಬದುಕಿನಲ್ಲಿ ಸಣ್ಣ ಬದಲಾವಣೆ ತರಲು ಸಾಧ್ಯವಾಗಿಲ್ಲ. ಈ ದೇಶವನ್ನು ಕಟ್ಟಿದವರಿಗೆ ಗೌರವ ನೀಡುತ್ತಿಲ್ಲ.
■ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

30256 ಗಿಗ್ ಕಾರ್ಮಿಕರ ನೋಂದಣಿ

ನಮ್ಮ ಪಕ್ಷದ ವರಿಷ್ಠ ರಾಹುಲ್ ಗಾಂಧಿಯವರು ಸಂತೋಷ್ ಲಾಡ್ ಹಾಗೂ ಪ್ರಿಯಾಂಕ್ ಖರ್ಗೆ ಹಾಗೂ ನನ್ನೊಂದಿಗೆ ಚರ್ಚಿಸಿ ಕಾರ್ಮಿಕರಿಗೆ ನೆರವಾಗುವ ಕೆಲಸವನ್ನು ಮಾಡಿದ್ದಾರೆ. ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆಯಲ್ಲಿ 30256 ಗಿಗ್ ಕಾರ್ಮಿಕರನ್ನು ನೋಂದಾಯಿಸಲಾಗಿದ್ದು, ಅಪಘಾತದಲ್ಲಿ ಮರಣ ಹೊಂದಿದವರಿಗೆ 4 ಲಕ್ಷ ರೂ. ಪರಿಹಾರ ನೀಡಲು ತೀರ್ಮಾನಿಸಿದೆ. ಈಗಾಗಲೇ ಐದು ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಶ್ರಮಿಕ ವರ್ಗಗಳ ಮಕ್ಕಳೂ ಉತ್ತಮ ಶಿಕ್ಷಣ ಪಡೆಯಲಿ

• ಪುಟ ೪

ಮಹಾರಾಷ್ಟ್ರ: ಮಾದಕ ಜಾಲದ ಮೇಲೆ ಎನ್‌ಸಿಬಿ ಬಿಗಿ ಬಲೆ

1,745 ಕೋಟಿ ಮೌಲ್ಯದ ಡ್ರಗ್ಸ್ ವಶ

• **ಹೊಸದಿಲ್ಲಿ:** ಮುಂಬೈನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಂತಾರಾಷ್ಟ್ರೀಯ ಮಾದಕ ವಸ್ತು ಸಾಗಣೆ ಜಾಲವನ್ನು ಮಾದಕ ವಸ್ತು ನಿಯಂತ್ರಣ ಬ್ಯೂರೋ (ಎನ್‌ಸಿಬಿ) ಭೇದಿಸಿದ್ದು, ಸುಮಾರು 1,745 ಕೋಟಿ ರೂ. ಮೌಲ್ಯದ 349 ಕೆಜಿ ಉನ್ನತ ದರ್ಜೆಯ ಕೊಕೇನ್ ವಶಪಡಿಸಿಕೊಂಡಿದೆ. ಈ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾಹಿತಿ ಹಂಚಿಕೊಂಡಿದ್ದಾರೆ.



ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ಅಮಿತ್ ಶಾ, ದೇಶದಲ್ಲಿ ಮಾದಕ ವಸ್ತುಗಳ ಜಾಲವನ್ನು ಸಂಪೂರ್ಣವಾಗಿ ಹತ್ತಿಕ್ಕಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಕೆಳಮಟ್ಟದಿಂದ ಮೇಲಿನವರೆಗೆ ಎನ್‌ಸಿಬಿ ನಡೆಸಿದ ಕಾರ್ಯಾಚರಣೆ ದೊಡ್ಡ ಯಶಸ್ಸಿಗೆ ಕಾರಣವಾಗಿದೆ ಎಂದಿದ್ದಾರೆ. ಈ ಮಹತ್ವದ ಕಾರ್ಯಾಚರಣೆ ಮೂಲಕ ಅಂತಾರಾಷ್ಟ್ರೀಯ ಮಾದಕ ಜಾಲಕ್ಕೆ ದೊಡ್ಡ ಹೊಡೆತ ನೀಡಲಾಗಿದೆ ಎಂದು ಹೇಳಿದ್ದಾರೆ. ಇದೇ ವೇಳೆ, ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಎನ್‌ಸಿಬಿ ಅಧಿಕಾರಿಗಳು, ಸಿಬ್ಬಂದಿಯನ್ನು ಶಾ ಅಭಿನಂದಿಸಿದ್ದಾರೆ. ➡ಪುಟ ೪

- ಆಪರೇಷನ್ ಗ್ಲೋಬಲ್-ಹಂಟ್‌ನಲ್ಲಿ ದಾವೂದ್ ಸಹಚರ ಸಲೀಂ ಡೋಲಾ ಬಂಧನದ ಬೆನ್ನಲ್ಲೇ ಮಹತ್ವದ ಕಾರ್ಯಾಚರಣೆ
- ಸುಮಾರು 1,745 ಕೋಟಿ ರೂ. ಮೌಲ್ಯದ 349 ಕೆಜಿ ಉನ್ನತ ದರ್ಜೆಯ ಕೊಕೇನ್ ವಶಪಡಿಸಿಕೊಂಡ ಎನ್‌ಸಿಬಿ
- ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಎನ್‌ಸಿಬಿ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಮಿತ್ ಶಾ ಅಭಿನಂದನೆ

ನೌಕರರ ವೇತನ ನೀಡಲಾಗದ ಸರ್ಕಾರ: ಬಿಜೆಪಿ ರಾಜ್ಯಾಧ್ಯಕ್ಷ

ರಾಜ್ಯ ಆಡಳಿತಯಂತ್ರ ಕುಸಿತ: ಬಿವೈವಿ

• **ಬೆಂಗಳೂರು:** ನೌಕರರ ವೇತನಕ್ಕೂ ಹಣ ನೀಡಲಾಗದ ರಾಜ್ಯದ ಕಾಂಗ್ರೆಸ್ ಸರ್ಕಾರ ದಿವಾಳಿಯಾಗಿದ್ದು, ಆಡಳಿತಯಂತ್ರ ಸಂಪೂರ್ಣ ಕುಸಿದು ಬಿದ್ದಿದೆ. ಭ್ರಷ್ಟಾಚಾರ ಮಿತಿಮೀರಿ ಹೋಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದ್ದಾರೆ.



ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ಮಾತನಾಡಿದ ಅವರು, ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಹಣ ನೀಡುತ್ತಿಲ್ಲ. ಕೇಂದ್ರ ಸರ್ಕಾರದ ಮೇಲೆ ಆರೋಪ ಹೊರಿಸುವುದರಲ್ಲಿ ತೊಡಗಿದೆ ಎಂದು ದೂರಿದರು. ಆಡಳಿತ ಪಕ್ಷದ ಆಂತರಿಕ ಕಚ್ಚಾಟ ಹೆಚ್ಚಾಗಿದೆ. ಸಿಎಂ ಕುರ್ಚಿಗೆ ಪೈಪೋಟಿ ಹೆಚ್ಚಾಗಿದೆ. ಆಡಳಿತ ಪಕ್ಷದ ಶಾಸಕರು ಸಚಿವ ಸ್ಥಾನಕ್ಕಾಗಿ ದಿಲ್ಲಿಯಲ್ಲಿ ವಾಸ್ತವ್ಯ ಹೂಡಿದ್ದಾರೆ. ಒಮ್ಮೆ ಡಿ.ಕೆ.ಶಿವಕುಮಾರ್ ಬೆಂಬಲಿಗರು ದಿಲ್ಲಿಗೆ ಹೋದರೆ, ಮತ್ತೊಮ್ಮೆ ಸಿದ್ದರಾಮಯ್ಯ ಅವರ ಬೆಂಬಲಿಗರು ದಿಲ್ಲಿಯಲ್ಲಿ ಬೀಡುಬಿಡುತ್ತಾರೆ. ➡ಪುಟ ೪

ಹಿಂದುಗಳಿಗೆ ಅಪಮಾನ ಸಲ್ಲದು

ಇತ್ತೀಚೆಗೆ ನಡೆದ ಸಚಿವ ಸಂಪುಟದ ಸಭೆ ಅಲ್ಪಸಂಖ್ಯಾತರಿಗೆ ಮತ್ತೆ 650 ಕೋಟಿ ರೂ. ನೀಡಲು ತೀರ್ಮಾನ ಕೈಗೊಂಡಿದೆ. ಬಿಜೆಪಿ ಅಲ್ಪಸಂಖ್ಯಾತರ ವಿರೋಧಿಗಳಲ್ಲ. ಆದರೆ, ಈ ಸರ್ಕಾರ ಮಾತ್ರ ಪದೇ ಪದೇ ಅಲ್ಪಸಂಖ್ಯಾತರನ್ನು ಓಲೈಸಲು ಹಣ ನೀಡುತ್ತಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ಹಿಂದುಗಳು ಮತ ಹಾಕಿಲ್ಲವೇ? ಹಿಂದುಗಳಿಗೆ ಮುಖ್ಯಮಂತ್ರಿಗಳು ಅಪಮಾನ ಮಾಡುತ್ತಿರುವುದು ಅಕ್ಷಮ್ಯ. ಅಲ್ಪಸಂಖ್ಯಾತರನ್ನು ಓಲೈಸುವ ನಿರ್ಧಾರವನ್ನು ಪದೇ ಪದೇ ಕೈಗೊಳ್ಳುತ್ತಿರುವ ಈ ಸರ್ಕಾರವನ್ನು ರಾಜ್ಯದ ಜನ ಕ್ಷಮಿಸುವುದಿಲ್ಲ. ಹಿಂದುಗಳಿಗೆ ಅಪಮಾನ ಸಲ್ಲದು ಎಂದು ವಿಜಯೇಂದ್ರ ಹೇಳಿದರು.

ಜಿಎಸ್‌ಟಿ ಸಂಗ್ರಹದಲ್ಲಿ ದಾಖಲೆ

- ಆಮದು ಆಧಾರಿತ ಆದಾಯದಲ್ಲಿ ಭಾರಿ ಏರಿಕೆ
- ಇದೇ ಮೊದಲ ಬಾರಿಗೆ ದಾಖಲೆಯ ಜಿಎಸ್‌ಟಿ ಸಂಗ್ರಹ
- ಏಪ್ರಿಲ್‌ನಲ್ಲಿ 2.43 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ



• **ಹೊಸದಿಲ್ಲಿ:** ಏಪ್ರಿಲ್ ತಿಂಗಳಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವು ಶೇ.8.7 ಏರಿಕೆಯೊಂದಿಗೆ ದಾಖಲೆ ಮಟ್ಟದ 2.43 ಲಕ್ಷ ಕೋಟಿ ರೂ. ತಲುಪಿದೆ. ಸರ್ಕಾರ ಬಿಡುಗಡೆ ಮಾಡಿದ ಅಂಕಿ-ಅಂಶಗಳ ಪ್ರಕಾರ, ಆಮದು ಆಧಾರಿತ ಆದಾಯದಲ್ಲಿ ವೇಗವಾದ ಏರಿಕೆ ಈ ಬೆಳವಣಿಗೆಗೆ ಪ್ರಮುಖ ಕಾರಣವಾಗಿದೆ. ಇದಕ್ಕೂ ಮೊದಲು ಗರಿಷ್ಠ ಜಿಎಸ್‌ಟಿ ಸಂಗ್ರಹವು ಕಳೆದ ವರ್ಷದ ಏಪ್ರಿಲ್‌ನಲ್ಲಿ 2.23 ಲಕ್ಷ ಕೋಟಿ ರೂ. ದಾಖಲಾಗಿತ್ತು. ಈ ಬಾರಿ ಆ ದಾಖಲೆಯನ್ನು ಮೀರಿ ಹೊಸ ಗರಿಷ್ಠ ಮಟ್ಟ ತಲುಪಲಾಗಿದೆ. ➡ಪುಟ ೪

ನೌಕರರ ಹಿತಕ್ಕಾಗಿ ಬೇಕಿದೆ ಕೆಎಸ್‌ಎಟಿ

▸ ವೀರಣ್ಣ ಬಳಿಗಾರ

ದಿಗಂತ ವಿಶೇಷ

• **ಬೆಂಗಳೂರು:** ರಾಜ್ಯ ಸರ್ಕಾರಿ ನೌಕರರ ನೇಮಕಾತಿ ಮತ್ತು ಸೇವಾ ವಿಷಯಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಸ್ಥಾಪಿಸಲಾಗಿರುವ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯನ್ನು (ಕೆಎಸ್‌ಎಟಿ) ರದ್ದುಪಡಿಸದೆ ಮುಂದುವರಿಸಬೇಕೆಂಬುದು ಸರ್ಕಾರಿ ನೌಕರರ ಒತ್ತಾಯವಾಗಿದೆ.



ಕೇಂದ್ರ ಸರ್ಕಾರದ 1986ರ ಅಧಿಸೂಚನೆ ಮೇರೆಗೆ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಪ್ರಧಾನ ಪೀಠವನ್ನು ಸ್ಥಾಪಿಸಲಾಯಿತು. ನಂತರ ಬೆಳಗಾವಿ ಹಾಗೂ ಕಲಬುರ್ಗಿ ಜಿಲ್ಲೆಗಳಲ್ಲಿ ಸಂಚಾರಿ ಪೀಠಗಳನ್ನು 2018 ಮತ್ತು 2019ರಲ್ಲಿ ಸ್ಥಾಪಿಸಲಾಯಿತು. ರಾಜ್ಯ ಸರ್ಕಾರವು ಫೆಬ್ರವರಿಯಲ್ಲಿ ಕೆಎಸ್‌ಎಟಿ ರದ್ದುಪಡಿಸುವ ಅಥವಾ ಮುಂದುವರಿಸುವ ಸಂಬಂಧ ನ್ಯಾ.ಉಮೇಶ್ ಎಂ.ಅಡಿಗ ಅವರ ನೇತೃತ್ವದಲ್ಲಿ ಜ್ಯುಡಿಷಿಯಲ್ ಇಂಪ್ಯಾಕ್ಟ್ ಅಸೆಸ್ಮೆಂಟ್ ಕಮಿಟಿ ರಚಿಸಿದೆ. ➡ಪುಟ ೪





ಗ್ರೇಟ್ ನಿಕೋಬಾರ್ ಯೋಜನೆ

ರಾಷ್ಟ್ರೀಯ ಭದ್ರತೆಯ ಜೀವನಾಡಿ

ಬಂಗಾಳ ಕೊಲ್ಲಿಯ ಆಗ್ನೇಯ ಭಾಗದಲ್ಲಿ, ಇಂಡೋನೇಷ್ಯಾದ ಸುಮಾತ್ರಾ ದ್ವೀಪಕ್ಕಿಂತ ಕೇವಲ 150 ಕಿಲೋಮೀಟರ್ ದೂರದಲ್ಲಿರುವ ಗ್ರೇಟ್ ನಿಕೋಬಾರ್ ದ್ವೀಪವು, ಇಂದು ಭಾರತದ ಭೂಪಟದಲ್ಲಿ ಅತ್ಯಂತ ಮಹತ್ವದ ಭೌಗೋಳಿಕ ಬಿಂದುವಾಗಿ ಗುರುತಿಸಿಕೊಂಡಿದೆ. ಹೊಸದಿಲ್ಲಿಯಿಂದ ಸುಮಾರು 3,000 ಕಿಲೋಮೀಟರ್ ದೂರದಲ್ಲಿ, ವಿಶ್ವದ ಅತ್ಯಂತ ಜನನಿಬಿಡ ಸಮುದ್ರ ಮಾರ್ಗವಾದ ಮಲಕ್ಕಾ ಜಲಸಂಧಿಯ ಪಶ್ಚಿಮ ದ್ವಾರದ ಬಳಿ ಸ್ಥಿತವಾಗಿರುವ ಈ ದ್ವೀಪವನ್ನು ಒಂದು ಸಂಪೂರ್ಣ ಸಾಮುದ್ರಿಕ ಮತ್ತು ಸಾಮರಿಕ ಕೇಂದ್ರವಾಗಿ ರೂಪಿಸುವ ಮಹತ್ವಾಕಾಂಕ್ಷಿ ಯೋಜನೆಯೇ ಗ್ರೇಟ್ ನಿಕೋಬಾರ್ ಸಮಗ್ರ ಅಭಿವೃದ್ಧಿ ಯೋಜನೆ. ಈ 81,000 ಕೋಟಿ ರೂ.ಯ ಬೃಹತ್ ಯೋಜನೆಯ ಸುತ್ತ ಇಂದು ರಾಷ್ಟ್ರಮಟ್ಟದ ಚರ್ಚೆ ಮತ್ತು ರಾಜಕೀಯ ಬಿರುಗಾಳಿ ಎದ್ದಿದೆ. ಒಂದೆಡೆ ಕೇಂದ್ರ ಸರ್ಕಾರವು ಇದನ್ನು ಭಾರತದ ಸಾಮರಿಕ ಜೀವನಾಡಿ ಎಂದು ಬಣ್ಣಿಸುತ್ತಿದ್ದರೆ, ಮತ್ತೊಂದೆಡೆ ಕಾಂಗ್ರೆಸ್ಸಿನ ಮುಖಂಡರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಇದನ್ನು ಪರಿಸರ ವಿನಾಶಕ ಯೋಜನೆ ಎಂದು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಆದರೆ ಭಾರತದ ಭೌಗೋಳಿಕ-ರಾಜಕೀಯ ವಾಸ್ತವತೆ, ಚೀನಾದ ಆಕ್ರಮಣಕಾರಿ ಸಮುದ್ರ ಪ್ರವೇಶ, ಮತ್ತು ಇಂಡೋ-ಪೆಸಿಫಿಕ್ ಪ್ರದೇಶದಲ್ಲಿನ ಬದಲಾಗುತ್ತಿರುವ ಶಕ್ತಿ ಸಮತೋಲನವನ್ನು ಗಮನಿಸಿದರೆ, ಗ್ರೇಟ್ ನಿಕೋಬಾರ್ ಯೋಜನೆಯು ಒಂದು ಆಯ್ಕೆಯಲ್ಲ ಅದು ಭಾರತದ ಸಾರ್ವಭೌಮತೆಯ ಅನಿವಾರ್ಯ ಅಗತ್ಯ.

ಯೋಜನೆಯ ಸಂಕ್ಷಿಪ್ತ ಪರಿಚಯ

ನೀತಿ ಆಯೋಗ ಪರಿಕಲ್ಪಿಸಿದ ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಸಂಯೋಜಿತ ಅಭಿವೃದ್ಧಿ ನಿಗಮ(ಎಎನ್ಐಐಡಿಸಿ) ಅನುಷ್ಠಾನಗೊಳಿಸುತ್ತಿರುವ ಈ ಯೋಜನೆಯು 166.10 ಚದರ ಕಿಲೋಮೀಟರ್ ವಿಸ್ತಾರವನ್ನು ಒಳಗೊಂಡಿದೆ. ಒಟ್ಟು ನಾಲ್ಕು ಪ್ರಮುಖ ಘಟಕಗಳನ್ನು ಇದು ಒಳಗೊಂಡಿದೆ
ಗಾಲಥಿಯಾ ಕೊಲ್ಲಿಯಲ್ಲಿ ಅಂತಾರಾಷ್ಟ್ರೀಯ ಕಂಟೈನರ್ ಟ್ರಾನ್ಸ್‌ಶಿಪ್‌ಮೆಂಟ್ ಟರ್ಮಿನಲ್ (ಐಸಿಟಿಟಿ), ದ್ವಿಬಳಕೆಯ (ನಾಗರಿಕ ಮತ್ತು ಸೇನಾ) ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, 450 ಮೆಗಾವಾಟ್ ಸಾಮರ್ಥ್ಯದ ಹಸಿರು ಇಂಧನ ವಿದ್ಯುತ್ ಸ್ಥಾವರ ಮತ್ತು ಸುಮಾರು 1.25 ಲಕ್ಷ ಜನರಿಗೆ ಆಶ್ರಯ ಒದಗಿಸಬಲ್ಲ ಒಂದು ಆಧುನಿಕ ಗ್ರೀನ್ ಫೀಲ್ಡ್ ಪಟ್ಟಣ. ಈ ಯೋಜನೆಯನ್ನು ಮುಂದಿನ 30 ವರ್ಷಗಳಲ್ಲಿ ನಾಲ್ಕು ಹಂತಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಮೊದಲ ಹಂತವು 2028ರ ವೇಳೆಗೆ ಮುಗಿಯಬೇಕಿದ್ದು, ಆ ವೇಳೆಗೆ ಬಂದರು 40 ಲಕ್ಷ ಟಿಇಯು (ಇಪ್ಪತ್ತು ಅಡಿ ಸಮಾನ ಘಟಕ) ಸಾಮರ್ಥ್ಯ ಪಡೆಯಲಿದೆ. 2058ರ ವೇಳೆಗೆ ಒಟ್ಟಾರೆ ಸಾಮರ್ಥ್ಯ 1.6 ಕೋಟಿ ಟಿಇಯು ತಲುಪುವ ನಿರೀಕ್ಷೆಯಿದೆ.

ಯೋಜನೆಯ ನಾಲ್ಕು ಹಂತಗಳು ಮತ್ತು ಕಾಲಮಿತಿ

ಗ್ರೇಟ್ ನಿಕೋಬಾರ್ ಯೋಜನೆಯನ್ನು ಎಚ್ಚರಿಕೆಯಿಂದ, ಹಂತ ಹಂತವಾಗಿ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ. ಮೊದಲ ಹಂತ (2024–2028) ಗಾಲಥಿಯಾ ಬಂದರಿನ ಮೊದಲ ಭಾಗ ಮತ್ತು ವಿಮಾನ ನಿಲ್ದಾಣದ ಮೊದಲ ಹಂತದ ನಿರ್ಮಾಣವನ್ನು ಒಳಗೊಂಡಿದೆ. ಈ ಹಂತದಲ್ಲಿಯೇ ಬಂದರು 40 ಲಕ್ಷ ಟಿಇಯು ಸಾಮರ್ಥ್ಯ ಪಡೆಯಲಿದೆ. ಎರಡನೇ ಹಂತದಲ್ಲಿ (2028–2035) ವಿದ್ಯುತ್ ಸ್ಥಾವರ, ಪಟ್ಟಣ ನಿರ್ಮಾಣ ಮತ್ತು ರಸ್ತೆ ಜಾಲದ ವಿಸ್ತರಣೆ ನಡೆಯಲಿದೆ. ಮೂರನೇ ಹಂತದಲ್ಲಿ (2035–2045) ಬಂದರಿನ ಸಾಮರ್ಥ್ಯ ದ್ವಿಗುಣಗೊಳ್ಳಲಿದ್ದು, ಪ್ರವಾಸೋದ್ಯಮ ಮತ್ತು ಪರಿಸರ–ಪ್ರವಾಸೋದ್ಯಮ ಸೌಲಭ್ಯಗಳು ಆರಂಭವಾಗಲಿವೆ. ನಾಲ್ಕನೇ ಮತ್ತು ಅಂತಿಮ ಹಂತದಲ್ಲಿ (2045–2058) ಗ್ರೇಟ್ ನಿಕೋಬಾರ್ ಪೂರ್ಣ ಪ್ರಮಾಣದ ಅಂತಾರಾಷ್ಟ್ರೀಯ ಸಾಮುದ್ರಿಕ ಮತ್ತು ಸಾಮರಿಕ ಕೇಂದ್ರವಾಗಿ ಬೆಳೆಯಲಿದೆ. ಪ್ರತಿ ಹಂತವನ್ನು ಪರಿಸರ ಪರಿಣಾಮ ಮೌಲ್ಯಮಾಪನ ಮತ್ತು ಶಮನ ಕ್ರಮಗಳ ಜೊತೆ ಜಾರಿಗೊಳಿಸಲಾಗುತ್ತದೆ.

ಸಾಮರಿಕ ಆಯಾಮ: ಚೀನಾದ ಮುತ್ತಿನ ಸರಕ್ಕೆ ಭಾರತದ ಉತ್ತರ

ಕಳೆದ ಎರಡು ದಶಕಗಳಲ್ಲಿ ಚೀನಾ ತನ್ನ ಬೆಲ್ಟ್ ಆ್ಯಂಡ್ ರೋಡ್ ಇನಿಶಿಯೇಟಿವ್ (ಬಿಆರ್‌ಐ)ಮೂಲಕ ಭಾರತದ ಸುತ್ತ ಒಂದು ಸಾಮರಿಕ ಜಾಲವನ್ನು ಹೆಣೆದಿದೆ. ಇದನ್ನು ಪಾಶ್ಚಿಮಾತ್ಯ ಸಾಮರಿಕ ತಜ್ಞರು ಸ್ಟ್ರಿಂಗ್ ಆಫ್ ಪರ್ಲ್ಸ್ ಅಂದರೆ ಮುತ್ತಿನ ಸರ ಎಂದು ಕರೆಯುತ್ತಾರೆ. ಪಾಕಿಸ್ತಾನದ ಗ್ವಾದರ್, ಶ್ರೀಲಂಕಾದ ಹಂಬಂಟೋಟ, ಬಾಂಗ್ಲಾದೇಶದ ಚಿತ್ತಗಾಂಗ್, ಮ್ಯಾನ್ಮಾರ್‌ನ ಕ್ಯಾಕ್‌ಪ್ಯೂ ಮತ್ತು ಆಫ್ರಿಕಾದ ಜಿಬೂತಿಯಲ್ಲಿ ಚೀನಾ ಬಂದರು ಮತ್ತು ನೌಕಾ ನೆಲೆಗಳನ್ನು ಸ್ಥಾಪಿಸಿದೆ. ಜಿಬೂತಿಯಲ್ಲಂತೂ ಚೀನಾದ ಮೊದಲ ಸಾಗರೋತ್ತರ ಸೇನಾ ನೆಲೆಯಿದೆ. ಇಷ್ಟೇ ಅಲ್ಲ, ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ ನೌಕಾಪಡೆ(ಪಿಎಲ್‌ಎಎನ್) ಹಿಂದೂ ಮಹಾಸಾಗರದಲ್ಲಿ ತನ್ನ ಸಬ್‌ಮರೀನ್‌ಗಳ ಗಸ್ತು ಹೆಚ್ಚಿಸಿದೆ. ಈ ಸಂದರ್ಭದಲ್ಲಿ ಭಾರತ ಮೌನವಾಗಿ ಕುಳಿತುಕೊಳ್ಳುವಂತಿಲ್ಲ. ಗ್ರೇಟ್ ನಿಕೋಬಾರ್ ಯೋಜನೆಯು ಈ ಮುತ್ತಿನ ಸರಕ್ಕೆ ಭಾರತ ಕಟ್ಟುತ್ತಿರುವ ಸಾಮರಿಕ ಪ್ರತಿಕ್ರಿಯೆಯಾಗಿದೆ. ಒಂದು ಆಳವಾದ ಬಂದರು, ದ್ವಿಬಳಕೆಯ ವಿಮಾನ ನಿಲ್ದಾಣ, ಮತ್ತು ಸಾಮುದ್ರಿಕ ಗಸ್ತು ಸೌಲಭ್ಯಗಳು ಒಂದೇ ಕಡೆ ಇದ್ದಾಗ, ಭಾರತೀಯ ನೌಕಾಪಡೆ ಮತ್ತು ವಾಯುಪಡೆ ತನ್ನ ಯುದ್ಧನೌಕೆಗಳು, ಯುದ್ಧವಿಮಾನಗಳು, ಸಾಗರೋಪಯೋಗಿ ಗಸ್ತು ವಿಮಾನಗಳು ಮತ್ತು ಡ್ರೋನ್‌ಗಳನ್ನು ಮಲಕ್ಕಾ ಜಲಸಂಧಿಗೆ ಬಹಳ ಹತ್ತಿರ ತಲುಪಿಸಬಹುದು. ಬಿಕ್ಕಟ್ಟಿನ ಸಮಯದಲ್ಲಿ, ಚೀನಾದ ತೈಲ ಪೂರೈಕೆಯ ಮೇಲೆ ಭಾರತ ಒತ್ತಡ ಹೇರಬಲ್ಲದು ಎಂಬ ಸಂದೇಶ ಸ್ವಯಂ ಒಂದು ಬಲಿಷ್ಠ ತಡೆ ತಂತ್ರ.

ಭೌಗೋಳಿಕ ಮಹತ್ವ: ಪ್ರಕೃತಿಯೇ ನೀಡಿದ ಸಾಮರಿಕ ವರ


ಗ್ರೇಟ್ ನಿಕೋಬಾರ್ ದ್ವೀಪವು ಮಲಕ್ಕಾ ಜಲಸಂಧಿಯ ಉತ್ತರ ದ್ವಾರದಿಂದ ಕೇವಲ 40–90 ನಾಟಿಕಲ್ ಮೈಲಿ (74–167 ಕಿ.ಮೀ.) ದೂರದಲ್ಲಿದೆ. ಮಲಕ್ಕಾ ಜಲಸಂಧಿಯು ಹಿಂದೂ ಮಹಾಸಾಗರವನ್ನು ಪ್ರಶಾಂತ ಮಹಾಸಾಗರಕ್ಕೆ ಜೋಡಿಸುವ ಪ್ರಮುಖ ಸಮುದ್ರ ಮಾರ್ಗ. ವಿಶ್ವದ ಒಟ್ಟು ಸಮುದ್ರ ವ್ಯಾಪಾರದ ಸುಮಾರು ಶೇ.30 ಈ ಮಾರ್ಗದ ಮೂಲಕವೇ ಸಾಗುತ್ತದೆ. ಚೀನಾಕ್ಕೆ ಪಶ್ಚಿಮ ಏಷ್ಯಾ ಮತ್ತು ಆಫ್ರಿಕಾದಿಂದ ಹೋಗುವ ಶೇ.80ರಷ್ಟು ತೈಲ ಆಮದು ಇದೇ ಜಲಸಂಧಿಯ ಮೂಲಕ ಸಾಗುತ್ತದೆ. ಚೀನಾದ ಸಾಮರಿಕ ತಜ್ಞರೇ ಇದನ್ನು ಮಲಕ್ಕಾ ಸಂದಿಗ್ಧತೆ ಎಂದು ಕರೆಯುತ್ತಾರೆ –ಏಕೆಂದರೆ ಈ ಮಾರ್ಗ ತಡೆದರೆ ಚೀನಾದ ಆರ್ಥಿಕತೆ ಕುಸಿಯಬಹುದು.
ಗ್ರೇಟ್ ನಿಕೋಬಾರ್ ಸುಂಡಾ ಮತ್ತು ಲೊಂಬೋಕ್ ಜಲಸಂಧಿಗಳಿಂದಲೂ ಹೆಚ್ಚು ದೂರವಿಲ್ಲ. ಇವು ಚೀನಾದ ಹಡಗುಗಳು ದಕ್ಷಿಣ ಚೀನಾ ಸಮುದ್ರ ಮತ್ತು ಹಿಂದೂ ಮಹಾಸಾಗರದ ನಡುವೆ ಚಲಿಸಲು ಬಳಸುವ ಪರ್ಯಾಯ ಮಾರ್ಗಗಳು. ಒಂದೇ ಮಾತಿನಲ್ಲಿ ಹೇಳುವುದಾದರೆ, ಯಾವ ರಾಷ್ಟ್ರ ಗ್ರೇಟ್ ನಿಕೋಬಾರ್ ಮೇಲೆ ಸದೃಢ ಹಿಡಿತ ಹೊಂದಿರುತ್ತದೋ, ಆ ರಾಷ್ಟ್ರ ಪೂರ್ವ ಹಿಂದೂ ಮಹಾಸಾಗರದ ಶಕ್ತಿ ಮತ್ತು ವ್ಯಾಪಾರ ಮಾರ್ಗಗಳನ್ನು ನಿಯಂತ್ರಿಸಬಲ್ಲದು. ಪ್ರಕೃತಿಯೇ ಭಾರತಕ್ಕೆ ಕೊಟ್ಟಿರುವ ಈ ಸಾಮರಿಕ ವರವನ್ನು ಬಳಸಿಕೊಳ್ಳದೆ ಬಿಡುವುದು ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾಗುತ್ತದೆ.

ತ್ರಿ-ಸೇನಾ ಕಮಾಂಡ್ ಮತ್ತು ಐಎನ್‌ಎಸ್ ಬಾಜ್

ಅಂಡಮಾನ್ ಮತ್ತು ನಿಕೋಬಾರ್ ಕಮಾಂಡ್(ಎಎನ್‌ಸಿ) ಭಾರತದ ಮೊದಲ ಮತ್ತು ಏಕೈಕ ತ್ರಿ-ಸೇನಾ ಸಂಯೋಜಿತ ಕಮಾಂಡ್. ಆದರೆ ಗ್ರೇಟ್ ನಿಕೋಬಾರ್‌ನ ಕ್ಯಾಂಪ್ಬೆಲ್ ಬೇಯಲ್ಲಿರುವ ಐಎನ್‌ಎಸ್ ಬಾಜ್ ನೌಕಾ ವಾಯುನೆಲೆ ಇಂದಿಗೂ ಸೀಮಿತ ಸಾಮರ್ಥ್ಯವನ್ನೇ ಹೊಂದಿದೆ. ರನ್‌ವೇ ಚಿಕ್ಕದಿದೆ, ದೊಡ್ಡ ಯುದ್ಧ ವಿಮಾನಗಳು ಮತ್ತು ಸಾಗರೋಪಯೋಗಿ ಪಿ81 ಗಸ್ತು ವಿಮಾನಗಳು ಸುಲಭವಾಗಿ ಬಂದು ಇಳಿಯಲು ಸಾಧ್ಯವಿಲ್ಲ. ಗ್ರೇಟ್ ನಿಕೋಬಾರ್ ಯೋಜನೆಯ ಭಾಗವಾಗಿ ನಿರ್ಮಾಣವಾಗಲಿರುವ 3,300 ಮೀಟರ್ ಉದ್ದದ ರನ್‌ವೇ ಸಹಿತ ದ್ವಿಬಳಕೆಯ ವಿಮಾನ ನಿಲ್ದಾಣವು ಈ ಸಮಸ್ಯೆಯನ್ನು ಪರಿಹರಿಸಲಿದೆ. ಸುಖೋಯ್ -30, ರಫೇಲ್ ಯುದ್ಧವಿಮಾನಗಳು, ಭಾರೀ ಸಾರಿಗೆ ವಿಮಾನಗಳಾದ ಸಿ17 ಗ್ಲೋಬ್‌ಮಾಸ್ಟರ್, ಮತ್ತು ಸಾಗರೋಪಯೋಗಿ ಗಸ್ತು ವಿಮಾನಗಳು ಇಲ್ಲಿಂದಲೇ ಕಾರ್ಯಾಚರಣೆ ನಡೆಸಬಹುದು. ಇದಲ್ಲದೆ, ಭಾರತದ ಎಕ್ಸ್‌ಕ್ಲೂಸಿವ್ ಎಕನಾಮಿಕ್ ಜೋನ್(ಇಇಝಡ್) ಆಗ್ನೇಯ ಭಾಗವು ಗ್ರೇಟ್ ನಿಕೋಬಾರ್‌ನ ಸುತ್ತ ಚಾಚಿಕೊಂಡಿದೆ. ಒಂದು ರಾಷ್ಟ್ರದ (ಇಇಝಡ್) ಕೇವಲ ಕಾನೂನಿನ ಪರಿಕಲ್ಪನೆಯಲ್ಲ – ಅದನ್ನು ಭೌತಿಕವಾಗಿ ಗಸ್ತು ತಿರುಗಿ, ಮೇಲ್ವಿಚಾರಣೆ ಮಾಡಿ, ಬೇಕಾದರೆ ಬಲವಂತದಿಂದ ರಕ್ಷಿಸಬೇಕು. ಸಮರ್ಪಕ ಬಂದರು ಮತ್ತು ವಿಮಾನ ನಿಲ್ದಾಣವಿಲ್ಲದೆ ಭಾರತ ತನ್ನ ಸ್ವಂತ ಸಮುದ್ರ ಪ್ರದೇಶದ ಮೇಲೆ ಸಾರ್ವಭೌಮತೆಯನ್ನು ಪರಿಣಾಮಕಾರಿಯಾಗಿ ಚಲಾಯಿಸಲಾರದು.

ಆರ್ಥಿಕ ಆಯಾಮ: ಭಾರತದ ವಿದೇಶಿ ವಿನಿಮಯ ಉಳಿತಾಯ

ಇಂದು ಭಾರತದ ರಫ್ತು–ಆಮದು ಸರಕುಗಳ ಸುಮಾರು ಶೇ.25 ವಿದೇಶಿ ಬಂದರುಗಳಾದ ಕೊಲಂಬೊ, ಸಿಂಗಾಪುರ ಮತ್ತು ಪೋರ್ಟ್ ಕ್ಲಾಂಗ್‌ನಲ್ಲಿ ಟ್ರಾನ್ಸ್‌ಶಿಪ್‌ಮೆಂಟ್‌ಗೆ ಒಳಗಾಗುತ್ತದೆ. ಒಂದೇ ಕೊಲಂಬೊ ಬಂದರು ಭಾರತದ ಶೇ.40ರಷ್ಟು ಟ್ರಾನ್ಸ್‌ಶಿಪ್‌ಮೆಂಟ್ ನಿರ್ವಹಿಸುತ್ತಿದೆ. ಇದರಿಂದ ಪ್ರತಿವರ್ಷ ಭಾರತ ಸಾವಿರಾರು ಕೋಟಿ ರೂಪಾಯಿ ವಿದೇಶಿ ವಿನಿಮಯ ಕಳೆದುಕೊಳ್ಳುತ್ತಿದೆ. ಗಾಲಥಿಯಾ ಕೊಲ್ಲಿಯ 18–20 ಮೀಟರ್ ನೈಸರ್ಗಿಕ ಆಳ ಮತ್ತು ಪ್ರಮುಖ ಸಮುದ್ರ ಮಾರ್ಗಗಳಿಗೆ ಸಮೀಪವಿರುವ ಕಾರಣ, ಗ್ರೇಟ್ ನಿಕೋಬಾರ್ ಬಂದರು ವಿಶ್ವದ ಅತಿದೊಡ್ಡ ಕಂಟೈನರ್ ಹಡಗುಗಳನ್ನೂ ನಿಭಾಯಿಸಬಲ್ಲದು. ಸರ್ಕಾರದ ಅಂದಾಜಿನ ಪ್ರಕಾರ, ಈ ಬಂದರು 2040ರ ವೇಳೆಗೆ ವಾರ್ಷಿಕ 30,000 ಕೋಟಿ ರೂ. ಆದಾಯ ತರಬಹುದು ಮತ್ತು ಸುಮಾರು 50,000 ನೇರ ಉದ್ಯೋಗ ಸೃಷ್ಟಿಸಬಹುದು. 2052ರ ವೇಳೆಗೆ 51,000 ನೇರ ಉದ್ಯೋಗ ಮತ್ತು 1,28,000 ಪರೋಕ್ಷ ಉದ್ಯೋಗಗಳ ನಿರೀಕ್ಷೆಯಿದೆ. ಸಾಗರಮಾಲಾ ಯೋಜನೆ ಮತ್ತು ಮಾರಿಟೈಮ್ ಇಂಡಿಯಾ ವಿಷನ್ 2030ರ ಆದರ್ಶಗಳಿಗೆ ಈ ಯೋಜನೆ ಪೂರಕವಾಗಿದೆ. ಇದು ಭಾರತವನ್ನು ಜಾಗತಿಕ ವ್ಯಾಪಾರ ಮಾರ್ಗದ ಒಂದು ಪ್ರಮುಖ ಕೇಂದ್ರವಾಗಿ ರೂಪಿಸುವ ದಿಕ್ಕಿನಲ್ಲಿ ಮಹತ್ತರ ಹೆಜ್ಜೆ. ಸಿಂಗಾಪುರ ಬಂದರು ಇಂದು ಜಗತ್ತಿನ ಅತಿದೊಡ್ಡ ಟ್ರಾನ್ಸ್‌ಶಿಪ್‌ಮೆಂಟ್ ಕೇಂದ್ರ. ಪ್ರತಿವರ್ಷ 3.7 ಕೋಟಿ ಟಿಇಯು ನಿಭಾಯಿಸುತ್ತದೆ. ಕೊಲಂಬೊ ಬಂದರು 70 ಲಕ್ಷ ಟಿಇಯು ನಿಭಾಯಿಸುತ್ತದೆ. ಭಾರತದ ಎಲ್ಲ ಬಂದರುಗಳು ಒಟ್ಟು ಸೇರಿ ಇಂದಿಗೂ ಸಿಂಗಾಪುರಕ್ಕೆ ಸಮನಾಗಿಲ್ಲ. ಗಾಲಥಿಯಾ ಬಂದರು ಪೂರ್ಣ ಸಾಮರ್ಥ್ಯ ತಲುಪಿದರೆ 1.6 ಕೋಟಿ ಟಿಇಯು ನಿಭಾಯಿಸಲಿದೆ – ಇದು ಕೊಲಂಬೊಗಿಂತ ಎರಡು ಪಟ್ಟು ಹೆಚ್ಚು. ಭಾರತೀಯ ಬಂದರು ಮತ್ತು ಜಲಮಾರ್ಗಗಳ ಸಚಿವ ಸರ್ಬಾನಂದ ಸೋನೋವಾಲ್ ಅವರ ಮಾತಿನಲ್ಲೇ ಹೇಳುವುದಾದರೆ, ಗ್ರೇಟ್ ನಿಕೋಬಾರ್ ಐಸಿಟಿಟಿ ಭಾರತವನ್ನು ಪ್ರಮುಖ ಸಾಮುದ್ರಿಕ ಶಕ್ತಿಯಾಗಿ ಮಾಡಲಿದೆ ಮತ್ತು ಜಾಗತಿಕ ಶಿಪ್ಪಿಂಗ್ ಲೈನ್‌ಗಳನ್ನು ಭಾರತೀಯ ಬಂದರು ಮೂಲಸೌಕರ್ಯಕ್ಕೆ ಆಕರ್ಷಿಸಲಿದೆ. ಪ್ರತಿ ಕಂಟೈನರ್ ವಿದೇಶಿ ಬಂದರಿಗೆ ಬದಲಾಗಿ ಗ್ರೇಟ್ ನಿಕೋಬಾರ್‌ಗೆ ಬಂದರೆ – ಪ್ರತಿ ಡಾಲರ್ ಭಾರತದ ಆರ್ಥಿಕತೆಯಲ್ಲೇ ಉಳಿಯಲಿದೆ.





ವಿರೋಧದ ಧ್ವನಿಗಳು: ಆತಂಕಗಳ ಸ್ವರೂಪ

ಸೆಪ್ಟೆಂಬರ್ 2025ರಲ್ಲಿ ಸೋನಿಯಾ ಗಾಂಧಿ ದ ಹಿಂದು ದಿನಪತ್ರಿಕೆಯಲ್ಲಿ 'The making of an ecological disaster in the Nicobar' ಎಂಬ ಲೇಖನ ಬರೆದು, ಯೋಜನೆಯನ್ನು 'ಯೋಜಿತ ವಿನಾಶ' ಎಂದು ಬಣ್ಣಿಸಿದರು. ಶೋಂಪೆನ್ ಮತ್ತು ನಿಕೋಬಾರಿ ಬುಡಕಟ್ಟುಗಳ ಅಸ್ತಿತ್ವಕ್ಕೆ ಬೆದರಿಕೆ, ರಾಷ್ಟ್ರೀಯ ಪರಿಶಿಷ್ಟ ಪಂಗಡ ಆಯೋಗದ ಜೊತೆ ಸಮಾಲೋಚನೆ ನಡೆಸದಿರುವುದು, ಮತ್ತು ಭೂಕಂಪ ವಲಯದಲ್ಲಿ ಇಂತಹ ಬೃಹತ್ ಯೋಜನೆ ಸ್ಥಾಪಿಸುವ ಅಪಾಯ – ಇವು ಅವರ ಮುಖ್ಯ ಆಕ್ಷೇಪಗಳು. ಏಪ್ರಿಲ್ 2026ರಲ್ಲಿ ಲೋಕಸಭೆಯ ವಿರೋಧ ಪಕ್ಷ ನಾಯಕ ರಾಹುಲ್ ಗಾಂಧಿ ಸ್ವತಃ ಗ್ರೇಟ್ ನಿಕೋಬಾರ್‌ಗೆ ಭೇಟಿ ನೀಡಿ, ಯೋಜನೆಯನ್ನು 'ಅಭಿವೃದ್ಧಿಯ ಭಾಷೆಯಲ್ಲಿ ಕಟ್ಟಿಕೊಂಡ ವಿನಾಶ' ಎಂದು ಟೀಕಿಸಿದರು. ಸುಮಾರು 9.64 ಲಕ್ಷ ಮರಗಳ ಕಡಿಯುವಿಕೆ, 130 ಚದರ ಕಿಲೋಮೀಟರ್ ಅರಣ್ಯ ಭೂಮಿಯ ಪರಿವರ್ತನೆ, ಗಾಲಥಿಯಾ ಕೊಲ್ಲಿಯಲ್ಲಿ ಲೆದರ್‌ಬ್ಯಾಕ್ ಆಮೆಗಳ ಮೊಟ್ಟೆ ಇಡುವ ಪ್ರದೇಶಕ್ಕೆ ಧಕ್ಕೆ –ಇವು ಪ್ರಮುಖ ಪರಿಸರ ಆತಂಕಗಳು.

ಕೈ ರಾಜಕೀಯ ವೈರುಧ್ಯ

ಕುತೂಹಲದ ಸಂಗತಿ ಎಂದರೆ, ಯುಪಿಎ ಸರ್ಕಾರದ ಹತ್ತು ವರ್ಷಗಳ ಆಡಳಿತದ ಅವಧಿಯಲ್ಲಿ ಗ್ರೇಟ್ ನಿಕೋಬಾರ್‌ನ ಸಾಮರಿಕ ಮಹತ್ವದ ಬಗ್ಗೆ ಯಾವುದೇ ಗಂಭೀರ ಚರ್ಚೆ ನಡೆಯಲಿಲ್ಲ. 2004ರ ಸುನಾಮಿಯ ನಂತರ ಪುನರ್ನಿರ್ಮಾಣ ಕಾರ್ಯಗಳು ಕೂಡ ಮಂದಗತಿಯಲ್ಲಿ ಸಾಗಿದವು. ಆದರೆ ಇಂದು ಮೋದಿ ಸರ್ಕಾರ ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ
ದಿಟ್ಟ ನಿರ್ಧಾರ ತೆಗೆದುಕೊಂಡಾಗ ಕಾಂಗ್ರೆಸ್ ಪಕ್ಷ ಹಠಾತ್ತಾಗಿ 'ಪರಿಸರ ಕಾಳಜಿ' ಮತ್ತು 'ಬುಡಕಟ್ಟು ಹಕ್ಕು'ಗಳನ್ನು ನೆನಪಿಸಿಕೊಂಡಿದೆ. ಸಾಮಾನ್ಯ ಭಾರತೀಯರು ಇದನ್ನು ಪ್ರಗತಿ ಎಂದು ಗುರುತಿಸುತ್ತಿರುವಾಗ, ಕಾಂಗ್ರೆಸ್ ಇದನ್ನು 'ಪರಿಸರ ವಿನಾಶ' ಎಂದು ಬಣ್ಣಿಸುತ್ತಿರುವುದು ರಾಜಕೀಯ ಅವಕಾಶವಾದದ ಸಂಕೇತ. ಇದಲ್ಲದೆ, ಪ್ರಧಾನಿ ನರೇಂದ್ರ ಮೋದಿ ಸ್ವತಃ 'ಗ್ರೇಟ್ ನಿಕೋಬಾರ್ ಯೋಜನೆ ಸಾಮರಿಕ, ರಕ್ಷಣಾತ್ಮಕ ಮತ್ತು ರಾಷ್ಟ್ರೀಯ ಮಹತ್ವದ್ದು' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಪರಿಸರ ಸಚಿವ ಭೂಪೇಂದರ್ ಯಾದವ್ ಅವರು, 'ಯೋಜನೆ ಬುಡಕಟ್ಟು ಸಮುದಾಯಗಳಿಗೆ ಯಾವುದೇ ಬೆದರಿಕೆ ಒಡ್ಡುವುದಿಲ್ಲ ಮತ್ತು ಪ್ರದೇಶದ ಪರಿಸರ ಸೂಕ್ಷ್ಮತೆಗೆ ಧಕ್ಕೆ ತರುವುದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಸರ್ಕಾರದ ಸಮಜಾಯಿಷಿ ಮತ್ತು ರಕ್ಷಣಾ ಕ್ರಮಗಳು

ಕೇಂದ್ರ ಸರ್ಕಾರ ಮತ್ತು ಪರಿಸರ ಸಚಿವಾಲಯ ಈ ಆಕ್ಷೇಪಗಳನ್ನು ಮುಖಬೆಲೆಗೆ ತೆಗೆದುಕೊಂಡು ಹಲವಾರು ಶಮನ ಕ್ರಮಗಳನ್ನು ಜಾರಿಗೊಳಿಸಿದೆ. ಲಿಟಲ್ ನಿಕೋಬಾರ್ ದ್ವೀಪದಲ್ಲಿ ಲೆದರ್‌ಬ್ಯಾಕ್ ಆಮೆ ಅಭಯಾರಣ್ಯ, ಮೆನ್ಚಲ್ ದ್ವೀಪದಲ್ಲಿ ಮೆಗಾಪೋಡ್ ಅಭಯಾರಣ್ಯ ಮತ್ತು ಮೆರೋ ದ್ವೀಪದಲ್ಲಿ ಹವಳ ಅಭಯಾರಣ್ಯ - ಮೂರು ಹೊಸ ವನ್ಯಜೀವಿ ಅಭಯಾರಣ್ಯಗಳ ಸ್ಥಾಪನೆ. ಗಾಲಥಿಯಾ ನದಿಯಿಂದ ನೀರು ತೆಗೆಯುವುದಕ್ಕೆ ಸಂಪೂರ್ಣ ನಿಷೇಧ. ಪೂರ್ವ ಕರಾವಳಿಯಲ್ಲಿ ಎಂಟು ವನ್ಯಜೀವಿ ಮಾರ್ಗಗಳ(ಕಾರಿಡಾರ್) ಸ್ಥಾಪನೆ. ಬುಡಕಟ್ಟು ಸಮುದಾಯಗಳನ್ನು ಹೊರಗಿನ ರೋಗಗಳಿಂದ ರಕ್ಷಿಸಲು 100 ಕೋಟಿ ರೂ. ವೆಚ್ಚದಲ್ಲಿ ವಿಶೇಷ ವೈದ್ಯಕೀಯ ಘಟಕ. ಇದಲ್ಲದೆ, ದ್ವೀಪದ ಶೇ.92 ಭಾಗ ಬುಡಕಟ್ಟು ಮೀಸಲು ಪ್ರದೇಶವಾಗಿ ಮುಂದುವರಿಯಲಿದೆ; ಯೋಜನಾ ಪ್ರದೇಶ ಬುಡಕಟ್ಟು ಮೀಸಲಿನ ಹೊರಗಿದೆ ಎಂಬುದು ಸರ್ಕಾರದ ಸ್ಪಷ್ಟ ನಿಲುವು.
ಫೆಬ್ರವರಿ 2026ರಲ್ಲಿ ನ್ಯಾ. ಪ್ರಕಾಶ್ ಶ್ರೀವಾಸ್ತವ ನೇತೃತ್ವದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ(ಎನ್‌ಜಿಟಿ) ಆರು-ಸದಸ್ಯರ ಪೀಠ ಯೋಜನೆಗೆ ವಿರುದ್ಧವಾಗಿ ಸಲ್ಲಿಸಿದ ಎಲ್ಲ ಅರ್ಜಿಗಳನ್ನು ತಿರಸ್ಕರಿಸಿ, 'ಮಧ್ಯಪ್ರವೇಶಿಸಲು ಯಾವುದೇ ಸಮಂಜಸ ಕಾರಣವಿಲ್ಲ' ಎಂದು ತೀರ್ಪು ನೀಡಿತು. ಎನ್‌ಜಿಟಿ ಒಂದು ರಬ್ಬರ್ ಸ್ಟ್ಯಾಂಪ್ ಸಂಸ್ಥೆಯಲ್ಲ - ಸರ್ಕಾರಗಳು ಪರಿಸರ ಕಾನೂನಿಗೆ ಧಕ್ಕೆ ತಂದಾಗ ತಡೆ ಒಡ್ಡುವುದು ಅದರ ಕರ್ತವ್ಯ. ಆದರೆ ಇಲ್ಲಿ ಯಾವುದೇ ಶಾರ್ಟ್‌ಕಟ್ ಕಂಡುಬಂದಿಲ್ಲ. ಭಾರತೀಯ ಪರಿಸರ ಕಾನೂನಿಗೆ ಸಂಪೂರ್ಣ ಅನುಸರಣೆಯಾಗಿದೆ ಎಂದು ಮಂಡಳಿ ಸ್ಪಷ್ಟಪಡಿಸಿತು. ಇದಕ್ಕೂ ಮೊದಲು ನವೆಂಬರ್ 2022ರಲ್ಲಿ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ತಜ್ಞ ಮೌಲ್ಯಮಾಪನ ಸಮಿತಿ ಪರಿಸರ ಮಂಜೂರಾತಿ ನೀಡಿತ್ತು.

ರಾಷ್ಟ್ರ ಮೊದಲು

2004ರ ಭೀಕರ ಸುನಾಮಿಯ ನಂತರ ಗ್ರೇಟ್ ನಿಕೋಬಾರ್ ಸೇರಿದಂತೆ ಅಂಡಮಾನ್-ನಿಕೋಬಾರ್ ದ್ವೀಪಗಳ ಪುನರ್ನಿರ್ಮಾಣ ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಅಗತ್ಯ ಎಷ್ಟು ಮುಖ್ಯ ಎಂದು ಜಗತ್ತಿಗೆ ಮನವರಿಕೆಯಾಯಿತು. ಆದರೆ ಎರಡು ದಶಕಗಳ ಕಾಲ ಈ ದ್ವೀಪಗಳು ರಾಷ್ಟ್ರೀಯ ಗಮನದಿಂದ ದೂರವೇ ಉಳಿದವು. ಮೋದಿ ಸರ್ಕಾರ ಮೊದಲ ಬಾರಿಗೆ ಈ ದ್ವೀಪಗಳ ಸಾಮರಿಕ ಮಹತ್ವವನ್ನು ಗುರುತಿಸಿ ದಿಟ್ಟ ಯೋಜನೆಯನ್ನು ಮುಂದಿಟ್ಟಿದೆ. ಜನವರಿ 2026ರಲ್ಲಿ ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಕಾರ್ ನಿಕೋಬಾರ್ ವಾಯುನೆಲೆಯ ಉನ್ನತೀಕರಿಸಿದ ರನ್‌ವೇಯನ್ನು ಉದ್ಘಾಟಿಸಿದರು – ಇದು ಗ್ರೇಟ್ ನಿಕೋಬಾರ್ ಯೋಜನೆಯ ಪೂರ್ವಭಾವಿ ಸಿದ್ಧತೆಯ ಭಾಗ.

ಯಾವುದೇ ಬೃಹತ್ ಮೂಲಸೌಕರ್ಯ ಯೋಜನೆ ಸ್ವಲ್ಪ ಮಟ್ಟಿಗೆ ಪರಿಸರಕ್ಕೆ ಪರಿಣಾಮ ಬೀರುವುದು ಸತ್ಯ. ಆದರೆ ಇದಕ್ಕೆ ಪರಿಹಾರ 'ಯೋಜನೆಯನ್ನೇ ರದ್ದುಗೊಳಿಸುವುದು' ಅಲ್ಲ – ಬದಲಿಗೆ ವೈಜ್ಞಾನಿಕ ಶಮನ ಕ್ರಮಗಳ ಮೂಲಕ ಪರಿಣಾಮವನ್ನು ಕಡಿಮೆಗೊಳಿಸುವುದು. ಸರ್ಕಾರ ಈ ದಿಕ್ಕಿನಲ್ಲಿ ಹಲವಾರು ಶಮನ ಕ್ರಮಗಳನ್ನು ಜಾರಿಗೊಳಿಸಿದೆ. ಕಾನೂನಿನ ಎಲ್ಲ ಪ್ರಕ್ರಿಯೆಗಳನ್ನೂ ಪಾಲಿಸಲಾಗಿದೆ –ಎನ್‌ಜಿಟಿ ಸ್ವತಃ ಇದನ್ನು ದೃಢಪಡಿಸಿದೆ.

ಚೀನಾ ಭಾರತದ ಸುತ್ತ ಸಾಮರಿಕ ಜಾಲ ಹೆಣೆಯುತ್ತಿರುವಾಗ, ಪಾಕಿಸ್ತಾನ ಗ್ವಾದರ್‌ನಲ್ಲಿ ಚೀನಾಕ್ಕೆ ಆಶ್ರಯ ನೀಡುತ್ತಿರುವಾಗ, ಶ್ರೀಲಂಕಾ ಮತ್ತು ಬಾಂಗ್ಲಾದೇಶಗಳಲ್ಲಿಯೂ ಚೀನಾದ ಪ್ರಭಾವ ಹೆಚ್ಚುತ್ತಿರುವಾಗ –ಭಾರತ ತನ್ನ ಸ್ವಂತ ದ್ವೀಪದಲ್ಲಿ, ತನ್ನ ಸ್ವಂತ ಸಾರ್ವಭೌಮಿಕ ಅಧಿಕಾರದಡಿಯಲ್ಲಿ ಒಂದು ಸಾಮರಿಕ ನೆಲೆಯನ್ನು ಸ್ಥಾಪಿಸುವುದು ಆಕ್ರಮಣಶೀಲತೆ ಅಲ್ಲ – ಅದು ಆತ್ಮರಕ್ಷಣೆ. 1.4 ಶತಕೋಟಿ ಜನಸಂಖ್ಯೆಯ ರಾಷ್ಟ್ರಕ್ಕೆ ಸಾರ್ವಭೌಮ ಅಭಿವೃದ್ಧಿ ಮತ್ತು ಪ್ರಾದೇಶಿಕ ಭದ್ರತೆಯ ನಿರ್ಣಯಗಳನ್ನು ಭಾವನಾತ್ಮಕ ಅರಣ್ಯ ವಿಷಾದದ ಆಧಾರದಲ್ಲಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ಗ್ರೇಟ್ ನಿಕೋಬಾರ್ ಯೋಜನೆ ಭಾರತದ ಭವಿಷ್ಯದ ಸಾಮರಿಕ, ಆರ್ಥಿಕ ಮತ್ತು ರಾಜತಾಂತ್ರಿಕ ಶಕ್ತಿಯ ಆಧಾರಸ್ತಂಭ. ಇಂದು ಈ ಯೋಜನೆಗೆ ಧಕ್ಕೆ ತಂದರೆ, ನಾಳೆ ನಮ್ಮ ಪೂರ್ವ ಗಡಿ – ಮಲಕ್ಕಾ ಜಲಸಂಧಿಯ ಬಾಗಿಲಲ್ಲಿಯೇ – ಅಸುರಕ್ಷಿತವಾಗಲಿದೆ. ಇದು ಭಾರತಕ್ಕೆ ಒಂದು ಪರೀಕ್ಷೆ; ಇಲ್ಲಿ ತಪ್ಪಿದರೆ ಇತಿಹಾಸ ಕ್ಷಮಿಸದು.

ಕ್ವಾಡ್ ಮತ್ತು ಇಂಡೋ–ಪೆಸಿಫಿಕ್ ತಂತ್ರ

ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ಒಳಗೊಂಡ ಕ್ವಾಡ್ ಸಮಿತಿಯ ಸಾಮರಿಕ ಆಯಾಮವು ಇಂದು ಮುನ್ನೆಲೆಗೆ ಬಂದಿದೆ. ಗ್ರೇಟ್ ನಿಕೋಬಾರ್‌ನಲ್ಲಿ ಆಧುನಿಕ ಲಾಜಿಸ್ಟಿಕಲ್ ನೆಲೆ ಸ್ಥಾಪನೆಯಾದರೆ –ಜಂಟಿ ನೌಕಾ ಕಾರ್ಯಾಚರಣೆಗಳಿಗೆ ಬೆಂಬಲ, ಮಿಲಿಟರಿ ಯುದ್ಧಾಭ್ಯಾಸಗಳಿಗೆ ಲಾಜಿಸ್ಟಿಕ್ ಹಬ್, ಮುಂದುವರಿದ ಸಾಮುದ್ರಿಕ ಮೇಲ್ವಿಚಾರಣಾ ಸಾಮರ್ಥ್ಯ ಮತ್ತು ಸಾಮುದ್ರಿಕ ಗಸ್ತು ನೆಲೆ– ಇವೆಲ್ಲವೂ ಒಂದೇ ಸ್ಥಳದಲ್ಲಿ ಲಭ್ಯವಾಗುತ್ತವೆ. ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಭಾರತದ ನೆಟ್ ಸೆಕ್ಯೂರಿಟಿ ಪ್ರೊವೈಡರ್ ಎಂಬ ಪಾತ್ರವನ್ನು ಬಲಪಡಿಸಲು ಗ್ರೇಟ್ ನಿಕೋಬಾರ್ ಯೋಜನೆ ಅತ್ಯಗತ್ಯ. ಆಸಿಯಾನ್ ರಾಷ್ಟ್ರಗಳ ಜೊತೆ ಭಾರತದ 'ಆಕ್ಟ್ ಈಸ್ಟ್' ನೀತಿಯ ಯಶಸ್ಸಿಗೂ ಇದು ಆಧಾರಸ್ತಂಭವಾಗಲಿದೆ.

ಸ್ಥಳೀಯರ ಕಲ್ಯಾಣ: ಮರೆಯಲಾಗದ ಒಂದು ಸತ್ಯ

ವಿರೋಧಿಗಳು ಬುಡಕಟ್ಟು ಸಮುದಾಯಗಳ ಬಗ್ಗೆ ಮಾತನಾಡುವಾಗ, ಗ್ರೇಟ್ ನಿಕೋಬಾರ್‌ನಲ್ಲಿ ವಾಸಿಸುವ ಸುಮಾರು 8,000 ಜನರಲ್ಲಿ 7,000 ಜನರು ಮುಖ್ಯಭೂಮಿಯಿಂದ ಬಂದು ನೆಲೆಸಿರುವ ಸಾಮಾನ್ಯ ಭಾರತೀಯ ನಾಗರಿಕರೆಂಬ ಸತ್ಯವನ್ನು ಮರೆಮಾಚಲಾಗುತ್ತದೆ. ಇಂದು ಈ ಜನರಿಗೆ ಸಮರ್ಪಕ ರಸ್ತೆ ಸಂಪರ್ಕವಿಲ್ಲ, ವೈದ್ಯಕೀಯ ಸೌಲಭ್ಯ ತೀರಾ ಕಡಿಮೆ, ಆರ್ಥಿಕ ಅವಕಾಶಗಳಂತೂ ಶೂನ್ಯ. ಯೋಜನೆಯಡಿ ನಿರ್ಮಾಣವಾಗುತ್ತಿರುವ 160 ಎಂಎಲ್‌ಡಿ ಸಾಮರ್ಥ್ಯದ ನೀರು ಸರಬರಾಜು ವ್ಯವಸ್ಥೆ, ಪಟ್ಟಣ ಯೋಜನೆ, ಆಧುನಿಕ ಆಸ್ಪತ್ರೆ ಮತ್ತು ಮೂಲಸೌಕರ್ಯಗಳು ಈ ಜನರಿಗೆ ಭಾರತದ ಮುಖ್ಯವಾಹಿನಿಯೊಂದಿಗೆ ಸಂಪರ್ಕ ಕಲ್ಪಿಸಲಿವೆ. ಸಂರಕ್ಷಣಾ ಸಾಹಿತ್ಯದಲ್ಲಿ ಜನವಸತಿ ಇರುವ ದ್ವೀಪಗಳನ್ನು ಪರಿಹರಿಸಬೇಕಾದ ಸಮಸ್ಯೆಗಳು ಎಂಬಂತೆ ನೋಡುವ ಪ್ರವೃತ್ತಿ ಇದೆ. ಆದರೆ ಈ 8,000 ಭಾರತೀಯರಿಗೂ ಅಭಿವೃದ್ಧಿಯ ಹಕ್ಕಿದೆ.

ಕಿರುಸುದ್ದಿ

ಬಂಟರ ಯಾನೆ ನಾಡವರ ಮಾತೃಸಂಘ: ಅಧ್ಯಕ್ಷರಾಗಿ ಕೆ. ಅಜಿತ್ ಕುಮಾರ್ ರೈ ಮಾಲಾಡಿ ಪುನರಾಯ್ಕೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಹಾಗೂ ವಿದೇಶಗಳಲ್ಲೂ ಸದಸ್ಯರನ್ನು ಒಳಗೊಂಡ ಬಂಟರ ಯಾನೆ ನಾಡವರ ಮಾತೃ ಸಂಘದ 2026 –29ರ ಸಾಲಿಗೆ ಮಾಲಾಡಿ ಅಜಿತ್ ಕುಮಾರ್ ರೈ ಕೊಡಿಯಾಲ್‌ಗುತ್ತು ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ.



ಅಭಿವೃದ್ಧಿಗೆ ಶ್ರಮಿಸುವೆ

ಮುಂದಿನ ದಿನಗಳಲ್ಲಿ ಸಂಘದ ಮಹತ್ವಾಕಾಂಕ್ಷಿ ಯೋಜನೆಯಾದ ಶತಮಾನೋತ್ಸವ ಕಟ್ಟಡ ಸಂಕೀರ್ಣ, ವಿಶ್ವವ್ಯಾಪಿ ಸಮಾಜ ಬಾಂಧವರನ್ನು ಒಂದೇ ಸೂರಿನಡಿ ತರ ಬಯಸುವ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮಸ್ಯೆಗಳನ್ನು ಕೈಗೊಳ್ಳುವುದು ಹಾಗೂ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವೆ ಎಂದು ಕೆ. ಅಜಿತ್ ಕುಮಾರ್ ರೈ ಹೇಳಿದರು.

ಮುಖ್ಯ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ವಕೀಲ ಉಮೇಶ್ ಶೆಟ್ಟಿ ಶೆಡ್ಡೆ ಹೊಸಲಕ್ಕೆ ಅವರು ಅಧ್ಯಕ್ಷರ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಉಪ ಚುನಾವಣಾಧಿಕಾರಿ, ವಕೀಲ ನವೀನ್ ಶೆಟ್ಟಿ ಹಾಗೂ ಚುನಾವಣಾಧಿಕಾರಿ ಸದಾಶಿವ ಶೆಟ್ಟಿ ಉಪಸ್ಥಿತರಿದ್ದರು.

ಮಲ್ಪೆ ಬಂದರಿನಲ್ಲಿ ಹಣಕಾಸಿನ ವಿಚಾರಕ್ಕೆ ಗಲಾಟೆ: ಪರಸ್ಪರ ದೂರು ದಾಖಲು

ಉಡುಪಿ: ಮೀನುಗಾರಿಕಾ ವ್ಯವಹಾರದ ಹಣಕಾಸಿನ ಬಾಕಿ ವಿಚಾರಕ್ಕೆ ಸಂಬಂಧಿಸಿದಂತೆ ಮಲ್ಪೆ ಬಂದರಿನ ಆಕ್ಷನ್ ದಕ್ಕೆಯಲ್ಲಿ ಗುರುವಾರ ಬೆಳಗ್ಗೆ ಹಲ್ಲೆ ನಡೆದಿದ್ದು, ಈ ಸಂಬಂಧ ಮಲ್ಪೆ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ಹರೀಶ್ ಎಂಬುವವರು ದಕ್ಕೆಯಲ್ಲಿದ್ದಾಗ ಅಲ್ಲಿಗೆ ಕಾರಿನಲ್ಲಿ ಬಂದ ಜಯೇಶ್ ಕೋಟ್ಯಾನ್, ಅವರ ತಾಯಿ ಭಾರತಿ ಕೋಟ್ಯಾನ್ ಮತ್ತು ಇತರರು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಜಯೇಶ್ ಕೋಟ್ಯಾನ್ ಅವರು ಹರೀಶ್ ಅವರ ಎದೆ ಹಾಗೂ ಮರ್ಮಾಂಗಕ್ಕೆ ತುಳಿದು, ಚಾಕುವಿನಿಂದ ಇರಿಯಲು ಯತ್ನಿಸಿದ್ದಾರೆ ಎನ್ನಲಾಗಿದೆ. ಗಾಯಗೊಂಡ ಹರೀಶ್ ಅವರು ಉಡುಪಿಯ ಹೈಟೆಕ್ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ವೈರಲ್

ಹಲ್ಲೆಯ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಈ ಘಟನೆಗೆ ಸಂಬಂಧಿಸಿ ಹರೀಶ್ ನೀಡಿದ ದೂರಿನನ್ವಯ ಜಯೇಶ್ ಕೋಟ್ಯಾನ್ ಮತ್ತು ತಂಡದ ವಿರುದ್ಧ ಕೊಲೆ ಯತ್ನ ಸೇರಿದಂತೆ ವಿವಿಧ ಕಲಂ ಅಡಿ ಪ್ರಕರಣ ದಾಖಲಾಗಿದೆ. ಇನ್ನೊಂದೆಡೆ, ಜಯೇಶ್ ಕೋಟ್ಯಾನ್ ಅವರ ತಾಯಿ ಭಾರತಿ ಕೋಟ್ಯಾನ್ ಅವರು ಕೂಡ ಹರೀಶ್ ವಿರುದ್ಧ ದೂರು ನೀಡಿದ್ದು, ಮಲ್ಪೆ ಪೊಲೀಸರು ಪ್ರತಿ ದೂರು ದಾಖಲಿಸಿಕೊಂಡಿದ್ದಾರೆ. ಸದ್ಯ ಎರಡು ಪ್ರಕರಣಗಳು ತನಿಖೆಯ ಹಂತದಲ್ಲಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಟ್ಯಾಂಕರ್‌ನಿಂದ ಡೀಸೆಲ್ ಕದಿಯುತ್ತಿದ್ದ ಇಬ್ಬರ ಬಂಧನ

ಮಂಗಳೂರು: ಪಣಂಬೂರು ಮೀನಕಳಿಯ ಕೋಡಿಕಲ್ ದ್ವಾರದ ಬಳಿ ಟ್ಯಾಂಕರ್‌ನಿಂದ ಡೀಸೆಲ್ ಕದಿಯುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ಚಾಲಕ ಧನಂಜಯ (51) ಮತ್ತು ಕುಶಾಧರ (42) ಬಂಧಿತರು.

ಆಹಾರ ನಿರೀಕ್ಷಕ ಹ್ಯಾರಿಸ್ ಎಂ.ಎ. ಅವರಿಗೆ ಬಂದ ಖಚಿತ ಮಾಹಿತಿಯಂತೆ ಗುರುವಾರ ರಾತ್ರಿ 8.15ರ ವೇಳೆಗೆ ಪಣಂಬೂರು ಪೊಲೀಸರ ನೆರವಿನೊಂದಿಗೆ ಸ್ಥಳಕ್ಕೆ ದಾಳಿ ನಡೆಸಿದ್ದಾರೆ. ಈ ವೇಳೆ ಆರೋಪಿಗಳು ಟ್ಯಾಂಕರ್‌ನಿಂದ ಪ್ಲಾಸ್ಟಿಕ್ ಪೈಪ್ ಮೂಲಕ ಡೀಸೆಲ್ ತೆಗೆದು ಕ್ಯಾನ್‌ಗಳಲ್ಲಿ ತುಂಬಿಸುತ್ತಿರುವುದು ಕಂಡು ಬಂದಿದೆ. ಸ್ಥಳದಲ್ಲಿ ಟ್ಯಾಂಕರ್‌ನಿಂದ ಅನಧಿಕೃತವಾಗಿ ತೆಗೆದು 8 ಕ್ಯಾನ್‌ಗಳಲ್ಲಿ ಸಂಗ್ರಹಿಸಿಟ್ಟಿದ್ದ ಅಂದಾಜು 14,000 ರೂ. ಮೌಲ್ಯದ 157 ಲೀಟರ್ ಡೀಸೆಲ್ ಪತ್ತೆಯಾಗಿದೆ. ಜತೆಗೆ ಡೀಸೆಲ್ ತೆಗೆಯಲು ಉಪಯೋಗಿಸಿದ ಪ್ಲಾಸ್ಟಿಕ್ ಪೈಪ್ ಮತ್ತು ಟ್ಯಾಂಕರನ್ನು ವಶಪಡಿಸಿಕೊಂಡು ಮೂಲಕ ವಶಕ್ಕೆ ಪಡೆದುಕೊಂಡಿದ್ದಾರೆ. ಆರೋಪಿಗಳು ಇಬ್ಬರು ಸಮಾನ ಉದ್ದೇಶದಿಂದ ಅವಶ್ಯಕ ವಸ್ತುಗಳ ಕಾಯ್ದೆಯನ್ನು ಉಲ್ಲಂಘಿಸಿ, ಡೀಸೆಲ್‌ನ್ನು ಕ್ಯಾನ್‌ಗಳಲ್ಲಿ ತುಂಬಿಸಿ ಮಾರಾಟಕ್ಕೆ ಯತ್ನಿಸುತ್ತಿರುವುದು ಕಂಡು ಬಂದಿದೆ. ಆರೋಪಿ ಧನಂಜಯ ಎಂಆರ್ ಪಿಎಲ್‌ನಿಂದ ಟ್ಯಾಂಕರ್ ತುಂಬಿಸಿಕೊಂಡು ಬಂದು ಮೂಲಕ ಹಾಗೂ ಸಂಸ್ಥೆಗೆ ಮೋಸ ಮಾಡಿದ್ದಾನೆ ಎಂದು ಆರೋಪಿ ಪ್ರಕರಣ ದಾಖಲಾಗಿದೆ.

ನಂತೂರು ಜಂಕ್ಷನ್ ಬಳಿ ಅಪಾರ್ಟ್‌ಮೆಂಟ್‌ನಲ್ಲಿ ಬೆಂಕಿ ಅವಘಡ

ಮಂಗಳೂರು: ನಗರದ ನಂತೂರು ಜಂಕ್ಷನ್ ಬಳಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಶುಕ್ರವಾರ ಸಂಜೆ ಬೆಂಕಿ ಅವಘಡ ಸಂಭವಿಸಿದೆ. ಕದ್ರಿ ಅಗ್ನಿಶಾಮಕದಳ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಬೆಂಕಿ ಹೊತ್ತಿಕೊಂಡ ಕೊಠಡಿಯಲ್ಲಿ ಶೇಖರಿಸಿಟ್ಟಿದ್ದ ವಿವಿಧ ಸೊತ್ತುಗಳು ಹಾನಿಗೀಡಾಗಿವೆ. ಒಟ್ಟು ಎಷ್ಟು ನಷ್ಟವಾಗಿದೆ ಎನ್ನುವ ಬಗ್ಗೆ ಮಾಹಿತಿ ಇನ್ನಷ್ಟೇ ಲಭ್ಯವಾಗಬೇಕಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಸಕಾಲದಲ್ಲಿ ಬೆಂಕಿ ಶಮನಗೊಳಿಸಿದ ಪರಿಣಾಮ ಹೆಚ್ಚಿನ ಅನಾಹುತ ತಪ್ಪಿದೆ. ಅಪಾರ್ಟ್‌ಮೆಂಟ್ ಆಗಿದ್ದ ಕಾರಣ ಕೆಲ ಹೊತ್ತು ಆತಂಕಕ್ಕೆ ಕಾರಣವಾಯಿತು.

ಮಾದಕ ವಸ್ತು ಸೇವನೆ ಮಾಡಿದ ವ್ಯಕ್ತಿಯ ಬಂಧನ

ಮಂಗಳೂರು: ನಗರದ ಮಹಾಕಾಳಿ ಪಡ್ಪುವಿನಲ್ಲಿ ರಸ್ತೆ ಬದಿಯಲ್ಲಿ ಮಾದಕ ವಸ್ತು ಸೇವನೆ ಮಾಡಿದ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ. ಅಬ್ದುಲ್ ಹಮೀದ್ ಬಂಧಿತ ಆರೋಪಿ. ಪೊಲೀಸರು ರೌಂಡ್ ಕರ್ತವ್ಯದಲ್ಲಿದ್ದಾಗ ರಸ್ತೆ ಬದಿಯಲ್ಲಿ ನಿಂತಿದ್ದ ಆತನನ್ನು ವಿಚಾರಿಸಿದಾಗ ಮಾದಕ ವಸ್ತು ಸೇವನೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಮಾದಕ ವಸ್ತು ಸೇವನೆ ಮಾಡಿರುವುದು ದೃಢಪಟ್ಟಿದೆ. ಪಾಂಡೇಶ್ವರ ಠಾಣೆಯಲ್ಲಿ ಎನ್ ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.



ಮಂಗಳೂರಿನ ತುಳು ಭವನದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿಯಲ್ಲಿ ನಡೆದ ಭಗವಾನ್ ಬುದ್ಧ ಜಯಂತಿಯಲ್ಲಿ ಜಿಲ್ಲಾ ಬುದ್ಧ ಮಹಾಸಭಾ ಕಾರ್ಯದರ್ಶಿ ಲಕ್ಷ್ಮಣ್ ಪುಷ್ಪ ನಮನ ಸಲ್ಲಿಸಿದರು. ಜಿಲ್ಲಾ ಬುದ್ಧ ಮಹಾಸಭಾದ ಸದಸ್ಯರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಾಜೇಶ್ ಉಪಸ್ಥಿತರಿದ್ದರು.

ಗುರುವಾಯನಕೆರೆ–ಉಪ್ಪಿನಂಗಡಿ ಹೆದ್ದಾರಿ ಅಭಿವೃದ್ಧಿ: ರಾಜ್ಯ ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ

ಬೆಳ್ತಂಗಡಿ: ಗುರುವಾಯನಕೆರೆಯಿಂದ ಉಪ್ಪಿನಂಗಡಿ ವರೆಗಿನ ರಾಜ್ಯ ಹೆದ್ದಾರಿ ಅಭಿವೃದ್ಧಿಪಡಿಸಲು 13 ಕೋಟಿ ರೂ. ಅಂದಾಜು ಪಟ್ಟಿಗೆ ರಾಜ್ಯ ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ. ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಅನುಮೋದನೆ ನೀಡಲಾಗಿದೆ.

ಸಂಸದ ಬ್ರಿಜೇಶ್ ಚೌಟ ಹಾಗೂ ಶಾಸಕ ಹರೀಶ್ ಪೂಂಜ ಪ್ರಯತ್ನದಲ್ಲಿ ಈಗಾಗಲೇ ರಸ್ತೆಯ 9.50ಕಿ.ಮೀ. ಉದ್ದ ಚತುಷ್ಪಥ ರಸ್ತೆಯಾಗಿದೆ. ಉಳಿದ ಭಾಗದಲ್ಲಿ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ 1.270 ಕಿ.ಮೀ. ಚತುಷ್ಪಥ ರಸ್ತೆ, ಆಯ್ದ ಭಾಗಗಳಲ್ಲಿ ತಡೆಗೋಡೆ, ಆರ್‌ಸಿಸಿ ಚರಂಡಿ ನಿರ್ಮಾಣ, ಭೂಸ್ವಾಧೀನ ವೆಚ್ಚಕ್ಕೆ ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಂತೆ ರಾಜ್ಯ ಸಚಿವ ಸಂಪುಟವು 13 ಕೋಟಿ ವೆಚ್ಚದಲ್ಲಿ ಈ ಹೆದ್ದಾರಿ ಅಭಿವೃದ್ಧಿಪಡಿಸಲು ಅನುಮೋದನೆ ನೀಡಿದೆ. ಗುರುವಾಯನಕೆರೆಯಿಂದ ಉಪ್ಪಿನಂಗಡಿವರೆಗಿನ ರಾಜ್ಯ ಹೆದ್ದಾರಿ ಅಭಿವೃದ್ಧಿಪಡಿಸಲು ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ ಅವರು ಸರಕಾರದ ಗಮನ ಸೆಳೆದಿದ್ದರು. ಸಾರ್ವಜನಿಕರೊಂದಿಗೆ ಸೇರಿ, ಪ್ರತಿಭಟನೆಯನ್ನು ನಡೆಸಿದ್ದರು. ವಿಧಾನಸಭೆಯಲ್ಲಿ ಕೂಡ ರಸ್ತೆ ವಿಚಾರ ಪ್ರಸ್ತಾಪಿಸಿ, ಸರಕಾರದ ಗಮನ ಸೆಳೆದಿದ್ದರು. ಅಲ್ಲದೇ, ಮುಂದಿನ ದಿನಗಳಲ್ಲಿ ಲೋಕೋಪಯೋಗಿ ಇಲಾಖೆಯ SHDP ಯೋಜನೆಯಡಿ ವಾರ್ಷಿಕವಾಗಿ



ಶಾಸಕರುಗಳಿಗೆ ಲಭ್ಯವಾಗುವ ರೂ.12.00ಕೋಟಿ ಅನುದಾನದಲ್ಲಿ ಸಂಪೂರ್ಣ ರೂ.12.00ಕೋಟಿ ಮೊತ್ತ ಕೂಡ ಆದ್ಯತೆ ಮೇರೆಗೆ ಇದೇ ರಸ್ತೆಗೆ ಕುಪ್ಪೆಟ್ಟಿ– ಉಪ್ಪಿನಂಗಡಿ ರಸ್ತೆಯನ್ನು ಪುನರ್ ನಿರ್ಮಾಣ ಮಾಡಲು ಈಗಾಗಲೇ ಶಾಸಕರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿದ್ದಾರೆ.

ಅದರಂತೆ ಮುಂದಿನ ದಿನಗಳಲ್ಲಿ ಕಾಮಗಾರಿಗೆ ಆಡಳಿತಾತ್ಮಕ ಹಾಗೂ ಆರ್ಥಿಕ ಮಂಜೂರಾತಿ ದೊರೆತ ತಕ್ಷಣವೇ ಟೆಂಡರ್ ಪ್ರಕ್ರಿಯೆಗಳನ್ನು ಮುಗಿಸಿ ಸುಸಜ್ಜಿತ ರಸ್ತೆ ನಿರ್ಮಾಣಗೊಳ್ಳಲಿದೆ ಎಂದು ಶಾಸಕ ಹರೀಶ್ ಪೂಂಜಾ ಈ ಹಿಂದೆ ಭರವಸೆ ನೀಡಿದ್ದರು.

ಆರ್ಯಾಪು ಗ್ರಾಮ ಪಂಚಾಯತ್‌ನ ಪ್ರಯೋಗ । ಕಾಡುವ ಸಮಸ್ಯೆಗೆ ನಾಡಿನಲ್ಲೇ ಪರಿಹಾರ

ಇಲ್ಲಿ ಗಾಜು 'ಮರಳಾಗಿ' ಮರು ಬಳಕೆ!

ಪುತ್ತೂರು: ದೇಶದಲ್ಲಿಯೇ ಕಸ ವಿಲೇವಾರಿ ಎಲ್ಲರ ತಲೆಕೆಡಿಸುತ್ತಿರುವ ದೊಡ್ಡ ಪಿಡುಗು. ಇದರೊಂದಿಗೆ ಈ ಕಸ ವಿಲೇವಾರಿ ಮಾತ್ರವಲ್ಲ ಕಸ ವಿಂಗಡಣೆಯೂ ಸ್ಥಳೀಯ ಸರಕಾರಗಳ ಹೆಗಲಿಗೆ ಬಿದ್ದಿದೆ. ಹಾಗಾಗಿ ಗ್ರಾಮ ಪಂಚಾಯತ್‌ಗಳು ಬಹುತೇಕ ಶ್ರಮವನ್ನು ಈ ಯೋಜನೆಯ ಜಾರಿಗಾಗಿ ವಿನಿಯೋಗಿಸುತ್ತಿವೆ. ಇಂತಹ ಸಂದರ್ಭದಲ್ಲಿಯೇ ಪುತ್ತೂರಿನ ಆರ್ಯಾಪು ಗ್ರಾ.ಪಂ. ಇದೀಗ ಗಾಜಿನ ತ್ಯಾಜ್ಯದಿಂದ ಹೊಸ ಉತ್ಪನ್ನ ತಯಾರಿಗೆ ಮುಂದಾಗುವ ಮೂಲಕ ಜಿಲ್ಲೆಗೆ ಮಾದರಿಯಾಗುವತ್ತ ಹೆಜ್ಜೆ ಇಟ್ಟಿದೆ.

ಎಲ್ಲೆಂದರಲ್ಲಿ ಎಸೆಯುವ ಗಾಜಿನ ಬಾಟಲಿಗಳನ್ನು ಕಸ ವಿಲೇವಾರಿ ಸಂದರ್ಭದಲ್ಲಿ ವಿಂಗಡಿಸುವುದೂ ಸವಾಲು. ಈಗ ಗಾಜಿನ ವಸ್ತುಗಳನ್ನೂ ಬದುಕಿಗೆ ಪೂರಕವಾದ ಉತ್ಪನ್ನವಾಗಿ ಬದಲಾಯಿಸಲು ಹೊರಟಿರುವ ಆರ್ಯಾಪು ಗ್ರಾ.ಪಂ. ಗಾಜಿನ ತ್ಯಾಜ್ಯಕ್ಕೆ ಮೌಲ್ಯ ತಂದುಕೊಡಲು ಮುಂದಾಗಿದೆ. ಸ್ವಚ್ಛ ಭಾರತ್ ಯೋಜನೆಯಡಿ ಮನೆ ಮನೆಗಳಿಂದ ಕಸ ಸಂಗ್ರಹ ಮಾಡುವ ವೇಳೆ ಗ್ರಾ.ಪಂ.ಗಳಿಗೆ ಈ ಗಾಜಿನ ಹುಡಿ, ಬಾಟಲುಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಹಾಗೆಯೇ ಇಟ್ಟರೆ ಇದು ಅಪಾಯಕಾರಿ ವಸ್ತುಗಳು. ಉತ್ತಮ ಗಾಜಿನ ಬಾಟಲುಗಳನ್ನು ಗುಜರಿ ಅಂಗಡಿಗಳಿಗೆ ಕೊಡಬಹುದಾದರೂ ತುಂಡಾದ ಗಾಜುಗಳನ್ನು ಯಾರೂ ಖರೀದಿ ಮಾಡುವುದಿಲ್ಲ.

ಗ್ರಾ.ಪಂ.ನಿಂದ ಪರಿಹಾರ

ಇದಕ್ಕೊಂದು ಪರಿಹಾರ ಹುಡುಕಲು ಆರ್ಯಾಪು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ನಾಗೇಶ್ ಮಾಡಿದ ಪ್ರಯತ್ನವೇ ಗಾಜಿನ ಮರಳು ತಯಾರಿ. ಸಾಮಾಜಿಕ ಜಾಲತಾಣದಲ್ಲಿ ಹುಡುಕಾಟ ಮಾಡಿದಾಗ ಗಾಜಿನ ಬಾಟಲಿಗಳನ್ನು ಹುಡಿ ಮಾಡುವ ಯಂತ್ರದ ಬಗ್ಗೆ ಅರಿತುಕೊಂಡ ಅಭಿವೃದ್ಧಿ ಅಧಿಕಾರಿ ನಾಗೇಶ್ ಕೆನರಾ ಬ್ಯಾಂಕಿನ ಸಹಕಾರದೊಂದಿಗೆ ಈ ಯಂತ್ರ ಖರೀದಿ ಮಾಡುತ್ತಾರೆ. ತಮಿಳುನಾಡಿನಿಂದ ತರಿಸಲಾದ ರೂ.4.25 ಲಕ್ಷ ವೆಚ್ಚದ ಈ ಯಂತ್ರ ಈಗ ಬಾಟಲಿಗಳನ್ನು ಮರಳನ್ನಾಗಿ ಪರಿವರ್ತಿಸುವ ಕಾಯಕ ನಡೆಸುತ್ತಿದೆ.

ಸಾಕಷ್ಟು ಬೇಡಿಕೆ ಬಂದಿದೆ

ಪ್ರಾರಂಭಿಕ ಹಂತದಲ್ಲಿರುವ ಆರ್ಯಾಪು ಗಾಜಿನ ಮರಳು ತಯಾರಿಕಾ ಘಟಕ ಭವಿಷ್ಯದಲ್ಲಿ ಪುತ್ತೂರು ತಾಲೂಕಿನ 22 ಗ್ರಾ.ಪಂ.ಗಳು ಮಾತ್ರವಲ್ಲ ಕಡಬ, ಸುಳ್ಯ ತಾಲೂಕುಗಳ ಗಾಜಿನ ತ್ಯಾಜ್ಯಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕಾರ್ಯರೂಪಕ್ಕೆ ಬರಲಿದೆ. ಈಗಾಗಲೇ ಈ ಗಾಜಿನ ಮರಳಿಗೆ ಸಾಕಷ್ಟು ಬೇಡಿಕೆಗಳು ಬಂದಿವೆ. ಹಾಗಾಗಿ ಪುತ್ತೂರು ಉಪವಿಭಾಗದ ಗ್ರಾ.ಪಂ.ಗಳು ಇನ್ನು ಮುಂದೆ ಗಾಜಿನ ಬಾಟಲಿಗಳ ತ್ಯಾಜ್ಯದ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ.





ಗಾಜಿನ ಬಾಟಲಿಗಳ ಮೂಲವೂ ಮರಳು

ಗಾಜಿನ ಉತ್ಪನ್ನವನ್ನು ಮತ್ತೆ ಮರಳಾಗಿಸುವ ಯೋಜನೆ ಇಲ್ಲಿ ಸಾಕಾರಗೊಳ್ಳುತ್ತಿದೆ. ಆದರೆ ಬಾಟಲಿಗಳ ಬಣ್ಣದಲ್ಲಿಯೇ ಈ ಮರಳು ದೊರೆಯುತ್ತದೆ. ವಿವಿಧ ಬಣ್ಣಗಳ ಗಾಜುಗಳ ಮರಳು ಆಯಾಯ ಗಾಜಿನ ಬಣ್ಣದಂತೆ ಮರಳಿನ ರೂಪ ಪಡೆದುಕೊಳ್ಳುತ್ತಿವೆ. ಈ ಮರಳು ಗಾರೆ ಕೆಲಸದ ಪ್ರಯೋಗದಲ್ಲಿ ಯಶಸ್ಸು ಕಂಡರೆ ಪ್ರಕೃತಿದತ್ತ ಮರಳಿಗೆ ಪರ್ಯಾಯ ವಾಗಲಿದೆ. ಗಾರೆ ಕೆಲಸಕ್ಕೆ ಈ ಮರಳು ಬಳಿಸಿಕೊಳ್ಳಲು ಸಾಧ್ಯವಾಗಿಸುವ ಪ್ರಯೋಗವನ್ನು ಆರ್ಯಾಪು ಗ್ರಾ.ಪಂ. ನಡೆಸಲಿದೆ. ನೈಸರ್ಗಿಕ ಮರಳಿನ ಜತೆಗೆ ಈ ಗಾಜಿನ ಮರಳನ್ನು ಮಿಶ್ರಣ ಮಾಡಿ ಉಪಯೋಗಿಸಲು ಸಾಧ್ಯವಾದರೂ ಇದೊಂದು ಉತ್ತಮ ಯೋಜನೆಯಾಗಲಿದೆ. ಆರ್ಯಾಪು ಗ್ರಾ.ಪಂ.ನ ಈ ಗಾಜಿನ ಮರಳನ್ನು ಗಾರೆಗೆ ಬಳಸುವ ಯೋಜನೆ ಯಶಸ್ವಿ ಕಂಡರೆ ಗ್ರಾ.ಪಂ. ಆದಾಯಕ್ಕೂ ದೊಡ್ಡ ಪ್ರಮಾಣದ ಕೊಡುಗೆಯಾಗಲಿದೆ ಎಂಬುವುದರಲ್ಲಿ ಅನುಮಾನವಿಲ್ಲ.

> **ರಾಜ್ಯಕ್ಕೂ ಮಾದರಿ**
> ಬಾಟಲ್ ವಿಲೇವಾರಿಗೆ ದೊಡ್ಡ ಸಮಸ್ಯೆ ಆಗುತ್ತಿತ್ತು. ರಸ್ತೆ ಬದಿಯಲ್ಲಿ ವ್ಯಾಪಕವಾಗಿ ಸಿಗುತ್ತದೆ. ಈ ಸಮಸ್ಯೆಗೊಂದು ಪರಿಹಾರ ಹುಡುಕುವ ನಿಟ್ಟಿನಲ್ಲಿ ಆರ್ಯಾಪಿನಲ್ಲಿ ಯಂತ್ರವನ್ನು ಬಳಸಿಕೊಂಡು ಗಾಜಿನ ಬಾಟಲಿಗಳನ್ನು ಮರಳನ್ನಾಗಿಸುವ ಕೆಲಸ ಆರಂಭವಾಗಿದೆ. ಇದು ರಾಜ್ಯಕ್ಕೂ ಮಾದರಿಯಾದ ಕೆಲಸವಾಗಿದ್ದು, ಹೊಸ ಆವಿಷ್ಕಾರವಾಗಿದೆ. ಪುತ್ತೂರಿನಲ್ಲಿ ಸ್ವಚ್ಛತೆಗೆ ಸಂಬಂಧಿಸಿದಂತೆ ವಿನೂತನ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಬರುತ್ತಿದ್ದೇವೆ. ಇದರಲ್ಲಿ ಆರ್ಯಾಪಿನಲ್ಲಿ ಆರಂಭಿಸಲಾದ ಗಾಜಿನ ಬಾಟಲಿನಿಂದ ಮರಳು ತಯಾರಿಕೆ ನಡೆಸುವುದೂ ಒಂದಾಗಿದೆ.
> ■ **ನವೀನ್ ಕುಮಾರ್ ಭಂಡಾರಿ,**
> ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಪುತ್ತೂರು

ಚಿತ್ರದುರ್ಗದಲ್ಲಿ ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ

ದ.ಕ.ದಿಂದ ಐದು ಸಾವಿರ ಮಂದಿ

ಮಂಗಳೂರು: ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಐದು ಸಾವಿರ ಮಂದಿ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ತಿಳಿಸಿದರು.



ಅಭಿಮಾನೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವಂತೆ ಈಗಾಗಲೇ ವಿಧಾನಸಭಾವಾರು ಸಭೆಗಳನ್ನು ನಡೆಸಲಾಗಿದೆ. ದ.ಕ. ಜಿಲ್ಲೆಯಲ್ಲಿ ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಕುಮಾರ್ ಪುತ್ತೂರು, ಯುವಮೋರ್ಚಾ ಜಿಲ್ಲಾಧ್ಯಕ್ಷ ನಂದನ್ ಮಲ್ಯ, ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ಜೋಗಿ ಅವರು ಉಸ್ತುವಾರಿಗಳಾಗಿದ್ದು, ಸಿದ್ಧತೆ ನಡೆಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಲಿದ್ದು, 10 ಲಕ್ಷ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಕುಮಾರ್ ಪುತ್ತೂರು ಮಾತನಾಡಿ, ಬಿ.ಎಸ್. ಯಡಿಯೂರಪ್ಪ ಅವರು ದಕ್ಷಿಣ ಕನ್ನಡ ಜಿಲ್ಲೆಗೆ ದೊಡ್ಡ ಕೊಡುಗೆ ನೀಡಿದ್ದಾರೆ. ಸ್ಮಾರ್ಟ್ ಸಿಟಿ ಯೋಜನೆಗೂ ಮುನ್ನವೇ ಮಂಗಳೂರು ಮಹಾನಗರ ಪಾಲಿಕೆ ಅಭಿವೃದ್ಧಿ ಯೋಜನೆಗೆ 200 ಕೋಟಿ ರೂ. ಅನುದಾನ ಒದಗಿಸಿದ್ದರು. ಮೀನುಗಾರರಿಗೆ ಅನೇಕ ಕೊಡುಗೆ ನೀಡಿದ್ದಾರೆ. ರೈತರ ಸಾಲ ಮನ್ನಾ ಮಾಡಿದ್ದಾರೆ. ಪಕ್ಷ ಸಂಘಟನೆಗಾಗಿ ದ.ಕ. ಜಿಲ್ಲೆಗೆ ಅತಿ ಹೆಚ್ಚು ಭಾರಿ ಭೇಟಿ ನೀಡಿದ್ದಾರೆ. ಹೀಗಾಗಿ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗ ವಹಿಸಬೇಕು ಎಂದು ವಿನಂತಿಸಿದರು.

ಬಿಜೆಪಿ ಯಾರನ್ನೂ ಪಕ್ಷದಿಂದ ದೂರ ಮಾಡಿಲ್ಲ

ಪುತ್ತೂರಿನಲ್ಲಿ ಮದುವೆಯಾಗುವುದಾಗಿ ನಂಬಿಸಿ ಮಗು ಕರುಣಿಸಿ ವಂಚಿಸಿದ ಪ್ರಕರಣದಲ್ಲಿ ಪಿ.ಜಿ. ಜಗನ್ನಿವಾಸ ರಾವ್ ಅವರು ಬಿಜೆಪಿ ಮುಖಂಡ ಎಂದು ಮಾಧ್ಯಮಗಳಲ್ಲಿ ವರದಿ ಯಾಗುತ್ತಿರುವುದು ಸರಿಯಲ್ಲ. ಪ್ರಕರಣ ಬೆಳಕಿಗೆ ಬಂದ ತಕ್ಷಣ ಜಗನ್ನಿವಾಸ ರಾವ್ ಅವರಿಗೆ ಬಿಜೆಪಿಯಿಂದ ನೋಟಿಸ್ ಜಾರಿಗೊಳಿಸಲಾಗಿತ್ತು. ಡಿಎನ್ಎ ವರದಿ ಬಂದ ಬಳಿಕವೂ ಕೃಷ್ಣ ಜೆ. ರಾವ್ ಮದುವೆಯಾಗಲು ನಿರಾಕರಿಸಿದಾಗ ಜಗನ್ನಿವಾಸ ರಾವ್ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಪ್ರಸ್ತುತ ಬಿಜೆಪಿಗೂ ಜಗನ್ನಿವಾಸ ರಾವ್ ಅವರಿಗೂ ಯಾವುದೇ ಸಂಬಂಧ ಇಲ್ಲ ಎಂದು ಸತೀಶ್ ಕುಂಪಲ ಸ್ಪಷ್ಟಪಡಿಸಿದರು. ಅರುಣ್‌ಕುಮಾರ್ ಪುತ್ತಿಲ ಅವರಿಗೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ಬಿಜೆಪಿ ಯಾರನ್ನೂ ಪಕ್ಷದಿಂದ ದೂರ ಮಾಡಿಲ್ಲ. ಪಕ್ಷನಿಷ್ಠೆಯಿಂದ ಇರುವ ಎಲ್ಲರನ್ನೂ ಪಕ್ಷ ತನ್ನಲ್ಲೇ ಇರಿಸಿಕೊಳ್ಳುತ್ತದೆ ಎಂದು ಸತೀಶ್ ಕುಂಪಲ ಹೇಳಿದರು.

ಅಗ್ನಿಶಾಮಕ ಸಿಬ್ಬಂದಿ ಸಾಹಸಕ್ಕೆ ಉಘೇ ಎಂದ ಜನತೆ

ನೆತ್ತಿ ಸುಡುವ ಬಿಸಿಲನ್ನೂ ಲೆಕ್ಕಿಸದೆ ಮಾರ್ಜಾಲ ರಕ್ಷಣೆಗೆ ಬಾವಿಗಿಳಿದ್ರು!

ಮಂಗಳೂರು: ಆಕಸ್ಮಿಕವಾಗಿ ಆಳದ ಬಾವಿಗೆ ಬಿದ್ದಿದ್ದ ಬೆಕ್ಕೊಂದನ್ನು ಮಂಗಳೂರಿನ ಅಗ್ನಿಶಾಮಕ ದಳದ ಸಿಬ್ಬಂದಿ ಬಿಸಿಲಿನ ತಾಪವನ್ನೂ ಲೆಕ್ಕಿದೆ ಭಾರೀ ಸಾಹಸಪಟ್ಟು ರಕ್ಷಣೆ ಮಾಡಿದ್ದಾರೆ.

ಮಂಗಳೂರು ನಗರದ ಸರಸ್ವತಿ ನಿಲಯ ಮಣ್ಣಗುಡ್ಡದಲ್ಲಿ ಆಕಸ್ಮಿಕವಾಗಿ ಬೆಕ್ಕು ಬಾವಿಗೆ ಬಿದ್ದಿದ್ದು, ಮೇಲಕ್ಕೆ ಬರಲಾಗದೆ ಬಾವಿಯೊಳಗೆ ಒದ್ದಾಡುತ್ತಿತ್ತು. ಇದನ್ನು ಕಂಡ ಸ್ಥಳೀಯರು ತಕ್ಷಣವೇ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿ ರಕ್ಷಣೆಗೆ ಮನವಿ ಮಾಡಿದ್ದರು. ತಕ್ಷಣ ಕಾರ್ಯ ಪ್ರವೃತ್ತರಾದ ಪಾಂಡೇಶ್ವರ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ತಮ್ಮ ಜೀವದ ಹಂಗು ತೊರೆದು ಕೆಲವು ತಾಸುಗಳ ಕಾಲ ಶ್ರಮಪಟ್ಟು ಕೊನೆಗೂ ಪುಟ್ಟ ಜೀವವನ್ನು ರಕ್ಷಿಸಿದ್ದಾರೆ.

ಸತತ ಒಂದು ಗಂಟೆಯ ಪರಿಶ್ರಮ

ಸತತ ಒಂದು ಗಂಟೆಯ ಪರಿಶ್ರಮದಿಂದ ಅಗ್ನಿಶಾಮಕದ ದಳದ ಸಿಬ್ಬಂದಿ ಬೆಕ್ಕನ್ನು ಉಳಿಸಿದ್ದಾರೆ. ಹಗ್ಗದ ಸಹಾಯದಿಂದ ಸಿಬ್ಬಂದಿ ಬಾವಿಯ ಆಳಕ್ಕೆ ಇಳಿದು ನಂತರ ಬೆಕ್ಕನ್ನು ಮೇಲೆ ಎತ್ತಿಕೊಂಡು ಬಂದಿದ್ದಾರೆ.



'ಜೀವ' ಎಲ್ಲ ಒಂದೇ ಅಲ್ಲವೇ?

ಮನುಷ್ಯರು, ಪ್ರಾಣಿಗಳು ಎನ್ನದೇ ಎಲ್ಲರನ್ನೂ, ಎಲ್ಲವನ್ನೂ 'ಜೀವ' ಎಂದು ಪರಿಗಣಿಸುವ ಅಗ್ನಿಶಾಮಕ ಸಿಬ್ಬಂದಿ ಕೆಲಸಕ್ಕೆ ಜನತೆಯ ಮೆಚ್ಚುಗೆ ಸಿಕ್ಕಿದೆ.

- ಸತತ ಒಂದು ಗಂಟೆಗಳ ಕಾಲ ಬೆಕ್ಕಿನ ರಕ್ಷಣೆಗೆ ಸಿಬ್ಬಂದಿ ಶ್ರಮ
- ಕೊನೆಗೂ ಸುರಕ್ಷಿತವಾಗಿ ಬಾವಿಯಿಂದ ಮೇಲೆ ಬಂದು ಮರುಜೀವ ಪಡೆದ ಬೆಕ್ಕು


ಅನಧಿಕೃತವಾಗಿ ಕಾರ್ಯನಿರ್ವಹಣೆ ಮಾಡಿದರೆ ಕಾನೂನು ಕ್ರಮ । ತಕ್ಷಣವೇ ಪರವಾನಿಗೆಗಳ ನವೀಕರಣಕ್ಕೆ ಸೂಚನೆ

ಕೊಡಗು ಜಿಲ್ಲೆಯಲ್ಲಿ ಹೋಂಸ್ಟೇಗಳ ನೋಂದಣಿ ಕಡ್ಡಾಯ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೋಂ–ಸ್ಟೇಗಳು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವಂತೆ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು ಸೂಚಿಸಿದ್ದಾರೆ. ಅಲ್ಲದೆ ಅನಧಿಕೃತವಾಗಿ ಕಾರ್ಯನಿರ್ವಹಿಸುವ ಹೋಂಸ್ಟೇಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಕರ್ನಾಟಕಪ್ರವಾಸೋದ್ಯಮವ್ಯಾಪಾರ(ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ–2015ರ ಅಧಿನಿಯಮ 8 ಉಪ ಕಂಡಿಕೆ(3)ರ ಅಡಿಯಲ್ಲಿ ನಿಯಮಗಳನ್ನು ರಚಿಸಲಾಗಿದೆ. ಅದರ ಅನ್ವಯ ಯಾವ ವ್ಯಕ್ತಿ ಪ್ರವಾಸೋದ್ಯಮ ಚಟುವಟಿಕೆ ನಡೆಸುವ ಸಲುವಾಗಿ ಹೋಂ–ಸ್ಟೇ ಹಾಗೂ ಇತರೆ ಹೆಸರುಗಳಿಂದ ಪ್ರವಾಸಿಗರಿಗೆ ವಸತಿ ಸೌಲಭ್ಯ ಕಲ್ಪಿಸಲಾಗುತ್ತಾರೋ ಅಂತಹ ವ್ಯಕ್ತಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪ್ರಾತಿನಿಧಿಕ ಚಿತ್ರ



ಸರಕಾರದ ಆದೇಶದನ್ವಯ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೋಂ–ಸ್ಟೇಗಳು ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿದೆ. ಈ ಸಂಬಂಧ ಹೋಂ–ಸ್ಟೇ ಮಾಲಕರಿಗೆ ಸಾಕಷ್ಟು ಕಾಲಾವಕಾಶ ನೀಡಿದರೂ ಬಹಳಷ್ಟು ಹೋಂ–ಸ್ಟೇಗಳು ನೋಂದಣಿಯಾಗಿರುವುದಿಲ್ಲ ಎಂದು ತಿಳಿದು ಬಂದಿರುತ್ತದೆ. ಇದನ್ನು ಜಿಲ್ಲಾಡಳಿತವು ಗಂಭೀರವಾಗಿ ಪರಿಗಣಿಸಿದ್ದು, ನೋಂದಣಿಯಾಗದ ಹೋಂ–ಸ್ಟೇಗಳು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಸೂಚಿಸಲಾಗಿದೆ ಹಾಗೂ ನೋಂದಣಿಯಾಗದೇ ಕಾರ್ಯನಿರ್ವಹಿಸುತ್ತಿರುವ ಹೋಂ–ಸ್ಟೇಗಳು ಅನಧಿಕೃತ ಚಟುವಟಿಕೆಗಳನ್ನು ಕೂಡಲೇ ಸ್ಥಗಿತಗೊಳಿಸಬೇಕು ಎಂದು ಅವರು ಸೂಚಿಸಿದ್ದಾರೆ.

ಅನಧಿಕೃತ ಹೋಂಸ್ಟೇಗಳ ವಿರುದ್ಧ ಕ್ರಮ: ಎಚ್ಚರಿಕೆ

ಜಿಲ್ಲೆಯಲ್ಲಿ ಕಾನೂನು ಬಾಹಿರವಾಗಿ ನಡೆಸುತ್ತಿರುವ ಹೋಂ–ಸ್ಟೇಗಳ ಪರವಾನಗಿಯನ್ನು ಈಗಾಗಲೇ ರದ್ದುಗೊಳಿಸಲಾಗಿದೆ. ಆದಾಗ್ಯೂ ಪ್ರವಾಸೋದ್ಯಮ ಇಲಾಖೆಯಡಿಯಲ್ಲಿ ನೋಂದಣಿಗೊಳ್ಳದೆ ನಿಯಮ ಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವ ಹೋಂ–ಸ್ಟೇಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ಪರವಾನಗಿ ನವೀಕರಣ

ಪ್ರವಾಸೋದ್ಯಮ ಇಲಾಖೆಯಿಂದ ಈಗಾಗಲೇ ಪರವಾನಗಿ ಪಡೆದು ಕಾರ್ಯನಿರ್ವಹಿಸುತ್ತಿರುವ ಮತ್ತು ಪರವಾನಗಿ ಅವಧಿಯು 5 ವರ್ಷಗಳಿಗೆ ಮುಕ್ತಾಯಗೊಳ್ಳುತ್ತಿರುವ ಹೋಂ–ಸ್ಟೇಗಳು ಪರವಾನಗಿಯನ್ನೂ ನವೀಕರಿಸುವಂತೆಯೂ ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕರೂ ಆಗಿರುವ ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಅವರು ತಿಳಿಸಿದ್ದಾರೆ. ಇವುಗಳಲ್ಲದೇ ಮಾಹಿತಿ ಇಲ್ಲದೆ ಅನಧಿಕೃತವಾಗಿ ನಡೆಸುತ್ತಿರುವಂತಹ ಹೋಂ–ಸ್ಟೇಗಳ ಬಗ್ಗೆ ಹಾಗೂ ಹೋಂ–ಸ್ಟೇ ನೋಂದಣಿ ಮಾಡಿಕೊಳ್ಳುವ ಬಗ್ಗೆ ಸಾರ್ವಜನಿಕರು ದೂರು/ ಮಾಹಿತಿ ಇದ್ದಲ್ಲಿ ಅವುಗಳ ವಿವರಗಳನ್ನು ಪತ್ರ ಮುಖೇನ ಉಪನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಸ್ಟುವರ್ಟ್ ಹಿಲ್ ರಸ್ತೆ, ಮಡಿಕೇರಿ, ಕೊಡಗು ಜಿಲ್ಲೆ 571201 ದೂರವಾಣಿ ಸಂಖ್ಯೆ: 08272-200519 ಈ–ಮೇಲ್:ddkodagutourism@gmail.com ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ದೂರವಾಣಿ ಸಂಖ್ಯೆ:112ಗೆ ತಿಳಿಸಬಹುದಾಗಿದೆ.


ಎಸ್ಸೆಸ್ಸೆಲ್ಸಿ ಅನುತ್ತೀರ್ಣ: ವರದಿ ಸಲ್ಲಿಕೆ

ಬೆಂಗಳೂರು: ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಕನ್ನಡ ಭಾಷಾ ಪರೀಕ್ಷೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅನುತ್ತೀರ್ಣರಾಗುತ್ತಿರುವ ಹಿನ್ನೆಲೆ ಈ ಕುರಿತು ಸಮಗ್ರ ಸಂಶೋಧನೆ ನಡೆಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರವು, ತನ್ನ ವರದಿಯನ್ನು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲ್ಲಿಸಿದೆ.

ರಾಜ್ಯದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಕನ್ನಡಕ್ಕಿರುವ ಸ್ಥಾನಮಾನ ಹಾಗೂ ವಿದ್ಯಾರ್ಥಿಗಳ ಸಾಧನೆಯನ್ನು ಆಧರಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿದ್ದು, ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಅವರ ಮಾರ್ಗದರ್ಶನದಲ್ಲಿ ಎಂಟು ಮಂದಿ ಶಿಕ್ಷಕರ ತಂಡವು ಈ ಅಧ್ಯಯನ ನಡೆಸಿದ್ದಾರೆ. ಕನ್ನಡದಲ್ಲಿ ಮಕ್ಕಳು ಹಿಂದುಳಿಯಲು ಶಿಕ್ಷಣ ವ್ಯವಸ್ಥೆಯಲ್ಲಿನ ಏಕರೂಪತೆಯ ಕೊರತೆಯೇ ಮುಖ್ಯ ಕಾರಣ ಎಂದು ಗುರುತಿಸಿದೆ.

2016 ರಲ್ಲಿ ಶೇ. 83.3 ರಷ್ಟಿದ್ದ ಕನ್ನಡ ಪ್ರಥಮ ಭಾಷಾ ಆಸಕ್ತಿಯು, 2025ರ ವೇಳೆಗೆ ಶೇ. 81.03ಕ್ಕೆ ಕುಸಿದಿರುವುದು ಆತಂಕಕಾರಿ ವಿಷಯವಾಗಿದೆ. ಇದೇ ಅವಧಿಯಲ್ಲಿ ಇಂಗ್ಲಿಷ್ ಭಾಷೆಯನ್ನು ಮೊದಲ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಕಳೆದ ವರ್ಷದ ಪರೀಕ್ಷೆಯಲ್ಲಿ ಸುಮಾರು 80 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಕನ್ನಡದಲ್ಲಿ ಫೇಲ್ ಆಗಿರುವುದು ಕನ್ನಡದ ಭವಿಷ್ಯಕ್ಕೆ ಎಚ್ಚರಿಕೆಯ ಗಂಟೆಯಾಗಿದೆ ಎಂದು ವರದಿ ತಿಳಿಸಿದೆ. ಈ ಪರಿಸ್ಥಿತಿಯನ್ನು ಸುಧಾರಿಸಲು ಪ್ರಾಧಿಕಾರವು ಸರ್ಕಾರಕ್ಕೆ 22 ಪ್ರಮುಖ ಶಿಫಾರಸುಗಳನ್ನು ಮಾಡಿದೆ. ಅಂಗನವಾಡಿಯಿಂದ ಪದವಿವರೆಗಿನ ಶಿಕ್ಷಣದಲ್ಲಿ ಕನ್ನಡವನ್ನು ಒಂದು ಕಡ್ಡಾಯ ಭಾಷೆಯನ್ನಾಗಿ ಜಾರಿಗೊಳಿಸಬೇಕು ಮತ್ತು ತ್ರಿಭಾಷಾ ಸೂತ್ರದ ಬದಲಿಗೆ ದ್ವಿಭಾಷಾ ನೀತಿಯನ್ನು ಅಳವಡಿಸಿಕೊಳ್ಳಬೇಕು ಎಂಬುದು ಪ್ರಾಧಿಕಾರದ ಪ್ರಮುಖ ಒತ್ತಾಯವಾಗಿದೆ. ಅಲ್ಲದೇ, ಕನ್ನಡ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಶೇ. 25ರಷ್ಟು ಮೀಸಲಾತಿ ನೀಡಬೇಕು ಮತ್ತು ಪಠ್ಯಪುಸ್ತಕಗಳನ್ನು ಭಾಷಾ ತಜ್ಞರಿಂದಲೇ ರಚಿಸಬೇಕು ಎಂದು ವರದಿಯಲ್ಲಿ ತಿಳಿಸಲಾಗಿದೆ.

ರಾಮ ಬಾಣ



ಕಂದಾಯ ಸಚಿವ ಕೃಷ್ಣ ಬೈರೇಗೌಡ ಭರವಸೆ

ಮಳೆ ಹಾನಿಗೆ ಸೂಕ್ತ ಪರಿಹಾರ

ಶಿವಮೊಗ್ಗ: ಶಿವಮೊಗ್ಗ ಗ್ರಾಮಾಂತರ ಕ್ಷೇತ್ರ ವ್ಯಾಪ್ತಿಯಲ್ಲಿ ಬಿರುಗಾಳಿ ಸಹಿತ ಮಳೆಯಿಂದಾಗಿ ತೀವ್ರ ಹಾನಿಯುಂಟಾದ ಕೃಷಿ ಭೂಮಿ ಮತ್ತು ಮನೆಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಶುಕ್ರವಾರ ಭೇಟಿ ನೀಡಿ ನಷ್ಟದ ಪರಿಶೀಲನೆ ನಡೆಸಿದರು.



ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿರುಗಾಳಿ ಸಹಿತ ಮಳೆಯಿಂದಾಗಿ ಹೊಳೆಹೊನ್ನೂರು ಭಾಗದ 33 ಗ್ರಾಮದಲ್ಲಿ ಮನೆ ಮತ್ತು ಬೆಳೆ ಹಾನಿಯಾಗಿದೆ. ಮನೆಗಳಿಗೆ ಪರಿಹಾರ ಮತ್ತು ಹೊಸ ಮನೆಗಳನ್ನು ಹಂಚಲಾಗುವುದು. ಸೂಕ್ತ ಸಮೀಕ್ಷೆಗೆ ಮತ್ತು ಪರಿಹಾರಕ್ಕೆ ಸಿಎಂ ಸೂಚನೆ ನೀಡಿದ್ದಾರೆ. ಡಿಸಿ ಜೊತೆ ನಿರಂತರ ಸಂಪರ್ಕದಲ್ಲಿದ್ದೇನೆ ಎಂದರು. 20 ಮನೆಗಳು ಸಂಪೂರ್ಣವಾಗಿ ಹಾಳಾಗಿವೆ. 600 ಮನೆಗಳು ಭಾಗಶಃ ಉರುಳಿವೆ. ನಿಯಮಾವಳಿ ಪ್ರಕಾರ ಮನೆಗಳನ್ನು ಸಂಪೂರ್ಣ ಕಳೆದುಕೊಂಡವರಿಗೆ ಪರಿಹಾರ ಜೊತೆಗೆ ಪ್ರತ್ಯೇಕ ಮನೆ ಕೊಡಲು ಸೂಚಿಸಲಾಗಿದೆ. ಬೆಳೆ ಪರಿಹಾರಕ್ಕೆ ಜಂಟಿ ಸಮೀಕ್ಷೆಗೆ ಸೂಚಿಸಲಾಗಿದೆ ಎಂದರು.

ಇಲ್ಲಿನ ಸ್ಥಳೀಯ ರೈತ ಮುಖಂಡರು ವಿಶೇಷ ಪರಿಹಾರ ನೀಡುವಂತೆ ಒತ್ತಾಯಿಸುತ್ತಿದ್ದಾರೆ. ಉಸ್ತುವಾರಿ ಸಚಿವರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಅಂತಿಮ ತೀರ್ಮಾನವನ್ನು ಸದನದಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು. ಹೆಚ್ಚುವರಿ ಪರಿಹಾರದ ಬಗ್ಗೆ ಸಂಪುಟ ಸಭೆ ತೀರ್ಮಾನಿಸಲಿದೆ. 350 ವಿದ್ಯುತ್ ಕಂಬ ಬಿದ್ದಿವೆ. ಅದನ್ನು ಮೆಸ್ಕಾಂ ನೋಡಿಕೊಳ್ಳಲಿದೆ ಎಂದರು.

ಅನಾಹುತ ಮಾಡಿಕೊಳ್ಳಬೇಡಿ: ಸಾಲ ಸೋಲ ಮಾಡಿ ಬೆಳೆ ಬೆಳೆದಿದ್ದವು. ಭಾರೀ ಪ್ರಮಾಣದ ಮಳೆಯಿಂದ ಬೆಳೆ ನಷ್ಟವಾಗಿದೆ. ಈಗ ದಾರಿ ಕಾಣುತ್ತಿಲ್ಲ. ಕೆಲವರು ವಿಷ ಸೇವಿಸಲು ಮುಂದಾಗಿದ್ದನ್ನು ತಪ್ಪಿಸಿದ್ದೇವೆ ಎಂದು ರೈತರು ಸಚಿವರ ಬಳಿ ಅಳಲು ತೋಡಿಕೊಂಡರು. ಅದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸರ್ಕಾರ ರೈತರ ಪರವಾಗಿದೆ ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಶಾಸಕಿ ಶಾರದಾ ಪೂರ್ಯಾನಾಯ್ಕ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್. ಪ್ರಸನ್ನಕುಮಾರ್ ಇದ್ದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನನಗೆ ಯಶಸ್ವೀ ವ್ಯಕ್ತಿಗಳೆಂದರೆ ಇಷ್ಟವಿಲ್ಲ. ನಾನು ಸೋತವರ ಜತೆ ಇರಲು ಬಯಸುತ್ತೇನೆ – ಟ್ರಂಪ್
– ಸಮಾನರಲ್ಲಿ ಸ್ನೇಹ ಸಹಜ!

ದಿನ ಭವಿಷ್ಯ

ಮೇಷ ಉದಾಸೀನತೆ ಕಾಡಲಿದೆ. ಕೆಲಸ ನಿಧಾನ. ತುರ್ತು ಕಾರ್ಯ ಕಡೆಗಣಿಸಬೇಡಿ. ಹೊಸ ವ್ಯವಹಾರದಲ್ಲಿ ಹಣ ಹೂಡಬೇಡಿ.

ವೃಷಭ ವೃತ್ತಿ ಕಡೆಗೇ ಗಮನ ಕೊಟ್ಟು ಇತರ ವಿಷಯ ಕಡೆಗಣಿಸಿದ್ದೀರಿ. ಖಾಸಗಿ ವಿಷಯಕ್ಕೂ ಆದ್ಯತೆ ಕೊಡಿ. ಆಪ್ತರ ಹಿತ ಗಮನಿಸಿ. ಹೂಡಿಕೆಯಿಂದ ಲಾಭ.

ಮಿಥುನ ಈ ದಿನ ಹೆಚ್ಚು ಎಚ್ಚರ ಅವಶ್ಯ. ಸಣ್ಣ ತಪ್ಪು ದೊಡ್ಡ ಪರಿಣಾಮ ಉಂಟು ಮಾಡೀತು. ಖರೀದಿ ಹುಮ್ಮಸ್ಸಿನಲ್ಲಿ ಖರ್ಚು ಅಧಿಕ. ಬಂಧು ಭೇಟಿ.

ಕಟಕ ಉದ್ವಿಗ್ನ ಪರಿಸ್ಥಿತಿ ಎದುರಿಸುವಿರಿ. ಮನಸು ಶಾಂತಗೊಳಿಸಲು ಹೆಚ್ಚು ಗಮನ ಕೊಡಿ. ಆದಾಯ ಮತ್ತು ಖರ್ಚಿನ ಮಧ್ಯೆ ಸಮತೋಲನ ಸಾಧಿಸಿ.

ಸಿಂಹ ಉದ್ಯೋಗಕ್ಕೆ ಸಂಬಂಧಿಸಿ ಶುಭ ಸುದ್ದಿ. ಆಪ್ತರ ಜತೆಗಿನ ಭಿನ್ನಮತ ಶಮನ. ಹಣದ ವ್ಯವಹಾರದಲ್ಲಿ ಅನಿರೀಕ್ಷಿತ ತೊಡಕು ಉಂಟಾಗಲಿದೆ.

ಕನ್ಯಾ ನೀವು ನಿರರ್ಥಕ ಅಂದುಕೊಂಡ ಕೆಲಸ ಉತ್ತಮ ಫಲಿತಾಂಶ ನೀಡಲಿದೆ. ತೃಪ್ತಿಕರ ಆರ್ಥಿಕ ಬೆಳವಣಿಗೆ. ಕೌಟುಂಬಿಕ ಸಾಮರಸ್ಯ.

ತುಲಾ ಎಲ್ಲವೂ ನಿಮಗೆ ಪೂರಕವಾಗಿದ್ದರೂ ಏನೋ ಕೊರಗು, ಬೇಸರ. ಕೆಲ ವಿಚಾರಗಳಲ್ಲಿ ನಿಮ್ಮ ಧೋರಣೆ ಬದಲಿಸುವ ಪ್ರಸಂಗ ಬಂದೀತು.

ವೃಶ್ಚಿಕ ವಿವಾಹ ಸಂಬಂಧ ಕೂಡಿಬಂದೀತು. ಉದ್ವಿಗ್ನತೆ ಸೃಷ್ಟಿಸುವ ವಿಷಯಗಳಿಂದ ದೂರವಿರಿ. ವೃತ್ತಿ ಕಾರ್ಯದಲ್ಲಿ ಸಫಲತೆ. ಬಂಧುಗಳ ಸಹಕಾರ.

ಧನು ಭವಿಷ್ಯದ ಯೋಜನೆ ರೂಪಿಸಲು ಸಕಾಲ. ಉದ್ಯೋಗ ಪಡೆಯುವಲ್ಲಿ ಸಫಲ. ಧೂಳು ಸಂಬಂಧಿ ಅಲರ್ಜಿ ಉಂಟಾದೀತು. ಕೌಟುಂಬಿಕ ಸೌಹಾರ್ದ.

ಮಕರ ನಿಮ್ಮ ಕಲ್ಪನೆ, ಆಕಾಂಕ್ಷೆ ಸಾಕಾರಗೊಳಿಸಲು ಸಫಲ. ಆತ್ಮೀಯರ ಸಾಧನೆಯ ತೃಪ್ತಿ. ವಾಹನ ಚಾಲನೆಯಲ್ಲಿ ತುಸು ಎಚ್ಚರವಿರಲಿ.

ಕುಂಭ ಕಡೆಗಣಿಸಿದ್ದ ವಿಷಯವೊಂದು ಮುನ್ನೆಲೆಗೆ ಬರಲಿದೆ. ಆ ಬಗ್ಗೆ ಗಮನ ಹರಿಸಿ. ವೃತ್ತಿಗೆ ಸಂಬಂಧಿಸಿ ಶುಭ ಸುದ್ದಿ ಕೇಳಲಿದೆ. ಧನಪ್ರಾಪ್ತಿ.

ಮೀನ ಏಕತಾನತೆಯಿಂದ ಹೊರಬಂದು ಹೊಸತನಕ್ಕೆ ಕ್ರಿಯಾಶೀಲರಾಗಿ. ಅನವಶ್ಯ ಜಗಳಕ್ಕೆ ಹೋಗದಿರಿ. ತಾಳ್ಮೆ ಪ್ರದರ್ಶಿಸಿ. ಪ್ರೀತಿಯಲ್ಲಿ ಮಹತ್ವದ ಬೆಳವಣಿಗೆ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 2,7,0,3

50 ಕಡೆಗಳಲ್ಲಿ ಓಪನ್ ಹೌಸ್ ಕೌಂಟರ್: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ನನ್ನ ಇ-ಖಾತಾ ಆಂದೋಲನ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಎಲ್ಲಾ ಐದು ಪಾಲಿಕೆಗಳಲ್ಲಿ ಮೇ 16 ರಿಂದ ಪ್ರತಿ ಶನಿವಾರ ಸುಮಾರು 50 ಕಡೆಗಳಲ್ಲಿ ಓಪನ್ ಹೌಸ್ ಕೌಂಟರ್ ತೆರೆದು ನನ್ನ ಇ-ಖಾತಾ ಆಂದೋಲನ ನಡೆಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಅವರು ಶುಕ್ರವಾರ ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ವಿವರಗಳನ್ನು ನೀಡಿದರು. ಪಾಲಿಕೆ ಕಚೇರಿಗಳಲ್ಲಿ ಜನಸಂದಣಿ ಉಂಟಾಗಬಹುದೆಂದು ಸರ್ಕಾರಿ ಅಥವಾ ಖಾಸಗಿ ಶಾಲೆಗಳಲ್ಲಿ ಈ ಆಂದೋಲನ ಹಮ್ಮಿಕೊಳ್ಳಲಾಗುವುದು. ಪ್ರತಿ ವಾರ ಅಂದಾಜು 5 ಸಾವಿರ ಜನರ ದೂರುಗಳಿಗೆ ಪರಿಹಾರ ನೀಡಲಾಗುವುದು. ಪ್ರತಿ ಪಾಲಿಕೆಗಳಲ್ಲಿ 5–10 ಕೌಂಟರ್‌ಗಳನ್ನು ತೆರೆಯಲಾಗುವುದು. ದಟ್ಟಣೆಯಿರುವ ಕಡೆ ಹೆಚ್ಚು ಕೌಂಟರ್‌ಗಳು, ಕಡಿಮೆ ದಟ್ಟಣೆಯಿರುವಲ್ಲಿ ಕಡಿಮೆ ಕೌಂಟರ್‌ಗಳನ್ನು ತೆರೆಯಲಾಗುವುದು ಎಂದು ಹೇಳಿದರು.

ಕೌಂಟರ್‌ಗಳ ಬಗ್ಗೆ ಜಾಹೀರಾತು, ಕಟೌಟ್, ವೆಬ್‌ಸೈಟ್ ಸೇರಿದಂತೆ ಎಲ್ಲೆಡೆ ಮಾಹಿತಿ ನೀಡಲಾಗುವುದು. ದಾಖಲೆ ತಕರಾರು ಇರುವೆಡೆ, ಅನುಮಾನ ಇರುವ ಕಡೆ ಕಂದಾಯ ಅಧಿಕಾರಿಗಳು ತೆರಳಿ ಸ್ಥಳ ಪರಿಶೀಲನೆ ನಡೆಸಿ ಅರ್ಜಿ ಸಲ್ಲಿಸಿದ 15 ದಿನಗಳ ಒಳಗೆ ಬಗೆಹರಿಸಲಾಗುವುದು. ಫೋಟೋ, ಸ್ಕೆಚ್, ನಕ್ಷೆ, ಜಿಪಿಎಸ್ ಸೇರಿದಂತೆ ಭಾವಚಿತ್ರ ಎಲ್ಲವೂ ದಾಖಲೆಯಲ್ಲಿ ಇರುವುದು. ಆಧಾರ್ ಸೇರಿದಂತೆ ನಿಗದಿತ ಸಂಖ್ಯೆ ನೀಡಿದರೆ ಈ ದಾಖಲೆಗಳನ್ನು ಯಾರು ಬೇಕಾದರೂ ನೋಡಬಹುದು. ಕಂದಾಯ ಅಧಿಕಾರಿ, ಉಪ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಇದರ ಜವಾಬ್ದಾರಿ ಹೊಂದಿರುತ್ತಾರೆ.

ಏಳು ಸಾವಿರ ಅರ್ಜಿ ವಿಲೇ

ಮೊದಲು ಭೂಮಿಯನ್ನು ಸಕ್ರಮ ಮಾಡಲಾಗುವುದು, ನಂತರ ಕಟ್ಟಡ. ಏಕೆಂದರೆ



ಇದಕ್ಕೆ ಸಾಕಷ್ಟು ಹಂತಗಳಿವೆ. 7 ಸಾವಿರ ಆಸ್ತಿಗಳಿಗೆ ಎ ಖಾತೆ ಅರ್ಜಿ ವಿಲೇ ಮಾಡಲು ಕ್ರಮವಹಿಸಲಾಗಿದೆ. ಇವರು ಹಣ ಕಟ್ಟಿದ ತಕ್ಷಣ ಖಾತೆಯನ್ನು ಹಸ್ತಾಂತರಿಸಲಾಗುವುದು. ಇವರು ಹಣ ಕಟ್ಟಿದರೆ 300 ಕೋಟಿ ರೂ. ಆದಾಯ ಬರಲಿದೆ. ಏರಿಯಾಗೆ ಅನುಗುಣವಾಗಿ ಸ್ಲಾಬ್‌ಗಳನ್ನು ನಿಗದಿ ಮಾಡಲಾಗಿದೆ. ಪ್ರತಿಯೊಂದು ಹೊಸ ಅರ್ಜಿಯನ್ನು 15 ದಿನಗಳಲ್ಲಿ ವಿಲೇ ಮಾಡಲಾಗುವುದು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಎರಡನೇ, ನಾಲ್ಕನೇ ಶನಿವಾರ ಕೆಲಸ ಮಾಡುವ ಅಧಿಕಾರಿಗಳಿಗೆ ಪರ್ಯಾಯವಾಗಿ ಇನ್ನೊಂದು ದಿನ ರಜೆ ನೀಡಲಾಗುವುದು ಎಂದು ವಿವರಿಸಿದರು.

ಹತ್ತು ತಿಂಗಳಲ್ಲಿ 23 ಲಕ್ಷಕ್ಕೂ ಅಧಿಕ ಖಾತೆ

ಸ್ವಾಧೀನ ಪತ್ರ ಹೊಂದಿರುವ ಅಪಾರ್ಟ್‌ಮೆಂಟ್‌ಗಳ ಖಾತೆಗಳನ್ನು ಸ್ವಯಂಚಾಲಿತವಾಗಿ ಮಾಡಿಕೊಡಲಾಗುವುದು. ಹತ್ತು ತಿಂಗಳಲ್ಲಿ ಆನ್‌ಲೈನ್ ಮೂಲಕ 23 ಲಕ್ಷಕ್ಕೂ ಹೆಚ್ಚು ಖಾತೆಗಳನ್ನು ಮಾಡಿರುವುದು ಇಡೀ ದೇಶದಲ್ಲಿ ದಾಖಲೆ ಬರೆದಿದೆ. 37,480 ಫ್ಲಾಟ್‌ಗಳಿಗೆ ಓಸಿ ನೀಡಲಾಗಿದೆ. 10 ಲಕ್ಷ ಜನರಿಗೆ ಈಗಾಗಲೇ ವಾಟ್ಸಪ್ ಮೂಲಕ ಖಾತೆಗಳ ಡಿಜಿಟಲ್ ಪ್ರತಿ ಕಳುಹಿಸಲಾಗಿದೆ. ಮಿಕ್ಕವರಿಗೆ ಕಳುಹಿಸಲಾಗುತ್ತದೆ. ಭೌತಿಕ ಪ್ರತಿಗಳನ್ನು ಮನೆಗಳಿಗೆ ಕಳುಹಿಸಲಾಗುತ್ತದೆ. ನಮ್ಮ ಈ ಭೂಮಿ ಗ್ಯಾರಂಟಿ ಮೆಚ್ಚಿ ಕೇಂದ್ರ ಸರ್ಕಾರ ರಾಷ್ಟ್ರೀಯ ಇ ಆಡಳಿತ ಚಿನ್ನದ ಪ್ರಶಸ್ತಿ ನೀಡಿದೆ. ನಾವು ಇಂತಹ ದಾಖಲೆ ಮಾಡುತ್ತೇವೆ ಎಂದು ಕೇಂದ್ರ ಸರ್ಕಾರ ಎಣಿಸಿರಲಿಲ್ಲ. 13 ಲಕ್ಷ ಇ ಖಾತೆಗಳನ್ನು ಆಸ್ತಿ ತೆರಿಗೆ ಆದಾರದಲ್ಲಿ ಸೃಷ್ಟಿಸಿ ಒಂದೇ ದಿನದಲ್ಲಿ ಎಸ್‌ಎಂಎಸ್ ಮೂಲಕ ನೀಡಲಾಗಿದೆ ಎಂದು ತಿಳಿಸಿದರು.

> ಈ ಹಿಂದೆ ನನ್ನ ತಂಗಿಗೆ ಆಸ್ತಿ ಖರೀದಿ ಮಾಡಿದ್ದೆ. ಆದರೆ, ಬೇರೆಯವರಿಗೆ ಖಾತೆಯಾಯಿತು. ನಮಗೆ ಖಾತೆಯೇ ಆಗಲಿಲ್ಲ. ಇಂತಹ ಹಗರಣಗಳು ನಡೆಯುವುದನ್ನು ತಪ್ಪಿಸಲು ನನ್ನ ಇ-ಖಾತೆ ಈ ಕ್ರಮ ತೆಗೆದುಕೊಳ್ಳಲಾಗಿದೆ.
> ■ ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಬಿ ಖಾತೆಯಿಂದ ಎ ಖಾತೆ ನೀಡುವ ಅಭಿಯಾನ ಪ್ರಾರಂಭ ಮಾಡಲಾಗುವುದು. ಕೆಳ ಹಂತದ ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆಯಿರುವುದರಿಂದ ಮನೆ ಬಾಗಿಲಿಗೆ ತೆರಳಿ ಖಾತೆ ನೀಡಲಾಗುವುದು. ಅನೇಕ ಕಡೆ 10 ರಿಂದ 5 ಸಾವಿರ ರೂ. ಲಂಚ ಬೇಡಿಕೆ ಬಂದಿದೆ ಎನ್ನುವ ದೂರು ಬಂದಿದೆ. ಇದರ ಬಗ್ಗೆ ನಾನೂ ತನಿಖೆ ನಡೆಸಿದ್ದೇನೆ. ಅದಕ್ಕೆ ಈ ದುರುಪಯೋಗ ತಪ್ಪಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ನಾವು ಪಾರದರ್ಶಕ ಆಡಳಿತ ನೀಡಬೇಕೆಂದು ಹೊರಟಿದ್ದೇವೆ. ನಾಳೆಯಿಂದಲೇ ಅರ್ಜಿ ಸಲ್ಲಿಕೆ ಮಾಡಬಹುದು ಎಂದರು.

ನೌಕರರ ಹಿತಕ್ಕಾಗಿ ಬೇಕಿದೆ ಕೆಎಸ್‌ಎಟಿ

ಪುಟ ೧➡ ಕೆಎಸ್‌ಎಟಿ ರದ್ದುಪಡಿಸಬೇಕೋ ಅಥವಾ ಮುಂದು ವರಿಸಬೇಕೋ ಎಂಬುವುದರ ಕುರಿತು ಅಧ್ಯಯನ ಕೈಗೊಂಡಿರುವ ಜ್ಯುಡಿಷಿಯಲ್ ಇಂಪ್ಯಾಕ್ಟ್ ಅಸೆಸ್ಮೆಂಟ್ ಕಮಿಟಿಯು ಸರ್ಕಾರಿ ನೌಕರರ ಸಂಘಗಳಿಗೆ ಪತ್ರ ಬರೆದಿದೆ. ಮೇ 30ರ ಒಳಗಾಗಿ ತಮ್ಮ ಸಂಘದ ವತಿಯಿಂದ ಏನಾದರೂ ಅಭಿಪ್ರಾಯ, ಸಲಹೆಗಳು ಇದ್ದಲ್ಲಿ ಲಿಖಿತವಾಗಿ ಸಮಿತಿಗೆ ಸಲ್ಲಿಸುವಂತೆ ಕೋರಿದೆ. ಕಮಿಟಿ ನೀಡುವ ವರದಿಯ ಮೇಲೆ ಕೆಎಸ್‌ಎಟಿ ರದ್ದಾಗುತ್ತದೆಯೋ ಅಥವಾ ಮುಂದುವರಿಯುತ್ತದೆಯೋ ಎಂದು ಗೊತ್ತಾಗಲಿದೆ. ನ್ಯಾಯ ಮಂಡಳಿಯ ಸ್ಥಾಪನೆಯ ಮೂಲ ಉದ್ದೇಶವೇ ಸರ್ಕಾರಿ ನೌಕರರಿಗೆ ತಮ್ಮ ಸೇವಾ ಸಂಬಂಧಿತ ವ್ಯಾಜ್ಯಗಳಿಗೆ ವೇಗವಾದ ಹಾಗೂ ಪರಿಣಾಮಕಾರಿ ಪರಿಹಾರ ಒದಗಿಸುವುದಾಗಿದೆ. ಪ್ರಸ್ತುತ ಬೆಂಗಳೂರು, ಬೆಳಗಾವಿ ಮತ್ತು ಕಲಬುರ್ಗಿ ಪೀಠಗಳಲ್ಲಿ ವರ್ಷಕ್ಕೆ ಸರಾಸರಿ 6 ಸಾವಿರ ಪ್ರಕರಣಗಳು ದಾಖಲಾಗುತ್ತಿದ್ದು, ಸುಮಾರು 10 ಸಾವಿರ ಪ್ರಕರಣಗಳು ಬಾಕಿ ಉಳಿದಿವೆ. ಒಂದು ವೇಳೆ ಆಡಳಿತ ನ್ಯಾಯ ಮಂಡಳಿಯನ್ನು ರದ್ದುಪಡಿಸಿದಲ್ಲಿ, ಎಲ್ಲಾ ಸೇವಾ ವಿಷಯಗಳು ಕರ್ನಾಟಕ ಉಚ್ಚ ನ್ಯಾಯವ್ಯಾಪ್ತಿಗೆ ಸೇರುತ್ತದೆ. ಇದರಿಂದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮತ್ತಷ್ಟು ಹೊರೆಯಾಗಿ ತೀರ್ಪು ನೀಡುವುದು ಮತ್ತಷ್ಟು ವಿಳಂಬವಾಗಬಹುದು, ಇದು ನ್ಯಾಯ ವಿಳಂಬವಾದರೆ ನ್ಯಾಯ ನಿರಾಕರಿಸಲಾಗಿದೆ ಎಂಬ ಸನ್ನಿವೇಶಕ್ಕೆ ಕಾರಣವಾಗಬಹುದು.

ನೌಕರರಿಗೆ ಅನಾನುಕೂಲ

ನ್ಯಾಯಮಂಡಳಿ ರದ್ದುಪಡಿಸಿದಲ್ಲಿ ಸರ್ಕಾರಿ ನೌಕರರು ತಮ್ಮ ದಾವೆಗಳನ್ನು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಬೇಕಾಗುತ್ತದೆ. ಆದ್ದರಿಂದ, ನ್ಯಾಯಾಂಗ ವ್ಯವಸ್ಥೆ ಸುಗಮ ನಿರ್ವಹಣೆಗೆ ಹಾಗೂ ಸರ್ಕಾರಿ ನೌಕರರ ಹಿತದೃಷ್ಟಿಯಿಂದ ನ್ಯಾಯಮಂಡಳಿಯನ್ನು ಮುಂದುವರಿಸುವುದು ಅತ್ಯಂತ ಅಗತ್ಯವಾಗಿದೆ. ವರ್ಗಾವಣೆ ವಿಷಯಗಳನ್ನು ನ್ಯಾಯಮಂಡಳಿಯ ವ್ಯಾಪ್ತಿಯಿಂದ ಹೊರಗಿಟ್ಟಲ್ಲಿ ಅನಾನುಕೂಲತೆಗಳು ಉಂಟಾಗುವ ಸಾಧ್ಯತೆ ಇದೆ.

> ರಾಜಕೀಯ ಒತ್ತಡದಿಂದ ಪಾರಾಗಲು, ಹೈಕೋರ್ಟ್ ಒತ್ತಡ ಕಡಿಮೆ ಮಾಡಲು ಕೆಎಸ್ ಎಟಿ ಸರ್ಕಾರಿ ನೌಕರರಿಗೆ ನೆರವಾಗಲಿದೆ. ಶೇ.6ರಷ್ಟು ಮಾತ್ರ ವರ್ಗಾವಣೆಗೆ ಅವಕಾಶ ಇರುವುದರಿಂದ ಬೇಕಾಬಿಟ್ಟಿ ವಾರ್ಗಾವಣೆ ಮಾಡಿದರೆ, ಕೆಎಸ್‌ಎಟಿ ಮೂಲಕ ತಡೆಯಾಜ್ಞೆ ತರಲಾಗುತ್ತದೆ.
> ■ ರಮೇಶ ಸಂಗಾ, ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘದ ಅಧ್ಯಕ್ಷ

1,745 ಕೋಟಿ ಮೌಲ್ಯದ ಡ್ರಗ್ಸ್ ವಶ

ಪುಟ ೧➡ ಆಪರೇಷನ್ ಗ್ಲೋಬಲ್-ಹಂಟ್ ಕಾರ್ಯಾಚರಣೆಯಲ್ಲಿ ಟರ್ಕಿಯಿಂದ ಭಾರತಕ್ಕೆ ಬಂದಿದ್ದ ದಾವೂದ್ ಇಬ್ರಾಹಿಂನ ಆಪ್ತ ಸಹಚರ ಹಾಗೂ ಡ್ರಗ್ಸ್ ಕಳ್ಳಸಾಗಣೆ ಆರೋಪಿ ಸಲೀಂ ಡೋಲಾವನ್ನು ಎನ್‌ಸಿಬಿ ಅಧಿಕಾರಿಗಳು ಹೊಸದಿಲ್ಲಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆದ ಬೆನ್ನಲ್ಲೇ ಈ ದಾಳಿ ನಡೆದಿರುವುದು ಗಮನಾರ್ಹವಾಗಿದೆ.

ನಾಗ್ಪುರದಲ್ಲೂ ಎಲ್‌ಎಸ್‌ಡಿ ಪತ್ತೆ: ಇತ್ತೀಚೆಗೆ ಮಹಾರಾಷ್ಟ್ರದ ನಾಗ್ಪುರದಲ್ಲೂ ಮೊದಲ ಬಾರಿಗೆ ಎಲ್‌ಎಸ್‌ಡಿ ಮಾದಕ ವಸ್ತು ಪತ್ತೆಯಾಗಿದ್ದು, ಪ್ರಕರಣ ಸಂಬಂಧ ಇಬ್ಬರು ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿದ್ದರು. ಬಂಧಿತರಿಂದ ಸುಮಾರು 1.7 ಲಕ್ಷ ರೂ. ಮೌಲ್ಯದ ಪಾರ್ಟಿ ಡ್ರಗ್ಸ್ ವಶಪಡಿಸಿಕೊಳ್ಳಲಾಗಿತ್ತು. ನಾಗ್ಪುರ ಎಂಐಡಿಸಿ ಪೊಲೀಸ್ ಠಾಣಾ ವ್ಯಾಪ್ತಿಯ ಚೈತಲಾ ಪ್ರದೇಶದಲ್ಲಿ ನಡೆದ ಜಂಟಿ ಕಾರ್ಯಾಚರಣೆಯಲ್ಲಿ, ಅನುಮಾನಾಸ್ಪದವಾಗಿ ಸಂಚರಿಸುತ್ತಿದ್ದ ಇಬ್ಬರನ್ನು ತಪಾಸಣೆ ನಡೆಸಿದಾಗ 17 ಎಲ್‌ಎಸ್‌ಡಿ ಡಾಟ್‌ಗಳು ಪತ್ತೆಯಾಗಿದ್ದವು. ಈ ಮೂಲಕ ನಗರದಲ್ಲಿ ಸಕ್ರಿಯವಾಗಿದ್ದ ಪಾರ್ಟಿ ಡ್ರಗ್ಸ್ ಜಾಲದ ಸುಳಿವು ದೊರೆತಿತ್ತು.



> ದೇಶದಲ್ಲಿ ಮಾದಕ ವಸ್ತುಗಳ ಜಾಲವನ್ನು ಸಂಪೂರ್ಣವಾಗಿ ಹತ್ತಿಕ್ಕಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಕೆಳಮಟ್ಟದಿಂದ ಮೇಲಿನವರೆಗೆ ಎನ್‌ಸಿಬಿ ನಡೆಸಿದ ಕಾರ್ಯಾಚರಣೆ ದೊಡ್ಡ ಯಶಸ್ಸಿಗೆ ಕಾರಣವಾಗಿದೆ. ಅಂತಾರಾಷ್ಟ್ರೀಯ ಮಾದಕ ಜಾಲಕ್ಕೆ ದೊಡ್ಡ ಹೊಡೆತ ನೀಡಲಾಗಿದೆ.
> ■ ಅಮಿತ್ ಶಾ, ಕೇಂದ್ರ ಗೃಹ ಸಚಿವ

ಜಿಎಸ್‌ಟಿ ಸಂಗ್ರಹದಲ್ಲಿ ದಾಖಲೆ

ಪುಟ ೧➡ ಈ ತಿಂಗಳು 52,140 ಕೋಟಿ ರೂ. ಹಾಗೂ 61,331 ಕೋಟಿ ರೂ. ಸಂಗ್ರಹವಾಗಿದ್ದು, 1.29 ಲಕ್ಷ ಕೋಟಿ ರೂ.ಗೂ ಅಧಿಕವಾಗಿದೆ. ಈ ಅವಧಿಯಲ್ಲಿ ಮರುಪಾವತಿಗಳು ಶೇ.19.3 ಏರಿಕೆಯಾಗಿ 31,793 ಕೋಟಿ ರೂ.ಗೆ ತಲುಪಿವೆ. ಮರುಪಾವತಿಗಳನ್ನು ಹೊಂದಿಸಿಕೊಂಡ ನಂತರದ ನಿಖರ ಜಿಎಸ್‌ಟಿ ಸಂಗ್ರಹ ಶೇ.7.3 ಹೆಚ್ಚಾಗಿ ಸುಮಾರು 2.11 ಲಕ್ಷ ಕೋಟಿ ರೂ. ಆಗಿದೆ. ಒಟ್ಟಾರೆ ವಿತ್ತೀಯ ವರ್ಷ 2025–26ರಲ್ಲಿ ಜಿಎಸ್‌ಟಿ ಸಂಗ್ರಹ, ತಂತ್ರಜ್ಞಾನ ಆಧಾರಿತ ಆಡಳಿತ ಮತ್ತು ಆರ್ಥಿಕ ಸ್ಥಿರತೆಯು ಉತ್ತಮ ಆದಾಯ ನೀಡುತ್ತಿರುವುದನ್ನು ಸೂಚಿಸುತ್ತದೆ. 2025ರ ಸೆಪ್ಟೆಂಬರ್‌ನಲ್ಲಿ ಜಾರಿಗೆ ಬಂದ ಜಿಎಸ್‌ಟಿ 2.0 ಪ್ರಾರಂಭದಲ್ಲಿ ಕುಸಿತ ಕಂಡರೂ, ಬಳಿಕ ಜಿಎಸ್‌ಟಿ ಸಂಗ್ರಹದಲ್ಲಿ ನಿರಂತರ ಏರಿಕೆ ಕಂಡುಬರುತ್ತಿದೆ. ಈ ಪರಿಷ್ಕರಣೆಯಲ್ಲಿ ಸುಮಾರು 375 ವಸ್ತುಗಳ ಮೇಲಿನ ತೆರಿಗೆ ದರಗಳನ್ನು ಕಡಿತಗೊಳಿಸಲಾಗಿದ್ದು, ಶೇ.5, 12, 18 ಮತ್ತು 28 ಇದ್ದ ನಾಲ್ಕು ಸ್ಲ್ಯಾಬ್‌ಗಳನ್ನು ಶೇ.5 ಮತ್ತು ಶೇ.18 ಎಂಬ ಎರಡು ಸ್ಲ್ಯಾಬ್‌ಗಳಿಗೆ ವಿಲೀನಗೊಳಿಸಲಾಗಿದೆ. ಕೆಲವು ಅತಿ ಐಷಾರಾಮಿ ವಸ್ತುಗಳು ಮತ್ತು ತಂಬಾಕು ಉತ್ಪನ್ನಗಳಿಗೆ ಮಾತ್ರ ಶೇ.40 ಗರಿಷ್ಠ ತೆರಿಗೆ ದರವನ್ನು ಉಳಿಸಲಾಗಿದೆ.

ನಮ್ಮದು ಯಾವಾಗಲೂ ಕಾರ್ಮಿಕ ಪರ ಸರ್ಕಾರ

ಪುಟ ೧➡ ಕಾಯಕವೇ ಕೈಲಾಸ ಎಂದು ಬಸವಣ್ಣ ಹೇಳಿದ್ದರು, ಯಾವುದೇ ಕೆಲಸ ಮಾಡಿದರೂ ಅದಕ್ಕೆ ಸಮಾನ ಗೌರವ ನೀಡಬೇಕು ಎಂದರು. ದೇಶದಲ್ಲಿ 75%ಗಿಂತ ಹೆಚ್ಚು ಅಸಂಘಟಿತ ಕಾರ್ಮಿಕರಿದ್ದಾರೆ. ಕೇಂದ್ರ ಸರ್ಕಾರ ಕಾರ್ಮಿಕರ ವಿರೋಧಿಯಾಗಿದ್ದು, ಕಾರ್ಪೊರೇಟ್ ಸಂಸ್ಥೆಗಳ ಪರವಾಗಿದೆ ಎಂದು ಸಿದ್ದರಾಮಯ್ಯ ಆರೋಪಿಸಿದರು. ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ. ರೇವಣ್ಣ, ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಶ್ರಮಿಕ ವರ್ಗಗಳ ಮಕ್ಕಳೂ ಉತ್ತಮ ಶಿಕ್ಷಣ ಪಡೆಯಲಿ



2026-27ಕ್ಕೆ ಶ್ರಮಿಕ ವರ್ಗಗಳ ಮಕ್ಕಳೂ ಉತ್ತಮ ಶಿಕ್ಷಣ ಪಡೆಯಬೇಕೆಂಬ ಉದ್ದೇಶದಿಂದ ಕಾರ್ಮಿಕರ ಮಕ್ಕಳಿಗೆ 104 ವಸತಿ ಶಾಲೆಗಳನ್ನು ತೆರೆಯಲಾಗಿದೆ. ವಸತಿ ಶಾಲೆಗಳಲ್ಲಿ 99.42% ವಿದ್ಯಾರ್ಥಿಗಳು ತೇರ್ಗಡೆ ಯಾಗಿದ್ದಾರೆ. ಕಾರ್ಮಿಕರ ಮಕ್ಕಳೂ ಉನ್ನತ ಶಿಕ್ಷಣ ಪಡೆಯಲು ಈ ಶಾಲೆಗಳು ನೆರವಾಗಲಿವೆ ಎಂದು ಮುಖ್ಯಮಂತ್ರಿ ತಿಳಿಸಿದರು.

ರಾಜ್ಯ ಆಡಳಿತಯಂತ್ರ ಕುಸಿತ: ಬಿವೈವಿ

ಪುಟ ೧➡ ಇವರೇನು ನಮ್ಮ ರಾಜ್ಯದ ಶಾಸಕರೋ ಅಥವಾ ದಿಲ್ಲಿ ಶಾಸಕರೋ ಎಂಬ ಅನುಮಾನ ಬರುತ್ತಿದೆ ಎಂದರು. ರಾಜ್ಯದ ಸರ್ಕಾರಿ ನೌಕರರಿಗೆ ಎರಡು ತಿಂಗಳಿಂದ ವೇತನ ಬಿಡುಗಡೆ ಮಾಡಿಲ್ಲ. ಇದರಿಂದಲೇ ಈ ಸರ್ಕಾರ ದಿವಾಳಿ ಆಗಿದೆ ಎಂದು ತಿಳಿಯುತ್ತದೆ. ಗುತ್ತಿಗೆದಾರರು ರಾಜ್ಯ ಸರ್ಕಾರದ ಧೋರಣೆಯಿಂದ ಬೇಸತ್ತು ಬೇರೆ ರಾಜ್ಯಗಳಿಗೆ ಓಡಿ ಹೋಗಿದ್ದಾರೆ. ಅವರು ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಸ್ಥಿತಿ ಬಂದಿದೆ. ಕೇಂದ್ರ ಸರ್ಕಾರವನ್ನು ದೂರುವ ಬದಲು ರಾಜ್ಯ ಸರ್ಕಾರ ಏನು ಅಭಿವೃದ್ಧಿ ಮಾಡುತ್ತಿದೆ ಎಂದು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದರು.



ಧಾರವಾಡದಲ್ಲಿ ಪೊಲೀಸರಿಂದ ದೌರ್ಜನ್ಯ: ಧಾರವಾಡದಲ್ಲಿ ಆದಿತ್ಯ ಮ್ಯಾಗೇರಿ ಎಂಬ ಕಾಲೇಜಿಗೆ ಹೋಗುವ ಯುವಕನನ್ನು ಪೊಲೀಸ್ ಇಲಾಖೆಯವರು ಡ್ರಗ್ಸ್ ಪ್ರಕರಣದಲ್ಲಿ ವಿನಾಕಾರಣ ಸಿಲುಕಿಸಿದರು. ಅವನು ನಿರಪರಾಧಿ ಎಂದು ಗೊತ್ತಾದ ನಂತರವೂ ತಂದೆ ಇಲ್ಲದಿರುವ ಆತನ ತಾಯಿಯನ್ನು ಪೀಡಿಸಿ ಸಾವಿರಾರು ರೂಪಾಯಿ ವಸೂಲಿ ಮಾಡಿದ್ದಾರೆ. ರಾಜ್ಯದ ಪೊಲೀಸ್ ಇಲಾಖೆ ಎಷ್ಟೊಂದು ಕೀಳುಮಟ್ಟಕ್ಕೆ ಹೋಗಿದೆ ಎಂದು ಇದರಿಂದ ಗೊತ್ತಾಗುತ್ತದೆ. ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ತಕ್ಷಣ ಈ ಘಟನೆಯಿಂದ ಎಚ್ಚೆತ್ತುಕೊಂಡು ಯಾವ ಅಧಿಕಾರಿಗಳು ಈ ಪ್ರಕರಣದ ಹಿಂದೆ ಇದ್ದಾರೋ ಅವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಬಡ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ಕೊಡಬೇಕು ಎಂದು ಒತ್ತಾಯಿಸಿದರು.

ಮಮತಾ ಹೈಡ್ರಾಮಾ

ಪುಟ ೧➡ ಇವಿಎಂ ಸಂಗ್ರಹ ಕೇಂದ್ರಗಳ ಬಳಿ ಅಭ್ಯರ್ಥಿಗಳು ಹಾಗೂ ಕಾರ್ಯಕರ್ತರು ಹಗಲು-ರಾತ್ರಿ ನಿಗಾ ವಹಿಸಬೇಕೆಂದು ಪಕ್ಷ ಸೂಚಿಸಿದೆ.

ಡ್ರಾಮಾಬಾಜಿ ಮಾತ್ರ, ಫಲಿತಾಂಶ ಬದಲಾಗಲ್ಲ: ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನಡೆಗೆ ಬಿಜೆಪಿ ಮುಖಂಡ ಸುವೇಂದು ಅಧಿಕಾರಿ ತೀವ್ರ ಟೀಕೆ ವ್ಯಕ್ತಪಡಿಸಿದ್ದಾರೆ. ಇನ್ನೂ ಎರಡು ದಿನ ಅವರು ಇಂತಹ ಡ್ರಾಮಾಬಾಜಿ ಮಾಡಬಹುದು. ಆದರೆ, ಅದರಿಂದ ಫಲಿತಾಂಶ ಬದಲಾಗುವುದಿಲ್ಲ ಎಂದು ಭವಾನೀಪುರ ಕ್ಷೇತ್ರದಲ್ಲಿ ಮಮತಾ ವಿರುದ್ಧ ಸ್ಪರ್ಧಿಸುತ್ತಿರುವ ಸುವೇಂದು ಅಧಿಕಾರಿ ಹೇಳಿದರು.

15 ಮತಗಟ್ಟೆಗಳಲ್ಲಿ ಇಂದು ಮರುಮತ

ಪುಟ ೧➡ ಫಲ್ತಾ ಪ್ರದೇಶದಲ್ಲಿ ಇವಿಎಂ ಯಂತ್ರಗಳ ಬಟನ್‌ಗಳನ್ನು ಟೇಪ್ ಬಳಸಿ ತೊಂದರೆಗೊಳಿಸಲಾಗಿದೆ ಎಂದು ಬಿಜೆಪಿ ಆರೋಪಿಸಿದ ನಂತರ ಮರುಮತದಾನದ ನಿರ್ಧಾರ ಕೈಗೊಳ್ಳಲಾಗಿದೆ. ಮತದಾರರು ಹಾಗೂ ರಾಜಕೀಯ ಪಕ್ಷಗಳು ಇವಿಎಂ ದೋಷ, ಮತಗಟ್ಟೆಯಲ್ಲಿ ಹಿಂಸಾಚಾರ ಹಾಗೂ ಅಕ್ರಮ ಮತದಾನದ ಬಗ್ಗೆ ದೂರುಗಳನ್ನು ದಾಖಲಿಸಿದ್ದವು.

ಸುಪ್ರೀಂ ಮೆಟ್ಟಿಲೇರಿದ ಟಿಎಂಸಿ, ಇಂದು ವಿಚಾರಣೆ

ಪುಟ ೧➡ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೊಯ್ಮಲ್ಯ ಭಾಗ್ಚಿ ಅವರ ವಿಶೇಷ ಪೀಠ ಈ ಅರ್ಜಿಯ ತುರ್ತು ವಿಚಾರಣೆಯನ್ನು ಶನಿವಾರ ನಡೆಸಲಿದೆ.

> ಸೋಲು ಖಚಿತವಾಗುತ್ತಿದ್ದಂತೆ ಟಿಎಂಸಿ ಸುಳ್ಳು ಆರೋಪಗಳನ್ನು ಮಾಡುತ್ತಿದೆ. ಜನರ ಸಹಾನುಭೂತಿ ಪಡೆಯಲು ರಾಜಕೀಯ ನಡೆಸುತ್ತಿದೆ.
> ■ ಶೆಹಜಾದ್ ಪೂನಾವಾಲಾ, ಬಿಜೆಪಿ ರಾಷ್ಟ್ರೀಯ ವಕ್ತಾರ

ಡಿಸಿ ನೇತೃತ್ವದಲ್ಲಿ ತನಿಖೆಗೆ ಚುರುಕು

ಪುಟ ೧➡ ಏಳು ದಿನದೊಳಗಾಗಿ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸರ್ಕಾರ ಸೂಚಿರುವ ಹಿನ್ನೆಲೆಯಲ್ಲಿ ಎರಡು ತಂಡಗಳು ಮೃತರ ಮಾಹಿತಿ ಸಂಗ್ರಹಕ್ಕೆ ಮುಂದಾಗಿವೆ. ಡಿಜೆ ಹಳ್ಳಿ, ಕೆ.ಜಿ ಹಳ್ಳಿ ಹಾಗೂ ಜೆ.ಸಿ ನಗರದ ಮೃತರ ಬಗ್ಗೆ ಮಾಹಿತಿ ದೊರೆಯಲಿದೆ. ಆದರೆ, ಅಸ್ಸಾಂ, ಕೇರಳ ಉ.ಪ್ರದೇಶ ಮೂಲದ ಮೃತರ ಮಾಹಿತಿ ಕಲೆ ಹಾಕುವುದು ಅಧಿಕಾರಿಗಳಿಗೆ ಸವಾಲಾಗಿ ಪರಿಣಮಿಸಲಿದೆ. ಮೇಲ್ನೋಟಕ್ಕೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಗೋಡೆ ಕುಸಿತವಾಗಿರುವ ಪರಿಣಾಮ ತನಿಖಾ ತಂಡದ ವರದಿ ಆಧರಿಸಿ ಲೋಕೋಪಯೋಗಿ, ಆರೋಗ್ಯ ಇಲಾಖೆ ಅಧಿಕಾರಿಗಳ ತಲೆದಂಡವಾಗಲಿದೆ ಎನ್ನಲಾಗಿದೆ.

ರಾಮಸ್ವಾಮಿ ಸಾಹಿತ್ಯ ಲೋಕದ ದಿಗ್ಗಜ: ಮುಕುಂದ್

ಬೆಂಗಳೂರು: ನಾಡೋಜ ಎಸ್.ಆರ್.ರಾಮಸ್ವಾಮಿ ಅವರು ಕೇವಲ ಸಾಹಿತ್ಯ ಲೋಕದ ದಿಗ್ಗಜರು ಮಾತ್ರವಾಗಿ ರದೆ, ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಸಂಸ್ಕಾರದ ಮಾದರಿ ಸ್ವಯಂಸೇವಕರಾಗಿದ್ದರು ಎಂದು ಆರ್‌ಎಸ್‌ಎಸ್ ಸಹ ಸರಕಾರ್ಯವಾಹ ಮುಕುಂದ್ ಸಿ.ಆರ್. ಹೇಳಿದರು.

ನಗರದ ಕೇಶವಶಿಲ್ಪ ಸಭಾಂಗಣದಲ್ಲಿ ನಡೆದ ನಾಡೋಜ ಎಸ್.ಆರ್.ರಾಮಸ್ವಾಮಿ ಅವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿ, ರಾಮಸ್ವಾಮಿಯವರು ಕೇವಲ ಸಾಹಿತಿ ಅಥವಾ ಚಿಂತಕರಾಗಿ ಮಾತ್ರವಲ್ಲ, ಸಂಘದ ಒಬ್ಬ ಸಾಮಾನ್ಯ ಸ್ವಯಂಸೇವಕನಾಗಿ ಕಾರ್ಯಕರ್ತರೊಂದಿಗೆ ಬೆರೆತ ರೀತಿ ಅನನ್ಯ. ಸಂಘದ ಶಾಖೆಗಳಿಗೆ ಚಾಚೂ ತಪ್ಪದೆ ಬರುತ್ತಿದ್ದ ಅವರು, ಸಣ್ಣ ವಯಸ್ಸಿನ ಬಾಲಕರಿಂದ ಹಿಡಿದು ಹಿರಿಯರವರೆಗೂ ಸಮಾನವಾಗಿ ಬೆರೆತು ಮಾತನಾಡುತ್ತಿದ್ದರು.ಅವರ ಹಾಸ್ಯಪ್ರಜ್ಞೆ ಮತ್ತು ಸರಳತೆ ಎಂತಹವರನ್ನೂ ಸೆಳೆಯುತ್ತಿತ್ತು ಎಂದು ಸ್ಮರಿಸಿದರು.

ನಿಸ್ವಾರ್ಥ ಪಯಣ: ರಾಮಸ್ವಾಮಿಯವರ ನಿಸ್ವಾರ್ಥ ಸೇವೆಗೆ ಸಾಕ್ಷಿ ಅವರ ವೃತ್ತಿಜೀವನ. ಸುಧಾ ಪತ್ರಿಕೆಯ ಉಪ ಸಂಪಾದಕರಾಗಿ ಸಾವಿರಾರು ರೂಪಾಯಿ ವೇತನ ಪಡೆಯುತ್ತಿದ್ದ ಅವರು, ಸಂಘದ ಉತ್ಥಾನ ಪತ್ರಿಕೆಗೆ ಸಂಪಾದಕರ ಅಗತ್ಯವಿದೆ ಎಂದಾಕ್ಷಣವೇ ಸುಧಾ ಪತ್ರಿಕೆಗೆ ರಾಜೀನಾಮೆ ನೀಡಿದರು ಎಂದು ತಿಳಿಸಿದರು.



ಸಾರ್ಥಕ ಬದುಕಿನ ಸಮನ್ವಯ ಚೇತನ- ವೆಂಕಟಾಚಲ ಶಾಸ್ತ್ರಿ

ಅಪ್ರತಿಮ ಪಾಂಡಿತ್ಯ, ಅಪಾರ ಪರಿಶ್ರಮ ಮತ್ತು ಶೀಲವಂತಿಕೆಯ ಸಮನ್ವಯವಾಗಿದ್ದ ಎಸ್.ಆರ್ ರಾಮಸ್ವಾಮಿ ಬೌದ್ಧಿಕ ಲೋಕದ ಧ್ರುವತಾರೆ.ಅವರ ಸಾಧನೆ ಒಂದು ತ್ರಿಭುಜವಿದ್ದಂತೆ. ಅದರಲ್ಲಿ ಪ್ರತಿಭೆ, ಪಾಂಡಿತ್ಯ ಮತ್ತು ಪರಿಶ್ರಮದ ಜೊತೆಗೆ ಶೀಲವಂತಿಕೆಯೂ ಅಗ್ರಸ್ಥಾನದಲ್ಲಿತ್ತು.ರಾಮಸ್ವಾಮಿ ಅವರ ಸಾಹಿತ್ಯ ಕೃಷಿ ಕೇವಲ ಬರವಣಿಗೆಗೆ ಸೀಮಿತವಾಗಿರಲಿಲ್ಲ. ಅದು ಸಮಾಜದ ಹಿತಚಿಂತನೆಯ ಒಂದು ಭಾಗವಾಗಿತ್ತು. ಅವರು ಬಿಟ್ಟುಹೋದ ಸಾಹಿತ್ಯ ಕೃತಿಗಳು ಮುಂದಿನ ತಲೆಮಾರಿಗೆ ದಾರಿದೀಪವಾಗಿವೆ ಎಂದು ವಿದ್ವಾಂಸ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಹೇಳಿದರು.

ಶತಾವಧಾನಿ ಡಾ. ಆರ್. ಗಣೇಶ್ ಮಾತನಾಡಿ, ರಾಮಸ್ವಾಮಿ ಅವರದ್ದು ಕೆಲಸಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದ ಅಚಲ ವ್ಯಕ್ತಿತ್ವ. ಸಮಾಜದ ಸ್ವಾಸ್ಥ್ಯಕ್ಕಾಗಿ ಮೌಲ್ಯಾಧಾರಿತ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದರು. ಡಿ.ವಿ.ಜಿ ಅವರ ಆಶಯ ದಂತೆ ಗೋಖಲೆ ಸಂಸ್ಥೆ ಹಾಗೂ ರಾಷ್ಟ್ರೋತ್ಥಾನವನ್ನು ಕಟ್ಟಿ ಬೆಳೆಸಿದರು. ಡಿವಿಜಿಯವರ ಗರಡಿಯಲ್ಲಿ ಬೆಳೆದ ರಾಮಸ್ವಾಮಿ; ಶಿಸ್ತು, ದಕ್ಷತೆ ಮೈಗೂಡಿಸಿಕೊಂಡಿದ್ದರು. ಹೊಸಬರಿಗೆ ವೇದಿಕೆ ಕಲ್ಪಿಸಿ ಪ್ರೋತ್ಸಾಹಿಸುತ್ತಿ ದ್ದರು. ರಾಮಸ್ವಾಮಿ ಅವರು ಹಾಕಿಕೊಟ್ಟ ದಕ್ಷತೆ, ಪ್ರಾಮಾಣಿಕತೆ ಮತ್ತು ಸಾಂಸ್ಥಿಕ ಬದ್ಧತೆಯ ಹಾದಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ತಿಳಿಸಿದರು.

ನಾಲ್ಕು ನೂತನ ಕಾರ್ಮಿಕ ಸಂಹಿತೆ ಜಾರಿಗೆ ಯತ್ನ

ಹುಬ್ಬಳ್ಳಿ: ದೇಶದಲ್ಲಿ ಮೊದಲ ಬಾರಿಗೆ ಕಾರ್ಮಿಕರ ಇಲಾಖೆಯಲ್ಲಿ 29 ಕಾಯ್ದೆಗಳನ್ನು ತಿದ್ದುಪಡಿ ಮಾಡಿ 4 ನೂತನ ಸಂಹಿತೆ (ಕೋಡ್)ಗಳನ್ನು ಜಾರಿಗೆ ತರುವ ಪ್ರಯತ್ನ ನಡೆಸಲಾಗುತ್ತಿದೆ. ಸಾಮಾಜಿಕ ಭದ್ರತಾ ಸಂಹಿತೆಯಡಿ 32 ಕೋಟಿ ಅಸಂಘಟಿತ ಕಾರ್ಮಿಕರನ್ನು ಇಎಸ್‌ಐ, ಇಪಿಎಫ್‌ಒ ವ್ಯಾಪ್ತಿಗೆ ಸೇರಿಸಲಾಗುತ್ತಿದೆ ಎಂದು ರಾಜ್ಯ ಕಾರ್ಮಿಕ, ಉದ್ಯೋಗ ಇಲಾಖೆಯ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.



ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಎಲ್ಲ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ, ಪಿಂಚಣಿ, ಇಎಸ್‌ಐಸಿ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಜಾರಿಗೆ 4 ಸಂಹಿತೆಗಳು ಜಾರಿಗೊಂಡಿವೆ. ಈ ಸಂಹಿತೆಗಳನ್ನು ಬಹುತೇಕ ರಾಜ್ಯಗಳು ಒಪ್ಪಿಕೊಂಡಿದ್ದು, ವಿವಿಧ ರಾಜ್ಯಗಳ ಕೈಗಾರಿಗೆ, ಉತ್ಪಾದನೆಗೆ ಅನುಗುಣವಾಗಿ ಮೇ 5ರಂದು 4 ಸಂಹಿತೆಗಳು ಕಾನೂನಾಗಿ ಮಾರ್ಪಾಡಾಗಲಿವೆ. ಭಾರತ ಸರ್ಕಾರ ಇಪಿಎಫ್‌ಒಗೆ ಪ್ರತಿ ವರ್ಷ ಸುಮಾರು 10–13 ಸಾವಿರ ಕೋಟಿಗೂ ಅಧಿಕ ಹಣವನ್ನು ನೀಡುತ್ತಿದೆ. ಇದರೊಟ್ಟಿಗೆ ವಿವಿಧ ರಾಜ್ಯಗಳು ಶೇ.1ರಷ್ಟು ಸೆಸ್ ಸಂಗ್ರಹಿಸುತ್ತಿವೆ. ಇದರ ಸದುಪಯೋಗವಾಗದೇ ಹಗರಣಗಳ ವಾಸನೆ ಬರುತ್ತಿದೆ. ಅವುಗಳನ್ನು ತನಿಖೆ ಮಾಡಲಾಗುವುದು ಎಂದರು.

ಉ.ಕ ಅಭಿವೃದ್ಧಿಗೆ ಬಿಎಸ್‌ವೈ ಅಡಿಗಲ್ಲು

• **ಕಲಬುರಗಿ:** ರಾಜ್ಯದ ಎಲ್ಲಾ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಕೊಡುವ ಮೂಲಕ ಹಾಗೂ ಮೊಟ್ಟ ಮೊದಲ ಬಾರಿಗೆ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಅಡಿಗಲ್ಲು ಇಟ್ಟವರು ಯಾರಾದರೂ ಇದ್ದರೆ ಅದು ರೈತ ನಾಯಕ, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ರೈತ ನಾಯಕ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರ ಜನರ ಮಡಿಲಲ್ಲಿ 50 ವರ್ಷದ ಸಾರ್ಥಕ ಜೀವನ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ರಾಜ್ಯದ ಆಗಿ ಹೋಗಿರುವ ಸಿಎಂಗಳ ಪೈಕಿ ಅತಿ ಹೆಚ್ಚು ಕಲಬುರಗಿಗೆ ಬಂದು ಹೋಗಿದ್ದು ಬಿಎಸ್‌ವೈ. ಬೆಂಗಳೂರು ಹೊರತು ಪಡಿಸಿ ಕಲಬುರಗಿಯಲ್ಲಿ 3 ಸಚಿವ ಸಂಪುಟ ಸಭೆ ನಡೆಸಿದ್ದು ಬಿಎಸ್‌ವೈ. ಮೊಟ್ಟ ಮೊದಲ ಬಾರಿಗೆ ಕಲಬುರಗಿ ಮಹಾನಗರ ಪಾಲಿಕೆಗೆ 100 ಕೋಟಿ ಅನುದಾನ ನೀಡಿದ್ದು ಇದೆ ಬಿ.ಎಸ್. ಯಡಿಯೂರಪ್ಪನವರು ಎಂದರು.

ಕಲಬುರಗಿಗೆ ಹಾಗೂ ಮಾಜಿ ಸಿಎಂ ಯಡಿಯೂರಪ್ಪಗೆ ಅವಿನಾಭಾವ ಸಂಬಂಧ. ಹೀಗಾಗಿ ಮುಂಬರುವ ಮೇ 9ರಂದು ನಡೆಯಲಿರುವ

ರೈತ ಬಜೆಟ್ ಮಂಡಿಸಿದ ಹೆಗ್ಗಳಿಕೆ ಪಾತ್ರವಾಗಿರುವ ಮಾಜಿ ಸಿಎಂ ಯಡಿಯೂರಪ್ಪನವರು 50 ವರ್ಷಗಳ ಸುದೀರ್ಘ ರಾಜಕೀಯ ಪಯಣದ ಹಿನ್ನೆಲೆಯಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ತೆರಳಿ ರಾಜ್ಯ ಕಂಡ ಧೀಮಂತ ನಾಯಕನಿಗೆ ಗೌರವ ಸಲ್ಲಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸೋಣ.
■ **ಬಸವರಾಜ ಮತ್ತಿಮಡು, ರಾಜ್ಯ ಕಾರ್ಯದರ್ಶಿ, ಶಾಸಕ**

ಐತಿಹಾಸಿಕ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಲಬುರಗಿ ಜನ ಬಂದು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದರು. ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಶಾಸಕ ಅವಿನಾಶ್ ಜಾಧವ್, ಮಾಜಿ ಸಂಸದ ಡಾ.ಉಮೇಶ್ ಜಾಧವ್ ,ಮಾಜಿ ಸಚಿವ ಬಾಬು ರಾವ್ ಚೌಹಾಣ್, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ್, ವಿಭಾಗ ಪ್ರಭಾರಿ ಶರಣಪ್ಪ ತಳವಾರ, ಒಬಿಸಿ ಪ್ರಧಾನ ಕಾರ್ಯದರ್ಶಿ ಅವ್ವಣ್ಣಾ ಮ್ಯಾಕೇರಿ,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಬೆಣ್ಣೂರ ಇದ್ದರು.

ಸ್ವಾಮೀಜಿಗಳ ಆಶೀರ್ವಾದ



ವಿಜಯನಗರದಲ್ಲಿರುವ ಆದಿಚುಂಚನಗಿರಿ ಮಹಾಸಂಸ್ಥಾನ ಮಠಕ್ಕೆ ಶುಕ್ರವಾರ ಭೇಟಿ ನೀಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ಆಶೀರ್ವಾದ ಪಡೆದು, ಮೇ 9 ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಶಾಸಕರಾದ ಹರೀಶ್ ಪೂಂಜಾ, ಬಿಜೆಪಿ ಮುಖಂಡರು ಇದ್ದರು.

ನವಿಲುಗಳ ಸಾವಿಗೆ ಎಚ್5ಎನ್1 ಕಾರಣ

• **ತುಮಕೂರು:** ನವಿಲುಗಳ ಸಾವಿಗೆ H5N1 ವೈರಾಣು ಸೋಂಕು ಕಾರಣ ಎಂದು ದೃಢಪಟ್ಟಿದೆ. ಆದರೆ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

ಡಿಸಿ ಕಚೇರಿಯಲ್ಲಿ ನಡೆದ ತುರ್ತು ಸಭೆ ಬಳಿಕ ಮಾತನಾಡಿ, ಕಳೆದ ಏಪ್ರಿಲ್ 16 ರಂದು ಊರ್ಡಿಗೆರೆ ಹೋಬಳಿಯ ಕೋಳಿಹಳ್ಳಿ ಅರಣ್ಯ ಪ್ರದೇಶದಲ್ಲಿ ನವಿಲುಗಳ ಅಸಾಧಾರಣ ಸಾವು ಸಂಭವಿಸಿತ್ತು. ಮೃತ ನವಿಲು ಮಾದರಿಯನ್ನು ಪ್ರಯೋಗಾಲಯಕ್ಕೆ ಕಳಿಸಲಾಗಿತ್ತು. ಎಚ್5ಎನ್1 ವೈರಾಣು ಮಾರಣಾಂತಿಕ ಸೋಂಕುವಾದ್ದರಿಂದ ಸಾರ್ವಜನಿಕರೂ ಜಾಗ್ರತೆ ವಹಿಸುವ ಅಗತ್ಯವಿದೆ. ಯಾವುದಾದರೂ ಕೋಳಿ ಫಾರಂಗಳಲ್ಲಿ ಕೋಳಿಗಳು ಅಸಾಧಾರಣ ಸಾವು ಕಂಡುಬಂದಲ್ಲಿ ಸ್ಟ್ರಾಟ್ ಸಿಟಿ ಕಂಟ್ರೋಲ್ ರೂಮ್ ನಂಬರಿಗೆ ತಿಳಿಸಬೇಕು ಎಂದರು. ಶುಕ್ರವಾರ ಬೊಮ್ಮನಹಳ್ಳಿ ಕೋಳಿ ಫಾರಂನಲ್ಲಿ 15 ಕೋಳಿಗಳು ಮೃತಪಟ್ಟಿದ್ದು, ಮಾದರಿಯನ್ನು ಪ್ರಯೋಗಾಲಯಕ್ಕೆ ಕಳಿಸಲಾಗಿದೆ. ರಾಜ್ಯ ಜಾಗೃತಿ ಸಮಿತಿ ಮಾರ್ಗದರ್ಶನದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಂಟ್ಮೈನ್ಮೆಂಟ್ ವಲಯ ಎಂದು ಘೋಷಣೆ

ಪ್ರಯೋಗಾಲಯದ ವರದಿಗಳು, H5N1 ಸೋಂಕಿನಿಂದ ತುಮಕೂರಿನಲ್ಲಿ ನವಿಲುಗಳು ಮೃತಪಟ್ಟಿವೆ. ಸೋಂಕು ಹರಡುವುದನ್ನು ತಡೆಯಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಸೋಂಕು ಪೀಡಿತ ಪ್ರದೇಶಗಳ 10 ಕಿಮೀ ವ್ಯಾಪ್ತಿಯಲ್ಲಿ ಕಂಟ್ಮೈನ್ಮೆಂಟ್ ವಲಯವನ್ನು ಘೋಷಿಸಲಾಗಿದೆ. ವಲಯದೊಳಗಿನ ಎಲ್ಲಾ ಕೋಳಿ ಸಾಕಣೆ ಕೇಂದ್ರಗಳಿಗೆ ಪ್ರೋಟೋಕಾಲ್ ಪ್ರಕಾರ ಎಚ್ಚರಿಕೆ ನೀಡಲಾಗಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಕಿರುಸುದ್ದಿ

ಬಾಲ್ಯ ವಿವಾಹ ತಡೆದ ಅಕ್ಕಪಡೆ

• **ಬೆಳಗಾವಿ:** ಇಲ್ಲಿನ ಶಹಾಪೂರದ ಶಾಸ್ತ್ರಿ ನಗರದಲ್ಲಿ 13 ವರ್ಷದ ಬಾಲಕಿಯ ಬಾಲ್ಯವಿವಾಹ ನಡೆಯುತ್ತಿರುವುದ ಬಗ್ಗೆ ಖಚಿತ ಮಾಹಿತಿ ಮೇರೆಗೆ ಮದುವೆ ಮಂಟಪಕ್ಕೆ ಅಕ್ಕ ಪಡೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಹಯೋಗದೊಂದಿಗೆ ಬಾಲಕಿಯ ಮನೆಗೆ ಭೇಟಿ ನೀಡಿ ಬಾಲಕಿಯರ ರಕ್ಷಣೆ ಮಾಡಿದ್ದಾರೆ. ಬಾಲಕಿಯನ್ನು ಮೂಡಲಗಿಯ ನಿವಾಸಿಯೊಂದಿಗೆ ಮದುವೆ ಮಾಡಲಾಗುತ್ತಿತ್ತು. ಸ್ಥಳಕ್ಕೆ ಭೇಟಿ ಮಾಡಿ ಬಾಲಕಿಯ ದಾಖಲಾತಿಗಳನ್ನು ಪರಿಶೀಲಿಸಿದಾಗ ಬಾಲಕಿಗೆ 13 ವರ್ಷ ಎಂದು ತಿಳಿದು ಬಂದಿದೆ. ತಕ್ಷಣ ಮಹಿಳಾ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ದಿಲೀಪ ಪಿ.ನಿಂಬಾಳ್ಕರ್ ನಿರ್ದೇಶನದಂತೆ ಅಕ್ಕಪಡೆಯ ಸಿಬ್ಬಂದಿ ಮಕ್ಕಳ ಸಹಾಯವಾಣಿ ತಂಡದವರು ಬಾಲ್ಯ ವಿವಾಹ ತಡೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಬಾಲಕಿಯನ್ನು ರಕ್ಷಣೆ ಮಾಡಿ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರು ಪಡಿಸಲಾಗಿದೆ. ಹಾಗೂ ಬಾಲ್ಯ ವಿವಾಹ ನಡೆಸುತ್ತಿದ್ದ ಬಾಲಕಿಯ ತಂದೆ ಹಾಗೂ ಮದುವೆ ಮಾಡಿಕೊಳ್ಳುತ್ತಿದ್ದ ವರನ ಮೇಲೆ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಗ್ರಾಹಕರಿಗೆ ವಿದ್ಯುತ್ ದರ ಏರಿಕೆ ಬಿಸಿ

• **ಬೆಂಗಳೂರು:** ಬೆಂಗಳೂರು ಸೇರಿದಂತೆ ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳ ಗ್ರಾಹಕರಿಗೆ ವಿದ್ಯುತ್ ದರ ಏರಿಕೆಯ ಬಿಸಿ ತಟ್ಟಿದೆ. ಮೇ 1ರಿಂದ ಅನ್ವಯವಾಗುವಂತೆ ಪ್ರತಿ ಯೂನಿಟ್‌ಗೆ 56 ಪೈಸೆ ಹೆಚ್ಚಳ ಮಾಡಲಾಗಿದೆ. ಈಗಾಗಲೇ ಬೆಲೆ ಏರಿಕೆಯ ಬಿಸಿ ಅನುಭವಿಸುತ್ತಿರುವ ನಾಗರಿಕರಿಗೆ ವಿದ್ಯುತ್ ದರ ಏರಿಕೆ ಮತ್ತೊಂದು ಹೊಡೆತವಾಗಿದೆ. ಬೆಸ್ಕಾಂ ಸುಮಾರು 2000 ಕೋಟಿ ರೂ. ನಷ್ಟವನ್ನು ಅನುಭವಿಸಿತ್ತು. ಇದನ್ನು ಸರಿದೂಗಿಸುವ ಸಲುವಾಗಿ ವಿದ್ಯುತ್ ದರ ಹೆಚ್ಚಳಕ್ಕೆ ಕರ್ನಾಟಕ ವಿದ್ಯುತ್ ಶಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ) ಸಮ್ಮತಿಸಿತ್ತು. ಬೆಸ್ಕಾಂ ಅನುಭವಿಸುತ್ತಿರುವ ಆರ್ಥಿಕ ನಷ್ಟವೇ ಈ ದರ ಏರಿಕೆಗೆ ಪ್ರಮುಖ ಕಾರಣವಾಗಿದೆ. 2024–25ರ ಆರ್ಥಿಕ ವರ್ಷದಲ್ಲಿ ವಿದ್ಯುತ್ ಮಾರಾಟದಿಂದ 34,084 ಕೋಟಿ ರೂ. ಆದಾಯದ ನಿರೀಕ್ಷೆ ಇಟ್ಟುಕೊಂಡಿತ್ತು. ಆದರೆ ವಾಸ್ತವವಾಗಿ ಸಂಗ್ರಹವಾದ ಆದಾಯ ಕೇವಲ 32,019 ಕೋಟಿ ರೂ. ಮಾತ್ರ. ಇದರಿಂದಾಗಿ ಬೆಸ್ಕಾಂಗೆ ಬರೋಬ್ಬರಿ 2,068 ಕೋಟಿ ರೂ. ಗಳಷ್ಟು ಆದಾಯದ ಕೊರತೆ ಉಂಟಾಗಿತ್ತು. ಈ ನಷ್ಟವನ್ನು ತುಂಬಿಕೊಳ್ಳಲು ಈಗ ಗ್ರಾಹಕರ ಮೇಲೆ ಹೊರೆ ಹಾಕಲಾಗುತ್ತಿದೆ. ಮೇ.1 ರಿಂದ ಅನ್ವಯವಾಗುವಂತೆ ಹೊಸ ದರಗಳು ಜಾರಿಗೆ ಬರಲಿವೆ ಎಂದು ಹಿಂದೆ ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿತ್ತು. ಅದರಂತೆ ಪ್ರತಿ ಯೂನಿಟ್‌ಗೆ 56 ಪೈಸೆ ಹೆಚ್ಚಳವಾಗಲಿದೆ.


ಕೈ ಮಹಿಳಾ ವಿರೋಧಿ: ಜೋಶಿ

• **ಹುಬ್ಬಳ್ಳಿ:** ಕಾಂಗ್ರೆಸ್ ಹಿಂದಿನಿಂದಲೂ ಮಹಿಳಾ ವಿರೋಧಿಯಾಗಿದೆ. ಮೋದಿ ಸರ್ಕಾರ ಮಹಿಳೆಯರ ಪರವಾಗಿದೆ. ಮುಂದಿನ ಅಧಿವೇಶನದಲ್ಲಿ ಪ್ರಧಾನಿ ಮೋದಿ ಅವರು ಮತ್ತೊಮ್ಮೆ ಮಹಿಳಾ ಮೀಸಲಾತಿ ಮಸೂದೆ ಮಂಡಿಸುವ ಕುರಿತು ನಿರ್ಧಾರ ಕೈಗೊಳಲಿದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದರು. ರಾಜ್ಯ ಬಿಜೆಪಿ ಮಹಿಳಾ ಘಟಕ ಶುಕ್ರವಾರ ನಗರದಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷ ವಿರುದ್ಧದ ಜನಾಕ್ರೋಶ ಪಾದಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಹಿಂದೆ ಎಚ್.ಡಿ.ದೇವೇಗೌಡ ಅವರು ಪ್ರಧಾನ ಮಂತ್ರಿಯಾಗಿದ್ದ ಸಂದರ್ಭದಲ್ಲಿಯೂ ಮಹಿಳಾ ಮೀಸಲಾತಿ ಮಸೂದೆ ಮಂಡಿಸಲಾಗಿತ್ತು. ಆಗಲೂ ಅಂದಿನ ಕಾಂಗ್ರೆಸ್ ಅದಕ್ಕೆ ಸಹಕಾರ ನೀಡಿರಲಿಲ್ಲ. ಈಗಿನ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ವಿರೋಧ ವ್ಯಕ್ತಪಡಿಸಿವೆ. ಆದ್ದರಿಂದ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಹೇಳಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತೊಮ್ಮೆ ಸ್ಪಷ್ಟನೆ

ಊಹಾಪೋಹ ಹರಡಬೇಡಿ

• **ಕಲಬುರಗಿ:** ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಯಾವುದೇ ದಿನಾಂಕ ನಿಗದಿಯಾಗಿಲ್ಲ. ಈ ಕುರಿತು ಅಂತಿಮ ನಿರ್ಧಾರ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ತೆಗೆದುಕೊಳ್ಳಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತೊಮ್ಮೆ ಸ್ಪಷ್ಟಪಡಿಸಿದರು.



ರಾಜ್ಯ ರಾಜಕಾರಣದಲ್ಲಿ ತೀವ್ರ ಸಂಚಲನ ಮೂಡಿಸಿರುವ ಮುಖ್ಯಮಂತ್ರಿ ಬದಲಾವಣೆಯ ಕುರಿತು ನಗರದ ಐವಾನ್–ಎ–ಶಾಹಿ ಪ್ರದೇಶದ ತಮ್ಮ ನಿವಾಸದಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪದೇ ಪದೇ ಸಿಎಂ ಬದಲಾವಣೆ ಎಂದು ಕೇಳಿದರೆ ನಾನು ಏನು ಹೇಳಲಿ? ನಾನು ಒಂದು ಹೇಳಿದರೆ ನೀವು ಮತ್ತೊಂದನ್ನು ಬಿತ್ತರಿಸುತ್ತೀರಿ. ಈ ಬಗ್ಗೆ ಯಾರೂ ಊಹಾಪೋಹ ಹರಡಬೇಡಿ ಎಂದರು.

ನಾನು, ಸೋನಿಯಾ ಗಾಂಧಿ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಕುಳಿತು ಒಟ್ಟಾಗಿ ನಿರ್ಧಾರ ಮಾಡುತ್ತೇವೆ. ಹೈಕಮಾಂಡ್ ಎಂದರೆ ನಾವೆಲ್ಲರೂ ಸೇರಿ ವಿಚಾರ ಮಾಡುವುದು ಎಂದೇ ಅರ್ಥ ಎಂದು ವಿವರಿಸಿದರು.

ಸಿಎಂ ಬದಲಾವಣೆಯ ಬಗ್ಗೆ ಇನ್ನು ದಿನಾಂಕ ನಿಗದಿಯಾಗಿಲ್ಲ. ಸಮಯ ನಿಗದಿಯಾಗದೆ ಈ ಕ್ಷಣದಲ್ಲೇ ಬದಲಾವಣೆ ಆಗುತ್ತದೋ ಅಥವಾ ಇಲ್ಲವೋ ಎಂದು ಹೇಳಲು ಸಾಧ್ಯವಿಲ್ಲ. ನಾವು ತೆಗೆದುಕೊಳ್ಳುವ ಯಾವುದೇ ನಿರ್ಧಾರವು ಪಕ್ಷದ ಮೇಲಾಗುವ ಪರಿಣಾಮ ಮತ್ತು ರಾಜ್ಯದ ಹಿತದೃಷ್ಟಿಯನ್ನು ಆಧರಿಸಿರುತ್ತದೆ. ಹೈಕಮಾಂಡ್ ತೆಗೆದುಕೊಳ್ಳುವ ನಿರ್ಣಯ ಪಕ್ಷದ ಪ್ರತಿಯೊಬ್ಬರೂ ಬೆಂಬಲಿಸಬೇಕು. ಮಾಧ್ಯಮಗಳು ಸುಮ್ಮನೆ ತಪ್ಪು ಸಂದೇಶಗಳನ್ನು ಹರಡಬಾರದು ಎಂದು ಮನವಿ ಮಾಡಿದರು.

ಸಿಲಿಂಡರ್ ದರ ಏರಿಕೆಗೆ ಕಿಡಿ: ಇದೇ ವೇಳೆ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಖರ್ಗೆ, ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಯನ್ನು ತೀವ್ರವಾಗಿ ಖಂಡಿಸಿದರು. ಪ್ರಧಾನಿ ಮೋದಿಯವರು ಬೆಲೆ ಏರಿಕೆ ಮಾಡುವುದಿಲ್ಲ ಎಂದು ಹೇಳುತ್ತಿದ್ದರು. ಆದರೆ, ಇಂದು ರಾತ್ರೋರಾತ್ರಿ ವಾಣಿಜ್ಯ ಸಿಲಿಂಡರ್ ದರವನ್ನು ಏರಿಕೆ ಮಾಡಲಾಗಿದೆ. ಇಷ್ಟೊಂದು ಬೆಲೆ ಏರಿಕೆಯಾಗುತ್ತಿದ್ದರೂ ಜನರು ಇನ್ನೂ ಅವರನ್ನು ಬೆಂಬಲಿಸುತ್ತಿರುವುದು ನನಗೆ ಆಶ್ಚರ್ಯವನ್ನುಂಟು ಮಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಶಾಸಕ ಅಲ್ಲಮಪ್ರಭು ಪಾಟೀಲ್, ಎಂಎಲ್ಸಿಗಳಾದ ಜಗದೇವ ಗುತ್ತೇದಾರ್, ತಿಪ್ಪಣ್ಣಪ್ಪ ಕಮಕನೂರ ಉಪಸ್ಥಿತರಿದ್ದರು.

ಪ್ರಪಂಚಕ್ಕೆ ಯುದ್ಧ ಬೇಡ, ಬುದ್ಧನ ಶಾಂತಿ ಬೇಕು

ಜಾಗತಿಕ ಯುದ್ಧಗಳು ಮತ್ತು ಕಲಹಗಳಿಗೆ ಬುದ್ಧನ ಶಾಂತಿ ಮಾರ್ಗವೊಂದೇ ಪರಿಹಾರ. ಪ್ರಪಂಚಕ್ಕೆ ಇಂದು ಯುದ್ಧದ ದಾಹಕ್ಕಿಂತ ಬುದ್ಧನ ಅಷ್ಟಾಂಗ ಮಾರ್ಗಗಳ ಅವಶ್ಯಕತೆ ಹೆಚ್ಚಿದೆ. ಬುದ್ಧನ ಅಷ್ಟಾಂಗ ಮಾರ್ಗಗಳು ಇಂದಿಗೂ ವಿಶ್ವಕ್ಕೆ ಪ್ರೇರಣೆ. ಎರಡು ದೇಶಗಳ ನಡುವಿನ ಯುದ್ಧ ನೂರಾರು ರಾಷ್ಟ್ರಗಳ ಮೇಲೆ ಪರಿಣಾಮ ಬೀರುತ್ತಿದೆ. ಪ್ರಧಾನಿ ಮೋದಿಯವರು ನೆಹರೂ ಕಾಲದ ವಿದೇಶಾಂಗ ನೀತಿಯನ್ನು ಅರ್ಥಮಾಡಿಕೊಳ್ಳಬೇಕು. ಭಾರತವು ಯಾವುದೇ ಒಂದು ದೇಶ ಅಥವಾ ವ್ಯಕ್ತಿಯ ಪರ ನಿಲ್ಲದೆ, ತಟಸ್ಥ ನೀತಿ ಪಾಲಿಸುವುದು ದೇಶದ ಹಿತದೃಷ್ಟಿಯಿಂದ ಅತ್ಯಗತ್ಯ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಪಾದಿಸಿದರು.

ಕಾರ್ಮಿಕ ಕಾಯ್ದೆಗಳ ತಿರುಚುವಿಕೆ: ಆಕ್ರೋಶ

ವಿಶ್ವ ಕಾರ್ಮಿಕ ದಿನಾಚರಣೆಯ ಸಂದರ್ಭದಲ್ಲಿ ಕಾರ್ಮಿಕರ ಸ್ಥಿತಿಗತಿ ಬಗ್ಗೆ ಕಳವಳ ವ್ಯಕ್ತಪಡಿಸಿದ ಖರ್ಗೆ, ಡಾ.ಬಿ.ಆರ್.ಅಂಬೇಡ್ಕರ್ ಅವರು ರೂಪಿಸಿದ ಕಾರ್ಮಿಕ ಕಾನೂನುಗಳನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ತಿರುಚಿದೆ. ಕಾರ್ಮಿಕರ ರಕ್ಷಣಾ ಕವಚಗಳನ್ನು ನಾಶಪಡಿಸಿರುವುದರಿಂದ ಕಾರ್ಪೊರೇಟ್ ಕಂಪನಿಗಳು ಮನಬಂದಂತೆ ವರ್ತಿಸುತ್ತಿವೆ. ಇದರಿಂದಾಗಿ ಲಕ್ಷಾಂತರ ಕಾರ್ಮಿಕರ ಉದ್ಯೋಗ ಭದ್ರತೆ ಮರೀಚಿಕೆಯಾಗಿದೆ. ಯುಪಿಎ ಅವಧಿಯ 'ಮನರೇಗಾ' ಯೋಜನೆಯನ್ನು ಪ್ರಸ್ತಾಪಿಸಿದ ಅವರು, ಬಡವರ ಹಸಿವು ನೀಗಿಸಲು ತಂದ ಯೋಜನೆಯನ್ನು ಈ ಸರ್ಕಾರ ಹಳ್ಳ ಹಿಡಿಸುತ್ತಿದೆ. ಇಂತಹ ತಾರತಮ್ಯದ ನೀತಿಗಳಿಂದಲೇ ದೆಹಲಿ ಮತ್ತು ಹರಿಯಾಣದಲ್ಲಿ ಗಲಾಟೆಗಳು ಸಂಭವಿಸುತ್ತಿವೆ ಎಂದು ಟೀಕಿಸಿದರು.

ಬೆಲೆ ಹೆಚ್ಚಳಕ್ಕೆ ಹೊಣೆ ಯಾರು?: ಡಿಕೆಶಿ

• **ಬೆಂಗಳೂರು:** ಕೇಂದ್ರ ಸರ್ಕಾರ ಜನಸಾಮಾನ್ಯರ ನೋವನ್ನು ಅರ್ಥ ಮಾಡಿಕೊಳ್ಳಬೇಕಿತ್ತು. ಎಲ್ಲಾ ಪದಾರ್ಥಗಳ ಬೆಲೆ ಆಕಾಶಕ್ಕೇರಿದೆ. ಆದಾಯ ಪಾತಳಕ್ಕೆ ಕುಸಿದಿದೆ. ಬೆಲೆ ಹೆಚ್ಚಳಕ್ಕೆ ಹೊಣೆ ಯಾರು? ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದರು.



ಗಾಂಧಿನಗರದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಅಡುಗೆ ಅನಿಲ ಸಿಲಿಂಡರ್ ಬೆಲೆ ಹಾಗೂ ಇತರೆ ಅಗತ್ಯ ಸೇವೆಗಳ ಬೆಲೆ ಏರಿಕೆ ಕುರಿತ ವಾಣಿಜ್ಯ ಸಿಲಿಂಡರ್ ಬೆಲೆ ಹೆಚ್ಚಳದ ಹೊರೆ ಜನಸಾಮಾನ್ಯರ ಮೇಲೆಯೇ ಹೋಗುತ್ತದೆ. ಇದರಿಂದಾಗಿ ಅನೇಕ ಹೋಟೆಲ್‌ಗಳು ಬಂದ್ ಆಗಿವೆ.

ಇದರ ಬಗ್ಗೆ ಕೇಂದ್ರ ಸರ್ಕಾರ ಗಮನವಿಡಬೇಕಿತ್ತು. ಸರ್ಕಾರ ಜನರ ಮೇಲಿನ ಹೊರೆ ಇಳಿಸಬೇಕು. ಬೆಲೆ ಏರಿಕೆಯಿಲ್ಲದೇ ಜನಸಾಮಾನ್ಯ ನಿಶ್ಚಿಂತೆಯಿಂದ ಬದುಕುವ ದಾರಿಯನ್ನು ಕೇಂದ್ರ ಸರ್ಕಾರ ಮಾಡಬೇಕಿದೆ ಎಂದರು.

ಯುದ್ಧ ನಡೆಯುತ್ತಿರುವ ಹೊತ್ತಿನಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳನ್ನು ಮಿತ್ರ ರಾಷ್ಟ್ರಗಳ ಜತೆ ಉಳಿಸಿಕೊಳ್ಳಬೇಕಿರುವುದು ಅತ್ಯವಶ್ಯ. ಅನೇಕ ದೇಶಗಳು ಭಾರತವನ್ನು ಅನೇಕ ರೀತಿಯಲ್ಲಿ ಬೆಂಬಲಿಸಿವೆ. ನಮ್ಮ ವಿದೇಶಾಂಗ ನೀತಿ ವಿಫಲವಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅನುದಾನ

ಸಚಿವ ಸಂಪುಟ ಸಭೆಯಲ್ಲಿ ಅಲ್ಪಸಂಖ್ಯಾತರ ಪ್ರದೇಶ ಅಭಿವೃದ್ಧಿಗೆ 600 ಕೋಟಿ ರೂ. ಅನುದಾನ ಬಿಡುಗಡೆ ಬಗ್ಗೆ ಕೇಳಿದಾಗ, ಅದನ್ನು ಮಾತ್ರ ಯಾಕೆ ದೊಡ್ಡದಾಗಿ ಬಿಂಬಿಸುತ್ತೀರಿ? ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ 18 ಸಾವಿರ ಕೋಟಿ ರೂ. ವೆಚ್ಚದಲ್ಲಿ ಬಿಡದಿ ಬಳಿ ಸ್ಯಾಟಲೈಟ್ ಟೌನ್ ಶಿಪ್ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ. ಈ ವಿಚಾರ ಬಿಟ್ಟು ಅಲ್ಪಸಂಖ್ಯಾತರಿಗೆ ಕೊಟ್ಟಿರುವ ಅನುದಾನ ಬಗ್ಗೆ ಮಾತ್ರ ಮಾತನಾಡುವುದೇಕೆ? ಎಂದು ತಿಳಿಸಿದರು.

ರವಿ ಕೋಟ ಅಧಿಕಾರ ಸ್ವೀಕಾರ

• **ಬೆಂಗಳೂರು:** ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್)ನ 22ನೇ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕ(ಸಿಎಂಡಿ)ರಾಗಿ ಉಡುಪಿ ಮೂಲದ ರವಿ ಕೋಟ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಬುಧವಾರ ನಿವೃತ್ತರಾದ ಡಾ. ಡಿ.ಕೆ. ಸುನೀಲ್ ಅವರಿಂದ ನೂತನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ರವಿ ಕೆ. ಅವರು ಅಧಿಕಾರ ವಹಿಸಿಕೊಂಡರು. ರವಿ ಕೆ. ಅವರು ಅನಲಾಗ್ ಮತ್ತು ಡಿಜಿಟಲ್, ಉತ್ಪಾದನೆ ಹಾಗೂ ಎಲೆಕ್ಟ್ರಾನಿಕ್ಸ್‌ನಂತಹ ವಿವಿಧ ಕ್ಷೇತ್ರಗಳಲ್ಲಿ 30 ವರ್ಷಗಳ ಅನುಭವ ಹೊಂದಿದ್ದಾರೆ. ಇದಕ್ಕೂ ಮೊದಲು, ಅವರು ಎಚ್‌ಎಎಲ್‌ನಲ್ಲಿ ನಿರ್ದೇಶಕ (ಕಾರ್ಯಾಚರಣೆ)ರಾಗಿದ್ದರು. ಅಲ್ಲಿ ಅವರು ಕಾರ್ಯತಂತ್ರದ ಯೋಜನೆ ಮುನ್ನಡೆಸಿ ದ್ದಾರೆ ಮತ್ತು ಎಚ್‌ಎಎಲ್ ಮಹಾರತ್ನ ಸ್ಥಾನಮಾನ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ತೇಜಸ್ ಹಿಂದಿನ ಶಕ್ತಿ: ಅವರು ಎಲ್‌ಸಿಎ ತೇಜಸ್ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ, ಜನರಲ್ ಮ್ಯಾನೇಜರ್ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕ (ಕಾರ್ಪೊರೇಟ್ ಯೋಜನೆ)ಸೇರಿದಂತೆ ಪ್ರಮುಖ ನಾಯಕತ್ವದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ತಮ್ಮ ಈ ಅಧಿಕಾರಾವಧಿಯಲ್ಲಿ ಅವರು ಎಚ್‌ಎಎಲ್‌ಗಾಗಿ ವಿವಿಧ ದೊಡ್ಡ ಒಪ್ಪಂದಗಳನ್ನು ಮಾಡಿಕೊಂಡರು. ಅವುಗಳಲ್ಲಿ ಭಾರತೀಯ ವಾಯುಪಡೆಗೆ 180 ಎಲ್‌ಸಿಎ ತೇಜಸ್‌ಗಳನ್ನು ಪೂರೈಸುವ ಒಪ್ಪಂದ, ಭಾರತೀಯ ಸೇನೆ, ಭಾರತೀಯ ವಾಯುಪಡೆಗೆ 156 ಪ್ರಚಂಡ್ ಹೆಲಿಕಾಪ್ಟರ್‌ಗಳನ್ನು ಪೂರೈಸುವ ಒಪ್ಪಂದ ಮಹತ್ವದ್ದಾಗಿದೆ. ವಾಯುಪಡೆಯಲ್ಲಿ ಎಲ್‌ಸಿಎ ತೇಜಸ್ ಫ್ಲೀಟ್‌ನ ಕಾರ್ಯಾಚರಣೆಗೆ ಅವರು ಕಾರಣರಾಗಿದ್ದಾರೆ.



ಎಚ್‌ಎಎಲ್ ಅನ್ನು ಜಾಗತಿಕವಾಗಿ ಸ್ಪರ್ಧಾತ್ಮಕ ಏರೋಸ್ಪೇಸ್ ಮತ್ತು ರಕ್ಷಣಾ ಉದ್ಯಮವಾಗಿ ಪರಿವರ್ತಿಸುವುದು ನನ್ನ ದೃಷ್ಟಿಕೋನವಾಗಿದೆ. ಇದು ನಾವೀನ್ಯತೆ, ಕೃತಕ ಬುದ್ಧಿಮತ್ತೆ (ಎಐ), ಕಾರ್ಯಾಚರಣೆಯ ಶ್ರೇಷ್ಠತೆ ಮತ್ತು ಜನರಿಂದ ನಡೆಸಲ್ಪಡುತ್ತದೆ.
■ **ರವಿ ಕೆ., ಎಚ್‌ಎಎಲ್ ಸಿಎಂಡಿ**

ದೇಶಕ್ಕೆ ಶ್ರಮಿಕರ ಕೊಡುಗೆ ಅಪಾರ

• **ಬೆಂಗಳೂರು:** ದೇಶ ಅಭಿವೃದ್ಧಿಯ ಪಥದಲ್ಲಿ ಸಾಗಲು ಮಹತ್ವದ ಕೊಡುಗೆ ನೀಡುತ್ತಿರುವ ಶ್ರಮಿಕ ವರ್ಗದ ಕಲ್ಯಾಣಕ್ಕಾಗಿ ಕೇಂದ್ರದ ಬಿಜೆಪಿ ಸರ್ಕಾರ ಹಲವು ಯೋಜನೆಗಳನ್ನು ಜಾರಿ ಮಾಡಿದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗಲೂ ಕಾರ್ಮಿಕರ ಅನುಕೂಲಕ್ಕಾಗಿ ಸಾಕಷ್ಟು ನೆರವು ನೀಡಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ವಿಶ್ವ ಕಾರ್ಮಿಕರ ದಿನಾಚರಣೆ ಅಂಗವಾಗಿ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬಿಜೆಪಿ ಅಸಂಘಟಿತ ಕಾರ್ಮಿಕರ ಪ್ರಕೋಷ್ಠದ ವತಿಯಿಂದ ಹಮ್ಮಿಕೊಂಡಿದ್ದ ಶ್ರಮಿಕ ದಿವಸ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ದೇಶ ಹಾಗೂ ಸಮಾಜಕ್ಕೆ ಶ್ರಮಿಕವರ್ಗ ನೀಡುತ್ತಿರುವ ಕೊಡುಗೆಯನ್ನು ಎಂದಿಗೂ ಮರೆಯಲಾಗದು. 2047ನೇ ಇಸವಿಗೆ ಭಾರತ ಅಭಿವೃದ್ಧಿಶೀಲ ರಾಷ್ಟ್ರವಾಗಿ ಪರಿವರ್ತನೆ ಮಾಡಲು ಶ್ರಮಿಕದ ಪಾತ್ರ ದೊಡ್ಡದು.

ಕಾರ್ಮಿಕರು ಇಲ್ಲದೇ ದೇಶ ನಿರ್ಮಾಣವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ನರೇಂದ್ರ ಮೋದಿ ಅವರು 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಕಾರ್ಮಿಕ ವರ್ಗಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು. ಇ–ಶ್ರಮ್ ಅನ್ನು ಆರಂಭಿಸಿ ಅಸಂಘಟಿತ ಕಾರ್ಮಿಕರ ಅಂಕಿ ಅಂಶ ಪಡೆದು ಅವರಿಗೆ ಪಿಂಚಣಿ, ಆರೋಗ್ಯ ಸೇರಿದಂತೆ ಹಲವು ರೀತಿಯ ಸಹಾಯ ಮಾಡಿದರು ಎಂದು ವಿವರಿಸಿದರು.



4 ಹೊಸ ಕಾರ್ಮಿಕ ಸಂಹಿತೆಗಳನ್ನು ರೂಪಿಸಿತು. ಇದರಿಂದ ಕಾರ್ಮಿಕರಿಗೆ ಸಾಕಷ್ಟು ಅನುಕೂಲವಾಗಿದೆ. ಎನ್‌ಡಿಎ ಸರ್ಕಾರದ ಈ ನಿರ್ಧಾರ ಮಹತ್ವದ್ದಾಗಿದೆ. ದೇಶದ ಅಭಿವೃದ್ಧಿಗೆ ಎಲ್ಲ ವರ್ಗದ ಶ್ರಮಿಕರ ಕೊಡುಗೆಯಿದೆ ಎಂಬುದನ್ನು ಅರಿತಿರುವ ಕೇಂದ್ರ ಸರ್ಕಾರ, ವಿಶ್ವಕರ್ಮ ಯೋಜನೆ ಜಾರಿಗೆ ತಂದಿದೆ. ಅವರ ಶ್ರಮಕ್ಕೆ ನ್ಯಾಯ ಒದಗಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಬಿಜೆಪಿ ಸರ್ಕಾರ ಮಾಡುತ್ತಿದೆ. ಸರ್ಕಾರ ಜಾರಿ ಮಾಡಿದ ಸುಧಾರಣೆಗಳನ್ನು, ಕಲ್ಯಾಣ ಯೋಜನೆಗಳನ್ನು ಶ್ರಮಿಕರಿಗೆ ತಲುಪಿಸುವ ಕೆಲಸ ಮಾಡೋಣ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್. ದತ್ತಾತ್ರಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಮಾಜಿ ಶಾಸಕ ಎಂ.ಡಿ.ಲಕ್ಷ್ಮಿನಾರಾಯಣ್, ದಕ್ಷಿಣ ಜಿಲ್ಲಾ ಉಪಾಧ್ಯಕ್ಷ ಅರುಣ್ ಸೋಮಣ್ಣ, ಕಾರ್ಮಿಕ ಪ್ರಕೋಷ್ಠದ ಸಂಚಾಲಕರು ಇದ್ದರು.

ಸಿಲಿಂಡರ್ ಬೆಲೆ ಏರಿಕೆ ವಿರುದ್ಧ ಹೆಬ್ಬಾಳ್ಕರ್ ಆಕ್ರೋಶ

• **ಬೆಳಗಾವಿ:** ವಾಣಿಜ್ಯ ಗ್ಯಾಸ್ ಸಿಲಿಂಡರ್ ದರವನ್ನು ರೂ.2162ರಿಂದ ರೂ.3153ಕ್ಕೆ ಏರಿಸಿರುವುದು ಸೇರಿದಂತೆ ಒಟ್ಟು ರೂ. 991ಭಾರೀ ಏರಿಕೆ ಮಾಡಿದ್ದು, ಕೇಂದ್ರ ಸರ್ಕಾರದ ಜನವಿರೋಧಿ ನಿರ್ಧಾರವಾಗಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕೇಂದ್ರದ ವಿರುದ್ಧ ಗಂಭೀರವಾಗಿ ಖಂಡಿಸಿದರು.



ಈ ಪ್ರಮಾಣದ ಬೆಲೆ ಏರಿಕೆ ಹಿಂದೆ ಎಂದೂ ಕಂಡಿಲ್ಲ. ಕೆಲವು ರಾಜ್ಯಗಳ ಚುನಾವಣೆ ಮುಗಿದ ತಕ್ಷಣ ಇಂತಹ ಜನ ವಿರೋಧಿ ನಿರ್ಧಾರ ತೆಗೆದುಕೊಂಡಿರುವುದು ಜನರಿಗೆ ನೀಡಿದ ಭರವಸೆಗಳನ್ನೇ ಮರೆತಂತಾಗಿದೆ. ಇದು ನೇರವಾಗಿ ಹೋಟೆಲ್ ಉದ್ಯಮದ ಮೇಲೆ ಹಾಗೂ ಸಾಮಾನ್ಯ ಜನರ ಬದುಕಿನ ಮೇಲೆ ಗದಾ ಪ್ರಹಾರ ಕೇಂದ್ರವು ಪ್ರಾರಂಭಿಸಿದೆ ಎಂದರು.

ಹೋಟೆಲ್ ಮಾಲೀಕರು ಈಗಾಗಲೇ ಬೆಲೆ ಏರಿಕೆಯ ಒತ್ತಡವನ್ನು ಎದುರಿಸುತ್ತಿದ್ದಾರೆ. ಈ ನಿರ್ಧಾರದಿಂದ ಆಹಾರ ಪದಾರ್ಥಗಳ ಬೆಲೆ ಮತ್ತಷ್ಟು ಏರಿಕೆಯಾಗಲಿದೆ. ಅದರ ಪರಿಣಾಮವಾಗಿ ದಿನನಿತ್ಯ ಜೀವನ ನಡೆಸುವ ಸಾಮಾನ್ಯ ಜನರು ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರ ಜನರ ಜೀವನೋಪಾಯವನ್ನು ಕಷ್ಟಕರಗೊಳಿಸುವ ಬದಲು, ಬೆಲೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಆದರೆ, ಚುನಾವಣೆಯ ಬಳಿಕ ಜನರಿಗೆ ಮತ್ತೊಮ್ಮೆ ಮೋಸ ಮಾಡುತ್ತಿರುವುದು ಸ್ಪಷ್ಟವಾಗಿದೆ. ತಕ್ಷಣವೇ ಈ ಅನ್ಯಾಯಕರ ಬೆಲೆ ಏರಿಕೆಯನ್ನು ಹಿಂಪಡೆಯಬೇಕು ಹಾಗೂ ಜನಪರ ನೀತಿಗಳನ್ನು ಅನುಸರಿಸಬೇಕು ಎಂದು ಸಚಿವೆ ಹೆಬ್ಬಾಳ್ಕರ್ ಆಗ್ರಹಿಸಿದ್ದಾರೆ.

ಪೆಂಡಾಲ್ ನಿರ್ಮಾಣ ಕಾಮಗಾರಿ ಪರಿಶೀಲಿಸಿದ ಮಾಜಿ ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ

ಅಭಿಮಾನಿಗಳಿಂದ ಯಡಿಯೂರಪ್ಪ ಅಭಿಮಾನೋತ್ಸವ

• **ಚಿತ್ರದುರ್ಗ:** ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಭರದಿಂದ ಸಿದ್ಧತೆಗಳು ನಡೆಯುತ್ತಿವೆ. ರಾಜ್ಯದ ಮೂಲೆ ಮೂಲೆಗಳಿಂದ ಬಿಎಸ್‌ವೈ ಅಭಿಮಾನಿಗಳು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ ಎಂದು ಮಾಜಿ ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ ಹೇಳಿದರು.

ಬಿ.ಎಸ್. ಯಡಿಯೂರಪ್ಪನವರು 50 ವರ್ಷಗಳ ಸುದೀರ್ಘ ರಾಜಕೀಯ ಜೀವನ ಪೂರೈಸಿದ ಹಿನ್ನೆಲೆಯಲ್ಲಿ ನಗರದ ಹೊರವಲಯದ ಶಿವಶರಣ ಮಾದಾರ ಚೆನ್ನಯ್ಯ ಗುರು ಪೀಠದ ಪಕ್ಕದಲ್ಲಿನ ಮೈದಾನದಲ್ಲಿ ಹಮ್ಮಿಕೊಂಡಿರುವ ಬಿ.ಎಸ್.ವೈ. ಅಭಿಮಾನೋತ್ಸವದ ಪೆಂಡಾಲ್ ನಿರ್ಮಾಣ ಕಾಮಗಾರಿ ಪರಿಶೀಲಿಸಿ ಅವರು ಮಾತನಾಡಿದರು.

ಬಿ.ಎಸ್.ಯಡಿಯೂರಪ್ಪನವರು 50 ವರ್ಷ ರಾಜಕೀಯ ಜೀವನದಲ್ಲಿ ಬಡವರು, ದೀನದಲಿತರು, ರೈತರು, ಮಹಿಳೆಯರು, ಮಕ್ಕಳ ಪರವಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಪಕ್ಷಾತೀತವಾಗಿ ಅಪಾರ ಸಂಖ್ಯೆಯ ಅಭಿಮಾನಿಗಳಿದ್ದಾರೆ. ಸುಮಾರು 10 ಲಕ್ಷದಷ್ಟು ಜನ ಕಾರ್ಯಕ್ರಮಕ್ಕೆ ಆಗಮಿಸುವ ನಿರೀಕ್ಷೆ



ಇದೆ. ಹಿಂದೆಂದೂ ನಡೆದಿರದಂತಹ ಕಾರ್ಯಕ್ರಮ ಇದಾಗಲಿದೆ ಎಂದು ತಿಳಿಸಿದರು.

ಇದೊಂದು ಪಕ್ಷಾತೀತ ಕಾರ್ಯಕ್ರಮ. ಇದರಲ್ಲಿ ಯಾವುದೇ ಪಕ್ಷದ ಗುರುತು ಇರುವುದಿಲ್ಲ. ಸಾವಿರಾರು ಸಂಖ್ಯೆಯ ವಿವಿಧ ಮಠಾಧೀಶರು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಕಳೆದ ಒಂದು ವಾರದಿಂದ ಎಲ್ಲ ಅಗತ್ಯ ಸಿದ್ಧತೆಗಳು ನಡೆಯುತ್ತಿವೆ. ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ ಅವರು ಕಾರ್ಯಕ್ರಮದ ಸಿದ್ಧತೆಗಳ ಉಸ್ತುವಾರಿ ವಹಿಸಿಕೊಂಡಿದ್ದಾರೆ ಎಂದರು. ಬಿ.ಎಸ್.ವೈ. ಅಭಿಮಾನೋತ್ಸವದ ಉಸ್ತುವಾರಿ ಹಾಗೂ ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ ಮಾತನಾಡಿ, ಕಾರ್ಯಕ್ರಮಕ್ಕಾಗಿ ಸುಮಾರು 25 ಲಕ್ಷ ಚದರ ಮೀಟರ್ ಪೆಂಡಾಲ್ ನಿರ್ಮಾಣ ಮಾಡಲಾಗುತ್ತಿದೆ. ಇದು ಸಮಾವೇಶವಲ್ಲ. ಉತ್ಸವದ ರೀತಿ ನಡೆಯಬೇಕು. ಈ ಹಿನ್ನೆಲೆಯಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು.

ರಾಜ್ಯದ ವಿವಿಧೆಡೆಗಳಿಂದ ಬರುವ ಜನರಿಗೆ ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳಲಾಗುವುದು. ಬೆಂಗಳೂರು ಭಾಗದ ಶಾಸಕರು ಊಟದ ವ್ಯವಸ್ಥೆ ಜವಾಬ್ದಾರಿ ತೆಗೆದು ಕೊಂಡಿದ್ದಾರೆ.ಕುಡಿಯುವ ನೀರು, ಮಜ್ಜಿಗೆ ವ್ಯವಸ್ಥೆ ಮಾಡಲಾಗುವುದು. ಬಿಸಿಲಿನ ಝಳದಿಂದ ಜನರನ್ನು ರಕ್ಷಿಸಲು ಹೈದ್ರಾಬಾದನಿಂದ ವಿಶೇಷ ಫ್ಯಾನ್‌ಗಳನ್ನು ತರಿಸಲಾಗುತ್ತಿದೆ ಎಂದು ಹೇಳಿದರು. ಇದೇ ವೇಳೆ ಜಿಲ್ಲಾ ರಕ್ಷಣಾಧಿಕಾರಿ ರಂಜಿತ್ ಕುಮಾರ್ ಬಂಡಾರು ಸ್ಥಳಕ್ಕೆ ಆಗಮಿಸಿ ಭದ್ರತೆ ಕುರಿತು ಸ್ಥಳ ಪರಿಶೀಲನೆ ಮಾಡಿದರು. ಬಿಜೆಪಿ ವಿಭಾಗ ಸಹ ಪ್ರಭಾರಿ ಎ. ಮುರುಳಿ, ಜಿಲ್ಲಾಧ್ಯಕ್ಷ ಡಾ. ಸಿದ್ದಾರ್ಥ ಗುಂಡಾರ್ಪಿ, ಬಾಳೆಕಾಯಿ ರಾಮದಾಸ್, ಗ್ರಾಮಾಂತರ ಅಧ್ಯಕ್ಷ ನಾಗರಾಜ್, ಸಂಪತ್‌ಕುಮಾರ್, ಚಾಲುಕ್ಯ ನವೀನ್, ದಗ್ಗೆ ಶಿವಪ್ರಕಾಶ್ ಮತ್ತಿತರರಿದ್ದರು.

ಎಲ್ಲ ಅಗತ್ಯ ಸಿದ್ಧತೆ

ಬಿ.ಎಸ್.ವೈ. ಅಭಿಮಾನೋತ್ಸವದ ಯಶಸ್ಸಿಗೆ ಶಕ್ತಿಮೀರಿ ಶ್ರಮಿಸಲಾಗುವುದು. ಯಾವುದೇ ಚಿಕ್ಕ ಲೋಪದೋಷವಾಗದಂತೆ ಎಚ್ಚರವಹಿಸಬೇಕೆಂಬುದು ನಮ್ಮ ಬಯಕೆ. ಈ ನಿಟ್ಟಿನಲ್ಲಿ ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಪೆಂಡಾಲ್ ಸುತ್ತಮುತ್ತ ಒಂದು ಕಿ.ಮೀ. ಅಂತರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಆಯಾ ಭಾಗದಿಂದ ಬರುವ ವಾಹನಗಳಿಗೆ ತಕ್ಕಂತೆ ವ್ಯವಸ್ಥೆ ಮಾಡಲಾಗುವುದು. ಹಬ್ಬದ ರೀತಿಯಲ್ಲಿ ಕಾರ್ಯಕ್ರಮದ ಸಂಭ್ರಮ ಇರುತ್ತದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಟಿ. ಕುಮಾರಸ್ವಾಮಿ ತಿಳಿಸಿದರು.

ಪ್ರಾಚೀನ ಭಾರತೀಯ ಸಮುದಾಯಗಳ ಅಧ್ಯಯನ

ಮಸ್ಕಿ ಆಯ್ಕೆ ಮಾಡಿದ ಕೇಂದ್ರ

▸ **ಸಿದ್ದಯ್ಯ ಹೆಸರೂರು**

• **ಮಸ್ಕಿ:** ಸಂಸ್ಕೃತಿ ಸಚಿವಾಲಯದ ಆಶ್ರಯದಲ್ಲಿ ಕಾರ್ಯ ನಿರ್ವಹಿಸುವ ಆಂಥ್ರೊ ಪೊಲಾಜಿಕಲ್ ಸರ್ವೇ ಆಫ್ ಇಂಡಿಯಾ (ಎಎಸ್‌ಐ) ಮೂಲಕ ಈ ಅಧ್ಯಯನ ವನ್ನು ಕೈಗೊಳ್ಳಲಾಗುತ್ತಿದೆ.

ಪ್ರಾಚೀನ ಭಾರತೀಯ ಸಮುದಾಯಗಳ ಮೂಲದ ಬಗ್ಗೆ ವಿರೋಧಾಭಾಸ ಸಿದ್ಧಾಂತಗಳ ಮಧ್ಯೆ, ದಕ್ಷಿಣ ಏಷ್ಯಾದ ಜನಸಂಖ್ಯೆಯ ಇತಿಹಾಸವನ್ನು "ನಿರ್ಣಾಯಕವಾಗಿ" ಕಂಡು ಹಿಡಿಯಲು ಪ್ರಾಚೀನ ಮತ್ತು ಆಧುನಿಕ ಜೀನೋಮಿಕ್ಸ್ ಅನ್ನು ಬಳಸಿಕೊಂಡು ಸಮಗ್ರ ವೈಜ್ಞಾನಿಕ ಅಧ್ಯಯನವನ್ನು ಸರ್ಕಾರ ಕೈಗೊಂಡಿದೆ. 'ಪ್ರಾಚೀನ, ಆಧುನಿಕ ಜೀನೋಮಿಕ್ಸ್ ಬಳಸಿ ದಕ್ಷಿಣ ಏಷ್ಯಾದ ಜನಸಂಖ್ಯೆಯ ಇತಿಹಾಸದ ಪುನರ್ ನಿರ್ಮಾಣ' ಎಂಬ ಶೀರ್ಷಿಕೆ ಈ ಯೋಜನೆಯು ಭಾರತ, ಪಾಕಿಸ್ತಾನದ ವಿವಿಧ ಪುರಾತತ್ವ ಸ್ಥಳಗಳಿಂದ ಸಂಗ್ರಹಿಸಿದ 300 ಪ್ರಾಚೀನ ಅಸ್ಥಿಪಂಜರಗಳ ಅವಶೇಷಗಳನ್ನು ಅಧ್ಯಯನ ಮಾಡುತ್ತದೆ. ಇವುಗಳಲ್ಲಿ ಸಿಂಧೂ ಕಣಿವೆ ನಾಗರೀಕತೆಯ ತಾಣಗಳಾದ ಹರಪ್ಪ, ಮೊಹೆಂಜೊ–



ದಾರೊ (ಈಗ ಪಾಕಿಸ್ತಾನದಲ್ಲಿದೆ). ಬುರ್ಜಾಹೋಮ್ (ಜಮ್ಮು, ಕಾಶ್ಮೀರ), ನಾಗಾರ್ಜುನ ಕೊಂಡ (ಆಂಧ್ರಪ್ರದೇಶ), ಮಸ್ಕಿ (ಕರ್ನಾ ಟಕ), ರೋಪರ್ (ಪಂಜಾಬ್) ಮತ್ತು ಲೋಥಾಲ್ (ಗುಜರಾತ್) ಗಳಲ್ಲಿ ಸ್ವಾತಂ ತ್ರ್ಯದ ಮೊದಲು ಮತ್ತು ನಂತರ ನಡೆಸಿದ ಉತ್ಖನನದ ಸಮಯದಲ್ಲಿ ಸಂಗ್ರಹಿಸಿದ ಅವಶೇಷಗಳು ಸೇರಿವೆ.

ಅಸ್ಥಿಪಂಜರದ ಅವಶೇಷಗಳನ್ನು 1922 ಮತ್ತು 1958ರ ನಡುವೆ ಭಾರತೀಯ ಪುರಾತತ್ವ ಸಮೀಕ್ಷೆಯು ಉತ್ಖನನ ಮಾಡಿತು ಮತ್ತು ನಂತರ ಎಎಸ್‌ಐಗೆ ವಹಿಸಲಾಯಿತು. ಯಾವ ಹಂತದಲ್ಲಿದೆ ಎಂಬುದನ್ನು ಸಂಬಂಧಿಸಿದ ಅಧಿಕಾರಿಗಳೇ ತಿಳಿಸಬೇಕಾಗಿದೆ.

ಸಂಪಾದಕೀಯ

ಮಳೆ ಮತ್ತು ನಗರಗಳ ಅವ್ಯವಸ್ಥೆ

ಬುಧವಾರ ಸಂಜೆ ಸುರಿದ ಭಾರೀ ಮಳೆಯು ಬಿಸಿಲ ಬೇಗೆಯಿಂದ ತತ್ತರಿಸಿದ್ದ ಬೆಂಗಳೂರಿನ ಜನತೆಗೆ ತಂಪು ನೀಡಿದ್ದು ನಿಜವಾದರೂ, ಮಳೆಯು ತಂದ ಅನಾಹುತವು ಬೇಗೆಯ ಪ್ರಮಾಣ ಹೆಚ್ಚಿಸಿದ್ದೂ ದಿಟ. ಕೆಲವೇ ಗಂಟೆಗಳ ಕಾಲ ಸುರಿದ ಬಿರುಮಳೆಯು 10 ಮಂದಿಯ ಜೀವಹಾನಿಗೆ ಕಾರಣವಾದುದಷ್ಟೇ ಅಲ್ಲದೆ, ಕೋಟ್ಯಂತರ ರೂಪಾಯಿ ಮೌಲ್ಯದ ಸೊತ್ತು ನಾಶಕ್ಕೂ ಕಾರಣವಾಯಿತು. ನೀರು ಸರಾಗವಾಗಿ ಹರಿದು ಹೋಗದ ಕಾರಣ ಕೃತಕ ಪ್ರವಾಹ ಪರಿಸ್ಥಿತಿ ನಿರ್ಮಾಣವಾಯಿತು. ಅಂಗಡಿ ಮುಂಗಟ್ಟುಗಳೊಳಗೆ



ನೀರು ನುಗ್ಗಿತು. ವಾಹನ ಸಂಚಾರ ವ್ಯತ್ಯಯವಾಯಿತು. ಜನಜೀವನ ಅಸ್ತವ್ಯಸ್ತಗೊಂಡಿತು.

ಇದು ಈ ವರ್ಷದ ಕತೆಯೊಂದೇ ಅಲ್ಲ. ಪ್ರತಿವರ್ಷದ ವ್ಯಥೆ! ಇದು ಕೇವಲ ಬೆಂಗಳೂರಿನ ಕತೆಯೂ ಅಲ್ಲ. ಇದು ರಾಜ್ಯದ ಪ್ರತಿಯೊಂದು ನಗರದ ವ್ಯಥೆಯೂ ಹೌದು. ಒಂದು ಮಳೆಗೇ ನಗರವು ಕೆರೆಯಂತಾಗುವುದು, ನೀರು ತೋಡುಗಳಲ್ಲಿ ಹರಿಯುವ ಬದಲಾಗಿ ರಸ್ತೆಯಲ್ಲೇ ಹರಿಯುವುದು, ತಗ್ಗು ಪ್ರದೇಶಗಳೆಲ್ಲ ಜಲಾವೃತವಾಗುವುದು ಸರ್ವೇಸಾಮಾನ್ಯವೆಂಬಂತಾಗಿದೆ. ಮುಂಗಾರುಪೂರ್ವದಲ್ಲಿ ಸುರಿಯುವ ಅನಿರೀಕ್ಷಿತ ಮಳೆಗಳಂತೂ ಇಂತಹ ಅನಾಹುತಗಳನ್ನು ಸೃಷ್ಟಿಸುವುದು ಇನ್ನೂ ಹೆಚ್ಚು. ಆದರೆ ಇದಕ್ಕೆಲ್ಲ ಮಳೆಯನ್ನು ದೂರುವುದಕ್ಕಿಂತಲೂ ಮಾನವನನ್ನೆ ದೂರಬೇಕಾಗಿದೆ, ನಗರಾಡಳಿತವನ್ನು ದೂಷಿಸಬೇಕಾಗಿದೆ. ಮಳೆಯು ಪ್ರತಿವರ್ಷ ಎಸಗುವ ಹಾನಿಯ ಅರಿವಿದ್ದೂ ನಗರಾಡಳಿತವು ಮಳೆಗಾಲ ಆರಂಭಕ್ಕೆ ಮುನ್ನ ಸುರಕ್ಷಿತ ಉಪಕ್ರಮಗಳನ್ನು ಕೈಗೊಳ್ಳುವುದಿಲ್ಲ. ಮಳೆ ನೀರು ಹರಿದು ಹೋಗುವಂತಹ ಸುಸಜ್ಜಿತ ಚರಂಡಿ ವ್ಯವಸ್ಥೆಯಂತೂ ಯಾವುದೇ ನಗರದಲ್ಲೂ ಕಾಣಿಸುವುದಿಲ್ಲ. ರಾಜ ಕಾಲುವೆಗಳಲ್ಲಿ ಹೂಳು ತುಂಬಿಕೊಂಡಿರುವುದು, ನೀರು ಹರಿಯಬೇಕಾದ ತೋಡುಗಳಲ್ಲಿ ಕಸಕಡ್ಡಿಗಳು ತುಂಬಿರುವುದು, ಹೊಸ ಕಟ್ಟಡ ನಿರ್ಮಾಣ ಕಾಮಗಾರಿಯ ಉಪಕರಣಗಳು ನೀರು ಸಂಚಾರಕ್ಕೆ ಅಡ್ಡಿಯುಂಟು ಮಾಡುವಂತೆ ಹಾಕಲ್ಪಟ್ಟಿರುವುದು.... ಪ್ರತಿಯೊಂದು ನಗರದಲ್ಲೂ ಕಂಡುಬರುವ ಸಾಮಾನ್ಯ ದೃಶ್ಯವಾಗಿದೆ. ದುರಂತವೆಂದರೆ ಮಳೆಯಿಂದ ಇಂತಹ ಅನಾಹುತಗಳಾದಗಲೊಮ್ಮೆ ಆಡಳಿತವು ಎಚ್ಚತ್ತುಕೊಳ್ಳುತ್ತದೆ. ಪರಿಹಾರ ಕಾರ್ಯಕ್ಕೆ ಮುಂದಾಗುತ್ತದೆ. ಆದರೆ ಇವೆಲ್ಲವೂ ಅಲ್ಪಕಾಲೀನ ಪರಿಹಾರಗಳಿಗಷ್ಟೇ ಸೀಮಿತ. ಮತ್ತೊಂದು ಬಿರುಮಳೆ ಬಂದಾಗ ಮತ್ತದೇ ಸ್ಥಿತಿ! ಮತ್ತದೇ ಅಸ್ತವ್ಯಸ್ತತೆ! ಮತ್ತದೇ ಅನಾಹುತ!

ಇತ್ತೀಚಿನ ವರ್ಷಗಳಲ್ಲಿ ಮಳೆಯಿಂದಾಗುವ ಅನಾಹುತಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಪ್ರತಿಯೊಂದು ನಗರ, ಪಟ್ಟಣವೂ ಮಳೆ ಅನಾಹುತ ತಡೆಯಲು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಅಗತ್ಯವಾಗಿದೆ. ಮಳೆ ನೀರು ಹರಿದು ಹೋಗಲು ಸುಗಮ ವ್ಯವಸ್ಥೆ ಕಲ್ಪಿಸಬೇಕಾಗಿದೆ. ಅನಾಹುತವಾದ ಬಳಿಕ ಎಚ್ಚತ್ತುಕೊಳ್ಳುವುದಕ್ಕಿಂತ ಅನಾಹುತವಾಗದಂತೆ ತಡೆಯುವುದೇ ಮುಖ್ಯ.

ಪ್ರಯತ್ನಿಸದಿರುವುದು ಮೂರ್ಖತನ

ನಾಪ್ನೋಷಿ ಯತ್ನಂ ಕೃತ್ವಾಚೇತ್ ಫಲಂ ದೋಷೋ ನತೇ ತದಾ।
ಯತ್ನಸ್ಯಾಕರಣಂ ಮೌರ್ಖ್ಯಂ ದೈವಾಧೀನಂ ಫಲಂ ಸದಾ ॥ -ಸುವಚನಶತಕಂ

ಪ್ರಯತ್ನವನ್ನು ಮಾಡಿದರೂ ನಿನಗೆ ಫಲ ಸಿಕ್ಕದಿದ್ದರೆ ನಿನ್ನ ತಪ್ಪು ಇಲ್ಲ. ಪ್ರಯತ್ನವನ್ನೇ ಮಾಡದಿರುವುದು ಮೂರ್ಖತೆ. ಫಲವು ಸದಾ ದೈವಾಧೀನ -ಎಂಬುದು ಶ್ಲೋಕಾರ್ಥ.

ಪ್ರತಿಯೊಂದು ಸಾಧನೆಗೂ ಪ್ರಯತ್ನ ಬೇಕು. ಪ್ರಯತ್ನವಿಲ್ಲದೇ ಯಾವುದೂ ಸಿದ್ಧಿಸುವುದಿಲ್ಲ. ಒಂದೊಮ್ಮೆ ಫಲ ದೊರೆತರೂ ಬಹುಕಾಲ ಉಳಿಯುವುದಿಲ್ಲ. ಪ್ರಯತ್ನ ಅತೀ ಮುಖ್ಯ. ಅದನ್ನೆಂದೂ ನಿಲ್ಲಿಸಬಾರದು ಎಂಬ ವಿಷಯವನ್ನು ಪ್ರಸ್ತುತ ಸುಭಾಷಿತ ಸಾದರಪಡಿಸುತ್ತದೆ.

ಶ್ಲೋಕ ಸಾಗರ



• ಡಾ.ಸೋಂದಾ ಭಾಸ್ಕರ ಭಟ್

ನಾವು ಪ್ರಯತ್ನ ನಡೆಸಿದಾಗೆಲ್ಲ ಫಲ ಸಿಗುತ್ತದೆ ಎಂಬ ನಿಯಮವೇನೂ ಇಲ್ಲ. ಕೆಲವು ಮಾತ್ರ ಫಲಿಸುತ್ತವೆ. ಹಲವು ಪ್ರಯತ್ನ ವ್ಯರ್ಥವಾಗುತ್ತದೆ. ಹಾಗಂದ ಮಾತ್ರಕ್ಕೆ ಪ್ರಯತ್ನದಿಂದ ವಿಮುಖರಾಗಬಾರದು. ಪ್ರಯತ್ನಿಸಿಯೂ ಫಲ ದೊರೆಯದಿದ್ದರೆ ನಮ್ಮ ತಪ್ಪಲ್ಲ. ಮರದಲ್ಲಿ ಬಿಟ್ಟ ಹೂಗಳೆಲ್ಲ ಮಿಡಿಯಾಗುವುದಿಲ್ಲ. ಮಿಡಿಗಳೆಲ್ಲವೂ ಹಣ್ಣಾಗುವುದಿಲ್ಲ. ಬಿಟ್ಟ ಹಣ್ಣೆಲ್ಲವೂ ಸಿಗುವುದಿಲ್ಲ. ನಮ್ಮ ಪ್ರಾಪ್ತಿ ಎಷ್ಟಿದೆಯೋ ಅಷ್ಟೇ ಸಿಗುತ್ತದೆ. ಪ್ರಾಪ್ತಿಯನ್ನು ಮೀರಿದ್ದು ಎಂದೂ ಉಳಿಯುವುದಿಲ್ಲ. ದೊರೆಯುವುದಿಲ್ಲ. ದೊರೆತರೂ ದಕ್ಕುವುದಿಲ್ಲ.

ಫಲ ಸಿಕ್ಕಿಲ್ಲವೆಂಬ ಕಾರಣಕ್ಕೆ ಪ್ರಯತ್ನವನ್ನು ನಿಲ್ಲಿಸಬಾರದು. ಹಾಗೆ ನಿಲ್ಲಿಸುವುದಂತು ಸಾಧಕನ ಲಕ್ಷಣವಲ್ಲ. ನಿಲ್ಲಿಸದಿರುವುದು ಗುಣವೆನಿಸುತ್ತದೆ. ನಿಲ್ಲಿಸುವುದು ದೋಷವೆನಿಸಿಕೊಳ್ಳುತ್ತದೆ. 'ಯತ್ನೇಕೃತೇ ಯದಿನ ಸಿಧ್ಯತಿ ಕೋऽತ್ರ ದೋಷಃ' ಎಂಬ ಸೂಕ್ತಿಯಿದೆ. ಪ್ರಯತ್ನಿಸಿಯೂ ಫಲ ಸಿಗದಿದ್ದರೆ ದೋಷವಿಲ್ಲ. ಪ್ರಯತ್ನದಲ್ಲಿ ಏನೋ ಕೊರತೆಯಿದೆ ಎಂದು ಭಾವಿಸಿ ಮುಂದಿನ ಪ್ರಯತ್ನವನ್ನು ಚೆನ್ನಾಗಿ ನಡೆಸಬೇಕು.

ಒಂದೇ ವಿಷಯದ ಕುರಿತು ಅನೇಕರು ಪ್ರಯತ್ನಿಸಿದರೂ ಕೆಲವರಿಗೆ ಮಾತ್ರ ಸಿಗುತ್ತದೆ. ಕೆಲವರಿಗೆ ಸಿಗುವುದಿಲ್ಲ. ಹಾಗೆಂದ ಮಾತ್ರಕ್ಕೆ ಅವರೆಲ್ಲ ನಿಷ್ಪ್ರಯೋಜಕರು ಎಂದಲ್ಲ. ಅವರಿಗಾಗಿ ಇನ್ನೇನೋ ಕಾದಿದೆ ಎಂದು ತಿಳಿದುಕೊಳ್ಳಬೇಕು. ಯಾವಾಗಲೂ ಮಾಡಿದ ಪ್ರಯತ್ನವೆಂದೂ ವ್ಯರ್ಥವಾಗದು.

ಪ್ರಯತ್ನ ಮಾಡದೇ ಇರುವುದು ಮೂರ್ಖತನ. ಪ್ರಯತ್ನಿಸದೇ ಸಿಗಬೇಕು ಎಂಬುದು ಶತಮೂರ್ಖತನ. ಪ್ರಯತ್ನ, ಪರಿಶ್ರಮಗಳಿಲ್ಲದೇ ಏನನ್ನೂ ಅನುಭವಿಸುವ ಅಧಿಕಾರ ನಮಗಿಲ್ಲ. ಪ್ರಯತ್ನಿಸದೇ ಫಲ ಸಿಗಲಿ ಎಂದುಕೊಳ್ಳುವುದು ಮೂರ್ಖತನದ ಪರಮಾವಧಿ. ಪ್ರಯತ್ನ ನಮ್ಮ ಕರ್ತವ್ಯ. ಫಲ ದೈವಾಧೀನ. ದೈವವು ನಮ್ಮ ನಮ್ಮ ಪರಿಶ್ರಮದ ಹಿನ್ನೆಲೆಯಲ್ಲಿ ಫಲವೀಯುತ್ತದೆ. ನಾವು ಮಾಡುವ ಕರ್ಮದಲ್ಲಿ ನಮಗೆ ಅಧಿಕಾರ. ಫಲದಲ್ಲಲ್ಲ. ಇದನ್ನೇ ಭಗವದ್ಗೀತೆಯಲ್ಲಿ "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂದು ಹೇಳಿದ್ದಾರೆ.

ನಾವು ನಡೆಸುವ ಕರ್ಮ, ಅದಕ್ಕೆ ಪೂರಕವಾದ ಪ್ರಯತ್ನ ಇತ್ಯಾದಿಗಳು ಸರಿಯಾಗಿದ್ದರೆ ಇಂದಲ್ಲ ನಾಳೆ ಫಲ ದೊರೆಯುತ್ತದೆ. ಫಲವನ್ನೇ ಗಮನದಲ್ಲಿರಿಸಿ ಕರ್ಮದಲ್ಲಿ ಆಲಸ್ಯವನ್ನೆಂದೂ ತೋರಿಸಬಾರದು. ಪ್ರತಿಯೊಬ್ಬರಿಗೂ ಅವರದೇ ಆದ ಪರಿಧಿಯಲ್ಲಿ ಪ್ರಾಪ್ತಿ ಎಂಬುದಿರುತ್ತದೆ. ಅದು ನಮ್ಮ ಕಾರ್ಯಾವಿಧಾನ, ಜ್ಞಾನ, ಸಿದ್ಧತೆ... ಇತ್ಯಾದಿಗಳನ್ನು ಅವಲಂಬಿಸಿರುತ್ತದೆ. ಅದಕ್ಕನುಗುಣವಾಗಿ ದೈವವು ಫಲಿಸುವಂತೆ ಮಾಡುತ್ತದೆ.

ಸೂರ್ಯ ರೇಖೆಯ ಮೇಲಿನ ಚಿಹ್ನೆಗಳು

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಸೂರ್ಯ ರೇಖೆಯ ಮೇಲಿನ ಚಿಹ್ನೆಗಳ ಕುರಿತಂತೆ ಒಂದಿಷ್ಟು ವಿವರಗಳು.

ಕವಲು ಚಿಹ್ನೆ: ಕವಲು ಎಂದರೆ ಸೂರ್ಯ ರೇಖೆಯು ಎರಡಾಗುವುದು, ಮೂರಾಗುವುದು, ನಾಲ್ಕಾಗುವುದು ಹೀಗೆ. ಅದರಲ್ಲೂ ಮೇಲ್ಮುಖ ಕವಲು ಅಥವಾ ಕೆಳಮುಖ ಕವಲು. ಮೇಲ್ಮುಖವೆಂದರೆ ಉಂಗುರ ಬೆರಳಿನ ಕಡೆಗೆ ರೇಖೆಯು ಮೇಲ್ಮುಖವಾಗಿ ಎರಡು, ಮೂರು ಅಥವಾ ನಾಲ್ಕಾರು ಕವಲುಗಳನ್ನು ಒಡೆಯುತ್ತದೆ. ಹೀಗೆ ಶಕ್ತಿಯ ಹಂಚಿಕೆ ಸಹಾ ಆಗಿರಬಹುದು. ಇದು ಶುಭಫಲವನ್ನೇ ನೀಡುತ್ತದೆ. ಹೀಗೆ ಕವಲೊಡೆದಿರುವುನ್ನು ನೋಡಿ ವರ್ಷ, ಮಿತಿ ಹಾಗೂ ವ್ಯಕ್ತಿಯ ನಡೆನುಡಿ ಇವುಗಳನ್ನೆಲ್ಲಾ ಸೂಕ್ಷ್ಮವಾಗಿ ಅವಲೋಕನ ಮಾಡಿ ಯಶಸ್ಸನ್ನು ನಿರ್ಧರಿಸಲಾಗುತ್ತದೆ.

ಮೇಲ್ಮುಖ ಕವಲು: ಕವಲು ಮೇಲ್ಮುಖವಾಗಿ ಇದ್ದು ಎಷ್ಟು ಕವಲುಗಳು ಒಡೆದಿದೆಯೋ ಅಷ್ಟು ದಿಕ್ಕುಗಳಿಂದ ಹಣ ಬರುತ್ತದೆ. ಕಲೆ, ವ್ಯಾಪಾರ, ಬರವಣಿಗೆ ಹೀಗೆ ಎಲ್ಲವನ್ನೂ ನಿಭಾಯಿಸುವ ತಾಕತ್ತು ನಿಮ್ಮದಾಗುತ್ತದೆ. ಕವಲು ಮೂಡಿದ ವಯಸ್ಸಿನಿಂದಲೂ ನೀವು ಶುಭಗ್ರಾಹಿಗಳು ಆಗಿರುತ್ತೀರಿ. ಜೀವನದಲ್ಲಿ ಮೇಲ್ಮುಖ ಗ್ರಾಫ್ ನಿಮ್ಮದು. ಬಹುಮುಖಿಯಾಗಿಯೂ ಸಲ್ಲುತ್ತೀರಿ.

ಉಂಗುರ ಬೆರಳಿನ ಕಡೆಗೆ ಮೂರು ಕವಲುಗಳು ಒಡೆದು ತ್ರಿಶೂಲದಂತೆ ಕಂಡರೆ, ಅತ್ಯಂತ ಶುಭದಾಯಕ. ಒಂದೆ ಸಮನೆ ಹಲವು ದಿಕ್ಕಿನಿಂದ ಹಣ ಹರಿದು ಬರುತ್ತದೆ. ಕಲೆಯಲ್ಲಿ ಯಶಸ್ಸು, ವ್ಯಾಪಾರದಲ್ಲಿ ಯಶಸ್ಸು, ಗೌರವ ನಿಮ್ಮದಾಗುತ್ತದೆ. ನಿಮ್ಮ ಜೀವನದಲ್ಲಿ ಎಲ್ಲಾ ಕೆಲಸಗಳೂ ಕವಲು ಇರುವವರೆಗೂ ನಿಮ್ಮಂತೆಯೇ ಆಗುತ್ತದೆ.

ಕವಲುಗಳು ಒಂದು ಸೂರ್ಯ ಪರ್ವತದಲ್ಲಿಯೇ ಇದ್ದು, ಇನ್ನೊಂದು ಬುಧ ಪರ್ವತಕ್ಕೆ ಹೋದರೆ ನಿಮ್ಮ ಯಶಸ್ಸು ಸಿನೆಮಾ+ ವ್ಯಾಪಾರ, ಬರವಣಿಗೆ+ ಮಾರ್ಕೇಟಿಂಗ್ ಹೀಗೆ ಸೇರಿಕೊಳ್ಳುತ್ತದೆ. ಕವಲುಗಳು ಒಂದು ಸೂರ್ಯ ಪರ್ವತದಲ್ಲೇ ಇದ್ದು ಇನ್ನೊಂದು ಶನಿ ಪರ್ವತಕ್ಕೆ ಹೋದರೆ ಅಂತಹಾ ವ್ಯಕ್ತಿಯು ಸ್ವಂತ ಪರಿಶ್ರಮದಿಂದ ಹೆಸರನ್ನು ಕೀರ್ತಿಯನ್ನು ಗಳಿಸುತ್ತಾರೆ. ವಿಜ್ಞಾನ, ಸಂಶೋಧನೆಗಳು ಇವರಿಗೆ ಲೀಲಾಜಾಲ. ಸರ್ಕಾರಿ ಹುದ್ದೆಯಲ್ಲಿ ಇದ್ದರೆ ಇವರು ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿ ಹೆಸರು ಮತ್ತು ಪ್ರಶಸ್ತಿಗಳನ್ನು ಪಡೆದುಕೊಳ್ಳುತ್ತಾರೆ.

ಕವಲು ಮಧ್ಯದಲ್ಲಿದ್ದು ಬಳಿಕ ರೇಖೆಯು ತೆಳುವಾದರೆ, ಆಗ ವ್ಯಕ್ತಿಯು ತನ್ನ ಅಲ್ಲಿಯವರೆಗಿನ ಉತ್ತುಂಗದ ಯಶಸ್ಸಿನ ಬಳಿಕ ಆಸಕ್ತಿಯನ್ನು ಕಳೆದುಕೊಳ್ಳುತ್ತಾನೆ. ಅಥವಾ ಆರೋಗ್ಯ ಅಥವಾ ಕೌಟುಂಬಿಕ ಕಾರಣದಿಂದಾಗಿ ತನ್ನ ಕೆಲಸದಿಂದ ಹಿಂದೆ ಸರಿಯುತ್ತಾನೆ. ಅರ್ಥಾತ್ ಕವಲಿನ ಬಳಿಕ ಸೂರ್ಯ ರೇಖೆಯು ಸ್ಪಷ್ಟವಾಗಿ ಮತ್ತು ದಪ್ಪವಾಗಿ ಇದ್ದರೆ ಶುಭ ಫಲವು ದ್ವಿಗುಣವಾಗುತ್ತದೆ. ಒಂದೊಮ್ಮೆ ಅಡ್ಡಗೆರೆ ಅಥವಾ ಗುಣಿಸು ಚಿಹ್ನೆ ಇದ್ದರೆ ಕವಲಿನಿಂದ ಯಾವುದೇ ಲಾಭ ಸಿಗುವುದಿಲ್ಲ.

ಕೆಳಮುಖ ಕವಲು: ಸೂರ್ಯ ರೇಖೆಯು ಮಣಿಕಟ್ಟಿನಿಂದ ಅಥವಾ ಅಂಗೈ ಮಧ್ಯದಿಂದ ಹೀಗೆ ಎಲ್ಲಿಂದಲಾದರೂ ಪ್ರಾರಂಭವಾಗಿರಬಹುದು. ಮಣಿಕಟ್ಟಿನ ದಿಕ್ಕಿಗೆ ಅಂದರೆ ಕೆಳಮುಖವಾಗಿ ಕವಲು ಉಂಟಾದರೆ; ಒಂದು ಎಚ್ಚರಿಕೆಯ ಸಂಕೇತ! ಯಶಸ್ಸು ನಿಮ್ಮ ಬುಡದವರೆಗೆ ಬಂದು ಹೊರಟು ಹೋಗಬಹುದು. ನಿಮ್ಮ ಮುಂದೆ ಎರಡು ದಾರಿಗಳು ಉಂಟಾಗಿ ನಿಮಗೆ ಆಯ್ಕೆ ಮಾಡಿಕೊಳ್ಳಲಾಗದೇ ಗೊಂದಲ ಉಂಟಾಗಬಹುದು. ನೀವು ಪಾಲುದಾರಿಕೆಯಲ್ಲಿ ಮಾಡಿದ ಕೆಲಸವು ಹಾಳಾಗಬಹುದು. ಅಥವಾ ನಿಮಗೆ ಮಾತ್ರ ಮೋಸವಾಗಬಹುದು. ಹಣ ಬಂದಿದ್ದೆಲ್ಲಾ ಸರಿಯಾಗಿ ವಿನಿಯೋಜನೆ ಮಾಡಲಾಗದೇ ಖರ್ಚಾಗಿ ಬಿಡಬಹುದು. ನಿಮ್ಮ ಕೀರ್ತಿ, ಗೌರವಗಳು ಕ್ಷೀಣಿಸಬಹುದು. ಆಗ ನೀವು ಒಂದೇ ಕ್ಷೇತ್ರದ ಮೇಲೆ ಕೇಂದ್ರೀಕರಿಸಬೇಕಾಗುತ್ತದೆ. ಏಕಾಗ್ರತೆಯನ್ನು ಸಾಧಿಸಿ ಅದರಂತೆ ನಡೆದುಕೊಳ್ಳಬೇಕಾಗುತ್ತದೆ. ನೀವು ಸಾಧನೆಯನ್ನು ಹಠ ಮಾಡಿ ಸಾಧಿಸಬೇಕಾಗುತ್ತದೆ. ಸತತ ಧ್ಯಾನದ ಮೂಲಕ, ಯೋಗದ ಮೂಲಕ ಸಾಧನೆಯನ್ನು ಮಾಡುವುದು ಅಗತ್ಯ.

ತ್ರಿಶೂಲದ ಚಿಹ್ನೆ: ಇದೊಂದು ಅಪೂರ್ವವಾದ ಚಿಹ್ನೆ. ಒಂದು ಲಕ್ಷ ಜನರಲ್ಲಿ ಒಬ್ಬರಿಗೆ ಇದು ಇರುವ ಸಾಧ್ಯತೆ ಮಾತ್ರ. ಅದರಲ್ಲೂ ಈ ಚಿಹ್ನೆಯು ಸೂರ್ಯ ಪರ್ವತದ ಮೇಲೆ ಇದ್ದರೆ ಇವರಿಗೆ ಮಹಾರಾಜ ಯೋಗ ಪ್ರಾಪ್ತಿ. ಶೂಲದ ಮೂರು ಸನಿಕೆಗಳು ಮೇಲ್ಮುಖವಾಗಿರುತ್ತವೆ. ಅವುಗಳು ಧನ, ಕೀರ್ತಿ ಮತ್ತು ಅಧಿಕಾರಗಳನ್ನು ಸೂಚಿಸುತ್ತವೆ. ಹಲವು ಕ್ಷೇತ್ರಗಳಲ್ಲಿ ಏಕ ಕಾಲಕ್ಕೆ ಸಾಧನೆ ಮಾಡುವ ಶಕ್ತಿ ಇಂತಹವರಿಗೆ ಇರುತ್ತದೆ. ತ್ರಿಶೂಲವು ಶಿವನ ಆಯುಧ. ಹೀಗಾಗಿ ದೈವಬಲ ಇವರಿಗೆ ಸದಾ ಇರುತ್ತದೆ. ಎಂತಹಾ ದುಷ್ಟ ಶಕ್ತಿಗಳು ಎದುರಾದರೂ ರಕ್ಷಣೆ ಇರುತ್ತದೆ. ಅತೀಂದ್ರಿಯ ಶಕ್ತಿಯು ಇವರಿಗೆ ವಶವಾಗುತ್ತದೆ. ಕಷ್ಟಗಳು ಬರುವುದೇ ಇಲ್ಲ ಎಂದಲ್ಲ, ಬಂದರೂ ಅದನ್ನು ತ್ರಿಶೂಲವೇ ನಾಶ ಮಾಡುತ್ತದೆ.

ಒಂದು ಮುಳ್ಳು ಸೂರ್ಯ ಪರ್ವತ, ಒಂದು ಮುಳ್ಳು ಬುಧ ಪರ್ವತ ಹಾಗೂ ಇನ್ನೊಂದು ಮುಳ್ಳು ಶನಿ ಪರ್ವತದ ಕಡೆ ಇದ್ದರೆ ಅಂತಹಾ ವ್ಯಕ್ತಿಯು ವ್ಯಾಪಾರ+ ವಿದ್ಯೆ+ ಕಲೆಗಳಿಂದ ಹಣ ಗಳಿಸುತ್ತಾರೆ. ಕೀರ್ತಿಯನ್ನು ಪಡೆಯುತ್ತಾರೆ. ಗೌರವವನ್ನು ಗಳಿಸುತ್ತಾರೆ.

ಮೂರೂ ಮುಳ್ಳುಗಳೂ ಸೂರ್ಯ ಪರ್ವತದ ಕಡೆಗೇ ಮುಖ ಮಾಡಿದ್ದರೆ, ಇವರನ್ನು ಹಿಡಿಯಲು ಯಾರಿಂದಲೂ ಸಾಧ್ಯವಿಲ್ಲ. ಕಲೆ, ಸಿನೀಮಾ, ರಾಜಕೀಯ, ಅಧುಕಾರ, ನಾಯಕತ್ವ ಎಲ್ಲವೂ ಇವರದಾಗುತ್ತದೆ. ಅಪಾರ ಜನಮನ್ನಣೆ ಗಳಿಸುತ್ತಾರೆ. ಚಕ್ರವರ್ತಿಯಾಗುತ್ತಾರೆ. ಇವರು ಬದುಕಿದ್ದಾಗ ಹೆಸರು ಮಾಡಿದಂತೆ ಮರಣದ ಬಳಿಕವೂ ಅಜರಾಮರವಾಗಿ ಇರುತ್ತಾರೆ.

ಎರಡು ಮುಳ್ಳುಗಳು ಸೂರ್ಯ ಪರ್ವತದಲ್ಲೂ ಒಂದು ಮಾತ್ರ ಗುರು ಪರ್ವತದ ಕಡೆ ತಿರುಗಿದ್ದರೆ, ಇವರು ಮಹಾನ್ ಗುರುವಾಗುತ್ತಾರೆ. ಧರ್ಮಭೀರುವಾಗುತ್ತಾರೆ. ಧರ್ಮದ ಕುರಿತು ಉಪದೇಶಗಳನ್ನು, ಉಪನ್ಯಾಸಗಳನ್ನು ಅತ್ಯಂತ ನಿಖರವಾಗಿ ನೀಡುವವರಾಗುತ್ತಾರೆ. ಕೀರ್ತಿ, ಹಣ, ಮತ್ತು ಅಧಿಕಾರ ಸಹಾ ಬರುತ್ತದೆ.

ನೆನಪಿಡಿ ತ್ರಿಶೂಲವು ಸ್ಪಷ್ಟವಾಗಿ ಇರಬೇಕು. ಮೂರೂ ಗೆರೆಗಳು ಸಮಾನವಾಗಿ ಅಥವಾ ಮದ್ಯದ ಗೆರೆ ಮಾತ್ರ ಉದ್ದವಾಗಿ ಇರಬೇಕು. ಯಾವುದೇ ಅಡ್ಡ ಗೆರೆಗಳು, ಗುಣಾಕಾರದ, ದ್ವೀಪದ, ಗುಂಡಿಯ, ಬಿಂದುವಿನ ಚಿಹ್ನೆಗಳು ಅದರ ಮೇಲೆ ಇರಬಾರದು. ಮಚ್ಚೆಯಂತೂ ಇರಲೇಬಾರದು. ಇವೆಲ್ಲಾ ಯಶಸ್ಸನ್ನು ಮಾತ್ರವಲ್ಲ ವಿವಾದ, ಅನುಮಾನಗಳನ್ನು ಹುಟ್ಟುಹಾಕುತ್ತವೆ. ತ್ರಿಶೂಲದ ಮೇಲೆ ಮಚ್ಚೆ ಇದ್ದರಂತೂ ಆತ ಅಘೋರಿಯಾಗುತ್ತಾನೆ.

ತ್ರಿಶೂಲ ಚಿಹ್ನೆ ಇದ್ದವರಿಗೆ ಆಗುವ ವೇಗದ ಬೆಳವಣಿಗೆಯ ಕಾರಣ ಅವರು ಅಹಂಕಾರಿಯಾಗಬಹುದು. ಆಗ ಪತನವೂ ಸಹಾ ಅಷ್ಟೇ ವೇಗದಲ್ಲಿ ಆಗುತ್ತದೆ. ಯಾರು ನಮ್ರವಾಗಿ ಇರುತ್ತಾರೋ ಅಂತಹವರು ಮಾತ್ರ ತಮ್ಮ ಸ್ಥಾನವನ್ನು, ಗೌರವವನ್ನು, ಕೀರ್ತಿಯನ್ನು, ಹಣವನ್ನು, ಮಾನವನ್ನು ಉಳಿಸಿಕೊಳ್ಳುತ್ತಾರೆ.

ದ್ವೀಪದ ಚಿಹ್ನೆ: ಸೂರ್ಯ ರೇಖೆಯ ಮೇಲೆ ದ್ವೀಪದ ಚಿಹ್ನೆಯು ಶಕ್ತಿ ಸೋರಿಕೆ ಸಂಕೇತ. ಅದು ಸೂರ್ಯ ರೇಖೆಯ ಮೇಲೆ ಎಲ್ಲಿದೆ ಎನ್ನುವುದರ ಮೇಲೆ ಅವಲಂಬಿತ. ಬುಡದಲ್ಲಿ ಇದ್ದರೆ ಬಾಲ್ಯದಲ್ಲಿ, ಮಧ್ಯದಲ್ಲಿ ಇದ್ದರೆ ಯೌವನ ಮತ್ತು ಮಧ್ಯ ವಯಸ್ಸಿನಲ್ಲಿ, ತುದಿಯಲ್ಲಿ ಇದ್ದರೆ ವೃದ್ಧಾಪ್ಯದಲ್ಲಿ ಸಮಸ್ಯೆಗಳು ಬರುತ್ತವೆ. ದ್ವೀಪ ಇರುವ ಸ್ಥಳದ ಮೇಲೆ ಆಯಾ ವಯಸ್ಸಿನಲ್ಲಿ ಆರ್ಥಿಕ ನಷ್ಟ, ಹಣಕಾಸಿನಲ್ಲಿ ಮೋಸ, ಪಾಲುದಾರಿಕೆಯಲ್ಲಿ ನಂಬಿಕೆ ದ್ರೋಹ, ಮಾಡದೇ ಇರುವ ತಪ್ಪಿಗೆ ಅಪವಾದ, ಸಮಾಜದಲ್ಲಿ ಹೆಸರಿಗೆ ಕಳಂಕ ಇವೆಲ್ಲಾ ಆಗುತ್ತದೆ.

ಎಷ್ಟೇ ಶ್ರಮ ಪಟ್ಟರೂ ಫಲ ಸಿಗುವುದೇ ಇಲ್ಲ, ಪ್ರಮೋಶನ್ ಮತ್ತು ಪ್ರಶಸ್ತಿಗಳು ಕೈತಪ್ಪುತ್ತವೆ, ಯಾವುದೇ ಒಪ್ಪಂದಗಳೂ, ಕೆಲಸ ಕಾರ್ಯಗಳು ಕೈಗೂಡುವುದಿಲ್ಲ. ಕಣ್ಣಿನ ಕಾಯಿಲೆ, ಹೃದಯದ ಕಾಯಿಲೆ ಅಥವ ಮಾನಸಿಕ ಕಾಯಿಲೆಗಳು ಬರಬಹುದು. ರೇಖೆಯ ಬುಡದಲ್ಲಿ ದ್ವೀಪ ಇದ್ದರೆ ವಿದ್ಯೆ ಕುಂಟಿತ. ಯಾವುದೇ ಕೆಲಸಕ್ಕೂ ತಂದೆತಾಯಿಯರ ಸಹಕಾರ ಸಿಗುವುದಿಲ್ಲ. ಮಧ್ಯದಲ್ಲಿ ಇದ್ದರೆ, ವ್ಯಾಪಾರ ಅಥವಾ ಉದ್ಯೋಗದಲ್ಲಿ ಹಿನ್ನಡೆ. ನಷ್ಟ. ಮಾನಹಾನಿ. ಸಂಬಂಧಿಕರೇ ಮೋಸ ಮಾಡುತ್ತಾರೆ. ತುದಿಯಲ್ಲಿ ಸೂರ್ಯ ಪರ್ವತದಲ್ಲಿ ಇದ್ದರಂತೂ ಮುಗಿದೇ ಹೋಯಿತು; ನೀವೇ ಸ್ವಯಾರ್ಜಿತವಾಗಿ ಕಷ್ಟಪಟ್ಟು ಗಳಿಸಿದ ಎಲ್ಲಾ ಆಸ್ತಿಯೂ ಪರಬಾರೆಯಾಗುತ್ತದೆ. ನೀವು ಬೀದಿಗೆ ಬೀಳುತ್ತೀರಿ. ಮಕ್ಕಳೂ, ಬಂಧುಬಾಂಧವರು, ಸ್ನೇಹಿತರು, ಸಮಾಜದಿಂದಲೂ ಬಹಿಷ್ಕೃತರಾಗುತ್ತೀರಿ.

ದ್ವೀಪದ ಬಳಿಕ ರೇಖೆಯು ಸ್ಪಷ್ಟವಾಗಿ ಮತ್ತು ದಟ್ಟವಾಗಿ ಇದ್ದರೆ ಮಾತ್ರ ಕಳೆದುಹೋದ ಮಾನ, ಆಸ್ತಿ ಎಲ್ಲವೂ ಮರಳಿ ಲಭ್ಯವಾಗುತ್ತದೆ. ರೇಖೆ ಮುಂದುವರೆಯದೇ ಹೋದಲ್ಲಿ ನೀವು ಆ ಪ್ರದೇಶವನ್ನೇ ಬಿಟ್ಟು ಹೋಗಬೇಕಾಗುತ್ತದೆ. ಅಥವಾ ವಿಧಿಯು ನಿಮ್ಮನ್ನು ಊರು ಬಿಡುವಂತೆ ಮಾಡುತ್ತದೆ. ದ್ವೀಪವನ್ನು ಸುತ್ತುವರೆದು ಚೌಕವಿದ್ದರೆ ದೇವರು ನಿಮ್ಮ ಕಷ್ಟಗಳನ್ನು ತಪ್ಪಿಸುತ್ತಾನೆ. ತ್ರಿಕೋನವಿದ್ದರೆ ನೀವೇ ನಿಮ್ಮ ಬುದ್ಧಿಬಲದಿಂದ ಕಷ್ಟಗಳಿಂದ ತಪ್ಪಿಸಿಕೊಳ್ಳುತ್ತೀರಿ.

ದಿನಾಲೂ ಸೂರ್ಯನ ಆರಾಧನೆ ಮಾಡಿ, ಅರ್ಘ್ಯ ಕೊಡಿ. ಸೂರ್ಯ ನಮಸ್ಕಾರ ಮಾಡಿ. ಆದಿತ್ಯ ಹೃದಯ ಪಾರಾಯಣ ಮಾಡಿ. ತಂದೆಯ ಸೇವೆ ಮಾಡಿ. ಕೆಂಪು ಅಥವಾ ಕಿತ್ತಲೆ ಬಣ್ಣದ ಬಟ್ಟೆ ದಾನ ಮಾಡಿ. ಭಾನುವಾರ ಖಾಯಮ್ಮಾಗಿ ಉಪವಾಸ ಮಾಡಿ. ಮಣಿಪುರ ಚಕ್ರದ ಸಮತೋಲನ ಮತ್ತು ಧ್ಯಾನದಿಂದ ನಿಯಂತ್ರಣ ಮಾಡಬಹುದು. ಯಾವುದೇ ರೀತಿಯಲ್ಲಿ ಸಾಲ ಮಾಡಬೇಡಿ ಮತ್ತು ಕೊಡಬೇಡಿ. ಪಾಲುದಾರಿಕೆಯಲ್ಲಿ ವ್ಯವಹಾರ ಮಾಡಬೇಡಿ. ದೊಡ್ಡ ರಿಸ್ಕ್‌ಗಳನ್ನು ತೆಗೆದುಕೊಳ್ಳಬೇಡಿ. ದ್ವೀಪವು ದೊಡ್ಡದಾಗಿದ್ದರೆ, ಕಂಟಕ ಅಥವಾ ಜೈಲುವಾಸ ಖಚಿತ. ಸಣ್ಣ ಸಣ್ಣ ದ್ವೀಪಗಳಿದ್ದರೆ ಸಣ್ಣ ಕಷ್ಟಗಳು, ಕಿರಿಕಿರಿಗಳು ಇದ್ದೇ ಇರುತ್ತವೆ.

ಸಂಪ್ರದಾಯ-ಆಚರಣೆ-ನಂಬಿಕೆ-ಮೂಢನಂಬಿಕೆ

ಒಳನೋಟ
• ಹೆ.ಬಾ. ಮಲ್ಯ



ಸನಾತನ ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಋಷಿ-ಮುನಿಗಳು ತಪಸ್ಸಿನ ಮೂಲಕ ಸೃಷ್ಟಿಯ ಅನೇಕ ರಹಸ್ಯಗಳನ್ನು ಕಂಡುಹಿಡಿದು ವೇದ, ಉಪನಿಷತ್ತು, ದರ್ಶನಗಳು, ಧರ್ಮಶಾಸ್ತ್ರಗಳನ್ನು ಬರೆದಿಟ್ಟು ಹೋಗಿದ್ದಾರೆ. ಧರ್ಮಶಾಸ್ತ್ರಗಳು ಅಥವಾ ಸ್ಮೃತಿಗಳು, ಮಾನವನು ಹೇಗೆ ಆದರ್ಶ ಜೀವನ ನಡೆಸಬೇಕು ಎಂದು ತಿಳಿಸುತ್ತವೆ. ಮಾತ್ರವಲ್ಲ ಅದರಲ್ಲಿ ಹೇಳಲಾದ ಆಚರಣೆಗಳು ಮಾನವ ಜೀವನದ ಅಂತಿಮ ಲಕ್ಷ್ಯವಾದ ಮೋಕ್ಷ ಸಾಧನೆಗೆ ಪೂರಕವಾಗಿವೆ.

ಮಾನವ ಅನುಕರಣ ಪ್ರಿಯ. ಮಗುವಾಗಿರುವಾಗ ತನ್ನ ತಾಯಿ, ತಂದೆ ಹಾಗೂ ಕುಟುಂಬದ ಹಿರಿಯರು ಹೇಳಿಕೊಟ್ಟಂತೆ ಮಾತನಾಡಲು, ಅವರು ಮಾಡಿದಂತೆ ಅನುಕರಿಸಲು ಕಲಿಯುತ್ತಾನೆ. ಮಕ್ಕಳು, ತಂದೆ -ತಾಯಿ ಹೇಳಿದಂತೆ ಮಾಡುವುದಿಲ್ಲ, ಅವರು ಮಾಡಿದಂತೆ ಮಾಡುತ್ತಾರೆ. ಮಕ್ಕಳ ಹಿಂದಿನ ಅನೇಕ ಜನ್ಮಗಳ ಜ್ಞಾನ ಅವರ ಸುಪ್ತ ಮನಸ್ಸಿನಲ್ಲಿ ಅಡಗಿರುತ್ತದೆ, ನೆನಪಿರುವುದಿಲ್ಲ. ಈ ಜನ್ಮದಲ್ಲಿ ಎಲ್ಲವನ್ನೂ ಹೊಸತಾಗಿ ಕಲಿಯಬೇಕಾಗುತ್ತದೆ. ಮಕ್ಕಳು ಬೆಳೆದಂತೆ ಶಾಲೆಯ ವಾತಾವರಣ, ಅಲ್ಲಿ ಪಾಠ ಮಾಡುವ ಶಿಕ್ಷಕರು, ಸಹಪಾಠಿಗಳು, ಸುತ್ತಮುತ್ತಲ ಸಮಾಜ, ಪರಿಸರಗಳನ್ನು ನೋಡಿ ಕಲಿಯ ತೊಡಗುತ್ತಾರೆ. ಯುವಾವಸ್ಥೆಯ ವರೆಗೆ ಅವರಿಗೆ ಸ್ವಂತ ನಿರ್ಣಯ ತೆಗೆದುಕೊಳ್ಳುವ ಬುದ್ಧಿ, ವಿವೇಚನಾ ಶಕ್ತಿಗಳಿರುವುದಿಲ್ಲ. ಹೆಚ್ಚಿನವರು ವಯಸ್ಸು ಬೆಳೆದ ಮೇಲೂ ಆಳವಾಗಿ ಚಿಂತಿಸಿ ನಿರ್ಣಯ ತೆಗೆದುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಕಣ್ಣು ಮುಚ್ಚಿಕೊಂಡು ಇತರರನ್ನು ಅನುಕರಿಸುತ್ತಾರೆ. ಬುದ್ಧಿಶಕ್ತಿ, ವಿವೇಚನಾ ಶಕ್ತಿಯನ್ನು ಕಿಂಚಿತ್ತೂ ಉಪಯೋಗಿಸದೆ ಮಾಡುವ ಅನುಕರಣೆ ಅಂತಿಮವಾಗಿ ಮೂಢನಂಬಿಕೆಗೆ ದಾರಿ ಮಾಡಿಕೊಡುತ್ತದೆ.

ಮೂಢನಂಬಿಕೆ ಹೇಗೆ ಬೆಳೆಯುತ್ತದೆ ಎಂಬುದಕ್ಕೆ ಒಂದು ಸುಂದರ ಉದಾಹರಣೆಯ ಸುಭಾಷಿತ ಹೀಗಿದೆ:-

ಗತಾನುಗತಿಕೋ ಲೋಕಃ ನಾ ಲೋಕಃ ಪಾರಮಾರ್ಥಿಕಃ।
ಗಂಗಾ ಸೈಕತಲಿಂಗೇನ ನಷ್ಟಂ ಮೇ ತಾಮ್ರ ಭಾಜನಮ್॥

ಇದರ ಭಾವಾರ್ಥ ಹೀಗಿದೆ: "ಜನರು ಅನುಕರಣೆ ಮಾಡುತ್ತಾರೆಯೇ ಹೊರತು ಅದರ ಹಿಂದೆ ಪಾರಮಾರ್ಥಿಕದ ಚಿಂತನೆ ಇರುವುದಿಲ್ಲ. ಅದು ಅವರಿಗೆ ಅಗತ್ಯವಿಲ್ಲ. ಇಂಥ ಮೂಢರ ಅಂಧ ಅನುಕರಣೆಯ ಕಾರಣ ಗಂಗಾ ತಟದ ಮರಳಿನಲ್ಲಿ ನಾನು ನನ್ನ ತಾಮ್ರದ ಚೊಂಬನ್ನು ಕಳೆದುಕೊಂಡೆ".

ಈ ಸುಭಾಷಿತದ ಹಿಂದೆ ಬಹಳ ರೋಚಕವಾದ ಕಥೆಯೊಂದಿದೆ. ಓರ್ವ ಯಾತ್ರಿಕ ಎಲ್ಲರಿಗಿಂತ ಮುಂಚೆ ಸ್ನಾನ ಪೂರೈಸಲು ನಸುಕಿನಲ್ಲೇ ಗಂಗಾ ತಟಕ್ಕೆ ಹೋದ. ಆತನ ಬಳಿ ಹಣ ತುಂಬಿದ ತಾಮ್ರದ ಚೊಂಬೊಂದಿತ್ತು. ಚತುರನಾದ ಆತ ದಂಡದಲ್ಲಿ ಉಸುಕಿನ ಮೇಲೆ ಚೊಂಬನ್ನಿಟ್ಟು ಅದರ ಮೇಲೆ ಮರುಳನ್ನು ಪೇರಿಸಿ ಸುಂದರವಾದ ಉಸುಕಿನ ಲಿಂಗವನ್ನೊಂದನ್ನು ಮಾಡಿ ಸ್ನಾನಕ್ಕಿಳಿದ. ಸ್ನಾನ ಮುಗಿಸಿ ದಡಕ್ಕೆ ಬಂದು ನೋಡುವುದೇನು? ಆತನ ಎದೆಯೇ ಒಡೆದು ಹೋದಂತೆನಿಸಿತು. ನೂರಾರು ಉಸುಕಿನ ಲಿಂಗಗಳು. ಅವನ ನಂತರ ಬಂದ ಯಾತ್ರಿಕರು ಆತನ ಉಸುಕಿನ ಲಿಂಗವನ್ನು ಕಂಡು, ಅದು ಅಲ್ಲಿನ ಸಂಪ್ರದಾಯವಿರಬೇಕೆಂದು ಭಾವಿಸಿ ಪ್ರತಿಯೊಬ್ಬರೂ ಒಂದೊಂದು ಲಿಂಗವನ್ನು ರಚಿಸಿಟ್ಟು ಸ್ನಾಕ್ಕಿಳಿಯುತ್ತಿದ್ದರು. ನೂರಾರು ಮರಳಿನ ಲಿಂಗಗಳ ರಾಶಿಯಲ್ಲಿ ಆ ಯಾತ್ರಿಕ ತನ್ನ ಚೊಂಬು ಇರುವ ಲಿಂಗವನ್ನು ಕಂಡುಹಿಡಿಯಲಾರದೆ ಹೋದ. ತನ್ನ ಹಣ ತುಂಬಿದ ತಾಮ್ರದ ಚೊಂಬು ಹಾಗೂ ಕಾರಣ ತಿಳಿಯದೆ ಇತರರನ್ನು ಕಣ್ಣು ಮುಚ್ಚಿ ಅನುಸರಿಸುವ ಮೂಢ ಜನರ ಬಗ್ಗೆ ಆಕ್ರೋಶಗೊಂಡು ಆತ ಮೇಲಿನ ಸುಭಾಷಿತದಲ್ಲಿನ ಮಾತನ್ನು ಹೇಳಿದ. ಆದ್ದರಿಂದ ನಮ್ಮ ಆಚಾರ -ವಿಚಾರಗಳಲ್ಲಿ ಪರಮಾತ್ಮನು ಕರುಣಿಸಿರುವ ಬುದ್ಧಿಶಕ್ತಿ ಹಾಗೂ ವಿವೇಚನಾ ಶಕ್ತಿಯನ್ನು ಉಪಯೋಗಿಸಬೇಕು. ಪ್ರತಿಯೊಂದು ನಡವಳಿಕೆಯ ಕಾರಣ, ಹಿನ್ನೆಲೆಗಳನ್ನು ಅರಿತುಕೊಳ್ಳಬೇಕು. ಇದನ್ನೇ ಸ್ವಂತಿಕೆ ಎನ್ನುತ್ತಾರೆ.

ಇಂಥದ್ದೇ ಇನ್ನೊಂದು ಘಟನೆಯು ನಮ್ಮ ಸಮಾಜದಲ್ಲಿ ಅಂಧ ಶ್ರದ್ಧೆಗಳು ಹೇಗೆ ನಮಗೆ ಗೊತ್ತಿಲ್ಲದೆಯೇ ಹುಟ್ಟಿ ಬೆಳೆದುಕೊಂಡು ಬಂದು ಸಂಪ್ರದಾಯದ ಮುದ್ರೆಯನ್ನೊತ್ತಿಸಿಕೊಳ್ಳುತ್ತವೆ ಎಂಬುದರ ಬಗ್ಗೆ ಬೆಳಕು ಚೆಲ್ಲುತ್ತದೆ. ಹಿಂದೆ ಓರ್ವ ಗೃಹಸ್ಥ ನಿತ್ಯ ಸ್ನಾನದ ನಂತರ ವಿಧಿವತ್ತಾಗಿ ದೇವರ ಪೂಜೆ ಮಾಡುತ್ತಿದ್ದ. ತನ್ನ ಮಗುವೂ ಅದನ್ನು ನೋಡಿ ಕಲಿಯಲಿ. ತನ್ನ ಕಾಲಾನಂತರ ಪೂಜೆ ಮುಂದುವರಿಸಿಕೊಂಡು ಹೋಗಲಿ ಎಂಬ ಆಶಯದಿಂದ ಹತ್ತಿರ ಕೂರಿಸಿಕೊಳ್ಳುತ್ತಿದ್ದ. ಬಾಲಕ ಪೂಜಾ ವಿಧಿಯನ್ನು ನೋಡುತ್ತಿದ್ದ. ಆತನ ಮನೆಯಲ್ಲಿ ಒಂದು ಬೆಕ್ಕು ಇತ್ತು. ಅದು ಪೂಜೆಯ ವೇಳೆ ಯಜಮಾನನ ಹತ್ತಿರ ಬಂದು ತೊಂದರೆ ಕೊಡುತ್ತಿದ್ದುದರಿಂದ ಅದನ್ನು ಪಕ್ಕದಲ್ಲಿಟ್ಟುಕೊಂಡು ಒಂದು ಬುಟ್ಟಿಯನ್ನು ಅದರ ಮೇಲೆ ಕವುಚಿ ಹಾಕಿ ಪೂಜೆ ಮಾಡುತ್ತಿದ್ದ. ಆ ಬಾಲಕ ಇದನ್ನು ನೋಡುತ್ತಿದ್ದ. ಬಹಳ ವರ್ಷಗಳ ನಂತರ ಮಗ ಬೆಳೆದು ದೊಡ್ಡವನಾದ. ಆಕಸ್ಮಾತ್ ತಂದೆ ತೀರಿಕೊಂಡ. ನಿತ್ಯ ದೇವರ ಪೂಜೆಯ ಜವಾಬ್ದಾರಿ ಮಗನ ಹೆಗಲ ಮೇಲೆ ಬಿತ್ತು. ಆ ಬೆಕ್ಕು ಸತ್ತು ಹೋಗಿತ್ತು- ಆದರೆ ವಯಸ್ಸಿಗೆ ಬಂದ ಮಗ ಕಷ್ಟಪಟ್ಟು ಹುಡುಕಾಡಿ ಎಲ್ಲಿಂದಲೋ ಒಂದು ಬೆಕ್ಕನ್ನು ತಂದು ಬುಟ್ಟಿ ಒಳಗೆ ಬಂಧಿಸಿ ಇಟ್ಟು ಪೂಜೆ ಮಾಡಲಾರಂಭಿಸಿದ. ಒಮ್ಮೆ ಆ ಮನೆಗೆ ಬಂದ ಆಗಂತುಕ ಈ ವಿಚಿತ್ರ ನಡವಳಿಕೆಯನ್ನು ನೋಡಿ ಆ ಬಗ್ಗೆ ಮಗನನ್ನು ವಿಚಾರಿಸಿದಾಗ ಆತ "ಅದು ಈ ಮನೆಯ ಸಂಪ್ರದಾಯ, ನಮ್ಮ ತಂದೆ ಇದ್ದಾಗ ಹೀಗೆ ಮಾಡುತ್ತಿದ್ದರು" ಎಂದ. ಆಶ್ಚರ್ಯಗೊಂಡ ಅತಿಥಿ ಆತನ ತಾಯಿಯನ್ನು ಕೇಳಿದಾಗ ಆಕೆ ನಕ್ಕು ತಂದೆ ಯಾವ ಉದ್ದೇಶದಿಂದ ಬೆಕ್ಕನ್ನು ಮುಚ್ಚಿಡುತ್ತಿದ್ದರು ಎಂದು ಹೇಳಿದರು. ತಂದೆ ಸಾಯುವ ಮೊದಲು ಮಗನಿಗೆ ಅದರ ಕಾರಣ ತಿಳಿಸಿರಲಿಲ್ಲ. ಮಾತ್ರವಲ್ಲ ತಾನು ಅದರ ನಿಜವಾದ ಕಾರಣವನ್ನು ತಿಳಿಸಿದಾಗಲೂ ಆತ ಅದಕ್ಕೆ ಒಪ್ಪಲು ಸಿದ್ಧನಿರಲಿಲ್ಲ. ಹೀಗೆ ಮಗ ಕಾರಣ ತಿಳಿಯದೆ ಅದನ್ನು ಒಂದು ಸಂಪ್ರದಾಯವನ್ನಾಗಿ ಮಾಡಿಬಿಟ್ಟ. ಇಂದಿಗೂ ಸಮಾಜದಲ್ಲಿ ಅರ್ಥವರಿಯದೇ ಅನೇಕ ಅರ್ಥಶೂನ್ಯ ರೂಢಿಗಳನ್ನು ಆಚರಿಸಿಕೊಂಡು ಬರುತ್ತಿರುವುದು ಕಂಡು ಬರುತ್ತಿದೆ. ಆದ್ದರಿಂದಲೇ "ಅಜ್ಜ ನೆಟ್ಟ ಗೋಳಿ ಮರಕ್ಕೇ ನೇಣು ಹಾಕಿಕೊಳ್ಳುವುದು" ಎಂಬ ಗಾದೆ ಮಾತು ಬಂದಿರುವುದು. ಹಿರಿಯರು ಆಚರಿಸಿದ್ದನ್ನು ಅರ್ಥ ತಿಳಿದು ಮುಂದುವರಿಸಬೇಕು. ಹಿರಿಯರ ಬಳಿ ಕಾರಣ ಕೇಳಬೇಕು. ಅರ್ಥ ಶೂನ್ಯ ಎಂದು ಕಂಡು ಬಂದರೆ ಅದರ ಆಚರಣೆಯನ್ನು ತ್ಯಜಿಸಬೇಕು. ಇತರರಿಗೆ, ಸಮಾಜಕ್ಕೆ ಹಾನಿ ಇಲ್ಲವೆಂದಾದರೆ ಅಂಥ ನಂಬಿಕೆಗಳನ್ನು, ಆಚರಣೆಗಳನ್ನು ಆಚರಿಸಿಕೊಂಡು ಹೋಗುವುದು ತಪ್ಪಲ್ಲ. ನಂಬಿಕೆ, ಆಚರಣೆಗಳಿಂದ ಒಂದು ಸಮಾಜದ ಅಸ್ಮಿತೆ, ಸಂಸ್ಕೃತಿ ಉಳಿದುಕೊಂಡು ಬರುತ್ತದೆ.

ಕೆಲವೊಂದು ಪರಿಸ್ಥಿತಿಗಳಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಗೊತ್ತಾಗದೆ ಇರುವ ಸಂದರ್ಭಗಳು ಅನೇಕ ಬಾರಿ ಎದುರಾಗುತ್ತವೆ. ಅಂಥ ಸಂದರ್ಭಗಳಲ್ಲಿ ಅಧ್ಯಯನ ಮಾಡಿದ, ಅನುಭವಿಗಳೂ ಜ್ಞಾನಿಗಳೂ ಆದ ಹಿರಿಯರಿಂದ ಕೇಳಿ, ಅವರು ಹೇಗೆ ಹೇಳುತ್ತಾರೋ ಹಾಗೆ ನಡೆದುಕೊಳ್ಳುವುದು ಶ್ರೇಯಸ್ಕರ ಎಂದು ಶಾಸ್ತ್ರಗಳು ಹೇಳುತ್ತವೆ.

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ ।
ಸಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥

ಶ್ರೇಷ್ಠ ವ್ಯಕ್ತಿಗಳನ್ನು ಇತರ ಜನರು ಅನುಸರಿಸುತ್ತಾರೆ. ಅವರು ಯಾವುದನ್ನು ಪ್ರಮಾಣವೆಂದು ಹೇಳುತ್ತಾರೋ ಅದನ್ನೇ ಇತರರು ನಂಬಿ ಅನುಸರಿಸುತ್ತಾರೆ ಎಂದು ಈ ಶ್ಲೋಕದ ಅರ್ಥ. ಒಂದೋ ಸ್ವಂತ ಬುದ್ಧಿ ಇರಬೇಕು, ಇಲ್ಲವೇ ಇತರರ, ದೊಡ್ಡವರ, ಅನುಭವಿಗಳ, ಜ್ಞಾನಿಗಳ ಮಾತನ್ನು ಕೇಳಬೇಕು, ಅನುಸರಿಸಬೇಕು. ಈ ಎರಡನ್ನೂ ಮಾಡದವರು ನಷ್ಟಕ್ಕೊಳಗಾಗುತ್ತಾರೆ ಎಂದು ಕನ್ನಡದಲ್ಲಿ ಒಂದು ನಾಣ್ಣುಡಿ ಇದೆ. ಇದೆಲ್ಲದರ ತಾತ್ಪರ್ಯವೆಂದರೆ ನಂಬಿಕೆ, ಆಚರಣೆ ತಪ್ಪಲ್ಲ. ಆದರೆ ಅರ್ಥವರಿತು ಆಚರಿಸುವುದರಿಂದ ಅದು ವೈಯಕ್ತಿಕವಾಗಿ ತನಗೂ, ತನ್ನ ಕುಟುಂಬಕ್ಕೂ ಹಾಗೂ ಸಮಾಜದ ಬೆಳವಣಿಗೆಗೂ ಲಾಭಕರವಾಗುತ್ತದೆ.

ಪ್ರಶ್ನಿಸುವುದು ತಪ್ಪಲ್ಲ. ನಮ್ಮಲ್ಲಿ ತರ್ಕ ಶಾಸ್ತ್ರಕ್ಕೆ ಬಹಳ ಮಹತ್ವ ನೀಡಲಾಗಿದೆ. ಅಭಿಪ್ರಾಯ ಭೇದಗಳಿರುವುದು ಸ್ವಾಭಾವಿಕ. ತನ್ನ ನಂಬಿಕೆಯನ್ನು, ಅಭಿಪ್ರಾಯವನ್ನು ಬಲವಾಗಿಟ್ಟುಕೊಂಡು ಇತರರ ಅಭಿಪ್ರಾಯಗಳನ್ನು ಗೌರವಿಸುವುದು ಸಭ್ಯತೆಯ ಲಕ್ಷಣ. ಇದನ್ನೇ ಸಹಿಷ್ಣುತೆ ಎನ್ನುವುದು. ಸ್ವಾಮಿ ವಿವೇಕಾನಂದರು ಹಿಂದು ಸಮಾಜದಲ್ಲಿನ ಕೆಟ್ಟ ಆಚರಣೆಗಳ ಬಗ್ಗೆ, ಮೂಢನಂಬಿಕೆಗಳ ಬಗ್ಗೆ ನೇರವಾಗಿ ಹೇಳಿದ್ದಾರೆ. ಸರಿ ತಪ್ಪುಗಳ ಬಗ್ಗೆ ವಿವರಣೆಗಳನ್ನು ನೀಡಿದ್ದಾರೆ. ಪ್ರತಿಯೊಬರೂ ಅವರ ಪ್ರವಚನಗಳನ್ನು ಓದಬೇಕು.

ಹಾಗಂತ ಕುತರ್ಕ ಸಲ್ಲದು. ಹಿಂದೆ ಲೋಕಾಯತನ ಎಂಬ ಗುಂಪು ಇತ್ತು. ಇವರು ನಾಸ್ತಿಕರು. ವೇದವನ್ನೊಪ್ಪದವರು. ಚಾರ್ವಾಕನೆಂಬ ನಾಸ್ತಿಕನಿದ್ದ. ಆತನ ಬೋಧನೆ ಹೀಗಿರುತ್ತಿತ್ತು:

ಯಾವಜ್ಜೀವಂ ಸುಖಂ ಜೀವೇತ್ ಋಣಂ ಕೃತ್ವಾ ಘೃತಂ ಪಿಬೇತ್।
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂಕುತಃ॥

ಜೀವನದಲ್ಲಿ ಹೇಗಾದರೂ ಮಾಡಿ ಸುಖ ಪಡಬೇಕು. ಸಾಲ ಮಾಡಿ ಯಾದರೂ ತುಪ್ಪದಲ್ಲೇ ಊಟ ಮಾಡಬೇಕು. ಪಾಪ- ಪುಣ್ಯ ಸುಳ್ಳು. ಪುನರ್ಜನ್ಮ ಎಂಬುದಿಲ್ಲ. ಈ ಜೀವನದಲ್ಲೇ ಸುಖ ಪಡಬೇಕು. ಸತ್ತ ಮೇಲೆ ಬೂದಿಯಾಗುವ ಈ ದೇಹಕ್ಕೆ ಪುನರ್ಜನ್ಮ ಎಲ್ಲಿಯದು? ಎಂದು ಈತನ ಬೋಧನೆ. ಆದರೆ ಇದು ಕುತರ್ಕವಲ್ಲದೆ ಇನ್ನೇನೂ ಅಲ್ಲ. ಹಾಗಾಗಿ ಆತನಿಗೆ ಋಷಿಯ ಸ್ಥಾನಮಾನ ಕೊಟ್ಟಿದ್ದರೂ ಇಂದು ಯಾರಿಗೂ ಆತನ ನೆನಪಿಲ್ಲ. ಏಕೆಂದರೆ ಆತನ ಬೋಧನೆ ಜೀವನ ಸ್ನೇಹಿಯಲ್ಲ. ನಂಬಿಕೆ, ಆಚರಣೆಗಳು ಮುಂದುವರೆಯಲಿ, ಆದರೆ ಅರ್ಥವರಿತು ಆಚರಿಸಬೇಕು. ಮೂಢನಂಬಿಕೆಗಳನ್ನು ಮುಲಾಜಿಲ್ಲದೆ ತ್ಯಜಿಸಬೇಕು.

ಒಪೆಕ್‌ನಿಂದ ಹೊರಬಂದ ಯುಎಇ: ಭಾರತಕ್ಕೆ ಲಾಭ!

▸ ದಿನೇಶ್ ನಾಯಕ್

ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಹಠಾತ್ತನೆ ಪೆಟ್ರೋಲಿಯಂ ರಫ್ತು ದೇಶಗಳ ಒಕ್ಕೂಟ(ಒಪೆಕ್)ದಿಂದ ಹೊರಬರಲು ನಿರ್ಧರಿಸಿರುವುದು ಜಾಗತಿಕವಾಗಿ ಸಂಚಲನ ಸೃಷ್ಟಿಸಿದೆ. ಮೇ 1ರಿಂದ ತಾನು ಅಧಿಕೃತವಾಗಿ ಒಪೆಕ್‌ನಿಂದ ಹೊರಬರುವುದಾಗಿ ಯುಎಇ ಘೋಷಿಸಿದೆ. ಇರಾನ್ ಸಮರದ ಮಧ್ಯೆಯೇ ಯುಎಇ ಈ ಘೋಷಣೆ ಮಾಡಿರುವುದು ಜಾಗತಿಕ ತೈಲ ವ್ಯಾಪಾರದ ಮೇಲೆ ಭಾರೀ ದೊಡ್ಡ ಪರಿಣಾಮ ಬೀರಲಿದೆ. ಭಾರತದ ಪಾಲಿಗಂತೂ ಇದೊಂದು ವರದಾನವಾಗಲಿದೆ. ಯುಎಇ ನಿರ್ಧಾರದಿಂದ ಜಾಗತಿಕ ತೈಲ ಬೆಲೆಯಲ್ಲಿ ಇಳಿಕೆಯಾಗುವ ಹಾಗೂ ಉತ್ಪಾದನೆಯಲ್ಲಿ ಹೆಚ್ಚಳವಾಗಿ ನಿರೀಕ್ಷೆಯನ್ನು ಹೊಂದಲಾಗಿದೆ.

ಒಪೆಕ್ ಎಂಬುದು 1960ರಲ್ಲಿ ಸ್ಥಾಪಿಸಲ್ಪಟ್ಟ ತೈಲ ರಫ್ತುದಾರ ರಾಷ್ಟ್ರಗಳ ಒಕ್ಕೂಟ. ಮೊದಲಿಗೆ ಇರಾನ್, ಕುವೈಟ್, ಇರಾಕ್, ಸೌದಿ ಆರೇಬಿಯಾ ಮತ್ತು ವೆನಿಜುವೆಲಾ ಈ ಒಕ್ಕೂಟದಲ್ಲಿದ್ದರೆ ಬಳಿಕ ಅದು ವಿಸ್ತರಣೆಗೊಂಡಿತು. ಯುಎಇ 1967ರಲ್ಲಿ ಅದನ್ನು ಸೇರಿತ್ತು.

ಮೊದಲೆಲ್ಲಾ ಜಾಗತಿಕ ತೈಲ ಬೆಲೆಯನ್ನು ಪಾಶ್ಚಿಮಾತ್ಯ ಬಹುರಾಷ್ಟ್ರೀಯ ತೈಲ ಕಂಪೆನಿಗಳು ನಿಯಂತ್ರಿಸುತ್ತಿದ್ದವು. ಇದರಿಂದ ಗಲ್ಫ್ ರಾಷ್ಟ್ರಗಳಿಗೆ ನಷ್ಟವಾಗುತ್ತಿತ್ತು. ಇದನ್ನು ತಡೆಯಲು ಒಪೆಕ್ ರೂಪುಗೊಂಡಿತು. ಪ್ರತಿದಿನ ಎಷ್ಟು ಪ್ರಮಾಣದ ತೈಲವನ್ನು ಮಾತ್ರ ಹೊರತೆಗೆಯಬೇಕು ಎಂಬುದನ್ನು ಒಪೆಕ್ ನಿರ್ಧರಿಸುತ್ತದೆ. ಅದೇರೀತಿ ಜಾಗತಿಕ ಮಾರುಕಟ್ಟೆ ಬೆಲೆಯನ್ನೂ ಅದು ನಿಯಂತ್ರಿಸುತ್ತದೆ. ತೈಲ ಬೆಲೆ ಇಳಿಯುವ ಸಂಕೇತ ತೋರಿದರೆ ಕೂಡಲೇ ತೈಲ ಹೊರತೆಗೆಯುವ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಒಪೆಕ್‌ನ ಆದೇಶವನ್ನು ಮೀರಿ ಯಾವುದೇ ದೇಶವು ತನ್ನಿಷ್ಟ ಬಂದಂತೆ ತೈಲವನ್ನು ಹೊರತೆಗೆಯುವಂತಿಲ್ಲ.

ಇದೀಗ ಯುಎಇ ಒಪೆಕ್‌ನಿಂದ ಹೊರಬಂದಿರುವುದರಿಂದ ತನಗಿಷ್ಟ ಬಂದಷ್ಟು ತೈಲವನ್ನು ಹೊರತೆಗೆದು ಮಾರಬಹುದು. ಇದರಿಂದ ಜಾಗತಿಕ ತೈಲ ಪೂರೈಕೆ ಹೆಚ್ಚಾಗಿ ತೈಲದ ಬೆಲೆ ಕಡಿಮೆಯಾಗುವ ಸಾಧ್ಯತೆಗಳಿವೆ.

ಭಾರತಕ್ಕೆ ಲಾಭ

ಯುಎಇ ನಿರ್ಧಾರವು ಭಾರತಕ್ಕೆ ಒಳಿತುಂಟು ಮಾಡಲಿದೆ. ಅದಕ್ಕೆ ಕಾರಣ ಭಾರತವು ಯುಎಇ ಜತೆಗೆ ನಿಕಟ ಸಂಬಂಧ ಹೊಂದಿರುವುದು. ಎರಡನೆಯದಾಗಿ, ಯುಎಇಯಿಂದ ತೈಲವನ್ನು ಆಮದು ಮಾಡಿಕೊಳ್ಳಲು ಹೊರ್ಮುಜ್ ಜಲಸಂಧಿಯನ್ನು ಅವಲಂಬಿಸುವ ಅಗತ್ಯವಿಲ್ಲದಿರುವುದರಿಂದ ಭಾರತಕ್ಕೆ ಪೆಟ್ರೋಲಿಯಂ ಉತ್ಪನ್ನ ತರಿಸಿಕೊಳ್ಳಲು ಸುಲಭಸಾಧ್ಯವಾಗಲಿದೆ.



ಭಾರತ ಮತ್ತು ಯುಎಇ ನಡುವಿನ ಅಂತರ ಕೂಡಾ ಕಡಿಮೆಯಾಗಿರುವುದು ಸಾಗಣಾ ವೆಚ್ಚ ಮತ್ತು ಸಮಯದ ಉಳಿತಾಯಕ್ಕೂ ಕಾರಣವಾಗಲಿದೆ.

ಯುಎಇ ನಿರ್ಧಾರಕ್ಕೆ ಕಾರಣ

ಸೌದಿ ಅರೇಬಿಯಾದೊಂದಿಗೆ ಹೊಂದಿರುವ ವಿರಸವೇ ಯುಎಇ ನಿರ್ಧಾರಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಒಪೆಕ್‌ನ ಸ್ಥಾಪಕ ಸದಸ್ಯನಾದ ಸೌದಿ ಅರೇಬಿಯಾ ಜತೆ ಯುಎಇಗೆ ಕಳೆದ ಕೆಲ ವರ್ಷಗಳಿಂದ ವಿರಸ ಹೆಚ್ಚುತ್ತಲೇ ಇದೆ. ಹಲವಾರು ವಿಚಾರಗಳಲ್ಲಿ ಇವೆರಡೂ ದೇಶಗಳು ವಿಭಿನ್ನ ಧೋರಣೆ ಹೊಂದಿವೆ. ಸುಡಾನ್, ಸೋಮಾಲಿಯಾ, ಲಿಬಿಯಾ ಮತ್ತು ಯೆಮೆನ್‌ನ ಆಂತರಿಕ ಕಲಹದಲ್ಲಿ ಯುಎಇ ಮತ್ತು ಸೌದಿ ವಿಭಿನ್ನ ಪಕ್ಷಗಳನ್ನು ಬೆಂಬಲಿಸುತ್ತಿವೆ. ಹಾಗಾಗಿ ಸೌದಿ ನೇತೃತ್ವ ಹೊಂದಿರುವ ಒಪೆಕ್‌ಗೆ ಗುಡ್‌ಬೈ ಹೇಳುವುದು ಯುಎಇಗೆ ಅನಿವಾರ್ಯವಾಗಿದೆ.

ಯುಎಇ ನಿರ್ಧಾರದ ಹಿಂದೆ ಆರ್ಥಿಕ ಕಾರಣವೂ ಇದೆ. ಇರಾನ್ ಸಮರದಿಂದ ಯುಎಇ ಆರ್ಥಿಕತೆಗೆ ದೊಡ್ಡ ಹೊಡೆತ ಬಿದ್ದಿದೆ. ಆರ್ಥಿಕತೆಯನ್ನು ಬಲಪಡಿಸಿಕೊಳ್ಳುವುದಕ್ಕಾಗಿ ಹೆಚ್ಚು ತೈಲ ಉತ್ಪಾದಿಸಿ, ಮಾರಾಟ ಮಾಡುವುದು ಅನಿವಾರ್ಯವಾಗಿದೆ.

ಯುಎಇ ನಿರ್ಧಾರಕ್ಕೆ ಇದಷ್ಟೇ ಕಾರಣವಲ್ಲ. ಅದು ಇನ್ನೂ ಹಲವಾರು ಆಯಾಮಗಳಿಂದ ಚಿಂತಿಸಿ, ಇತರ ಅರಬ್ ರಾಷ್ಟ್ರಗಳಿಂದ ಹೊರತಾದ ತನ್ನದೇ ಆದ ಸ್ವತಂತ್ರ ವಿದೇಶಾಂಗ ನೀತಿಯನ್ನು ಹೊಂದಲು ಯತ್ನಿಸುತ್ತಿದೆ. ಇತ್ತೀಚೆಗೆ ಅದು ಇಸ್ರೇಲಿನೆಡೆಗೆ ಸ್ನೇಹಹಸ್ತ ಚಾಚಿದ್ದು ಕೂಡಾ ಅದಕ್ಕೆ ನಿದರ್ಶನ. ಇರಾನ್‌ನಿಂದ ಆಗುತ್ತಿರುವ ಕ್ಷಿಪಣಿ ದಾಳಿ ತಪ್ಪಿಸಲು ಇಸ್ರೇಲ್‌ನಿಂದ 'ಐರನ್ ಡೋಮ್' ಗೆ ಕೋರಿಕೆ ಸಲ್ಲಿಸಿತ್ತು. ಇಸ್ರೇಲ್ ನೀಡಿದ ನೆರವಿನಿಂದ ಅದು ಇರಾನ್‌ನ ಕ್ಷಿಪಣಿ ದಾಳಿ ತಡೆಯಲು ಸಫಲವಾಗಿತ್ತು.

ಇಸ್ಲಾಮಿಕ್ ಜಿಹಾದ್‌ಗೆ ವಿರೋಧ

ಯುಎಇ ಇಸ್ಲಾಮಿಕ್ ಮೂಲಭೂತವಾದದ ಪ್ರಭಾವದಿಂದ ಹೊರಬರಲೂ ಯತ್ನಿಸುತ್ತಿದೆ. ಯುಎಇಯ ಅಧ್ಯಕ್ಷನಾಗಿರುವ ಮೊಹಮ್ಮದ್ ಬಿನ್ ಝಾಯೆದ್ ಸುಧಾರಣವಾದಿ ಮನಸ್ಥಿತಿಯವರು. 'ಮೂಲಭೂತವಾದಿ ವಹಾಬಿಸಂ' ಅಪಾಯಕಾರಿ ಎಂಬುದಾಗಿ ಅವರು ಬಹಳ ಹಿಂದೆಯೆ ಅಮೆರಿಕದ ರಾಯಭಾರಿ ಜತೆ ಕಳವಳ ಹಂಚಿಕೊಂಡಿದ್ದರು. ತಮ್ಮ ದೇಶದಲ್ಲಿ ವಿವಿಧ ಜನಾಂಗಗಳವರಿಗೆ ಆಶ್ರಯ ಕಲ್ಪಿಸುವ ಮತ್ತು ಧಾರ್ಮಿಕ ಸಹಿಷ್ಣುತೆ ಬೆಳೆಸುವ ಉದ್ದೇಶ ಅವರದು.

ಅರಬ್ ದೇಶಗಳಲ್ಲಿ ಚಾಲ್ತಿಯಲ್ಲಿರುವ 'ಮುಸ್ಲಿಂ ಬ್ರದರ್ ಹುಡ್' ಅಪಾಯಕಾರಿ ಹಾಗೂ ಅದು ತಮ್ಮ ದೇಶಕ್ಕೂ ಮುಂದೊಮ್ಮೆ ಅಪಾಯವೊಡ್ಡಬಹುದು ಎಂದು ಝಾಯೆದ್ ಭಾವಿಸಿದ್ದಾರೆ. ಯುಎಇ 1994ರಲ್ಲಿ 'ಇಸ್ಲಾಮಿಕ್ ಜಮಾತ್ ಇ ಇಸ್ಲಾಹ್' ಎಂಬ ಮೂಲಭೂತವಾದಿ ಸಂಘಟನೆಯನ್ನು ನಿಷೇಧಿಸಿತ್ತು. 1979ರಲ್ಲಿ ನಡೆದ ಇರಾನಿನ ಇಸ್ಲಾಮಿಕ್ ಕ್ರಾಂತಿ, ಅಫಘಾನಿಸ್ತಾನಕ್ಕೆ ಸೋವಿಯತ್ ಒಕ್ಕೂಟದ ದಾಳಿ, ಅಫಘಾನಿಸ್ತಾನದಲ್ಲಿ ನಡೆದ ಮುಜಾಹಿದ್ದೀನ್ ಮತ್ತು ತಾಲಿಬಾನ್ ಸಂಸ್ಕೃತಿ ಬೆಳೆದ ರೀತಿ ಮುಂತಾದವುಗಳನ್ನು ಕಂಡ ಯುಎಇ ಕಟ್ಟರ್ ಇಸ್ಲಾಮಿಕ್ ವಾದವು ತನ್ನ ದೇಶಕ್ಕೆ ಬರದಂತೆ ತಡೆಯುವುದು ಅಗತ್ಯ ಎಂದೂ ಭಾವಿಸಿದೆ. ಅಪಾಯಕಾರಿ ಎಂಬುದಾಗಿ ಪರಿಗಣಿಸಿದೆ.

ಒಟ್ಟಿನಲ್ಲಿ ಒಪೆಕ್‌ನಿಂದ ಹೊರಬರುವ ಯುಎಇ ನಿರ್ಧಾರವು ತೈಲ ಬೆಲೆ ನಿಯಂತ್ರಿಸುವಲ್ಲಿ ಒಪೆಕ್ ಹೊಂದಿರುವ ಬಿಗಿ ಹಿಡಿತವನ್ನು ಸಡಿಲಿಸಲಿದೆ. ಭಾರತಕ್ಕಂತೂ ಇದು ವರದಾನವಾಗಲಿದೆ.

ಲಡಾಖ್ ಧರ್ಮದ ಜೀವಂತ ನೆಲೆಬೀಡು: ಶಾ

ಬುದ್ಧ-ಲಡಾಖ್‌ನ ಚಾರಿತ್ರಿಕ ಸಂಗಮ

• ಲೇಹ್-ಜಮ್ಮು: ಭಗವಾನ್ ಬುದ್ಧನ ಪವಿತ್ರ ಅವಶೇಷಗಳು 75 ವರ್ಷಗಳ ತರುವಾಯ ಲಡಾಖ್‌ಗೆ ಮರಳಿರುವುದು ಚಾರಿತ್ರಿಕ ಮರು ಸಂಗಮವಾಗಿದೆ. ಬುದ್ಧನ ಸಂದೇಶಗಳು, ಬೋಧನೆಗಳನ್ನು ಸಹಸ್ರಾರು ವರ್ಷಗಳಿಂದ ಯಥಾವತ್ ಸಂರಕ್ಷಿಸಿಕೊಂಡು ಬಂದಿರುವ ಲಡಾಖ್ ಧರ್ಮದ ಜೀವಂತ ನೆಲೆಬೀಡು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಣ್ಣಿಸಿದ್ದಾರೆ.

ಆಧುನಿಕ ಕಾಲದಲ್ಲೀಗ ಬುದ್ಧದ ಬೋಧನೆಗಳ ಪ್ರಸ್ತುತತೆಯನ್ನು ವಿವರಿಸಿದ ಸಚಿವರು ಶಾಂತಿ, ದಯೆ ಮತ್ತು ಮಧ್ಯಮ ಹಾದಿಯು 2500 ವರ್ಷಗಳ ಹಿಂದಿಗಿಂತಲೂ ಇಂದು ಹೆಚ್ಚು ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು. ಶತ ಶತಮಾನಗಳಿಂದ ಲಡಾಖ್ ಧರ್ಮದ ಜೀವಕಳೆಯಿರುವ ನೆಲವಾಗಿದೆ. ಈ ನಾಡು ಭೌಗೋಳಿಕ ಭೂಮಿಯಷ್ಟೇ ಅಲ್ಲ, ಬೌದ್ಧ ಸಂಸ್ಕೃತಿ ಮತ್ತು ಕರುಣೆಗಳಿಂದ ಸಂಪನ್ನ ಜೀವಂತ ಪ್ರಯೋಗಾಲಯವಾಗಿದೆ ಎಂದು ಹಿಂದೆ ದಲೈಲಾಮಾ ಇಲ್ಲಿಗೆ ಭೇಟಿ ನೀಡಿದ್ದ ಸಂದರ್ಭ ಬಣ್ಣಿಸಿದ್ದರು ಎಂದು ಸಚಿವರು ನೆನಪಿಸಿದರು. ಲೇಹ್‌ನ ಜೀವಿತ್‌ಸಲ್‌ನಲ್ಲಿ 2569ನೇ ಬುದ್ಧ ಪೂರ್ಣಿಮೆ ಆಚರಣೆಗಳು ಮತ್ತು ತಥಾಗತ ಬುದ್ಧನ ಪವಿತ್ರ ಅವಶೇಷಗಳ ಪ್ರದರ್ಶನ ಉದ್ಘಾಟಿಸಿ ಸಚಿವರು ಮಾತನಾಡಿದರು.

ಬುದ್ಧನ ಸಂದೇಶಗಳ ಸಂರಕ್ಷಿಸಿದ ನಾಡಿದು: ಲಡಾಖ್ ಸಹಾನುಭೂತಿ ತುಂಬಿ ತುಳುಕುವ ನಾಡೆಂದು ಬಣ್ಣಿಸಿದ ಗೃಹ ಸಚಿವ ಶಾ, ಜ್ಞಾನಧಾರೆಯನ್ನು ಪೋಷಿಸಿದ , ಸಂರಕ್ಷಿಸಿದ ನಾಡಿದು. ಧರ್ಮಕ್ಕೆ ಸಂಕಷ್ಟಗಳು ಎದುರಾದಾಗೆಲ್ಲ ಬುದ್ಧನ ಸಂದೇಶಗಳು, ಬೋಧನೆಗಳ ಸಂರಕ್ಷಿಸಲು ಶ್ರಮಿಸಿದ ನಾಡಿದು. ಶಾಂತಿ ಮರಳುತ್ತಲೇ ಬುದ್ಧನ ಸಂರಕ್ಷಿತ ಸಂದೇಶಗಳು, ವಿಚಾರಧಾರೆಗಳನ್ನು ವಿಸ್ತರಿಸಲು, ಮುಂಚೂಣಿಗೊಯ್ಯಲು ನೆರವಾದ ನಾಡಿದು ಎಂದು ನೆನಪಿಸಿದರು.

ಜ್ಞಾನ ರಹಿತ ಅನುಷ್ಠಾನ ವ್ಯರ್ಥ: ಜ್ಞಾನವನ್ನು ಅರ್ಥೈಸಿಕೊಂಡು ಬದುಕಿನ ಭಾಗವಾಗಿ ಪರಿವರ್ತಿಸಿಕೊಳ್ಳದ ವಿನಾ ಮೋಕ್ಷ ಅಸಂಭವ. ಆಧ್ಯಾತ್ಮಿಕ ಅನುಷ್ಠಾನದ ವಿನಾ ಜ್ಞಾನಧಾರೆ ಅಪೂರ್ಣ. ಇದೇ ತೆರ ಜ್ಞಾನರಹಿತ ಆಧ್ಯಾತ್ಮಿಕ ಅನುಷ್ಠಾನಗಳು ಕೂಡ ಕುರುಡೆನಿಸುತ್ತವೆ. ಹಾಗಾಗಿ ಆಧ್ಯಾತ್ಮಿಕ ಅನುಷ್ಠಾನ ಮತ್ತು



ಜ್ಞಾನಧಾರೆಗಳ ಸಂಗಮ ಸರಿಯಾದ ಹಾದಿ. ಇಷ್ಟಿದ್ದೂ ನೈತಿಕ ಅನುಶಾಸನವಿಲ್ಲದಿದ್ದರೆ ವ್ಯಕ್ತಿ ನೈಜ ಬುದ್ಧಿವಂತಿಕೆಯೊಂದಿಗೆ ಬದುಕನ್ನು ನಿಭಾಯಿಸಲಾರ. ಬುದ್ಧಿವಂತಿಕೆಯ ಬದುಕಿನ ಮೂಲಧಾರ ನೈತಿಕ ಅನುಶಾಸನವೆಂದು ಸಚಿವ ಶಾ ಅರ್ಥಪೂರ್ಣವಾಗಿ ವಿವರಿಸಿದರು. ತಥಾಗತ ಬುದ್ಧನ ಸಂದೇಶಗಳು ಉಗಮಸ್ಥಾನ ಭಾರತದಿಂದ ಚೀನಾ ಮತ್ತಿತರ ಹಲವಾರು ರಾಷ್ಟ್ರಗಳಿಗೆ ಪ್ರಸಾರವಾದ್ದು ಲಡಾಖ್ ಮತ್ತು ನೆರೆಹೊರೆಯ ಮಾರ್ಗಗಳಿಂದಾಗಿ ಎಂದು ಹೇಳಿದರು.

ಬದುಕಿಗೆ ಮಾರ್ಗದರ್ಶೀ: ಲಡಾಖ್‌ನಿಂದ ಹೊರಹೊಮ್ಮಿದ ಬುದ್ಧನ ಸಂದೇಶಗಳು ಅದೆಷ್ಟೋ ಜನರಿಗೆ ತಮ್ಮ ಬದುಕಲ್ಲಿ ಉನ್ನತಿ ಸಾಧಿಸಲು ಮುನ್ನಡೆ ಸಾಧಿಸುವಲ್ಲಿ ಮಾರ್ಗದರ್ಶಕ ಶಕ್ತಿಯಾಗಿ ಪರಿಣಮಿಸಿದೆ. ಸಾವಿರಾರು ವರ್ಷಗಳಿಂದ ಭಾರತದ ನಾಗರೀಕತೆಯು ಶಾಂತಿ, ಸಹಬಾಳ್ವೆಯ ಸಂದೇಶವನ್ನು ಜಗತ್ತಿಗೆ ನೀಡಿತ್ತೆಂಬುದನ್ನು ಲಡಾಖ್‌ನಲ್ಲಿರುವ ಭಗವಾನ್ ಬುದ್ಧನ ಪವಿತ್ರ ಅವಶೇಷಗಳು ನೆನಪಿಸುತ್ತವೆ. ವಿಭಿನ್ನ ವಲಯವಾಗಿರುವ ಲಡಾಖ್‌ಗೆ ಈ ಸಂದೇಶವು ಹೆಚ್ಚು ಪ್ರಸ್ತುತವಾಗುತ್ತದೆ. ಸಂಘರ್ಷ, ಅರಾಜಕತೆಗಳ ಮಧ್ಯೆ ಶಾಂತಿ, ದಯೆಯ ಹಾದಿಯೇ ಪರಿಹಾರವೆಂಬುದನ್ನು ಪ್ರಸ್ತುತ ಪರಂಪರೆ ನಮಗೆ ಸಾರಿ ಹೇಳುತ್ತಿವೆ ಎಂದು ಗಮನ ಸೆಳೆದ ಸಚಿವ ಶಾ, ಬುದ್ಧನ ಅವಶೇಷಗಳ ಮರಳುವಿಕೆಯೊಂದಿಗೆ ಲಡಾಖ್ ಜನರ ಪಾಲಿಗೆ ಬುದ್ಧ ಪೂರ್ಣಿಮೆಯ ಮಹತ್ತ್ವವು ನೂರ್ಮಡಿಯಾಗಿದೆ ಎಂದು ಬಣ್ಣಿಸಿದರು.

ದೋಣಿ ದುರಂತಕ್ಕೆ 9 ಬಲಿ: ತನಿಖೆಗೆ ಆದೇಶ

• ಜಬಲ್ಪುರ: ಮಧ್ಯಪ್ರದೇಶದ ಜಬಲ್ಪುರದಲ್ಲಿ ಪ್ರವಾಸಿ ದೋಣಿ ದುರಂತಕ್ಕೀಡಾಗಿದ್ದು, 9 ಮಂದಿ ಬಲಿಯಾಗಿದ್ದಾರೆ. ಮೊದಲಿಗೆ 4 ಮೃತದೇಹಗಳನ್ನು ಪತ್ತೆಯಾಗಿದ್ದವು. ಶುಕ್ರವಾರ ಎನ್‌ಡಿಆರ್‌ಎಫ್ ಮತ್ತು ಭಾರತೀಯ ಸೇನಾ ಸಿಬ್ಬಂದಿ ಆಗಮನದ ಬಳಿಕ ಇನ್ನೂ 5 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಮಧ್ಯಪ್ರದೇಶ ಪ್ರವಾಸೋದ್ಯಮ ಸಚಿವ ಧರ್ಮೇಂದ್ರ ಸಿಂಗ್ ಲೋಧಿ ವಿಸ್ತೃತ ತನಿಖೆಗೆ ಆದೇಶ ನೀಡಿದ್ದಾರೆ. ಒಂದೇ ಕುಟುಂಬದ ಸದಸ್ಯರು ಸಂತೋಷದಿಂದ ಪ್ರವಾಸಿ ದೋಣಿಯಲ್ಲಿ ವಿಹರಿಸುತ್ತಿದ್ದ ವೇಳೆ ದೋಣಿಯೊಳಗೆ ಏಕಾಏಕಿ ನೀರು ನುಗ್ಗಿದ್ದು, ತನ್ನ ಅಜ್ಜ ನೀರಿನಲ್ಲಿ ಮುಳುಗುತ್ತಿರುವುದನ್ನು ಬಾಲಕಿಯೊಬ್ಬಳು ಕಣ್ಣಾರೆ ಕಂಡಿದ್ದಾಳೆ. ತಂದೆಯ ಕೈಹಿಡಿದುಕೊಂಡಿದ್ದ ಬಾಲಕಿ ಬಚಾವಾಗಿದ್ದು, ಆಕೆಯ ತಾಯಿ, ಸಹೋದರ ಮತ್ತು ತಾತ ಗದ್ದಲದ ಮಧ್ಯೆ ಕಾಣೆಯಾಗಿದ್ದರು ಎಂದು ಆಕೆ ಕಣ್ಣೀರು ಹಾಕಿದ್ದಾಳೆ. ಶುಕ್ರವಾರ ನರ್ಮದಾ ನದಿಯ ಬರ್ಗಿ ಅಣೆಕಟ್ಟಿನ ಬಳಿ ನಡೆದ ಈ ದೋಣಿ ದುರಂತ ಸಂಭವಿಸಿದೆ.

ಭಾರತದ ಹೈಸ್ಪೀಡ್ ಕನಸು ಸಾಕಾರ

ಭಾರತದ ಮೊದಲ ಸ್ವದೇಶಿ ಬುಲೆಟ್ ರೈಲು ಯೋಜನೆ ವೇಗ ಪಡೆದುಕೊಂಡಿದೆ. ಅಹಮದಾಬಾದ್-ಮುಂಬೈ ಹೈಸ್ಪೀಡ್ ರೈಲು ಕಾರಿಡಾರ್ ಮೂಲಕ 508 ಕಿಮೀ ದೂರವನ್ನು ಕೇವಲ 2 ಗಂಟೆಗಳಲ್ಲಿ ಕ್ರಮಿಸುವ ಕನಸು 2027ರಲ್ಲಿ ನನಸಾಗಲಿದೆ. ಜಪಾನಿನ ಶಿಂಕನ್ಸೆನ್ ತಂತ್ರಜ್ಞಾನದ ಬೆಂಬಲದೊಂದಿಗೆ, ಭಾರತೀಯ ರೈಲ್ವೆ ಮತ್ತು ಬಿಇಎಂಎಲ್ ಸೇರಿ ದೇಶೀಯ ಬುಲೆಟ್ ಟ್ರೈನ್ ಅಭಿವೃದ್ಧಿಪಡಿಸುತ್ತಿವೆ.

2027 ರಲ್ಲಿ ಟ್ರ್ಯಾಕ್‌ಗೆ ಇಳಿಯಲಿದೆ ಮೊದಲ ಸ್ವದೇಶಿ ಬುಲೆಟ್ ಟ್ರೈನ್

ಗುಜರಾತ್‌ನಿಂದ ಮುಂಬೈಗೆ ಕೇವಲ 2 ಗಂಟೆ ಪ್ರಯಾಣ



ಏನಿದರ ಮಹತ್ವ



- ಇದು ಭಾರತಕ್ಕೆ ತಾಂತ್ರಿಕ ಸ್ವಾವಲಂಬನೆ ಹೆಚ್ಚಿಸುತ್ತದೆ
- ದೇಶದ ಮೂಲಸೌಕರ್ಯ ಆಧುನೀಕರಣಕ್ಕೆ ಸಹಕಾರಿ
- ಪ್ರಮುಖ ಆರ್ಥಿಕ ನಗರಗಳ ನಡುವಿನ ಪ್ರಯಾಣ ಸಮಯವನ್ನು ಕಡಿಮೆ ಮಾಡುತ್ತದೆ
- ಜಪಾನ್, ಚೀನಾ ಮತ್ತು ಫ್ರಾನ್ಸ್ ದೇಶಗಳಂತೆ ಭಾರತವೂ ಹೈಸ್ಪೀಡ್ ರೈಲು ಕ್ಷೇತ್ರದಲ್ಲಿ ಪ್ರಮುಖ ಸ್ಥಾನ ಪಡೆಯಲು ಸಹಾಯ ಮಾಡುತ್ತದೆ

ಭಾರತದಲ್ಲೇ ತಯಾರು

2017ರಲ್ಲಿ ಶಂಕುಸ್ಥಾಪನೆಗೊಂಡ ಮುಂಬೈ-ಅಹಮದಾಬಾದ್ ಬುಲೆಟ್ ರೈಲು ಯೋಜನೆ ಈಗ ಅಂತಿಮ ಹಂತದತ್ತ ಸಾಗುತ್ತಿದೆ. ಜಪಾನ್ ಸರ್ಕಾರದ ತಾಂತ್ರಿಕ ಮತ್ತು ಆರ್ಥಿಕ ನೆರವಿನೊಂದಿಗೆ ಭಾರತೀಯ ರೈಲ್ವೆ ಹಾಗೂ ಬಿಇಎಂಎಲ್(ಭಾರತ್ ಅರ್ಥ್ ಮೂವರ್ ಲಿಮಿಟೆಡ್) ಈ ಮಹತ್ವಾಕಾಂಕ್ಷಿ ಯೋಜನೆಯನ್ನು ರೂಪಿಸುತ್ತಿವೆ. ಈಗಾಗಲೇ ನೂರಾರು ಕಿಲೋಮೀಟರ್‌ಗಳ ಅಡಿಪಾಯ, ಪಿಯರ್ ಮತ್ತು ಗರ್ಡರ್ ಕಾಮಗಾರಿ ಪೂರ್ಣಗೊಂಡಿದ್ದು, ಯೋಜನೆಗೆ ವೇಗ ಸಿಕ್ಕಿದೆ. ವಿದೇಶಿ ತಂತ್ರಜ್ಞಾನದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶದಿಂದಲೇ ರೈಲಿನ ಬಹುತೇಕ ನಿರ್ಮಾಣ ಕಾರ್ಯ ಭಾರತದಲ್ಲೇ ನಡೆಯುತ್ತಿದೆ.

ಗಂಟೆಗೆ ಗರಿಷ್ಠ 320 ಕಿ.ಮೀ ವೇಗ

ಅಹಮದಾಬಾದ್‌ನ ಸಬರಮತಿಯಿಂದ ಮುಂಬೈವರೆಗೆ 508 ಕಿಮೀ ದೂರವನ್ನು ಈ ರೈಲು ಸಂಪರ್ಕಿಸಲಿದೆ. ಗಂಟೆಗೆ ಗರಿಷ್ಠ 320 ಕಿಮೀ ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿರುವ ಈ ಬುಲೆಟ್ ಟ್ರೈನ್, ಪ್ರಸ್ತುತ ರೈಲುಗಳಿಗಿಂತ ಪ್ರಯಾಣ ಸಮಯವನ್ನು ಭಾರೀ ಪ್ರಮಾಣದಲ್ಲಿ ಕಡಿಮೆ ಮಾಡಲಿದೆ. ಇದರಿಂದ ಅಹಮದಾಬಾದ್ ಮತ್ತು ಮುಂಬೈ ನಡುವಿನ ಪ್ರಯಾಣ ಕೇವಲ 2 ಗಂಟೆಗಳಲ್ಲಿ ಸಾಧ್ಯವಾಗಲಿದೆ.

ಹಂತ ಹಂತವಾಗಿ ಆರಂಭವಾಗಲಿದೆ ಸೇವೆ

2027ರ ಆಗಸ್ಟ್‌ನಲ್ಲಿ ಪ್ರಾರಂಭಿಕ ಹಂತವಾಗಿ ಸೂರತ್-ವಾಪಿ ಮಾರ್ಗದಲ್ಲಿ ಬುಲೆಟ್ ಟ್ರೈನ್ ಸಂಚಾರ ಆರಂಭವಾಗುವ ಸಾಧ್ಯತೆಯಿದೆ. ನಂತರ ವಾಪಿ-ಅಹಮದಾಬಾದ್ ಮತ್ತು ಥಾಣೆ-ಅಹಮದಾಬಾದ್ ಮಾರ್ಗಗಳಿಗೆ ವಿಸ್ತರಣೆ ನಡೆಯಲಿದೆ. ಅಂತಿಮವಾಗಿ ಸಂಪೂರ್ಣ ಮುಂಬೈ-ಅಹಮದಾಬಾದ್ ಕಾರಿಡಾರ್ ಸಾರ್ವಜನಿಕ ಸೇವೆಗೆ ಮುಕ್ತವಾಗಲಿದೆ.

ಯಾವ ಯಾವ ಮಾರ್ಗ

- ಮುಂಬೈ-ಅಹಮದಾಬಾದ್ ಹೈಸ್ಪೀಡ್ ರೈಲು ಮಾರ್ಗದಲ್ಲಿ
- ಭವಿಷ್ಯದ ಇತರೆ ಹೈಸ್ಪೀಡ್ ಕಾರಿಡಾರ್‌ಗಳಲ್ಲಿಯೂ ಈ ರೈಲು ಕಾರ್ಯನಿರ್ವಹಿಸುವ ಸಾಧ್ಯತೆ
- ಮುಂಬೈ-ಅಹಮದಾಬಾದ್ ಹೈಸ್ಪೀಡ್ ರೈಲು ಯೋಜನೆಗೆ ಈಗಾಗಲೇ ವೇಗ

ಮುಖ್ಯಾಂಶಗಳು

- ಭಾರತದಲ್ಲಿ ನಿರ್ಮಿತ ವೇಗದ ಬುಲೆಟ್ ಟ್ರೈನ್ ಭಾರತೀಯ ರೈಲ್ವೆ ಮತ್ತು ಬಿಇಎಂಎಲ್ ಸಹಯೋಗದಲ್ಲಿ ಅಭಿವೃದ್ಧಿ
- ಭಾರತೀಯ ಹವಾಮಾನ ಮತ್ತು ಭೌಗೋಳಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ನಿರ್ಮಾಣ
- ವಿದೇಶಿ ಬುಲೆಟ್ ಟ್ರೈನ್ ವ್ಯವಸ್ಥೆಗಳಿಗಿಂತ ಕಡಿಮೆ ವೆಚ್ಚದ, ಹೆಚ್ಚು ಕೈಗೆಟುಕುವ ಮಾದರಿ
- ಕೇಂದ್ರ ಸರ್ಕಾರದ ಮೇಕ್ ಇನ್ ಇಂಡಿಯಾ ಅಭಿಯಾನದ ಭಾಗವಾಗಿದ್ದು, ವಿದೇಶಿ ತಂತ್ರಜ್ಞಾನದ ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶ



ವೇಗ, ತಂತ್ರಜ್ಞಾನ, ವಿನ್ಯಾಸ

- ಈ ಬುಲೆಟ್ ಟ್ರೈನ್ ಸುಮಾರು ಗರಿಷ್ಠ 320 ಕಿಮೀ ವೇಗದಲ್ಲಿ ಸಂಚರಿಸುವ ನಿರೀಕ್ಷೆ
- ಹೆಚ್ಚಿನ ಸ್ಥಿರತೆಗಾಗಿ ಆಧುನಿಕ ಏರೋಡೈನಾಮಿಕ್ ವಿನ್ಯಾಸ
- ಜಾಗತಿಕ ಮಟ್ಟದ ಪ್ರಯಾಣಿಕರ ಸೌಲಭ್ಯ
- ಇಂಧನ ಉಳಿತಾಯ ಮತ್ತು ಸುರಕ್ಷತೆ ಗಮನದಲ್ಲಿಟ್ಟು ವಿನ್ಯಾಸ
- ಜಪಾನ್‌ನ ಶಿಂಕನ್ಸೆನ್ ರೈಲುಗಳಿಗಿಂತ ಸ್ವಲ್ಪ ಕಡಿಮೆ ವೇಗವಾದರೂ, ಭಾರತದ ಮೂಲಸೌಕರ್ಯಕ್ಕೆ ತಕ್ಕಂತೆ ವೆಚ್ಚ-ಕಾರ್ಯಕ್ಷಮತೆ ಆದ್ಯತೆಯಾಗಿ ಪರಿಗಣನೆ

ಬುಲೆಟ್ ಟ್ರೈನ್ ವರ್ಸಸ್ ವಂದೇ ಭಾರತ್

ಭಾರತದಲ್ಲಿ ಈಗಾಗಲೇ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು 130ರಿಂದ 160 ಕಿಮೀ ವೇಗದಲ್ಲಿ ಸಂಚರಿಸುತ್ತಿವೆ. ಹೊಸ ವಂದೇ ಭಾರತ್ ಸ್ಲೀಪರ್ ಆವೃತ್ತಿ ಪರೀಕ್ಷೆಯಲ್ಲಿ 180 ಕಿಮೀ ವೇಗ ತಲುಪಿದೆ. ಆದರೆ ಬುಲೆಟ್ ಟ್ರೈನ್ ಸಂಪೂರ್ಣ ಹೈಸ್ಪೀಡ್ ತಂತ್ರಜ್ಞಾನ ಆಧಾರಿತವಾಗಿದ್ದು, ವಿಶೇಷ ಟ್ರ್ಯಾಕ್‌ಗಳಲ್ಲಿ ಮಾತ್ರ ಸಂಚರಿಸುತ್ತದೆ. ವೇಗ, ಸುಧಾರಿತ ಸಿಗ್ನಲಿಂಗ್ ವ್ಯವಸ್ಥೆ ಮತ್ತು ಅತ್ಯುನ್ನತ ಸುರಕ್ಷತಾ ವ್ಯವಸ್ಥೆಗಳು ಇದರ ಪ್ರಮುಖ ವಿಶೇಷತೆಗಳಾಗಿವೆ.



ಮೇಕ್ ಇನ್ ಇಂಡಿಯಾಗೆ ಹೊಸ ಮೈಲಿಗಲ್ಲು

ಈ ಯೋಜನೆ ಕೇವಲ ವೇಗದ ರೈಲು ಸೇವೆಗೆ ಸೀಮಿತವಾಗಿಲ್ಲ. ದೇಶೀಯ ತಂತ್ರಜ್ಞಾನ, ಸ್ವದೇಶಿ ಉತ್ಪಾದನೆ ಮತ್ತು ಭವಿಷ್ಯದ ಹೈಸ್ಪೀಡ್ ಸಾರಿಗೆ ವ್ಯವಸ್ಥೆಗೆ ಇದು ಹೊಸ ದಿಕ್ಕು ತೋರಿಸುತ್ತಿದೆ. ಯೋಜನೆ ಯಶಸ್ವಿಯಾದರೆ, ಭಾರತ ಜಾಗತಿಕ ಹೈಸ್ಪೀಡ್ ರೈಲು ಜಾಲದಲ್ಲಿ ಪ್ರಮುಖ ಸ್ಥಾನ ಪಡೆಯುವುದರ ಜತೆಗೆ ವಿದೇಶಿ ಆಮದು ಅವಲಂಬನೆಯಿಂದ ಹೊರಬರುವತ್ತ ದೊಡ್ಡ ಹೆಜ್ಜೆ ಇಡಲಿದೆ.

ಕಿರುಸುದ್ದಿ

ಅಮೆರಿಕದ 16 ಸೇನಾನೆಲೆಗಳಿಗೆ ಹಾನಿ?

• ಟೆಹ್ರಾನ್: ಇರಾನ್ ಹಾಗೂ ಅದರ ಮೈತ್ರಿ ಪಡೆಗಳು ನಡೆಸಿದ ದಾಳಿಗಳಲ್ಲಿ ಗಲ್ಫ್ ಪ್ರದೇಶದ 8 ದೇಶಗಳಲ್ಲಿರುವ ಕನಿಷ್ಠ 16 ಅಮೆರಿಕದ ಸೇನಾನೆಲೆಗಳು ಹಾನಿಗೊಳಗಾಗಿವೆ ಎಂದು ವರದಿ ತಿಳಿಸಿದೆ. ಸಿಎನ್‌ಎನ್ ನಡೆಸಿದ ತನಿಖಾ ವರದಿಯ ಪ್ರಕಾರ, ಈ ದಾಳಿಗಳಿಂದ ಕೆಲವು ತಾಣಗಳು ಸಂಪೂರ್ಣವಾಗಿ ಕಾರ್ಯನಿರ್ವಹಣೆಗೆ ಅಸಮರ್ಥವಾಗಿವೆ. ಪ್ರಮುಖವಾಗಿ ರಾಡಾರ್ ಮತ್ತು ಸಂವಹನ ವ್ಯವಸ್ಥೆಗಳನ್ನೇ ಗುರಿಯಾಗಿಸಿಕೊಂಡಿದ್ದು, ಇದರಿಂದ ಅಮೆರಿಕಕ್ಕೆ ಭಾರೀ ಆರ್ಥಿಕ ನಷ್ಟ ಉಂಟಾಗಿದೆ. ಯುದ್ಧದ ಒಟ್ಟು ವೆಚ್ಚವು ಸುಮಾರು 25 ಶತಕೋಟಿ ಡಾಲರ್‌ನಿಂದ 40-50 ಶತಕೋಟಿ ಡಾಲರ್‌ವರೆಗೆ ಇರಬಹುದೆಂದು ಅಂದಾಜಿಸಲಾಗಿದೆ. ಅಮೆರಿಕದ ಗಲ್ಫ್ ಮೈತ್ರಿ ರಾಷ್ಟ್ರಗಳೂ ಈ ದಾಳಿಗಳಿಂದ ತೀವ್ರವಾಗಿ ಹಾನಿಗೊಂಡಿದ್ದು, ಅಮೆರಿಕದ ಮೇಲೆ ಖಾಸಗಿಯಾಗಿ ಟೀಕೆ ವ್ಯಕ್ತಪಡಿಸಿರುವುದಾಗಿ ವರದಿಯಲ್ಲಿ ಉಲ್ಲೇಖವಾಗಿದೆ. ಅಮೆರಿಕದೊಂದಿಗಿನ ಮೈತ್ರಿಯ ನಂಬಿಕೆಯನ್ನು ಅವರು ಪ್ರಶ್ನಿಸುತ್ತಿರುವುದಾಗಿ ತಿಳಿದುಬಂದಿದೆ.

XV ಕಾರ್ಪ್ಸ್‌ಗೆ ಲೆ.ಜನರಲ್ ಬಲ್ಬೀರ್ ಮುಖ್ಯಾಧಿಕಾರಿ

• ಶ್ರೀನಗರ: ಸೇನೆಯ ಶ್ರೀನಗರ ಮೂಲದ ವ್ಯೂಹಾತ್ಮಕ 15 ಕಾರ್ಪ್ಸ್ (ಚಿನಾರ್ ಕಾರ್ಪ್ಸ್) ಕಮಾಂಡ್ ಆಗಿ ಲೆ.ಜ. ಬಲ್ಬೀರ್ ಸಿಂಗ್ ಶುಕ್ರವಾರ ನೇಮಕಗೊಂಡಿದ್ದಾರೆ. ಈ ಹುದ್ದೆಯಲ್ಲಿದ್ದ ಲೆ.ಜ. ಪ್ರಶಾಂತ್ ಶ್ರೀವಾಸ್ತವ ಸೇನಾ ಪ್ರಧಾನ ಕಚೇರಿಯ ಕ್ವಾರ್ಟರ್ ಮಾಸ್ಟರ್ ಜನರಲ್ ಹುದ್ದೆಗೆ ನಿಯುಕ್ತರಾಗಿರುವ ಹಿನ್ನೆಲೆಯಲ್ಲಿ, ತೆರವಾಗಿದ್ದ ಸ್ಥಾನಕ್ಕೆ ಲೆ.ಜ. ಬಲ್ಬೀರ್ ಸಿಂಗ್ ನೇಮಕ ನಡೆಯಿತು.



ವಲಯದಲ್ಲಿ ಶಾಂತಿ, ಸ್ಥಿರತೆ ಕಾಪಾಡುವುದು ಮತ್ತು ವಲಯದ ಸಂಪನ್ನತೆ ನಿಟ್ಟಿನಲ್ಲಿ ನಾಗರಿಕ ಆಡಳಿತ ಮತ್ತು ಕಾಶ್ಮೀರದ ಜನತೆಯೊಂದಿಗೆ ಕೈಜೋಡಿಸಿ ದುಡಿಯಲು ತಾನು ಸಂಕಲ್ಪಬದ್ಧನಾಗಿರುವೆನೆಂದು ಲೆ.ಜನರಲ್ ಸಿಂಗ್ ಹೊಸ ಜವಾಬ್ದಾರಿ ವಹಿಸಿಕೊಂಡ ನಂತರ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಿರಂತರ ಸವಾಲುಗಳ ಎದುರಿಸುವಲ್ಲಿ ಭದ್ರತಾ ಪಡೆಗಳೊಂದಿಗೆ ಕೈಜೋಡಿಸುವಂತೆ ಅವರು ಸಮಾಜದ ಎಲ್ಲಾ ವರ್ಗಗಳ ಜನತೆಗೆ ಸಲಹೆ ಮಾಡಿದ್ದಾರೆ. ಲೆ.ಜ.ಸಿಂಗ್ ಈ ಮುನ್ನ ದಕ್ಷಿಣ ಮತ್ತು ಮಧ್ಯಕಾಶ್ಮೀರದಲ್ಲಿ ಬಂಡಾಯ-ಭಯೋತ್ಪಾದನೆ ಪಿಡುಗಿನ ವಿರುದ್ಧ ಕಾರ್ಯಾಚರಣೆಗಳ ಉಸ್ತುವಾರಿ ಹೊಂದಿದ್ದ ವಿಕ್ಟರ್ ಫೋರ್ಸ್‌ನ ಕಮಾಂಡರ್ ಆಗಿದ್ದರು. ಸೈನಿಕ ಮುಖ್ಯಾಧಿಕಾರಿಯಾಗಿ ಲೆ.ಜ. ಬಲ್ಬೀರ್ ಸಿಂಗ್ ನೇಮಕಗೊಂಡಿದ್ದಾರೆ ಎಂದು 15 ಕಾರ್ಪ್ಸ್ (ಚಿನಾರ್ ಕಾರ್ಪ್ಸ್) ಎಕ್ಸ್‌ನಲ್ಲಿ ತಿಳಿಸಿದೆ.

ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ 993 ರೂ. ಏರಿಕೆ

• ಹೊಸದಿಲ್ಲಿ: ವಾಣಿಜ್ಯ ಮಧ್ಯಪ್ರಾಚ್ಯ ಯುದ್ಧದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ 993 ರೂ.ಗಳ ಭಾರೀ ಬೆಲೆ ಏರಿಕೆಯಾಗಿದೆ. ಅನಿಲ ಕಂಪನಿಗಳು ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಹೆಚ್ಚಿಸಿದ್ದರಿಂದ ಹೋಟೆಲ್‌ಗಳು, ರಸ್ತೆ ಬದಿಯ ಊಟದ ಅಂಗಡಿಗಳು, ಕ್ಯಾಟರಿಂಗ್ ಸೇವೆಗಳು, ಬೇಕರಿಗಳು ಮತ್ತು ಕ್ಲೌಡ್ ಕಿಚನ್‌ಗಳಂತಹ ಸಣ್ಣ ಉದ್ಯಮಗಳಿಗೆ ತೊಡಕಾಗಿದೆ. ಬೆಂಗಳೂರಿನಲ್ಲಿ ವಾಣಿಜ್ಯ ಎಲ್‌ಪಿಜಿ ದರ 3,125 ರೂ. ತಲುಪಿದೆ.

ದಿನನಿತ್ಯ ಜನರಿಗೆ ಆಹಾರ ಒದಗಿಸುವ ಉದ್ಯಮ ಜಾಲದ ಮೇಲೆ ಒತ್ತಡ ಬೀರಲಿದೆ, ಈ ಉದ್ಯಮಗಳಿಗೆ ಅಡುಗೆ ಅನಿಲವು ಕೇವಲ ಇನ್ನೊಂದು ವೆಚ್ಚವಲ್ಲದೆ, ಹೋಟೆಲ್ ವ್ಯವಹಾರದ ಜೀವಾಳವಾಗಿದೆ. ಇಂತಹ ಅನಿಶ್ಚಿತತೆಯ ಸಂದರ್ಭ ತೀವ್ರ ಬೆಲೆ ಏರಿಕೆ ನೇರವಾಗಿ ಅವರ ಲಾಭದ ಮೇಲೆ ಹೊಡೆತ ನೀಡುತ್ತದೆ. ಸಣ್ಣ ಮಟ್ಟದ ವ್ಯಾಪಾರಿಗಳು ಹೆಚ್ಚುವರಿ ವೆಚ್ಚವನ್ನು ತಾಳಲು ಸಾಧ್ಯವಾಗದೆ, ಆಹಾರದ ಬೆಲೆಗಳನ್ನು ಹೆಚ್ಚಿಸುವ ಸಾಧ್ಯತೆಯೂ ಇದೆ. ವಾಣಿಜ್ಯ ಎಲ್‌ಪಿಜಿ 19 ಕೆ.ಜಿ ಬೆಲೆ ಏರಿಕೆಯು ಅಂತಿಮವಾಗಿ ಗ್ರಾಹಕರ ಮೇಲೆ ಹೊರೆ ಬೀಳಲಿದೆ. ಏಕೆಂದರೆ ಹೋಟೆಲ್‌ಗಳು ಮತ್ತು ಆಹಾರ ಸೇವಾ ಸಂಸ್ಥೆಗಳು ತಮ್ಮ ವೆಚ್ಚವನ್ನು ಸಮತೋಲನ ಮಾಡುವುದಕ್ಕಾಗಿ ಮೆನು ದರಗಳನ್ನು ಹೆಚ್ಚಿಸಬಹುದು. ಒಟ್ಟಿನಲ್ಲಿ, ಈ ಎಲ್‌ಪಿಜಿ ದರ ಏರಿಕೆ ಸಣ್ಣ ಆಹಾರ ಉದ್ಯಮಗಳ ಮೇಲೆ ಆರ್ಥಿಕ ಒತ್ತಡವನ್ನು ಹೆಚ್ಚಿಸಿ, ಆಹಾರ ದರಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ. ಆದಾಗ್ಯೂ ಗೃಹಬಳಕೆ ಎಲ್‌ಪಿಜಿ 913 ರೂ.ನಲ್ಲಿ ಸ್ಥಿರವಾಗಿದೆ.

ಸೋಲಾರ್ ವಿದ್ಯುತ್ ಕೊಡುಗೆ ! ದಾಖಲೆಯ ಬೇಡಿಕೆ ಹೊರತೂ ದೇಶದಲ್ಲಿ ಇಲ್ಲ ಪವರ್‌ಕಟ್

• ಹೊಸದಿಲ್ಲಿ: ಈ ಬಾರಿಯ ಬೇಸಿಗೆಯ ಬಿರುಬಿಸಿಲಿಗೆ ಜನಜೀವನ ತತ್ತರಿಸುವಂತಾಗಿದ್ದು, ದೇಶದಲ್ಲಿ ವಿದ್ಯುತ್‌ಗಾಗಿ ಬೇಡಿಕೆ ದಾಖಲೆಯ ಪ್ರಮಾಣದಲ್ಲಿ ಏರಿಕೆಯಾಗಿದ್ದರೂ ವಿದ್ಯುತ್ ಕಡಿತ (ಪವರ್ ಕಟ್)ಇಲ್ಲದಿರುವುದು ಗಮನ ಸೆಳೆದಿದೆ. ಇದಕ್ಕೆ ಕೇಂದ್ರ ಸರಕಾರ ಉಷ್ಣ ವಿದ್ಯುತ್ ಸ್ಥಾವರಗಳ ದಕ್ಷತೆಯನ್ನು ಕಾಯ್ದುಕೊಂಡಿರುವುದು ಮತ್ತು ಇದೇ ವೇಳೆ ಸೋಲಾರ್ ವಿದ್ಯುತ್ ಉತ್ಪಾದನೆಗೆ ನೀಡಿದ ಆದ್ಯತೆ ಕಾರಣವಾಗಿದೆ. ವಿದ್ಯುತ್ ಬೇಡಿಕೆ ಭಾರೀ ಪ್ರಮಾಣದಲ್ಲಿ ಹೆಚ್ಚಿದ್ದರೂ ದೇಶದಲ್ಲಿ ಲೋಡ್‌ಶೆಡ್ಡಿಂಗ್‌ನ ಸಮಸ್ಯೆ ಕಂಡುಬಂದಿಲ್ಲ.ಇದಕ್ಕೆ ಹೆಚ್ಚುವರಿ ವಿದ್ಯುತ್ ಬೇಡಿಕೆಯನ್ನು ಪೂರೈಸುವಲ್ಲಿ ಕಲ್ಲಿದ್ದಲು ಆಧರಿತ ವಿದ್ಯುತ್ ಸ್ಥಾವರಗಳ ಜೊತೆಗೆ ಸೋಲಾರ್ ವಿದ್ಯುತ್ ಉತ್ಪಾದಕ ಘಟಕಗಳ ಕೊಡುಗೆಯೂ ಕಾರಣವಾಗಿದೆ.

ಏ.25ರಂದು ವಿದ್ಯುತ್ ಬೇಡಿಕೆಯು 256ಗಿಗಾವ್ಯಾಟ್‌ಗಳ ದಾಖಲೆಯ ಮಟ್ಟಕ್ಕೇರಿತ್ತು. ಆದರೂ ಈ ಪ್ರಮಾಣದ ವಿದ್ಯುತ್ ಬೇಡಿಕೆಯನ್ನು ನಿರಾತಂಕವಾಗಿ ಪೂರೈಸುವ ಮೂಲಕ ಜನತೆಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಯಿತು.ಅಷ್ಟೇ ಅಲ್ಲದೆ ನೆರೆಯ ದೇಶಗಳಿಗೂ ಭಾರತ ವಿದ್ಯುತ್ ಪೂರೈಸಿದೆ. ದೇಶದ ವಿದ್ಯುತ್ ಬೇಡಿಕೆಯ ಶೇ.66ರಷ್ಟನ್ನು ಉಷ್ಣ ವಿದ್ಯುತ್ ಸ್ಥಾವರಗಳು ಪೂರೈಸಿದರೆ ಇದೇ ಪ್ರಥಮ ಬಾರಿಗೆ ಸೌರ ವಿದ್ಯುತ್ ಘಟಕಗಳ ಮೂಲಕ ಶೇ.21ರಷ್ಟು ವಿದ್ಯುತ್ತನ್ನು ಉತ್ಪಾದಿಸಲಾಗಿರುವುದು ಗಮನ ಸೆಳೆದಿದೆ.

ಸೌರ ವಿದ್ಯುತ್‌ಗೆ ಕೇಂದ್ರ ಒತ್ತು: ಪರಿಸರ ಸ್ನೇಹಿ ಸೌರ ವಿದ್ಯುತ್ ಉತ್ಪಾದನೆಗೆ ಕೇಂದ್ರ ಸರಕಾರ ವಿಶೇಷ ಆದ್ಯತೆ ನೀಡಿದ್ದು, ಕೇಂದ್ರದ ಇಂಧನ ಇಲಾಖೆಯ ಮೂಲಗಳು ತಿಳಿಸುವಂತೆ, ದೇಶದಲ್ಲಿ 150.26ಗಿ.ವ್ಯಾ.ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸಲಾಗಿದೆ.ವರ್ಷಗಳ ಹಿಂದೆ ದೇಶದಲ್ಲಿ ಬೇಸಗೆ ಬಂತೆಂದರೆ ಪವರ್ ಕಟ್ ಮತ್ತು ಲೋಡ್‌ಶೆಡ್ಡಿಂಗ್ ಎಂಬುದು ಸರ್ವೇಸಾಮಾನ್ಯವಾಗಿದ್ದ ಸಮಸ್ಯೆಯಾಗಿದ್ದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಸದನಕ್ಕೆ ಪಾನಮತ್ತರಾಗಿ ಬಂದ ಸಿಎಂ: ಕೈ ಆರೋಪ

• ಅಮೃತಸರ: ಪಂಜಾಬ್ ಮುಖ್ಯಮಂತ್ರಿ ಭಗ್ವಂತ್ ಮನ್ ಅವರು ಮದ್ಯಪಾನ ಮಾಡಿ ವಿಧಾನಸಭೆಗೆ ಬಂದಿದ್ದಾರೆಂದು ಪ್ರತಿಪಕ್ಷ ಕಾಂಗ್ರೆಸ್ ಶಾಸಕ ಪ್ರತಾಪ್ ಸಿಂಗ್ ಬಾಜ್ವಾ ಆರೋಪಿಸಿದ್ದು, ಪಂಜಾಬ್ ವಿಧಾನಸಭೆಯಲ್ಲಿ ಭಾರೀ ಗದ್ದಲದ ವಾತಾವರಣ ಸೃಷ್ಟಿಯಾಗಿತ್ತು. ಮುಖ್ಯಮಂತ್ರಿ ಪಾನಮತ್ತರಾಗಿದ್ದರೇ ಇಲ್ಲವೇ ಎಂದು ತಿಳಿಯಲು ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕೆಂದು ಪ್ರತಿಪಕ್ಷ ನಾಯಕ ಪ್ರತಾಪ್ ಸಿಂಗ್ ಆಗ್ರಹಿಸಿದ್ದಾರೆ.

ಮೇ ದಿನದಂದೇ ವಿಶ್ವಾಸಮತ ಯಾಚನೆಗಾಗಿ ನಡೆದ ವಿಶೇಷ ಅಧಿವೇಶನ ಸಂದರ್ಭ ಮುಖ್ಯಮಂತ್ರಿ, ಆಮ್ ಆದ್ಮಿ (ಆಪ್) ನಾಯಕ ಭಗ್ವಂತ್ ಮನ್ ಮದ್ಯಪಾನ ಮಾಡಿ ಬಂದಿದ್ದರೆಂಬ ಗಂಭೀರ ಆರೋಪವನ್ನು ಪ್ರತಿಪಕ್ಷ ಕಾಂಗ್ರೆಸ್ ಮಾಡಿದೆ. ಇದರಿಂದ ಆಡಳಿತ ಪಕ್ಷ ಆಪ್ ಮತ್ತು ಪ್ರತಿಪಕ್ಷ ಕಾಂಗ್ರೆಸ್ ಶಾಸಕರ ನಡುವೆ ತೀವ್ರ ವಾಗ್ವಾದ ನಡೆಯಿತು. ಘಟನೆಯ ತನಿಖೆ ನಡೆಸಬೇಕೆಂದು ಪ್ರತಿಪಕ್ಷ ನಾಯಕ ಪ್ರತಾಪ್ ಸ್ಪೀಕರ್‌ಗೆ ಪತ್ರ ಬರೆದಿದ್ದಾರೆ. ಮನ್ ವಿಶ್ವಾಸಮತ ಯಾಚಿಸಿ ಗೆದ್ದಿದ್ದಾರೆ.

ದೇಸಿ ವಿನ್ಯಾಸ, ನಿರ್ಮಾಣದ ಯುದ್ಧನೌಕೆ | ಬ್ರಹ್ಮೋಸ್, ಬರಾಕ್-8 ಕ್ಷಿಪಣಿಗಳ ನಿಯೋಜನೆ

ನೌಕಾಪಡೆಗೆ ಸ್ವದೇಶಿ ಮಹೇಂದ್ರಗಿರಿ ಸೇರ್ಪಡೆ

• ಹೊಸದಿಲ್ಲಿ: ಸಾಕಷ್ಟು ಸಮರ್ಥ ಶಸ್ತ್ರಾಸ್ತ್ರಸಜ್ಜಿತ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಒಳಗೊಂಡ ಸ್ವದೇಶಿ ಯುದ್ಧ ನೌಕೆ ಮಹೇಂದ್ರಗಿರಿಯನ್ನು ಶುಕ್ರವಾರ ಭಾರತೀಯ ನೌಕಾಪಡೆಗೆ ವಿಧ್ಯುಕ್ತವಾಗಿ ಹಸ್ತಾಂತರಿಸಲಾಯಿತು. ನೀಲ್‌ಗಿರಿ ದರ್ಜೆಯ (ಪ್ರಾಜೆಕ್ಟ್ 17ಎ) ಆರನೇ ನೌಕೆಯನ್ನು ಮುಂಬೈನ ಮಜಗಾಂವ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್(ಎಂಡಿಎಸ್‌ಎಲ್)ನಲ್ಲಿ ನೌಕಾಪಡೆಗೆ ಸೇರ್ಪಡೆ ಮಾಡಲಾಯಿತು. ಯುದ್ಧನೌಕೆ, ದೇಶೀಯ ವಿನ್ಯಾಸ ಮತ್ತು ನಿರ್ಮಾಣ ಸಾಕಾರದಲ್ಲಿ ಇದೊಂದು ಮಹತ್ವದ ಮೈಲಿಗಲ್ಲೆಂದು ಅಧಿಕಾರಿಗಳು ಮಹೇಂದ್ರಗಿರಿಯನ್ನು ಬಣ್ಣಿಸಿದ್ದಾರೆ.

ಬಹುಮುಖಿ ಸಾಮರ್ಥ್ಯ: ಸಮುದ್ರ -ಸಾಗರ ವಲಯದಲ್ಲಿ ಪ್ರಸಕ್ತ ಎದುರಾಗುವ ಅನ್ಯಾನ್ಯ ಸವಾಲುಗಳ ನಿಭಾಯಿಸಬಲ್ಲ ಬಹುಮುಖೀ ಸಾಮರ್ಥ್ಯದ ನೌಕೆಯಾಗಿದೆ ಪ್ರಾಜೆಕ್ಟ್ 17ಎಯ ಯುದ್ಧನೌಕೆಗಳು. ನೌಕಾ ವಿನ್ಯಾಸ, ರಹಸ್ಯ ಕಾರ್ಯಾಚರಣೆ, ಶಸ್ತ್ರಾಸ್ತ್ರ ಸಾಮರ್ಥ್ಯ, ಆಟೋಮೇಶನ್, ರಕ್ಷಿಸಿಕೊಳ್ಳುವಿಕೆ ಇತ್ಯಾದಿ ಎಲ್ಲಾ ಅಂಶಗಳಲ್ಲೂ ಸಾಕಷ್ಟು ನಾವೀನ್ಯತೆ ಒಳಗೊಂಡಿರುವ, ಅತ್ಯಾಧುನಿಕ ತಂತ್ರಜ್ಞಾನಸಂಪನ್ನ ಮಹೇಂದ್ರಗಿರಿ, ಅತ್ಯಾಧುನಿಕ ಸಮರ ನೌಕೆ ನಿರ್ಮಾಣದಲ್ಲಿ ಆತ್ಮನಿರ್ಭರತೆಗೆ ಪ್ರಶಂಸಾರ್ಹ ದ್ಯೋತಕವಾಗಿದೆ ಎಂದು ರಕ್ಷಣಾ ಖಾತೆ ಹೇಳಿಕೆಯಲ್ಲಿ ತಿಳಿಸಿದೆ.

ಪೀಳಿಗೆವಾರು ಜಿಗಿತ: ಮಹೇಂದ್ರಗಿರಿ -ಯಾರ್ಡ್ 12654



ಎಂಡಿಎಸ್‌ಎಲ್‌ನಲ್ಲಿ ನಿರ್ಮಾಣಗೊಂಡ ಪ್ರಸ್ತುತ ದರ್ಜೆಯ ನಾಲ್ಕನೇ ನೌಕೆಯಾಗಿದೆ. ವಾರ್‌ಶಿಪ್ ಡಿಸೈನ್ ಬ್ಯೂರೋ (ಡಬ್ಲ್ಯೂಡಿಬಿ) ಮತ್ತು ವಾರ್‌ಶಿಪ್ ಓವರ್‌ಸೀಯಿಂಗ್ ಟೀಮ್ ಮುಂಬೈಯ ಮೇಲುಸ್ತುವಾರಿಯಲ್ಲಿ ನಿರ್ಮಾಣಗೊಂಡ ಮಹೇಂದ್ರಗಿರಿ ಸಮರ ನೌಕೆ ದೇಶೀ ಸಮರನೌಕೆ ವಿನ್ಯಾಸ, ನಿಗೂಢ ಕಾರ್ಯಾಚರಣೆ, ಶತ್ರುನಿಗ್ರಹ ಸಾಮರ್ಥ್ಯ ಇತ್ಯಾದಿಗಳಲ್ಲಿ ಪೀಳಿಗೆವಾರು ಜಿಗಿತವನ್ನು ಪ್ರತಿಬಿಂಬಿಸಿದೆ ಅಥವಾ ದಿಢೀರ್ ಮುನ್ನಡೆ ಸಾಧಿಸಿದೆ . ಸಮಗ್ರ ನಿರ್ಮಾಣ ಸಿದ್ಧಾಂತಾಧಾರಿತ ನೌಕೆಯನ್ನು ಅಂದಾಜಿತ ಕಾಲಮಿತಿಯೊಳಗೆ ನಿರ್ಮಿಸಿ ನೌಕಾಪಡೆಗೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

- ವರ್ಗ: ನೀಲಗಿರಿ-ವರ್ಗ (ಪ್ರಾಜೆಕ್ಟ್ 17ಎ ಸ್ಟೆಲ್ತ್ ಫ್ರಿಗೇಟ್)
- ಭಾರ: 6,600ರಿಂದ 6,700 ಟನ್‌ಗಳು
- ಉದ್ದ: 149 ಮೀ.
- ವೇಗ: ಪ್ರತಿ ಗಂಟೆಗೆ 51.856 ಕಿ.ಮೀ. (28 ನಾಟ್ಸ್)
- ಸಿಬ್ಬಂದಿ: 170ರಿಂದ 200
- ಸ್ವದೇಶಿ: ಶೇ.75ರಷ್ಟು ದೇಸಿ ಉಪಕರಣಗಳ ಬಳಕೆ
- ದಾಳಿ ಸಾಮರ್ಥ್ಯ: ಬ್ರಹ್ಮೋಸ್ ನಿಯೋಜನೆ, 300ರಿಂದ 500+ ಕಿ.ಮೀ. ದೂರದವರೆಗೆ
- ವಾಯು ರಕ್ಷಣಾ ವ್ಯವಸ್ಥೆ: ಬರಾಕ್-8 ವಾಯು ರಕ್ಷಣಾ ಕ್ಷಿಪಣಿಗಳ ನಿಯೋಜನೆ (70-100 ಕಿ.ಮೀ. ದೂರದವರೆಗೆ ಡ್ರೋನ್, ಕ್ಷಿಪಣಿ ಧ್ವಂಸಗೊಳಿಸುವ ಸಾಮರ್ಥ್ಯ)
- ಸಬ್‌ಮರೀನ್ ನಿರೋಧಕ ವ್ಯವಸ್ಥೆ: ಜಲಾಂತರ್ಗಾಮಿ ನಿರೋಧಕ ಟೋರ್ಪಿಡೋ ಕ್ಷಿಪಣಿಗಳ ನಿಯೋಜನೆ

ದೇಶದ ಕೆಲವೆಡೆಗಳಲ್ಲಿ ತಾಪಮಾನವೂ ಏರಿಕೆ: ಐಎಂಡಿ

ಮೇನಲ್ಲಿ ಸರಾಸರಿಗೂ ಹೆಚ್ಚು ಮಳೆ

• ಹೊಸದಿಲ್ಲಿ: ಮೇ ತಿಂಗಳು ದೇಶದಲ್ಲಿ ಸರಾಸರಿ ಪ್ರಮಾಣಕ್ಕಿಂತ ಹೆಚ್ಚಿನ ಮಳೆಯಾಗಲಿದೆ. ಇದರೊಂದಿಗೆ ದೇಶದ ಕೆಲವು ಭಾಗಗಳಲ್ಲಿ ತಾಪಮಾನವೂ ಏರಿಕೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹವಾಮಾನ ನಿರೀಕ್ಷಿಸಿದೆ.

ಮಹಾರಾಷ್ಟ್ರ, ಗುಜರಾತ್, ಪೂರ್ವ ಕರಾವಳಿ ರಾಜ್ಯಗಳು, ಹಿಮಾಲಯದ ತಪ್ಪಲು ಪ್ರದೇಶಗಳ ಕೆಲವು ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಅಧಿಕ ಬಿಸಿಗಾಳಿ ಬೀಸುವ ಅಪಾಯವಿದೆ. ನೈಋತ್ಯ ಮುಂಗಾರು ಮೇ 14-16ರ ಅಂದಾಜು ಅಂಡಮಾನ್- ನಿಕೋಬಾರ್ ದ್ವೀಪ ಪ್ರವೇಶಿಸಲಿದ್ದು, ಮೇನಲ್ಲಿ ದೇಶದ ಹಲವು ಭಾಗಗಳಲ್ಲಿ ಕನಿಷ್ಠ ತಾಪಮಾನ ಕೂಡ ಸಾಮಾನ್ಯಕ್ಕಿಂತ ಅಧಿಕವಿರುವ ನಿರೀಕ್ಷೆ ಇದೆ ಎಂದು ಭಾರತ ಪವನಶಾಸ್ತ್ರ ಇಲಾಖೆ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ತಿಳಿಸಿದ್ದಾರೆ.

ಕನಿಷ್ಠ ತಾಪಮಾನ ಸಾಮಾನ್ಯಕ್ಕಿಂತ ಕಡಿಮೆ: ಈಶಾನ್ಯ ಭಾರತದ ದಕ್ಷಿಣ ಭಾಗಗಳು, ದಕ್ಷಿಣ ಪ್ರಸ್ಥಭೂಮಿಯ ಅಚ್ಚುಕಟ್ಟಿನ ಪ್ರದೇಶಗಳು, ಮಧ್ಯ ಭಾರತದ ಕೆಲವು ಭಾಗಗಳ ಸಹಿತ, ವಾಯವ್ಯ ಭಾರತದ ಹಲವು ಪ್ರದೇಶಗಳಲ್ಲಿ ಈ ಬಾರಿ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ ಕಡಿಮೆ ಅನುಭವವಾಗಲಿದೆ. ಈಶಾನ್ಯ ಮತ್ತು ಪೂರ್ವ ಮಧ್ಯಭಾರತ, ಪೂರ್ವ ಭಾರತದ ಕೆಲವು ಪ್ರದೇಶಗಳಲ್ಲಿ ಮೇ ತಿಂಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆ ಬೀಳಲಿದೆ. ಮಿಕ್ಕಂತೆ ದೇಶಾದ್ಯಂತ ಮಳೆಯ ಪ್ರಮಾಣ ಸಾಮಾನ್ಯಕ್ಕಿಂತ ಅಧಿಕವಿರುವುದು ಎಂದವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪ್ರಸ್ತುತ ಸಮಭಾಜಕ ಪೆಸಿಫಿಕ್ ಮೇಲೆ ಎಲ್-ನಿನೋ ದಕ್ಷಿಣ ಪ್ರವಾಹವು ತಟಸ್ಥ ಸ್ಥಿತಿಯಲಿ ಎಲ್‌ನಿನೋ ಕಡೆ ತೆರಳುತ್ತಿದೆ ಅಥವಾ ಶಾಂತಸಾಗರದ ಮಧ್ಯ ಭಾಗದಲ್ಲಿ ನಿಯತ ನೆಲೆಯಲ್ಲಿ ಸಾಗರದ ಮೇಲ್ಮೈ ತಾಪಮಾನ ಏರತೊಡಗಿದೆ. ನೈಋತ್ಯ ಮುಂಗಾರಿನ ಸಂದರ್ಭ ಎಲ್-ನಿನೋ ಸ್ಥಿತಿಗತಿಗಳು ವಿಕಸನಗೊಳ್ಳುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆಯ ಮುನ್ಸೂಚನೆ ವ್ಯವಸ್ಥೆ ಅಂದಾಜಿಸಿದೆ. ಏಪ್ರಿಲ್‌ನಲ್ಲಿ ದಕ್ಷಿಣ ಪ್ರಸ್ಥಭೂಮಿ ಹೊರತು ದೇಶದ ಬಹುತೇಕ ಪ್ರದೇಶಗಳಲ್ಲಿ ಗರಿಷ್ಠ ತಾಪಮಾನ ಸಾಮಾನ್ಯದಿಂದ ಸಾಮಾನ್ಯಕ್ಕಿಂತ ಕಡಿಮೆ ಅನುಭವವಾಗಿದೆ. ದಕ್ಷಿಣ ಪ್ರಸ್ಥಭೂಮಿಯಲ್ಲಿ ಗರಿಷ್ಠ ತಾಪಮಾನ ಸಾಮಾನ್ಯಕ್ಕಿಂತ ಅಧಿಕವಿದೆ ಎಂದು ಹೇಳಿಕೆ ತಿಳಿಸಿದೆ.

ಕಿರುಸುದ್ದಿ

ಕುಂಬಳೆ ಸರಕಾರಿ ಶಾಲೆ: ಶಿಕ್ಷಕರ ಹುದ್ದೆಗೆ ಸಂದರ್ಶನ

ಕುಂಬಳೆ: ಕುಂಬಳೆ ಸರಕಾರಿ ಪ್ರೌಢಶಾಲೆಯ ಪ್ರೌಢಶಾಲಾ ವಿಭಾಗದಲ್ಲಿ ಇಂಗ್ಲಿಷ್, ವಾಣಿಜ್ಯ ಮತ್ತು ರಸಾಯನಶಾಸ್ತ್ರ ವಿಷಯ ಗಳಿಗೆ ಹಿರಿಯ ಶಿಕ್ಷಕರು ಮತ್ತು ಅರ್ಥಶಾಸ್ತ್ರ, ಕಂಪ್ಯೂಟರ್ ಅಪ್ಲಿಕೇಶನ್‌ಗಳು, ಹಿಂದಿ, ಇಂಗ್ಲಿಷ್, ಅರೇಬಿಕ್, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಷಯಗಳಿಗೆ ಕಿರಿಯ ಶಿಕ್ಷಕರ ನೇಮಕಾತಿ ನಡೆಸಲಾಗುವುದು. ಈ ನಿಟ್ಟಿನಲ್ಲಿ ಮೇ 21 ರಂದು ಬೆಳಗ್ಗೆ 10.30ಕ್ಕೆ ಶಾಲೆಯಲ್ಲಿ ಸಂದರ್ಶನ ನಡೆಯಲಿದೆ. ಹೆಚ್ಚಿನ ವಿವರಗಳಿಗೆ 9495424378 ಕರೆ ಮಾಡಬಹುದು. ಮೇ 4ರಿಂದ 6ರ ತನಕ

ಬದಿಯಡ್ಕ ಶ್ರೀ ಪೂಮಾಣಿ ಕಿನ್ನಿಮಾಣಿ ದೈವಗಳ ನೇಮ

ಬದಿಯಡ್ಕ: ಬದಿಯಡ್ಕ (ನೀರ್ಚಾಲು) ಶ್ರೀ ಪೂಮಾಣಿ ಕಿನ್ನಿಮಾಣಿ ದೈವಗಳ ಕಾಲಾವಧಿ ನೇಮ ಮೇ 4ರಿಂದ 6ರ ವರೆಗೆ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಮೇ 3ರಂದು ರಾತ್ರಿ 7.30ಕ್ಕೆ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಿಂದ ಪಿಲಿಭೂತದ ಭಂಡಾರ ಹೊರಡುವುದು, 8 ಗಂಟೆಗೆ ಪೆರಡಾಲ ಗುತ್ತಿನಿಂದ ಕಿರುವಾಳು ಸಮೇತ ಪೆಲಡ್ಕತ್ತಾಯ ದೈವದ ಭಂಡಾರ ಹೊರಟು ಸ್ಥಾನಕ್ಕೆ ಬರುವುದು, 9 ಗಂಟೆಗೆ ಬೀರತ್ತಂಬಿಲ, ಅರಸಿನಹುಡಿ, ಅನ್ನದಾನ ನಡೆಯಲಿದೆ.

ಮೇ 5ರಂದು ಬೆಳಗ್ಗೆ 10ಕ್ಕೆ ಶ್ರೀ ಕಿನ್ನಿಮಾಣಿ ದೈವದ ನೇಮ ಆರಂಭ, ಮಧ್ಯಾಹ್ನ 12ಕ್ಕೆ ಪ್ರಸಾದ ವಿತರಣೆ, 1ರಿಂದ ಅನ್ನದಾನ, ಅಪರಾಹ್ನ 3.30ಕ್ಕೆ ಶ್ರೀ ಪೂಮಾಣಿ ದೈವದ ನೇಮ ಆರಂಭ, ಸಂಜೆ 4.30ರಿಂದ ಪ್ರಸಾದ ವಿತರಣೆ, ರಾತ್ರಿ 7.30ಕ್ಕೆ ಬೀರತ್ತಂಬಿಲ, ಅರಸಿನ ಹುಡಿ ವಿತರಣೆ ನೆರವೇರಲಿದೆ.

ಮೇ 6ರಂದು ಬೆಳಗ್ಗೆ 10.30ಕ್ಕೆ ಪಿಲಿಭೂತ ದೈವಗಳ ನೇಮ ಆರಂಭ, ಮಧ್ಯಾಹ್ನ 12ಕ್ಕೆ ಪ್ರಸಾದ ವಿತರಣೆ, ಅನ್ನದಾನ, ಅಪರಾಹ್ನ 2 ಗಂಟೆಗೆ ಪೆಲಡ್ಕತ್ತಾಯ ದೈವಗಳ ನೇಮ ಆರಂಭ, 3ರಿಂದ ಪ್ರಸಾದ ವಿತರಣೆ, ಸಂಜೆ 4ಕ್ಕೆ ಅವಭೃತದೊಂದಿಗೆ ಕಾರ್ಯಕ್ರಮ ಸಂಪನ್ನವಾಗಲಿದೆ.

ಪಂಚವರ್ಣದಿಂದ ಕೋಡಿಯಿಂದ ಕೋಟದವರೆಗಿನ ಐದೂವರೆ ಕಿ.ಮೀ. ಬೀಚ್ ಕ್ಲೀನಿಂಗ್ ಕಾರ್ಯಕ್ರಮ

ಹುಟ್ಟುಹಬ್ಬಕ್ಕೆ ಇಲ್ಲಿ 'ಸ್ವಚ್ಛತೆ'ಯ ಭರ್ಜರಿ ಗಿಫ್ಟ್!

ಕೋಟ: ಪಂಚವರ್ಣ ಯುವಕ ಮಂಡಲ ಪ್ರವರ್ತಿತಸಂಸ್ಥೆಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು, ಮಣೂರು ಫ್ರೆಂಡ್ಸ್, ಹಂದಟ್ಟು ಮಹಿಳಾ ಬಳಗದ ಸಹಯೋಗದೊಂದಿಗೆ ಪ್ರತಿ ಭಾನುವಾರದ ಆಯೋಜಿಸಿಕೊಂಡು ಬರುತ್ತಿರುವ ಪರಿಸರ ಸ್ನೇಹಿ ಸ್ವಚ್ಛತಾ ಅಭಿಯಾನಕ್ಕೆ ಇದೀಗ 300ನೇ ವಾರದ ಸಂಭ್ರಮ. ಸದಾ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡ ಈ ಸಂಘಟನೆ ಪ್ರತಿ ಭಾನುವಾರ ಬಂತೆಂದರೆ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೀಚ್ ಹಾಗೂ ಒಳರಸ್ತೆಗಳಲ್ಲಿನ ತ್ಯಾಜ್ಯ ಮುಕ್ತಗೊಳಿಸುವ ಜತೆಗೆ ಸಾವಿರಾರು ಗಿಡಗಳನ್ನು ನೆಟ್ಟು ಪೋಷಿಸುವ ಇವರ ಈ ಕೈಂಕರ್ಯಕ್ಕೆ ಇದೀಗ ಇದೇ ಮೇ.3ರಂದು ಪೂರ್ವಾಹ್ನ 7 ಗಂಟೆಗೆ ಬೃಹತ್ ಬೀಚ್ ಸ್ವಚ್ಛತಾ ಅಭಿಯಾನಕ್ಕೆ ಮುನ್ನುಡಿ ಬರೆಯಲಿದೆ.

ಕೋಡಿ ಗ್ರಾಮಪಂಚಾಯತ್ ಮೂಲಕ ಪ್ರಾರಂಭಿಸಿಕೊಳ್ಳುವ ಈ ಅಭಿಯಾನ ಸಾಲಿಗ್ರಾಮ ಪಟ್ಟಣ ಪಂಚಾಯತ್, ಕೋಟತಟ್ಟು ಗ್ರಾಮ ಪಂಚಾಯತ್, ಕೋಟ ಗ್ರಾಮಪಂಚಾಯತ್ ವ್ಯಾಪ್ತಿಯ ಎಲ್ಲಾ ಭಾಗಗಳ ಬೀಚ್ ಕ್ಲೀನಿಂಗ್ ಆಯ್ಕೆಗೊಳಿಸಿದ್ದು ಇದರ ತಯಾರಿಗಳು ಈಗಾಗಲೇ ಪೂರ್ಣಗೊಳಿಸಿದೆ.

ಆನಂದ್ ಕುಂದರ್ 78ನೇ ಹುಟ್ಟುಹಬ್ಬಕ್ಕೆ ಸಮರ್ಪಿತ ಕಾರ್ಯಕ್ರಮ

ಪಂಚವರ್ಣ ಸಂಘಟನೆ ಈ ಪರಿಸರಸ್ನೇಹಿ ಅಭಿಯಾನ ಪ್ರಾರಂಭಿಸಿಕೊಂಡ ದಿನಾಂಕದಿಂದ ಹಿಡಿದು ಇಲ್ಲಿಯವರೆಗೆ ಈ ಸಂಘಟನೆಗೆ ಬೆನ್ನೆಲುಬಾಗಿ ಜಿಲ್ಲಾಡಳಿತ, ಸ್ಥಳೀಯಾಡಳಿತಗಳು ಇದ್ದರೂ ಇಲ್ಲಿನ ಸಮಾಜ ಸೇವಕ ಆನಂದ್ ಸಿ. ಕುಂದರ್‌ರವರ ಪ್ರೋತ್ಸಾಹ ಈ ಸಂಘಟನೆಗೆ ಆಧಾರಸ್ಥಂಭವಾಗಿ ಕಾರ್ಯನಿರ್ವಹಿಸಿದೆ. ಈ ಹಿನ್ನಲೆಯಲ್ಲಿ 200ನೇ ವಾರದ 5.5 ಕಿಮೀ ಬೀಚ್ ರಸ್ತೆ ಕುಂದರ್‌ರ 75ನೇ ಹುಟ್ಟುಹಬ್ಬಕ್ಕೆ ಈ ಸಂಘಟನೆ ಸಮರ್ಪಿಸಿಕೊಂಡಿದೆ. ಇದೀಗ 300ನೇ



ವಾರ ಕೂಡ ಅವರ 78ನೇ ವರ್ಷೋತ್ಸವಕ್ಕೆ ಸಮರ್ಪಿಸಲು ಅಣಿಯಾಗಿದೆ.

ಜಿಲ್ಲಾಡಳಿತದ ನೆರವು

ಈಗಾಗಲೇ ಸ್ಥಳೀಯಾಡಳಿತಗಳು ಈ ಸ್ವಚ್ಛತಾ ಅಭಿಯಾನಕ್ಕೆ ಕೈಜೋಡಿಸಿಕೊಂಡಿದ್ದು ಜಿಲ್ಲಾಡಳಿತ, ಮಾಲಿನ್ಯ ನಿಯಂತ್ರಣ ಮಂಡಳಿ,ಪ್ರವಾಸೋದ್ಯಮ ಇಲಾಖೆ ಸೇರಿದಂತೆ ಹಲವು ಇಲಾಖೆಗಳ ವಿಶೇಷ ಮುತುವರ್ಜಿಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಹೇಗಿದೆ ತಯಾರಿ ಎಲ್ಲೆಲ್ಲಿ ಕ್ಲಿನಿಂಗ್ ಸ್ಪಾಟ್

ಕೋಡಿ ಗ್ರಾ.ಪಂ ನಿಂದ ಕೋಟ ಗ್ರಾ.ಪಂ ವರೆಗಿನ 5.5 ಕಿ.ಮೀ ಬೀಚ್ ಕ್ಲಿನಿಂಗ್ ಕಾರ್ಯಕ್ರಮ ಯಶಸ್ವಿ ಹಲವು ಭಾಗಗಳನ್ನು ಆಯ್ಕೆಗೊಳಿಸ ಲಾಗಿದೆ. ಅದರಲ್ಲಿ ಕೋಡಿ ಹೊಸಬೇಂಗ್ರೆ ಬೀಚ್, ರಾಮಮಂದಿರ ಸಮೀಪ, ಮಹಾಸತೀಶ್ವರಿ ಬೀಚ್, ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ ಪಾರಂಪಳ್ಳಿ ಜಯಂತ್ ಸಾಲಿಯಾನ್ ಬೀಚ್,ಕೋಟತಟ್ಟು ಹಾಗೂ ಪಟ್ಟಣಪಂಚಾಯತ್ ನಡುವಿನ ಪಂಡುವಣ್ಣ ಹೋಟೆಲ್ ಸಮೀಪ, ಕೋಟತಟ್ಟು ಗ್ರಾ.ಪಂ.ನ ರಾಮಮಂದಿರ ಸಮೀಪ, ಕಾರಂತರ ಹೋಟೆಲ್ ಸಮೀಪ ಬೀಚ್, ಶಿರಸಿ ಮಾರಿಯಮ್ಮ ಕಡುವಿನ ಬೀಚ್,ತದನಂತರ ಕೊನೆಯದಾಗಿ ಕೋ. ಪಂ. ಮಣೂರು ಆನಂದ್ ಸಿ ಕುಂದರ್ ಮನೆ ಕಡುವಿನ ಬೀಚ್‌ನಲ್ಲಿ ಸಮಾರೋಪ ನಡೆಯಲಿದೆ.

ದಾಖಲೆಯ ಅಭಿಯಾನ



ನಮ್ಮೂರಿನ ಹೆಮ್ಮೆಯ ಸಂಘಟನೆ ಪಂಚವರ್ಣ ಇವರ ಪ್ರತಿ ಸಮಾಜಮುಖಿ ಕಾರ್ಯಕ್ರಮಗಳ ಜತೆ ಸ್ವಚ್ಛತಾ ಕಾರ್ಯಕ್ರಮ ಇಡೀ ರಾಜ್ಯಕ್ಕೆ ಮಾದರಿಯಾಗಿದೆ ಇದೀಗ 300ರ ಅಭಿಯಾನ ಹೊಸ ದಾಖಲೆಯ ಅಭಿಯಾನವಾಗಿ ಮೂಡಿ ಬರಲಿದೆ

■ ಆನಂದ್ ಸಿ. ಕುಂದರ್
ಪ್ರವರ್ತಕರು, ಗೀತಾನಂದ ಫೌಂಡೇಶನ್ ಮಣೂರು.

ಯಾವಾವ ಸಂಘಟನೆ, ಶಿಕ್ಷಣ ಸಂಸ್ಥೆಗಳುಭಾಗಿ

ಈ ಬೃಹತ್ ಬೀಚ್ ಕ್ಲಿನಿಂಗ್ ಅಭಿಯಾನದಲ್ಲಿ ಈಗಾಗಲೇ ಹಲವು ಸಂಘಸಂಸ್ಥೆಗಳು,ಶಿಕ್ಷಣ ಸಂಸ್ಥೆಗಳು ಭಾಗಿಯಾಗಲಿವೆ ಅವುಗಳಲ್ಲಿ ಆಶ್ರೀತ್ ಸಮೂಹ ಶಿಕ್ಷಣ ಸಂಸ್ಥೆಗಳು,ಎಂ.ಐ.ಟಿ ಮಣಿಪಾಲ,ಎಂ.ಐ.ಟಿ ಮೂಡ್ಲಕಟ್ಟೆ ಇನ್ಸ್ಟಿಟ್ಯೂಟ್ ಟೆಕ್ನಾಲಾಜಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಉಡುಪಿ ಜಿಲ್ಲೆಯ ವಿವಿಧ ವಲಯ ಒಕ್ಕೂಟ ಇದರ ಶೌರ್ಯ ಟೀಮ್, ಮೊಗವೀರ ಯುವ ಸಂಘಟನೆ ಜಿಲ್ಲಾ ವಿವಿಧ ಘಟಕಗಳು, ಲಕ್ಷ್ಮಿ ಸೋಮಬಂಗೇರ ಡಿಗ್ರಿ ಕಾಲೇಜು,ವಿವೇಕ ವಿದ್ಯಾಸಂಸ್ಥೆ,ಕೋಟ,ಕೋಟತಟ್ಟು, ಕೋಡಿ ಗ್ರಾಮಪಂಚಾಯತ್‌ಗಳ ಸಂಜೀವಿ ಒಕ್ಕೂಟ,ಸ್ತ್ರೀ ಶಕ್ತಿ ಸಂಘಟನೆಗಳು,ಮಾಜಿ ಪಂಚಾಯತ್ ಪ್ರತಿನಿಧಿಗಳು,ಜನತಾ ಸಮೂಹ ಸಂಸ್ಥೆ ಕೋಟ, ಫಾರ್ಚುನ್ ನರ್ಸಿಂಗ್ ಕಾಲೇಜು ಮಾಬುಕಳ, ಗೀತಾನಂದ ಫೌಂಡೇಶನ್ ಮಣೂರು, ಶ್ರೀರಾಮ ಪರ್ವ ಗೆಳೆಯರ ಬಳಗ ಕೋಡಿ,ಪ್ರಗತಿ ಯುವಕ ಮಂಡಲ ಕೋಡಿ, ಸುಮಧುರ ಯುವಕ ಸಂಘ ಕೋಡಿ, ವಿನ್ ಲೈಟ್ ಸ್ಪೋರ್ಟ್ಸ್ ಕ್ಲಬ್ ಪಾರಂಪಳ್ಳಿ,ಅರಮ ವಿಜಯ ಸ್ಪೋರ್ಟ್ಸ್ ಕ್ಲಬ್ ಪಡುಕರೆ, ತೋಳಾರ್ ಓಷಿಯನ್ ಪ್ರಾಡೆಕ್ಟ್ ಪಡುಕರೆ, ಪಾಂಚಜನ್ಯ ಸಂಘ ಪಾರಂಪಳ್ಳಿ, ಅಯೋಧ್ಯಾ ಫ್ರೆಂಡ್ಸ್ ಕೋಡಿ,ಕ್ಲಿನ್ ಕುಂದಾಪುರ,ಕ್ಲಿನ್ ತ್ರಾಸಿ, ಕ್ಲಿನ್ ಕಿನಾರೆ ಬೈಂದೂರು, ಕ್ಲಿನ್ ಹಾವಂಜೆ ತಂಡಗಳು,ಕೋಡಿ ಗ್ರಾ.ಪಂ, ಕೋಟತಟ್ಟು ಗ್ರಾ.ಪಂ, ಕೋಟ ಗ್ರಾ.ಪಂ, ಸಾಲಿಗ್ರಾಮ ಪಟ್ಟಣ ಪಂಚಾಯತ್‌ಗಳು ಸಹಯೋಗ ನೀಡಲಿದೆ.

ಹೇಗಿದೆ ಈ ಯೋಜನೆ

ಇದೇ ಮೊದಲ ಬಾರಿ ಈ ಪ್ರಮಾಣದ ದೂರ ಕ್ರಮಿಸುವ ಬೀಚ್ ಕ್ಲಿನಿಂಗ್ ಅಭಿಯಾನ ರಾಜ್ಯದಲ್ಲೆ ಪ್ರಥಮಬಾರಿಗೆಆಯೋಜನೆಗೊಳ್ಳಲಿದೆ.ಸುಮಾರು 400ಕ್ಕೂ ಅಧಿಕ ಮಂದಿ ಈ ಕ್ಲಿನ್ ಅಭಿಯಾನದಲ್ಲಿ ಭಾಗಿಯಾಗುವ ನಿರೀಕ್ಷೆ ಇದ್ದು, ಬೆಂಗಳೂರಿನ ಕ್ಯಾಪ್ಸ್ ಫೌಂಡೇಶನ್, ಶ್ರೀ ಕೃಷ್ಣಪ್ರಸಾದ್ ಕ್ಯಾಶು ಇಂಡಸ್ಟ್ರೀಸ್ ವಂಡಾರು, ಕೋಟ ಸಿ ಎ ಬ್ಯಾಂಕ್ , ಕೆ.ಎಂ.ಎಫ್ ನಿರ್ದೇಶಕ ಶಿವಮೂರ್ತಿ ಉಪಾಧ್ಯಾ, ಗೀತಾನಂದ ಫೌಂಡೇಶನ್ ಮಣೂರು, ಜನತಾ ಸಮೂಹ ಸಂಸ್ಥೆಗಳು ಸೇರಿದಂತೆ ಅನೇಕ ಸಂಸ್ಥೆಗಳುಸಂಪೂರ್ಣ ಸಹಕಾರ ನೀಡಲಿದೆ.

ಜನಜಾಗೃತಿ ಸಂಕೇತ



ನಮ್ಮ ಪಂಚವರ್ಣ ಸಂಘಟನೆ ಪ್ರತಿ ಭಾನುವಾರದ ಈ ಪರಿಸರಸ್ನೇಹಿ ಅಭಿಯಾನ ಸಮಾಜ ಪರಿವರ್ತನೆಯ ಜತೆಗೆ ಪ್ರಕೃತಿ ಮಾತೆಯನ್ನು ಆರಾಧಿಸುವ ಕಾರ್ಯವಾಗಿದೆ. 300ವಾರ ಕ್ರಮಿಸುವುದೆಂದರೆ ಅದೊಂದು ಸಾಹಸವೇ ಸರಿ ಭಾನುವಾರ ನಡೆಯುವ ಈ ಕಾರ್ಯ ಪ್ರಧಾನಮಂತ್ರಿಗಳ ಕನಸುಗಳಿಗೆ ಜೀವ ತುಂಬುವ ಜನಜಾಗೃತಿ ಸಂಕೇತ.

■ ಕೆ.ಮನೋಹರ್ ಪೂಜಾರಿ
ಅಧ್ಯಕ್ಷರು ಪಂಚವರ್ಣ ಯುವಕ ಮಂಡಲ ಕೋಟ

ಸಂಸದರಿಂದ ಚಾಲನೆ

ಸಂಸದ ಕೋಟ ಶ್ರೀನಿವಾಸ ಪೂಜಾರಿ ಸಮ್ಮುಖದಲ್ಲಿ ಈ ಅಭಿಯಾನಕ್ಕೆ ಚಾಲನೆ ದೊರಕಲಿದ್ದು, ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಯೋಜನಾಧಿಕಾರಿ ಉದಯ್ ಕುಮಾರ್ ಶೆಟ್ಟಿ, ಪ್ರವಾಸೋದ್ಯಮ ಇಲಾಖೆಯ ಭವಿಷ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಚಾಲನಾ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಶಾಸಕ ಕಿರಣ್ ಕುಮಾರ್ ಕೊಡ್ಗಿ ಸಮಾರೋಪದಲ್ಲಿ ಭಾಗಿಯಾಗಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಸ್ವಚ್ಛತಾ ತಂಡಕ್ಕೆ ಗೌರವಾರ್ಪಣೆ,78ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಸಮಾಜಸೇವಕ ಆನಂದ್ ಸಿ. ಕುಂದರ್ ರವರಿಗೆ ಗೌರವ ಸಮ್ಮಾನ ನೆರವೇರಲಿದೆ.

ಬಿಲ್ಲವರ ಯೂನಿಯನ್ ಬೈಲಾ ಪ್ರಕಾರವೇ ಕುದ್ರೋಳಿ ಕ್ಷೇತ್ರವನ್ನು ಮುನ್ನಡೆಸಲು ನೂತನ ಸಮಿತಿಯು ಅಧಿಕೃತವಾಗಿದೆ: ಮಿಜಾರ್

ಮಂಗಳೂರು: ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಆಡಳಿತ ಸಮಿತಿಗೆ ಅಖಿಲ ಭಾರತ ಬಿಲ್ಲವರ ಯೂನಿಯನ್ ವತಿಯಿಂದ 2026-27ನೇ ಸಾಲಿಗೆ ನೂತನ ಪದಾಧಿಕಾರಿಗಳ ನೇಮಕ ನಡೆದಿದ್ದು, ಅಖಿಲ ಭಾರತ ಬಿಲ್ಲವರ ಯೂನಿಯನ್ ಬೈಲಾ ಪ್ರಕಾರವೇ ಕ್ಷೇತ್ರವನ್ನು ಮುನ್ನಡೆಸಲು ನೂತನ ಸಮಿತಿಯು ಅಧಿಕೃತವಾಗಿದೆ ಎಂದು ನೂತನ ಸಮಿತಿ ಕಾರ್ಯದರ್ಶಿ ರವಿಶಂಕರ್ ಮಿಜಾರ್ ತಿಳಿಸಿದರು.

ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಆಡಳಿತ ಸಮಿತಿ ನೂತನ ಅಧ್ಯಕ್ಷರಾಗಿ ಎಚ್.ಎಸ್ ಸಾಯಿರಾಮ್, ಉಪಾಧ್ಯಕ್ಷರಾಗಿ ಊರ್ಮಿಳಾ ರಮೇಶ್ ಕುಮಾರ್, ಕಾರ್ಯದರ್ಶಿಯಾಗಿ ರವಿಶಂಕರ್ ಮಿಜಾರ್, ಖಜಾಂಚಿಯಾಗಿ ಶೇಖರ್ ಪೂಜಾರಿ, ಸದಸ್ಯರಾಗಿ ಜಗದೀಪ್ ಸುವರ್ಣ, ಕೆ.ಟಿ ಸುವರ್ಣ, ಎಚ್. ರತಿಂದ್ರನಾಥ, ಸದಾನಂದ ಪೂಜಾರಿ, ಮತ್ತು ಶರತ್ ಸುವರ್ಣ ಬಜ್ಪೆ ಚುನಾಯಿತರಾಗಿದ್ದಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಕುದ್ರೋಳಿಯಲ್ಲಿ ಪ್ರಸ್ತುತ ಆಡಳಿತ ನಡೆಸುತ್ತಿರುವ ಸಮಿತಿ ಅನಧಿಕೃತವಾಗಿದೆ. 2025ರ ಜೂನ್ 20ರಂದು ಕುದ್ರೋಳಿ ಗೋಕರ್ಣನಾಥ ಕ್ಷೇತ್ರದ ಆಡಳಿತ ಸಮಿತಿಯ ಕಾರ್ಯದರ್ಶಿಯಾಗಿದ್ದ ಮಾಧವ ಸುವರ್ಣ ಅವರು ವಾಟ್ಸಾಪ್ ಮುಖಾಂತರ ಸಮಿತಿಯ ಸದಸ್ಯರು ಸೇರಿದಂತೆ ಕೆಲವರನ್ನು ಸಭೆಗೆ ಆಹ್ವಾನಿಸಿ ಇದರಲ್ಲಿ ಬಿ.ಜನಾರ್ದನ ಪೂಜಾರಿ ಅವರು ಉಪಸ್ಥಿತಿ ಇರಲಿದ್ದಾರೆ ಎಂದು ತಿಳಿಸಿದ್ದರು. ಗೋಕರ್ಣನಾಥ ಕ್ಷೇತ್ರದಲ್ಲಿ ಕರೆಯಲಾಗಿದ್ದ ಈ ಸಭೆಯು ಕ್ಷೇತ್ರದ ಆಡಳಿತ ಸಮಿತಿಯ ಅಧ್ಯಕ್ಷರ ಅನುಮತಿ ಇಲ್ಲದೇ ನಡೆದಿರುವುದರಿಂದ ಇಲ್ಲಿನ ಯಾವುದೇ ಚರ್ಚೆಯೂ ಅಸಂವಿಧಾನಿಕವಾಗಿರುತ್ತದೆ. ಈ ಸಭೆಯಲ್ಲಿ ಕ್ಷೇತ್ರದ ಆಡಳಿತ ಸಮಿತಿಯ ಎಂಟು ಜನ ಸದಸ್ಯರುಗಳಲ್ಲಿ ಐದು ಜನ ಸದಸ್ಯರು ಗೈರು ಹಾಜರಾಗಿದ್ದು, ಅಗತ್ಯ ಬಹುಮತವೂ ಇರಲಿಲ್ಲ. ಇಂತಹ ಅನಧಿಕೃತ ಗುಂಪು ಚರ್ಚೆಯಲ್ಲಿ ಕ್ಷೇತ್ರದ ಆಡಳಿತ ಸಮಿತಿಗೆ ಬದಲಾಗಿ ಏಕಪಕ್ಷೀಯವಾಗಿ ನೂತನ ಸಮಿತಿಯನ್ನು ಘೋಷಣೆ ಮಾಡಿರುವುದು ಕ್ಷೇತ್ರದ ಘನತೆಗೆ ಧಕ್ಕೆ ತರುವಂತಹ ಪ್ರಹಸನವಾಗಿದೆ ಎಂದರು.

ನಂತರದ ದಿನಗಳಲ್ಲಿ ಈ ಕುರಿತಂತೆ ನಮಗೆ ಕೋರ್ಟ್‌ನಿಂದ ಕೆವಿಎಟ್ ಪಿಟಿಷಿಯನ್ ಕಳುಹಿಸಲಾಯಿತು. ಆಡಳಿತ ಸಮಿತಿಯಲ್ಲಿದ್ದ ನಾವು ಐದು ಜನರು ಕ್ಷೇತ್ರದಲ್ಲಿ ಅನಧಿಕೃತವಾಗಿ ಆಡಳಿತ ನಡೆಸುತ್ತಿದ್ದ ಸಮಿತಿಗೆ ನೋಟಿಸ್ ಜಾರಿ ಮಾಡುವ ಮುಖಾಂತರ ಈ ವಿಷಯವು ನ್ಯಾಯಾಲಯದ ಅಂಗಳಕ್ಕೆ ಹೋಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ನ್ಯಾಯಾಲಯದಲ್ಲಿ ಸಮಗ್ರ ವಿಚಾರಣೆ ನಡೆದು, ಅಂತಿಮವಾಗಿ ನಮ್ಮ ಪರವಾಗಿ ಆದೇಶ ಬಂದಿರುವುದು ನ್ಯಾಯಕ್ಕೆ ದೊರೆತ ಮನ್ನಣೆಯಾಗಿದೆ ಎಂದು ಅವರು ಹೇಳಿದರು.

2026ರ ಫೆ.16ರಂದು ಕುದ್ರೋಳಿ ಗೋಕರ್ಣನಾಥೇಶ್ವರ ಕ್ಷೇತ್ರದ ವಠಾರದಲ್ಲಿರುವ ನಾರಾಯಣ ಗುರು ಕಾಲೇಜಿನ ಸಭಾಂಗಣದಲ್ಲಿ ಅಖಿಲ ಭಾರತ ಬಿಲ್ಲವರ ಯೂನಿಯನ್ ವಾರ್ಷಿಕ ಪ್ರತಿನಿಧಿ ಸಭೆಯು ಜರುಗಿದ್ದು, ಆ ಸಭೆಯ ನಿರ್ಣಯದಂತೆ 50 ಜನ ಸದಸ್ಯರ ಎಕ್ಸಿಕ್ಯೂಟಿವ್ ಸಮಿತಿಯನ್ನು ರಚನೆ ಮಾಡಿ ಅದರಲ್ಲಿ ಎಚ್.ಎಸ್. ಸಾಯಿರಾಮ್, ಊರ್ಮಿಳಾ ರಮೇಶ್ ಕುಮಾರ್, ಕೆ.ಟಿ ಸುವರ್ಣ, ಜಗದೀಪ್ ಸುವರ್ಣ, ರವಿಶಂಕರ್ ಮಿಜಾರ್, ಶೇಖರ್ ಪೂಜಾರಿ, ಎಚ್.ರತಿಂದ್ರನಾಥ, ಸದಾನಂದ ಪೂಜಾರಿ, ಮತ್ತು ಶರತ್ ಸುವರ್ಣ ಬಜ್ಪೆ ಸೇರಿದಂತೆ ಒಟ್ಟು 9 ಜನರನ್ನು ಶ್ರೀ ಗೋಕರ್ಣನಾಥ ಕ್ಷೇತ್ರದ 2026-27ನೇ ಸಾಲಿನ ಆಡಳಿತ ಸಮಿತಿಗೆ ಚುನಾಯಿತರನ್ನಾಗಿಸಿ ಅಧಿಕೃತವಾಗಿ ಘೋಷಿಸಲಾಯಿತು. ಈ ಪ್ರಕಾರ ಸಭೆ ನಡೆಸಿ ಕ್ಷೇತ್ರದ ಆಡಳಿತ ಸಮಿತಿಗೆ ನೂತನ ಪದಾಧಿಕಾರಿಗಳನ್ನಾಗಿ ಘೋಷಿಸಲಾಗಿದೆ ಎಂದು ವಿವರಿಸಿದರು.

ನೂತನ ಸಮಿತಿ ಅಧ್ಯಕ್ಷ ಎಚ್.ಎಸ್. ಸಾಯಿರಾಮ್, ಖಜಾಂಚಿ ಶೇಖರ್ ಪೂಜಾರಿ, ಸದಸ್ಯರಾದ ಜಗದೀಪ್ ಸುವರ್ಣ, ಕೆ.ಟಿ. ಸುವರ್ಣ, ಸದಾನಂದ ಪೂಜಾರಿ, ಶರತ್ ಸುವರ್ಣ ಬಜ್ಪೆ ಉಪಸ್ಥಿತರಿದ್ದರು.



ನೂತನ ಸಮಿತಿ ರಚನೆ

2025ರ ಜೂನ್‌ನಲ್ಲಿ ಅನಧಿಕೃತ ಸಭೆ ಮೂಲಕ ನೂತನ ಆಡಳಿತ ಮಂಡಳಿ ರಚಿಸಿ ಗೊಂದಲ ಸೃಷ್ಟಿಸಲಾಯಿತು. ಈ ಬಗ್ಗೆ ನ್ಯಾಯಾಲಯದ ಮೊರೆ ಹೋದಾಗ ಮೊದಲು ನಮ್ಮ ಪರವಾಗಿ ತೀರ್ಪು ಬರಲಿಲ್ಲ. ಬಳಿಕ ಮೇಲ್ಮನವಿ ಸಲ್ಲಿಸಿದಾಗ ನಮ್ಮ ಪರವಾಗಿ ಆದೇಶ ಬಂದಿದೆ. ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ಮುಂದುವರೆದಿದ್ದು, ನ್ಯಾಯಾಲಯದ ಆದೇಶದಂತೆ ನಾವು ಮುನ್ನಡೆಯುತ್ತೇವೆ. ಕುದ್ರೋಳಿ ದೇವಸ್ಥಾನಕ್ಕೆ ಆಡಳಿತ ಮಂಡಳಿ ನೇಮಿಸುವ ಹಕ್ಕು ಬೈಲಾ ಪ್ರಕಾರ ಅಖಿಲ ಭಾರತ ಬಿಲ್ಲವರ ಯೂನಿಯನ್‌ಗೆ ಇದೆ. ಅದರಂತೆ ನೂತನ ಸಮಿತಿ ರಚನೆಯಾಗಿದೆ ಎಂದು ರವಿಶಂಕರ ಮಿಜಾರ್ ತಿಳಿಸಿದರು.

ಜೂ.5-7: ಪುತ್ತೂರಿನಲ್ಲಿ ಹಲಸು, ಹಣ್ಣುಗಳ ಮೇಳ

ಪುತ್ತೂರು: ಪುತ್ತೂರಿನಲ್ಲಿ 8ನೇ ಆವೃತ್ತಿಯ ಹಲಸು-ಹಣ್ಣು ಮೇಳಕ್ಕೆ ಸಿದ್ಧತೆಗಳು ನಡೆಯುತ್ತಿವೆ. ನಗರದ ಹೃದಯಭಾಗದಲ್ಲಿರುವ ಕಿಲ್ಲೆ ಮೈದಾನದಲ್ಲಿ ಜೂ.5ರಿಂದ 7ರ ತನಕ ನವತೇಜ ಟ್ರಸ್ಟ್ ಮತ್ತು ಅನ್ಯಾನ್ಯ ಸಂಸ್ಥೆಗಳ ಸಹಯೋಗದಲ್ಲಿ ಹಲಸು ಮತ್ತು ಹಣ್ಣುಗಳ ಮೇಳ ನಡೆಯಲಿದೆ.

ಮೇಳದಲ್ಲಿ ಈಗಾಗಲೇ ಮರೆತ ಹಾಗೂ ಮರೆವಿನಂಚಿಲ್ಲಿರುವ ಪಾರಂಪರಿಕ ತಿಂಡಿಗಳನ್ನು ಸ್ಥಳದಲ್ಲೇ ತಯಾರಿಸುವ ಯೋಜನೆ ರೂಪಿಸಲಾಗಿದೆ. ಹಲಸಿನ ತಳಿಗಳನ್ನು ಅಭಿವೃದ್ಧಿಪಡಿಸಿದ ಪ್ರಸಿದ್ಧ ನರ್ಸರಿಗಳಿಂದ ಗಿಡಗಳ ಪ್ರದರ್ಶನ ಮತ್ತು ಮಾರಾಟವಿದೆ. ಕೃತಕ ಬಣ್ಣ ರಾಸಾಯನಿಕಗಳ ಬಳಕೆಯಿಲ್ಲದ ಉತ್ಪನ್ನಗಳಿಗೆ ಆದ್ಯತೆ. ಮೇಳದ ಕೊನೆಯ ದಿನದಂದು ಹಲಸು ಮತ್ತು ಮಾವಿನ ಊಟ. ಸುಮಾರು 25 ಬಗೆಯ ವೈವಿಧ್ಯ ಖಾದ್ಯಗಳು. ಮೊದಲೇ ಟಿಕೇಟ್ ಕಾದಿರಿಸಿದ 250 ಮಂದಿಗೆ ಭೋಜನ ಸವಿಯುವ ಅವಕಾಶ.

ಹಲಸು ರಸಪ್ರಶ್ನೆ

ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಹಲಸು-ಹಣ್ಣುಗಳ 'ರಸಪ್ರಶ್ನೆ' ಕಾರ್ಯಕ್ರಮವು ಈ ವರುಷದ ಮೇಳದ ಹೈಲೈಟ್ ಆಗಿದೆ. ಗೇರು ಹಣ್ಣಿನ ಜ್ಯೂಸ್, ಹಲ್ವ,ಉಪ್ಪಿನಕಾಯಿ,ಐಸ್‌ಕ್ರೀಮ್,ಸುಕಾಜು.. ಮೊದಲಾದ ಉತ್ಪನ್ನಗಳು. ಹುಣಸೂರು, ಸಖರಾಯಪಟ್ನ, ದೊಡ್ಡಬಳ್ಳಾಪುರದ ರುಚಿ ರುಚಿಯಾದ ಹಲಸಿನ ಹಣ್ಣುಗಳು ರುಚಿಪ್ರಿಯರ ನಾಲಗೆ ಗೆಲ್ಲಲಿದೆ. ಅಂತೆಯೇ ಬ್ರಹ್ಮಾವರ, ಚನ್ನಪಟ್ಟಣದಿಂದ ಉತ್ಕೃಷ್ಟ ಮಾವಿನ ಹಣ್ಣುಗಳು ಮೇಳಕ್ಕೆ ಬರಲಿದೆ. ಹಲಸು ಹಾಗೂ ಮಾವಿನ ಹಣ್ಣುಗಳನ್ನು ಕೃಷಿಕರೇ ಸ್ವತಃ ಬೆಳೆದು, ಮಾರುವ ವ್ಯವಸ್ಥೆಯಿದೆ.

ಮೌಲ್ಯವರ್ಧಿತ ಉತ್ಪನ್ನಗಳು

ಹಲಸಿನ ಉಂಡ್ಲಕಾಳು, ಚಿಪ್ಸ್, ಹಪ್ಪಳ, ದೋಸೆ, ಮಂಚೂರಿ, ಕಬಾಬ್, ಮುಳುಕ, ಜ್ಯೂಸ್, ಸೊಳೆ ರೊಟ್ಟಿ, ಕೇಕ್, ಹಲ್ವ, ಆತಿರಸ, ದೋಸೆ, ಸೇಮಿಗೆ, ಬನ್ಸ್, ಪಲಾವ್, ಪಾಯಸ, ಸೋಂಟೆ, ಕೊಟ್ಟಿಗೆ, ಗೆಣಸಲೆ, ಪೋಡಿ, ಮಾಂಬಳ, ಹಣ್ಣಿನ ಐಸ್‌ಕ್ರೀಂ... ಹೀಗೆ ಹತ್ತಾರು ಬಗೆಯನ್ನು ಸವಿಯಲು ಅವಕಾಶ. ಹಲಸಿನ ಹಣ್ಣಿನ ಮಳಿಗೆಯಿದೆ. ಹಲಸಿನ ಬೀಜದ ಹೋಳಿಗೆ, ಹಣ್ಣಿನ ಹೋಳಿಗೆಗಳು ಲಭ್ಯ.

ಈ ಋತುವಿನಲ್ಲಿ ಸಿಗುವ ರಂಬುಟಾನ್, ಡ್ರ್ಯಾಗನ್, ಮ್ಯಾಂಗೋಸ್ಟಿನ್, ಬೆಣ್ಣೆ ಹಣ್ಣು ಮೊದಲಾದ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ, ವಿಶೇಷ ಆಹಾರ ಮಳಿಗೆ, ಅಗ್ರಿ ಬ್ಯುಸಿನೆಸ್ ಮಳಿಗೆಗಳು, ಹಲಸು ಕೃಷಿಕರ ಅನುಭವದ ಮಾತುಗಳು, ಹೊಸ ಹೊಸ ತಳಿಗಳ ಪರಿಚಯ... ಹೀಗೆ ಹಲಸು ಮೇಳದಲ್ಲಿ ವಿವಿಧ ವೈವಿಧ್ಯಗಳಿರಲಿದೆ.



ಉದ್ಯಮದ ಸ್ವರೂಪ

ಮೇಳದಲ್ಲಿ ಸಂಶೋಧನಾ ಕೇಂದ್ರಗಳು ಹಾಗೂ ಕೃಷಿಕರನ್ನು ಒಂದೇ ಸೂರಿನಡಿ ತಂದು ಕೃಷಿ ಉತ್ಪನ್ನಗಳಿಗೆ ಉದ್ಯಮದ ಸ್ವರೂಪ ನೀಡುವ ಯತ್ನವು ಮೇಳದ ಉದ್ದೇಶಗಳಲ್ಲೊಂದು. ದ.ಕ., ಉಡುಪಿ ಜಿಲ್ಲೆಗಳ ವಿವಿಧ ರಂಗದ ಗಣ್ಯರು, ಕೃಷಿಕರು ಆಗಮಿಸಲಿರುವ ಈ ಮೇಳಕ್ಕೆ ನವತೇಜ ಟ್ರಸ್ಟಿನೊಂದಿಗೆ ಅಕ್ಷ ಕಾಟೇಜ್ ಇಂಡಸ್ಟ್ರೀಸ್, ನವನೀತ್ ಫಾರ್ಮ್ ನರ್ಸರಿ, ಮರಿಕೆ ಸಾವಯವ ಮಳಿಗೆ, ಅಡಿಕೆ ಪತ್ರಿಕೆ ಪುತ್ತೂರು, ನಿರ್ಮಾಣ್ ಅಸೋಸಿಯೇಟ್ಸ್, ಗಿಡಗೆಳೆತನ ಸಂಘ 'ಸಮೃದ್ಧಿ' ಮತ್ತಿತರ ಸಂಸ್ಥೆಗಳ ಸಹಕಾರವಿದೆ. ಎಲ್ಲರಿಗೂ ಮುಕ್ತ ಪ್ರವೇಶ.

■ ಸುಹಾಸ್ ಮರಿಕೆ, ನವತೇಜ ಟ್ರಸ್ಟ್, ಪುತ್ತೂರು

ರಾಜ್ಯದಲ್ಲಿ ಸಿಎಂ ಕುರ್ಚಿ ಕುರಿತ ಚರ್ಚೆ ನಡೆಯುತ್ತಿದೆ ವಿನಃ ನಾಡಿನ ಅಭಿವೃದ್ಧಿ ಬಗ್ಗೆ ಅಲ್ಲ: ಕುಂಪಲ ಆರೋಪ

ಮಂಗಳೂರು: ರಾಜ್ಯದಲ್ಲಿ ಪ್ರತಿದಿನ ಮುಖ್ಯಮಂತ್ರಿಯಾರಾಗುತ್ತಾರೆ ಎಂಬ ಬಗ್ಗೆಯೇ ಚರ್ಚೆ ನಡೆಯುತ್ತಿದೆಯೇ ಹೊರತು ಅಭಿವೃದ್ಧಿ ಬಗ್ಗೆ ಚರ್ಚೆಯಾಗುತ್ತಿಲ್ಲ. ಸಿದ್ದರಾಮಯ್ಯ ಅವರ ಬಳಿಕ ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ್, ಈಗ ಮಲ್ಲಿಕಾರ್ಜುನ ಖರ್ಗೆ ಅವರೂ ನಾನು ಮುಂದಿನ ಸಿಎಂ ಆಗಬಹುದುಟಿ ಎನ್ನುತ್ತಿದ್ದಾರೆ. ಮುಖ್ಯಮಂತ್ರಿ ಬದಲಾವಣೆ ಚರ್ಚೆ ನಡುವೆ ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಆರೋಪಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಮೂರು ವರ್ಷವಾಗುತ್ತಿದೆ. ಈ ಮೂರು ವರ್ಷದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಅಧಿಕಾರಕ್ಕಾಗಿ ಪ್ರತಿದಿನ ದೆಹಲಿ ಯಾತ್ರೆ ನಡೆಯುತ್ತಿದೆ. ಆದರೆ, ಜನರ ಭಾವನೆಗಳಿಗೆ ಸ್ಪಂದಿಸುವ ಕೆಲಸ ಆಗುತ್ತಿಲ್ಲ. ಜನಪರ ಆಡಳಿತ ಹುಸಿಯಾಗಿದೆ. ಮುಖ್ಯಮಂತ್ರಿ ಸ್ಥಾನದ ವಿಚಾರದಲ್ಲಿ ಜನರಿಗೆ ಉಚಿತ ನಾಟಕದ ಪ್ರದರ್ಶನ ದೊರೆಯುತ್ತಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಟೀಕಿಸಿದರು.

ಗ್ಯಾರಂಟಿ ಯೋಜನೆಗಳು ಜನರಿಗೆ ಸಮರ್ಪವಾಗಿ ತಲುಪುತ್ತಿಲ್ಲ. ಗೃಹಲಕ್ಷ್ಮಿ ಹಣವನ್ನು ಮಹಿಳೆಯರಿಗೆ ಸಮಯಕ್ಕೆ ಸರಿಯಾಗಿ ಪಾವತಿಸದೇ ಸತಾಯಿಸಲಾಗುತ್ತಿದೆ. ಉಚಿತ ವಿದ್ಯುತ್ ನೀಡುತ್ತೇವೆ ಎಂದು ಹೇಳಿ ವಿದ್ಯುತ್ ದರ ಹೆಚ್ಚಿಸಲಾಗಿದೆ. ವಿದ್ಯಾನಿಧಿ ನೀಡುತ್ತಿಲ್ಲ, ಸರಕಾರಿ ಬಸ್‌ಗಳು ಪೂರ್ಣ ಪ್ರಮಾಣದಲ್ಲಿ ಓಡಾಟ ನಡೆಸುತ್ತಿಲ್ಲ. ಗ್ಯಾರಂಟಿ ಯೋಜನೆಗಳು ವಿಫಲವಾಗಿವೆ ಎಂದು ಹೇಳಿದರು.

ದಾವಣಗೆರೆ, ಬಾಗಲಕೋಟೆ ಉಪ ಚುನಾವಣೆಯಲ್ಲಿ ಮುಸಲ್ಮಾನರು ಕಾಂಗ್ರೆಸ್ ಪಕ್ಷಕ್ಕೆ ಕೈಕೊಟ್ಟಿದ್ದಾರೆ ಎಂಬ ಕಾರಣಕ್ಕೆ ಮುಸಲ್ಮಾನರಿಗೆ ಕ್ಯಾಬಿನೆಟ್ ಸಭೆಯಲ್ಲಿ 600 ಕೋಟಿ ರೂ. ನೀಡಲಾಗಿದೆ. ಇನ್ನೊಂದೆಡೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡಲಾಗಿದೆ ಎಂದು ಕುಂಪಲ ಆಪಾದಿಸಿದರು.

ವಿಧಾನ ಪರಿಷತ್ ಸದಸ್ಯ ಕಿಶೋರ್‌ಕುಮಾರ್ ಪುತ್ತೂರು, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ, ಮಂಗಳೂರು ನಗರ ದಕ್ಷಿಣ ಮಂಡಲ ಅಧ್ಯಕ್ಷ ರಮೇಶ್ ಕಂಡೆಟ್ಟು, ಹಿಂದುಳಿದ ವರ್ಗಗಳ ಮೋರ್ಚಾ ದ.ಕ. ಜಿಲ್ಲಾಧ್ಯಕ್ಷ ಮಹೇಶ್ ಜೋಗಿ, ಯುವ ಮೋರ್ಚಾ ದ.ಕ. ಜಿಲ್ಲಾಧ್ಯಕ್ಷ ನಂದನ್ ಮಲ್ಯ, ಸಂಜಯ ಪ್ರಭು, ವಸಂತ ಪೂಜಾರಿ ಉಪಸ್ಥಿತರಿದ್ದರು. ಗ್ರಾಪಂಗಳಲ್ಲಿ ಕಳೆದ ಮೂರು ತಿಂಗಳಿನಿಂದ 9/11 ಸಮಸ್ಯೆ ಮುಂದುವರೆದಿದೆ. ಸರ್ವರ್ ಸಮಸ್ಯೆ ಜತೆಗೆ ತಾಪಂ ಕಾರ್ಯ ನಿರ್ವಹಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು ಎಂಬ ನಿಯಮ ಜನತೆಯನ್ನು ಕಂಗೆಡಿಸಿದೆ. ಗ್ರಾಪಂ ಚುನಾಯಿತ ಸದಸ್ಯರ ಅವಧಿ ಪೂರ್ಣಗೊಂಡಿದ್ದು, ಸರಕಾರ ಚುನಾವಣೆ ನಡೆಸುತ್ತಿಲ್ಲ. ರಾಜ್ಯದಿಂದ ಸಮರ್ಪಕವಾಗಿ ಅಂಕಿಅಂಶ ಸಲ್ಲಿಕೆಯಾಗದ ಕಾರಣ ಕಳೆದ ವರ್ಷ 15ನೇ ಹಣಕಾಸು ಯೋಜನೆ ಅನುದಾನ ಸಿಕ್ಕಿರಲಿಲ್ಲ. ಈಗ ಚುನಾವಣೆ ನಡೆಯದ ಹಿನ್ನೆಲೆಯಲ್ಲಿ ಗ್ರಾಪಂಗಳಿಗೆ ಹಣಕಾಸು ಯೋಜನೆ ಅನುದಾನ ಸಿಗಲಾರದು. ರಾಜ್ಯ ಸರಕಾರವೂ ಗ್ರಾಪಂಗಳಿಗೆ ಹಣ ನೀಡುತ್ತಿಲ್ಲ. ಹೊಸ ವಿದ್ಯುತ್ ಸಂಪರ್ಕ ಸಿಗುತ್ತಿಲ್ಲ. ಬಿಪಿಎಲ್ ಕಾರ್ಡ್ ದೊರೆಯುತ್ತಿಲ್ಲ. ಸುಳ್ಯ, ಪುತ್ತೂರು, ಬೆಳ್ತಂಗಡಿ ಭಾಗದಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ಕೋವಿ ಪರವಾನಗಿ ನವೀಕರಣ ಆಗುತ್ತಿಲ ಎಂದು ಆರೋಪಗಳ ಸುರಿಮಳೆಗೈದರು.



ಸಮಸ್ಯೆಗಳ ಸರಮಾಲೆ

ಸರ್ವರ್ ಸಮಸ್ಯೆ ಕಾರಣದಿಂದ ಕಂದಾಯ ಇಲಾಖೆ ಸ್ತಬ್ದವಾಗಿದೆ. ಮನೆ ತೆರಿಗೆ ಪಾವತಿಸಲು, ಜನನ- ಮರಣ ಪ್ರಮಾಣಪತ್ರ ಪಡೆಯಲೂ ಸರ್ವರ್ ಸಮಸ್ಯೆ ಉಂಟಾಗಿದೆ. ಬಡಜನರ ಸಮಸ್ಯೆಗಳ ಬಗ್ಗೆ ಸರಕಾರಕ್ಕೆ ಕಾಳಜಿ ಇಲ್ಲದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಾಪಕರು ಕಳೆದ 55 ದಿನಗಳಿಂದ ಮುಷ್ಕರ ನಡೆಸುತ್ತಿದ್ದು, 15 ಸಾವಿರ ಅರ್ಜಿಗಳು ವಿಲೇವಾರಿ ಆಗದೇ ಬಾಕಿಯಾಗಿವೆ. 11 ಇ ನಕ್ಷೆ ಮಾಡಲು ಸಾಧ್ಯವಾಗುತ್ತಿಲ್ಲ. ಭೂಮಾಪಕ ಮುಷ್ಕರದಿಂದ ಸಮಸ್ಯೆ ಗಂಭೀರವಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವರೂ ಈ ಬಗ್ಗೆ ಗಮನ ನೀಡುತ್ತಿಲ್ಲ. ಜನಸಾಮಾನ್ಯರ ಈ ಸಮಸ್ಯೆಗಳನ್ನು ಬಗೆಹರಿಸಲು ಸರಕಾರ ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಸತೀಶ್ ಕುಂಪಲ ಆಗ್ರಹಿಸಿದರು.

ಕಿರುಸುದ್ದಿ

ಮೇ 3-4: ಕೊಡಗಿಗೆ ಡಿ.ಆರ್. ಪಾಟೀಲ ಭೇಟಿ

ಮಡಿಕೇರಿ: ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್.ಪಾಟೀಲ ಅವರು ಮೇ 3 ಮತ್ತು 4 ರಂದು ಕೊಡಗು ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಮೇ 3 ರಂದು ಸಂಜೆ 4.30 ಗಂಟೆಗೆ ಹೊದ್ದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮಸಭೆ ನಡೆಸಲಿರುವ ಅವರು, ಸಂಜೆ 6.30 ಗಂಟೆಗೆ ಹೊದ್ದೂರು ಗ್ರಾಮ ಪಂಚಾಯಿತಿ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಮೇ 4 ರಂದು ಬೆಳಗ್ಗೆ 10.30 ಗಂಟೆಗೆ ಕೊಡಗು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ 2027-28ರ ಯೋಜನೆಯನ್ನು 'ಜನರ ಯೋಜನೆ'ಯನ್ನಾಗಿ ತಯಾರಿಸುವ ಕುರಿತು ಜಿಲ್ಲಾ ಮಟ್ಟದ ಸಭೆ ನಡೆಸಲಿದ್ದಾರೆ. ನಂತರ ಮಧ್ಯಾಹ್ನ 12.30 ಗಂಟೆಗೆ ಜಿಲ್ಲೆಯ ಜಿಲ್ಲಾ ಯೋಜನಾ ಸಮಿತಿಯ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿ ಎಂ.ಎಂ. ರೇಣುಕಾನಂದ ಸ್ವಾಮಿ ಅವರು ತಿಳಿಸಿದ್ದಾರೆ.

ಇಂದು ಪಂಜ ದೇವಳದಲ್ಲಿ ಪ್ರತಿಷ್ಠಾ ವಾರ್ಷಿಕೋತ್ಸವ

ಸುಬ್ರಹ್ಮಣ್ಯ: ಪಂಜ ಸೀಮಾ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಮೇ 2ರ ಶನಿವಾರ ಪ್ರತಿಷ್ಠಾ ವಾರ್ಷಿಕೋತ್ಸವ ನಡೆಯಲಿದೆ. ಈ ನಿಮಿತ್ತ ಬೆಳಗ್ಗೆ 12 ಕಾಯಿ ಗಣಪತಿ ಹವನ, ಆಶ್ಲೇಷ ಬಲಿ, ಶತರುದ್ರಾಭಿಷೇಕ, ಕಲಶಾಭಿಷೇಕ ಹಾಗೂ ಪರಿವಾರ ದೈವಗಳಿಗೆ ಹಾಗೂ ನಾಗದೇವರಿಗೆ ಕಲಶಾಭಿಷೇಕ, ತಂಬಿಲ ಸೇವೆಗಳು ನಡೆಯಲಿದೆ ಎಂದು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ. ದೇವಿ ಪ್ರಸಾದ್ ಕಾನತ್ತೂರು ವಿನಂತಿಸಿದ್ದಾರೆ.

ಮೇ 3: ಮುಲ್ಲಕಾಡು ಶ್ರೀರಾಮ ಭಜನಾ ಮಂದಿರದ ಶಿಲಾನ್ಯಾಸ

ಮಂಗಳೂರು: ಮುಲ್ಲಕಾಡು ಶ್ರೀರಾಮ ಭಜನಾ ಮಂದಿರದ ಶಿಲಾನ್ಯಾಸ ಸಮಾರಂಭ ಮೇ 3ರಂದು ಬೆಳಗ್ಗೆ 10.11ಕ್ಕೆ ನಡೆಯಲಿದೆ. ಬ್ರಹ್ಮಶ್ರೀ ವೇ.ಮೂ. ವಿಠಲದಾಸ ತಂತ್ರಿ ಅವರ ನೇತೃತ್ವದಲ್ಲಿ ವಾಸ್ತುಶಿಲ್ಪಿ ರಾಜ ಕುಮಾರ್ ಶಕ್ತಿನಗರ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಜರುಗಲಿದೆ. ಅಂದಾಜು 68 ಲಕ್ಷ ರೂ. ವೆಚ್ಚದಲ್ಲಿ ನೂತನ ಮಂದಿರ ಶ್ರೀಘ್ರವೇ ನಿರ್ಮಾಣಗೊಳ್ಳಲಿದೆ.

ವೃದ್ಧ ನಾಪತ್ತೆ

ಉಡುಪಿ: ಮರೆವಿನ ಕಾಯಿಲೆಯಿಂದ ಬಳಲುತ್ತಿದ್ದ ಮೂಲತಃ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲೂಕು ಕುಂಬಾರಕೊಪ್ಪ ಗುಬ್ಬಾಗದ್ದೆ ನಿವಾಸಿ ವೆಂಕಟೇಶ್ ರಾವ್ (78) ಎಂಬ ವ್ಯಕ್ತಿಯು ಹಳ್ಳಿಹೊಳೆಗೆ ಬಂದಿದ್ದು, ಏಪ್ರಿಲ್ 23 ರಂದು ಊಟ ಮುಗಿಸಿ, ಮನೆಯ ಬಳಿ ಸುತ್ತಾಡಿಕೊಂಡು ಬರುವುದಾಗಿ ಹೇಳಿ ಹೋದವರು ಇದುವರೆಗೂ ವಾಪಾಸು ಬಾರದೇ ನಾಪತ್ತೆಯಾಗಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಸುಗಂಧಿ ಹೆಚ್. ಅಮೀನ್, "ಶ್ರೀ ಹರಿ", ಒಂಟಿಕಟ್ಟೆ, ಮೂಡುಬಿದ್ರಿ.
2. ಕೋಡು ಭೋಜ ಶೆಟ್ಟಿ ಕೋಡುನಾರಾಯಣ ಶೆಟ್ಟಿ ಮತ್ತು ಕುಟುಂಬಿಕರು, ಕೋಡುಮನೆ, ಬಲವಿನಗುಡ್ಡೆ.
3. ಯನ್. ಪ್ರಕಾಶ್ ಶೆಟ್ಟಿ, ನೊಚ್ಚ ಮನೆ, ಅಳದಂಗಡಿ, ಬೆಳ್ತಂಗಡಿ (ತಾ).
4. ಮಲ್ಲೂರು ದೆಮ್ಮಲೆ ಹತ್ತು ಸಮಸ್ತರು, ವಯಾ ನೀರುಮಾರ್ಗ.
5. ಶ್ರೀಶ್ರೀಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ, ಸುಬ್ರಹ್ಮಣ್ಯ ಮಠ, ಸುಬ್ರಹ್ಮಣ್ಯ, ಸುಳ್ಯ (ತಾ).
6. ಶ್ರೀ ದುರ್ಗಾ ಮಿತ್ರ ವೃಂದ (ರಿ), ಶ್ರೀ ದುರ್ಗಾ ದೇವಸ್ಥಾನ ಬಳಿ, ಕುಂಜೂರು, ಪಣಿಯೂರು ವಯಾ ಉಚ್ಚಿಲ, ಕಾಪು.
7. ದಿ। ರಾಮು ಬೆಳ್ಚಡರ ಸ್ಮರಣಾರ್ಥ ಮಕ್ಕಳ ಸೇವೆ, ಗಂಜ ಮನೆ, ಕಟೀಲು.

ಶ್ರೀ ಧರ್ಮಸ್ಥಳ ಮೇಳ
ಅರೆಬಿರೂರು-ಗೋಳಿಹೊಳೆಯಲ್ಲಿ
ಶ್ರೀಮತಿ ಹೇಮಾವತಿ ಶೇಖರ್, ಶ್ರೀಮತಿ ಪ್ರೇಮ ಬಾಬು, ಕಮ್ಮಾರಕೋಣ

ಶ್ರೀ ಸಾಲಿಗ್ರಾಮ ಮೇಳ
ಐರೋಡಿಯಲ್ಲಿ- **ಶನೀಶ್ವರ ಮಹಾತ್ಮೆ**

ಶ್ರೀ ಪೆರ್ಡೂರು ಮೇಳ
ಸಾಗರದಲ್ಲಿ- **ಕಚ ದೇವಯಾನಿ, ಉತ್ತರನ ಪೌರುಷ, ಮೂಗಧ ವಧೆ, ಸುಂದೋಪಸುಂದ**

ಶ್ರೀ ಹನುಮಗಿರಿ ಮೇಳ
ಶಿರ್ವ-ಬಂಟಕಲ್ಲಿನಲ್ಲಿ

ಶ್ರೀ ಪಾವಂಜೆ ಮೇಳ
ಶ್ರೀ ಭುವನೇಶ್ವರೀ ದೇವಸ್ಥಾನ, ವಂಡಾರು, ಬ್ರಹ್ಮಾವರ, ಉಡುಪಿಯಲ್ಲಿ- **ಭಕ್ತಿ ಪಾರಮ್ಯ**



ನೃಸಿಂಹ ಜಯಂತಿಯ ಅಂಗವಾಗಿ ಶುಕ್ರವಾರ ಶ್ರೀ ಸುಬ್ರಹ್ಮಣ್ಯ ಮಠದಲ್ಲಿ ಪುತ್ತೂರು ಗಣೇಶ್ ಮತ್ತು ಬಳಗದವರಿಂದ ಸ್ಯಾಕ್ಸೋಫೋನ್ ವಾದನ ಕಛೇರಿ ನಡೆಯಿತು. ಕಲಾವಿದರನ್ನು ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಗೌರವಿಸಿದರು. ಈ ಸಂದರ್ಭ ಮಠದ ದಿವಾನ ಸುದರ್ಶನ ಜೋಯಿಸ, ಕಲಾವಿದ ಕೆ. ಯಜ್ಞೇಶ್ ಆಚಾರ್ ಉಪಸ್ಥಿತರಿದ್ದರು.

ಸುಳ್ಯ ಕ್ಷೇತ್ರದ ಸೇತುವೆ ನಿರ್ಮಾಣಕ್ಕೆ ರೂ. 5 ಕೋಟಿ ಅನುದಾನ ಬಿಡುಗಡೆ

ಸುಳ್ಯ: ಸುಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಸೇತುವೆ ಕಾಮಗಾರಿಗಳಿಗೆ ರೂ.5 ಕೋಟಿ ಅನುದಾನ ಬಿಡುಗಡೆಯಾಗಿದೆ ಎಂದು ಸುಳ್ಯ ವಿಧಾನಸಭಾ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ ತಿಳಿಸಿದ್ದಾರೆ.

ಸುಳ್ಯ ಮತ್ತು ಕಡಬ ತಾಲೂಕಿನ ಜಿಲ್ಲಾ ಪಂಚಾಯತ್ ಮುಖ್ಯ ರಸ್ತೆಮತ್ತು ಲೋಕೋಪಯೋಗಿ ರಸ್ತೆಗಳಲ್ಲಿ ಶಿಥಿಲಗೊಂಡಿರುವ 5 ಸೇತುವೆಗಳಿಗೆ ರೂ. 5 ಕೋಟಿ ಅನುದಾನ ಬಿಡುಗಡೆಗೊಂಡಿದ್ದು ನಡುಗಲ್ಲು- ಹರಿಹರ- ಪಲ್ಲತಡ್ಕ ಬಾಳುಗೋಡು ರಸ್ತೆಯ ಪದಕ ಎಂಬಲ್ಲಿ ಸೇತುವೆ ನಿರ್ಮಾಣಕ್ಕೆ ರೂ. 1.75 ಕೋಟಿ, ಮಡಪ್ಪಾಡಿ ಗ್ರಾಮದ ಸೇವಾಜೆ ಮಡಪ್ಪಾಡಿ-ಕಂದ್ರಪ್ಪಾಡಿ-ಗುತ್ತಿಗಾರು ರಸ್ತೆಯ ಮೆಟ್ಟಿನಡ್ಕ ಎಂಬಲ್ಲಿ ಸೇತುವೆ ನಿರ್ಮಾಣಕ್ಕೆ ರೂ. 1.50 ಕೋಟಿ ಬಿಡುಗಡೆಯಾಗಿದೆ.

ಮಂಡೆಕೋಲು ಗ್ರಾಮದ ಸುಳ್ಯ-ಕಾಂತಮಂಗಲ-ಅಜ್ಜಾವರ- ಮಂಡೆಕೋಲು-ಕನ್ಯಾನ ರಸ್ತೆಯ ತೋಟಂ ಪ್ಪಾಡಿ ಎಂಬಲ್ಲಿ ಸೇತುವೆ ನಿರ್ಮಾಣಕ್ಕೆ ರೂ.60 ಲಕ್ಷ, ಪುಳಿಕುಕ್ಕು-

- **ನಡುಗಲ್ಲು- ಹರಿಹರ- ಪಲ್ಲತಡ್ಕ ಬಾಳುಗೋಡು ರಸ್ತೆಯ ಪದಕ ಎಂಬಲ್ಲಿ ಸೇತುವೆ ನಿರ್ಮಾಣಕ್ಕೆ ರೂ. 1.75 ಕೋಟಿ**
- **ಮಡಪ್ಪಾಡಿ ಗ್ರಾಮದ ಸೇವಾಜೆ ಮಡಪ್ಪಾಡಿ-ಕಂದ್ರಪ್ಪಾಡಿ-ಗುತ್ತಿಗಾರು ರಸ್ತೆಯ ಮೆಟ್ಟಿನಡ್ಕ ಎಂಬಲ್ಲಿ ಸೇತುವೆ ನಿರ್ಮಾಣಕ್ಕೆ ರೂ. 1.50 ಕೋಟಿ**

ಎಡಮಂಗಲ-ಅಲೆಕ್ಕಾಡಿ ರಸ್ತೆಯ ಡೆಕ್ಕಳ ಎಂಬಲ್ಲಿ ಹಾನಿಗೊಳಗದ ಕಿರಿದಾದ ಸೇತುವೆ ಬದಲಿಗೆ ಸೇತುವೆ ನಿರ್ಮಾಣಕ್ಕೆ ಇಪ್ಪತ್ತೈದು ಲಕ್ಷ ರೂಪಾಯಿಗಳು, ಪೈಚಾರು-ಬೆಳ್ಳಾರೆ-ಸವಣೂರು-ಕುದ್ಮಾರು-ಆಲಂಕಾರು-ಸುಬ್ರಹ್ಮಣ್ಯ ರಸ್ತೆಯಲ್ಲಿ ಹಾನಿಗೊಳಗಾದ ಕಿರಿದಾದ ಸೇತುವೆ ಬದಲಿಗೆ ಸೇತುವೆ ನಿರ್ಮಾಣಕ್ಕೆ ರೂ. 90 ಲಕ್ಷ ಸೇರಿದಂತೆ ಒಟ್ಟು ರೂ.5 ಕೋಟಿ ಅನುದಾನದಲ್ಲಿ 5 ಸೇತುವೆ ಅಭಿವೃದ್ಧಿ ಕಾರ್ಯವಾಗಲಿದೆ ಎಂದು ಶಾಸಕರ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಪುತ್ತೂರು ದೇವಾಲಯ, ಬಿಜೆಪಿ ಕಚೇರಿಗೆ ಭೇಟಿ । ಮಂಜೇಶ್ವರ ಕ್ಷೇತ್ರದ ಅಭ್ಯರ್ಥಿ ಸುರೇಂದ್ರನ್ ಭವಿಷ್ಯ

ಕೇರಳದಲ್ಲಿ ಈ ಬಾರಿ ಬಿಜೆಪಿಗೆ ಹೆಚ್ಚು ಸ್ಥಾನ

ಪುತ್ತೂರು: ಕೇರಳದಲ್ಲಿ ಸಂಘಟನಾ ದೌರ್ಬಲ್ಯಗಳನ್ನು ಮರೆಯಾಗುವಂತೆ ಈ ಬಾರಿ ಕರ್ನಾಟಕದ ಬಿಜೆಪಿಯೂ ಸೇರಿಕೊಂಡು ಕೆಲಸ ಮಾಡಿದೆ. ಎಲ್ಲರ ಸಹಕಾರದಿಂದ ಕೇರಳ ರಾಜ್ಯದ ಚುನಾವಣೆಯಲ್ಲಿ ಬಿಜೆಪಿ ಹೆಚ್ಚು ಸ್ಥಾನಗಳನ್ನು ಪಡೆಯುವ ಕನಸು ಈ ಬಾರಿ ಖಂಡಿತವಾಗಿಯೂ ಈಡೇರಲಿದೆ ಎಂದು ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸುರೇಂದ್ರನ್ ಹೇಳಿದರು.

ಶುಕ್ರವಾರ ಪುತ್ತೂರಿಗೆ ಭೇಟಿ ನೀಡಿದ ಅವರು ಬಿಜೆಪಿ ಕಚೇರಿಯಲ್ಲಿ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರನ್ನು ಉದ್ದೇಶಿಸಿ ಮಾತನಾಡಿದರು.

ನಿಮ್ಮ ಶ್ರಮ, ಪ್ರೀತಿ ನಮ್ಮ ಹೃದಯದಲ್ಲಿದೆ

ಇಲ್ಲಿನ ಹಲವು ಮಂದಿ ಮುಖಂಡರು ಹಾಗೂ ಕಾರ್ಯಕರ್ತರು ಸ್ವಂತ ಖರ್ಚುಗಳನ್ನು ಮಾಡಿಕೊಂಡು ಅಲ್ಲಿ ಬಂದು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದಾರೆ. ನಿಮ್ಮ ಶ್ರಮ, ಪ್ರೀತಿ ನಮ್ಮ ಹೃದಯದಲ್ಲಿದೆ ಎಂದು ಹೇಳಿದ ಸುರೇಂದ್ರನ್, ಕಳೆದ ಬಾರಿ ಪುತ್ತೂರಿನಲ್ಲಿ ನಾವೆಲ್ಲಾ ದು:ಖಿಪಡುವ ಫಲಿತಾಂಶ ಪಡೆದಿದ್ದೇವೆ. ನಮಗೂ ಈ ಬಗ್ಗೆ ಬೇಸರವಿದೆ. ಮುಂದಿನ ಬಾರಿ ನಾವೂ ನಿಮ್ಮ ಜತೆಗಿದ್ದು, ಗೆಲುವಿನ ಹಾದಿಗೆ ಮರಳೋಣ ಎಂದು ಹೇಳಿದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಪ್ರಸನ್ನ ಮಾರ್ತ ಮಾತನಾಡಿ, ತಮ್ಮ ಕೇತ್ರ ಸೇರಿದಂತೆ ಕೇರಳ ರಾಜ್ಯ ಚುನಾವಣೆಯಲ್ಲಿ ಪುತ್ತೂರಿನ ಕಾರ್ಯಕರ್ತರು ಕೆಲಸ ಮಾಡಿದ ಅಭಿಮಾನದಿಂದ ಸುರೇಂದ್ರನ್ ಭೇಟಿ ನೀಡಿದ್ದಾರೆ ಎಂದರು.

ರಾಷ್ಟ್ರದಲ್ಲೇ 300ಕ್ಕೂ ಹೆಚ್ಚು ಕೇಸು

ಬಹಳ ವರ್ಷಗಳಿಂದ ಕೇರಳದಲ್ಲಿ ಬಿಜೆಪಿಯ ಪ್ರತಿ ಕಾರ್ಯಕರ್ತರಿಗೆ ಧೈರ್ಯ, ಆತ್ಮವಿಶ್ವಾಸ ತುಂಬಿದ ವ್ಯಕ್ತಿ ಅವರು. ರಾಷ್ಟ್ರದಲ್ಲೇ 300ಕ್ಕೂ ಹೆಚ್ಚು ಕೇಸುಗಳನ್ನು ಮೈಗೆಳೆದುಕೊಂಡು ಜೈಲಿಗೆ ಹೋಗಿ ಬಂದರೂ ಸಂಘಟನೆಯ ವಿಚಾರದಲ್ಲಿ ಒಂದಿಂಚೂ ಹಿಂದೆ ಸರಿಯದ ಒಬ್ಬನೇ ಒಬ್ಬ ವ್ಯಕ್ತಿ ಸುರೇಂದ್ರನ್. ಮಂಜೇಶ್ವರ ಕ್ಷೇತ್ರದಲ್ಲಿ 2 ಬಾರಿ ವೀರೋಚಿತ ಸೋಲು ಕಂಡರೂ ಈ ಬಾರಿ ಅಭೂತಪೂರ್ವ ಗೆಲುವು ಸಾಧಿಸಲಿದ್ದಾರೆ ಎಂದರು. ಪುತ್ತೂರು ಬಿಜೆಪಿ ನಗರ ಮಂಡಲ ಅಧ್ಯಕ್ಷ ಶಿವಕುಮಾರ್, ಗ್ರಾಮಾಂತರ ಮಂಡಲದ ಲೋಕೇಶ್ ಚಾಕೋಟೆ ವೇದಿಕೆಯಲ್ಲಿದ್ದರು. ಪುತ್ತೂರು ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ದಯಾನಂದ ಶೆಟ್ಟಿ ಉಜಿರೆಮಾರು ಸ್ವಾಗತಿಸಿದರು.

ಬಳಿಕ ಶ್ರೀಲಕ್ಷ್ಮೀವೆಂಕಟರಮಣ ದೇವಾಲಯಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಬಿಜೆಪಿ ಮುಖಂಡ ಪ್ರಸನ್ನ ಮಾರ್ತ ಅವರ ಮನೆಗೆ ಭೇಟಿ ನೀಡಿದರು.

ಈ ವೇಳೆ ಪುತ್ತೂರು ಬಿಜೆಪಿ ನಗರ ಮಂಡಲ ಅಧ್ಯಕ್ಷ ಶಿವಕುಮಾರ್ ಕಲ್ಲಿಮಾರ್, ಗ್ರಾಮಾಂತರ ಮಂಡಲ ಅಧ್ಯಕ್ಷ ದಯಾನಂದ್ ಉಜಿರೆಮಾರ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪ್ರಸನ್ನ ಕುಮಾರ್ ಮಾರ್ತ, ಸುನೀತ್ ಭಟ್, ಶಶಿಧರ್ ನಾಯಕ್, ನಾಗೇಂದ್ರ ಬಾಳಿಗ, ಶರತ್ ಆಳ್ವ, ಕಿರಣ್ ಬಲ್ನಾಡ್, ನಿರಂಜನ ಮಾನ್ಯ, ಹರಿಪ್ರಸಾದ್ ಯಾದವ್, ವಿರೂಪಾಕ್ಷ ಭಟ್, ರಾಜೇಶ್ ಬನ್ನೂರು, ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಸ್ವರ್ಣಲತಾ ಹೆಗ್ಡೆ, ವಸಂತಲಕ್ಷ್ಮೀ, ವಿದ್ಯಾಗೌರಿ, ಗೌರಿ ಬನ್ನೂರು ಸೇರಿದಂತೆ ಮಂಜೇಶ್ವರ ಬಿಜೆಪಿ ಅಧ್ಯಕ್ಷ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.





ದೇವಳಗಳಿಗೆ ಭೇಟಿ

ಸುರೇಂದ್ರನ್ ಅವರು ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ದೇವರಿಗೆ ತುಪ್ಪದ ದೀಪ ಬೆಳಗಿ ಗೆಲುವಿಗಾಗಿ ಪ್ರಾರ್ಥಿಸಿದರು. ದೇವಸ್ಥಾನದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ವಿ. ಶ್ರೀನಿವಾಸ್ ಅವರು ಸುರೇಂದ್ರನ್ ಅವರಿಗೆ ಶಾಲು ಹೊದಿಸಿ ಗೌರವಿಸಿದರು.

- **ಇಲ್ಲಿನ ಹಲವು ಮಂದಿ ಮುಖಂಡರು ಹಾಗೂ ಕಾರ್ಯಕರ್ತರು ಸ್ವಂತ ಖರ್ಚುಗಳನ್ನು ಮಾಡಿಕೊಂಡು ಅಲ್ಲಿ ಬಂದು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದಾರೆ.**
- **ನಿಮ್ಮ ಶ್ರಮ, ಪ್ರೀತಿ ನಮ್ಮ ಹೃದಯದಲ್ಲಿದೆ**
- **ಪ್ರತಿ ಕಾರ್ಯಕರ್ತರಿಗೆ ಧೈರ್ಯ, ಆತ್ಮವಿಶ್ವಾಸ ತುಂಬಿದ ವ್ಯಕ್ತಿ**
- **ಮಂಜೇಶ್ವರ ಕ್ಷೇತ್ರದಲ್ಲಿ 2 ಬಾರಿ ವೀರೋಚಿತ ಸೋಲು ಕಂಡರೂ ಈ ಬಾರಿ ಅಭೂತಪೂರ್ವ ಗೆಲುವು ಸಾಧಿಸಲಿದ್ದಾರೆ**

ಮೇ 5: ಮಾದಾಪುರ ಕೊಡವ ಸಮಾಜ ಸಮುದಾಯ ಭವನ ಲೋಕಾರ್ಪಣೆ

ಮಡಿಕೇರಿ: ಮಾದಾಪುರ ಕೊಡವ ಸಮಾಜದ ನೂತನ ಸಮುದಾಯ ಭವನದ ಉದ್ಘಾಟನೆ ಮೇ 5ರಂದು ಜರುಗಲಿದ್ದು, ಸಂಸದ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೂತನವಾಗಿ ನಿರ್ಮಿಸಲ್ಪಟ್ಟ ಸುಸಜ್ಜಿತ ಸಮುದಾಯ ಭವನವನ್ನು ಲೋಕಾರ್ಪಣೆ ಮಾಡಲಿದ್ದಾರೆ ಎಂದು ಕೊಡವ ಸಮಾಜದ ಅಧ್ಯಕ್ಷ ಮಂಡೇಪಂಡ ಮನು ಮೇದಪ್ಪ ತಿಳಿಸಿದ್ದಾರೆ.

ನಗರದಲ್ಲಿ ಶುಕ್ರವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಕರ್ನಾಟಕದಲ್ಲಿ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದ ಸಂದರ್ಭ ಸಮುದಾಯ ಭವನ ನಿರ್ಮಾಣಕ್ಕೆ ಒಂದು ಕೋಟಿ ರೂ. ಅನುದಾನ ಈ ಉದ್ದೇಶಕ್ಕೆ ಮಂಜೂರಾಗಿತ್ತು. ಈ ಪೈಕಿ 75 ಲಕ್ಷ ರೂ.ಅನುದಾನ ಬಿಡುಗಡೆಯಾಗಿದ್ದು, ಇನ್ನೂ 25 ಲಕ್ಷ ರೂ. ಅನುದಾನ ದೊರಕಬೇಕಾಗಿದೆ ಎಂದರು.

ಮಾಜಿ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್, ಅವರ ವಿಶೇಷ ಪ್ರಯತ್ನದಿಂದ ಹಾಗೂ ಮಾಜಿ ಸಂಸದರು, ಮಾಜಿ ಶಾಸಕರ ಪ್ರಯತ್ನದಿಂದ ಸೂಕ್ತ ಅನುದಾನ ನೀಡಲ್ಪಟ್ಟಿದ್ದು, ಅನೇಕ ದಾನಿಗಳಿಂದಲೂ ಆರ್ಥಿಕ ಸಂಪನ್ಮೂಲ ಸಂಗ್ರಹವಾಗಿದೆ ಎಂದು ಸ್ಮರಿಸಿಕೊಂಡ ಮೇದಪ್ಪ ಅವರು, ಹಾಲಿ ಶಾಸಕ ಡಾ.ಮಂಥರ್ ಗೌಡ ಅವರು 10 ಲಕ್ಷ ರೂ. ವೆಚ್ಚದಲ್ಲಿ ಸಮುದಾಯ ಭವನಕ್ಕೆ ಕಾಂಕ್ರೀಟ್ ರಸ್ತೆ ನಿರ್ಮಿಸಲು ಒಪ್ಪಿದ್ದಾರೆ ಎಂದು ತಿಳಿಸಿದರು.

ಮೇ 5ರಂದು ಬೆಳಗ್ಗೆ 10ಕ್ಕೆ ಆಯೋಜಿತ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ಶಾಸಕ ಎ.ಎಸ್. ಪೊನ್ನಣ್ಣ, ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಸಂಸದ ಯದುವೀರ್ ಒಡೆಯರ್, ವಿಧಾನಪರಿಷತ್ ಸದಸ್ಯ ಎಂ.ಪಿ. ಸುಜಾಕುಶಾಲಪ್ಪ, ಶಾಸಕರು ಮತ್ತು ಮಾಜಿ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವಥನಾರಾಯಣ, ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ, ಮಾಜಿ ಸಚಿವರಾದ ಎಂ.ಪಿ. ಅಪ್ಪಚ್ಚು ರಂಜನ್, ಎಂ.ಸಿ. ನಾಣಯ್ಯ, ಬಿ.ಎ. ಜೀವಿಜಯ, ವಿಧಾನಸಭೆಯ ಮಾಜಿ ಸಭಾಪತಿ ಕೆ.ಜಿ. ಬೋಪಯ್ಯ, ಮಾಜಿ ಸಂಸದರಾದ ಪ್ರತಾಪ್ ಸಿಂಹ, ಕುಪೇಂದ್ರ ರೆಡ್ಡಿ, ವಿಧಾನಪರಿಷತ್ ಮಾಜಿ ಸದಸ್ಯರಾದ ಎಂ.ಪಿ. ಸುನಿಲ್ ಸುಬ್ರಮಣಿ, ಶಾಂತೆಯಂಡ ವೀಣಾ ಅಚ್ಚಯ್ಯ, ಎಸ್. ಜಿ. ಮೇದಪ್ಪ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಅಜ್ಜನಿಕಂಡ ಮಹೇಶ್ ನಾಚಯ್ಯ, ಅರೆಭಾಷೆ ಸಾಹಿತ್ಯ, ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಾಜಿ, ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣುಕಾರ್ಯಪ್ಪ, ಕೊಡಗು ಜಿಲ್ಲಾಧಿಕಾರಿ ಎಸ್.ಜಿ. ಸೋಮಶೇಖರ್, ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ, ಅಂತರರಾಷ್ಟ್ರೀಯ ಟೆನ್ನಿಸ್ ಆಟಗಾರ ಪದ್ಮಶ್ರೀ ಮಚ್ಚಂಡ ರೋಹನ್ ಬೋಪಣ್ಣ ಎಸ್.ಎಲ್.ಎನ್. ಗ್ರೂಪ್‌ನ ಸಾತಪ್ಪನ್ ವಿಶ್ವನಾಥ್, ಟಿ.ಜಾನ್ ಗ್ರೂಪ್ ಆಫ್ ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕ ಪೌಲ್ ಜಾನ್, ವಿಶೇಷ ಆಹ್ವಾನಿತರಾಗಿ ಉದ್ಯಮಿ ನಾಪಂಡ ಮುತ್ತಪ್ಪ, ಇಂಜಿನಿಯರ್ ಮುಕ್ಕಾಟಿರ ನಂಜಪ್ಪ ಹಾಗೂ ಸರ್ವ ಕೊಡವ ಸಮಾಜಗಳ ಅಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ. ಎಂದು ಮನುಮೇದಪ್ಪ ವಿವರಿಸಿದರು.

ಮಾದಾಪುರ ಕೊಡವ ಸಮಾಜದ ಗೌರವ ಕಾರ್ಯದರ್ಶಿ ಐಚೆಟ್ಟಿರ ನಂಜಪ್ಪ, ನಿರ್ದೇಶಕರಾದ ನಾಪಂಡ ಉಮೇಶ್ ಉತ್ತಪ್ಪ, ಮಾಳೆಯಂಡ ಜೋಯಪ್ಪ ಉಪಸ್ಥಿತರಿದ್ದರು.



ಹಿಂದು ಸಮಾಜಕ್ಕೆ ಕುಡುಬಿ ಸಮುದಾಯದ ಸಮರ್ಪಣೆ, ಬದ್ಧತೆ ಅಪಾರ: ಮಾಣಿಲ ಶ್ರೀ

ಬಂಟ್ವಾಳ: ದೈವಿಕ ಶಕ್ತಿಯ ಮುಂದೆ ಯಾವುದೇ ಪ್ರಭಾವವಿದ್ದರೂ ಅದು ಶೂನ್ಯ, ಹಿಂದು ಸಮಾಜಕ್ಕೆ ಕುಡುಬಿ ಸಮುದಾಯದ ಸಮರ್ಪಣಾ ಭಾವ, ಬದ್ಧತೆ, ಪ್ರಾಮಾಣಿಕತೆ, ಪ್ರೀತಿಯ ಸೇವೆ ಅಪಾರವಾಗಿದೆ ಎಂದು ಶ್ರೀಧಾಮ ಮಾಣಿಲದ ಶ್ರೀ ಮೋಹನದಾಸ ಸ್ವಾಮೀಜಿನುಡಿದರು.

ಬಂಟ್ವಾಳ ತಾಲೂಕಿನ ಕುಕ್ಕಿಪಾಡಿ ಗ್ರಾಮದ ಕೋರ್ಯಾರು ಶ್ರೀ ದುರ್ಗಾ ಮಹಾಮ್ಮಾಯೀ ದೇವಸ್ಥಾನದಲ್ಲಿ ಶುಕ್ರವಾರ ಶ್ರೀದುರ್ಗಾ ಮಹಮ್ಮಾಯಿಗೆ ನಡೆದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆಯಲ್ಲಿ ಶ್ರೀಗಳು ಆಶೀರ್ವಚನನ್ಗೈದರು.

ಧಾರ್ಮಿಕ ಪರಿಷತ್ ಸದಸ್ಯರಾದ ರವಿಶಂಕರ ಶೆಟ್ಟಿ, ಮಾಜಿ ಸಚಿವ ಬಿ.ನಾಗರಾಜ ಶೆಟ್ಟಿ, ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾಪಕ್ಕಳ, ಮೂಡಬಿದ್ರೆ ವೈಬ್ರೆಂಟ್ ಕಾಲೇಜಿನ ಸುಭಾಸ್ ಜ., ಬಲವಂಡಿ ಕ್ಷೇತ್ರದ ಗಡಿಪ್ರಧಾನರಾದ ದುರ್ಗಾದಾಸ್ ಶೆಟ್ಟಿ ಮಾವಂತೂರು, ಗುರುವಾಯನಕೆರೆ ಅರೆಮಾಲೆಬೆಟ್ಟು ಶ್ರೀ ಕೊಡಮಣಿತ್ತಾಯ ದೈವಸ್ಥಾನದ ಅನುವಂಶಿಕ ಆಡಳಿತದಾರರಾದ ಸುಕೇಶ್ ಕುಮಾರ್, ನ್ಯಾಯವಾದಿ ವಿಜಯಗೌಡ ಶಿಬ್ರಿಕೆರೆ, ನಾರಾಯಣ ನಾಯ್ಕ್ ಗೋಳಿಯಂಗಡಿ, ಕೃಷ್ಣಗೌಡ ಕೊಂಪದವು ಅವರು ಮಾತನಾಡಿದರು.

ಮೂಡಬಿದ್ರೆ ಚೌಟರ ಅರಮನೆಯ ಕುಲದೀಪ್ ಎಂ.,ಬಿಜೆಪಿ ಮುಖಂಡ ಸಂದೇಶ್ ಶೆಟ್ಟಿ ಅರೆಬೆಟ್ಟು,ಉದ್ಯಮಿ ಡಾ.ರವೀಂದ್ರಶೆಟ್ಟಿ ಬಜಗೋಳಿ, ದ.ಕ. ಜಿಲ್ಲಾ ಧಾರ್ಮಿಕಪರಿಷತ್ ಸದಸ್ಯ ದೇವಪ್ಪ ಕುಲಾಲ್, ರಾಯಿ ಗ್ರಾ.ಪಂ. ನಿಕಟಪೂರ್ವ ಅಧ್ಯಕ್ಷ ಸಂತೋಷ್ ರಾಯಿಬೆಟ್ಟು, ಬಿಜೆಪಿ ಮುಖಂಡ ವಸಂತ ಅಣ್ಣಳಿಕೆ, ಕುಕ್ಕಿಪ್ಪಾಡಿ ಗ್ರಾ.ಪಂ.ಮಾಜಿ ಅಧ್ಯಕ್ಷ ಶೇಖರ ಶೆಟ್ಟಿ ಬದ್ಯಾರು, ನಿವೃತ್ತ ಶಿಕ್ಷಕ ನಾರಾಯಣ ನಾಯ್ಕ್, ದೇವಸ್ಥಾನದ ಆಡಳಿತ ಮಂಡಳಿ ಗುರಿಕಾರರಾದ ಗೋಪಾಲ ಗೌಡ ಕೋರ್ಯಾರು, ಎರಡನೇ ಗುರಿಕಾರ ಓಬಯ್ಯ ಗೌಡ, ಆಡಳಿತ ಮೊಕ್ತೇಸರ ಯಶೋಧರ ಗೌಡ ಕೋರ್ಯಾರು, ಆಡಳಿತ ಮಂಡಳಿ ಕಾರ್ಯದರ್ಶಿ ಲೋಕಯ್ಯ ಬಚ್ಚಿರಪಲ್ಕೆ, ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷರಾದ ಪ್ರಭಾಕರ ಪ್ರಭು, ದುರ್ಗಾದಾಸ್ ಶೆಟ್ಟಿ ಕರೆಂಕಿಜೆ, ಅಧ್ಯಕ್ಷ ಗಂಗಾಧರ ಗೌಡ ಕುಕ್ಕೇಡಿ, ಕಾರ್ಯ ದರ್ಶಿ ಗಣೇಶ್ ಕಣಿಯೂರು, , ಬ್ರಹ್ಮಕಲಶ ಸಮಿತಿ ಗೌರವಾಧ್ಯಕ್ಷ ಹೇಮಚಂದ್ರ, ಕಾರ್ಯದರ್ಶಿ ಸಂಜೀವ ಎಲ್ಲೇಲು,ಆಡಳಿತ ಸಮಿತಿ ಸದಸ್ಯರಾದ ನಾರಾಯಣ ಗೌಡ ಕೊಡಂಗೆ, ಕರುಣ ಮಂಚಕಲ್ಲು, ಭಾಸ್ಕರ ಕೋರ್ಯಾರು, ಬಾಬು ಹುಂಟೇನಿ, ಗೋಪಾಲಗೌಡ ದೇವಸ್ಯಮೋಹನ ಕುಂಟಾಡಿ ವೇದಿಕೆಯಲ್ಲಿದ್ದರು.

ಇದೇ ವೇಳೆ ದ.ಕ.ಜಿಲ್ಲಾ ಕುಡುಬಿ ಸಂಘದ ಕೋಶಾಧಿಕಾರಿ ರಾಮಗೌಡ ನಂದಗೋಕುಲ ಮಿಜಾರ್ ಹಾಗೂ ನಾಟ್ಯಕಲಾವಿದೆ ಆಯನ ಕೆ.ವಿ.ರಮಣ್ ಅವರನ್ನು ಸನ್ಮಾನಿಸಲಾಯಿತು. ಮಾಜಿ ಸಚಿವ ಬಿ.ರಮಾನಾಥ ರೈ,ಬೂಡಾ ಅಧ್ಯಕ್ಷ ಬೇಬಿಕುಂದರ್ ಮತ್ತಿತರ ಗಣ್ಯರು ಭೇಟಿ ನೀಡಿ ದೇವರ ದರ್ಶನ ಪಡೆದರು. ಇವರನ್ನು ಕ್ಷೇತ್ರದ ವತಿಯಿಂದ ಗೌರವಿಸಲಾಯಿತು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಉಮೇಶ್ ಗೌಡ ಮಂಚಕಲ್ಲು ಸ್ವಾಗತಿಸಿದರು. ಲತೇಶ್ ಕೋರ್ಯಾರ್ ವಂದಿಸಿದರು. ರಂಗಕಲಾವಿದ ಎಚ್. ಕೆ.ನಯನಾಡು ನಿರೂಪಿಸಿದರು.

ಇದಕ್ಕೂ ಮುನ್ನ ವೇ.ಮೂ. ನಡ್ವಂತಾಡಿ ಶ್ರೀ ಬಾಲಕೃಷ್ಣ ಪಾಂಗಣ್ಣಾಯ ಅವರ ನೇತೃತ್ವದಲ್ಲಿ ವಿದ್ವಾನ್ ಶ್ರೀ ಪ್ರಕಾಶ್ ಆಚಾರ್ಯ ಪೂಂಜಾ ಅವರ ಪೌರೋಹಿತ್ಯದಲ್ಲಿ ಶ್ರೀದುರ್ಗಾದೇವಿಗೆ ಬ್ರಹ್ಮಕಲಶಾಭಿಷೇಕ ನೆರವೇರಿತು.



ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಎಂಬಿಬಿಎಸ್ ಪದವಿ ಪೂರ್ಣಗೊಳಿಸಿದ ಐದನೇ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ

ಸಹಾನುಭೂತಿ, ಮಾನವೀಯತೆಗಳು ವೈದ್ಯರ ವ್ಯಕ್ತಿತ್ವಕ್ಕೆ ಕೈಗನ್ನಡಿ: ಡಾ. ತಿವಾರಿ

ಮಡಿಕೇರಿ: ಇಲ್ಲಿನ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಎಂಬಿಬಿಎಸ್ ಪದವಿ ಪೂರ್ಣಗೊಳಿಸಿದ ಐದನೇ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ ನಡೆಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಭೋಪಾಲ್"ನ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (MAJS)ಯ ಪರಿಸರ ಆರೋಗ್ಯ ಸಂಶೋಧನಾ ರಾಷ್ಟ್ರೀಯ ಸಂಸ್ಥೆಯ ನಿರ್ದೇಶಕ ಡಾ.ರಾಜ್ ನಾರಾಯಣ್ ತಿವಾರಿ ಅವರು ವೈದ್ಯಕೀಯ ಪದವೀಧರರಿಗೆ ಅಭಿನಂದನೆ ಸಲ್ಲಿಸಿದರು.

ವೈದ್ಯಕೀಯ ವೃತ್ತಿ ಕೇವಲ ಚಿಕಿತ್ಸೆ ನೀಡುವುದಲ್ಲದೆ, ಸಮಾಜದತ್ತ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿದೆ ಎಂದು ಅವರು ಈ ಸಂದರ್ಭ ಹೇಳಿದರು. ರೋಗಿಗಳೊಂದಿಗೆ ಸಹಾನುಭೂತಿ ಮತ್ತು ಮಾನವೀಯತೆ ವೈದ್ಯರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಜನರು ವೈದ್ಯರನ್ನು ಕೇವಲ ಆರೋಗ್ಯ ಸಮಸ್ಯೆಗಳಿಗಾಗಿ ಮಾತ್ರವಲ್ಲದೆ, ವಿಶ್ವಾಸದ ಆಧಾರದ ಮೇಲೂ ಸಂಪರ್ಕಿಸುತ್ತಾರೆ ಎಂದು ಅವರು ಅಭಿಪ್ರಾಯಪಟ್ಟರು.

ಪಿಜಿ ಅಧ್ಯಯನದಲ್ಲಿ ಸಮುದಾಯ ವೈದ್ಯಕೀಯದ ಮಹತ್ವವನ್ನು ಒತ್ತಿಹೇಳಿದ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಇಂದಿನ ಕಾಲದಲ್ಲಿ ಪುರಾವೆ ಆಧಾರಿತ ಚಿಕಿತ್ಸೆ (ಎವಿಡೆನ್ಸ್ ಬೇಸ್ಡ್ ಮೆಡಿಸಿನ್) ಅತ್ಯಂತ ಅಗತ್ಯವಾಗಿದ್ದು, ದೇಶದಲ್ಲಿ ಸಂಶೋಧನೆಗೆ ಇನ್ನಷ್ಟು ಅವಕಾಶಗಳಿವೆ ಎಂದರು.

ಭಾರತವು 2047ರೊಳಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ವೈದ್ಯರ ಪಾತ್ರ ಮಹತ್ತರವಾಗಿದೆ. ದೇಶದ ಆರೋಗ್ಯವನ್ನು ಕಾಪಾಡುವ ಹೊಣೆಗಾರಿಕೆಯುವ ವೈದ್ಯರ ಮೇಲಿದೆ ಎಂದು ಅವರು ಇದೇ ಸಂದರ್ಭ ತಿಳಿಸಿದರು.

ವೈದ್ಯರು ತಮ್ಮ ಸ್ವಂತ ಆರೋಗ್ಯದ ಬಗ್ಗೆ ಜಾಗರೂಕರಾಗಿರುವುದರ ಜೊತೆಗೆ, ಪರಿಸರ ಸಂರಕ್ಷಣೆಯ ದೂತರಾಗಬೇಕು. ಜಾಗತಿಕ ತಾಪಮಾನ ಏರಿಕೆ ಮತ್ತು ಪರಿಸರ ಹಾನಿ ಆರೋಗ್ಯ ಕ್ಷೇತ್ರದ ಮೇಲೆ ಪರಿಣಾಮ ಬೀರುತ್ತಿರುವ ಹಿನ್ನೆಲೆಯಲ್ಲಿ ಸುಸ್ಥಿರ ಪದ್ಧತಿಗಳನ್ನು ಅನುಸರಿಸುವ ಅಗತ್ಯವಿದೆ ಎಂದು ಹೇಳಿದರು.

ಅತಿಥಿಗಳಾಗಿದ್ದ ಕೊಡಗು ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಟಿ.ಎಂ ಧರ್ಮಜ ಉತ್ತಪ್ಪ ಅವರು ಮಾತನಾಡಿ, ಕೊಡಗಿನ ರಮಣೀಯ ಸ್ಥಳದಲ್ಲಿ ಎಂಬಿಬಿಎಸ್ ವ್ಯಾಸಂಗವನ್ನು ಪೂರ್ಣಗೊಳಿಸಿ ತೆರಳುತ್ತಿರುವ ನಿಮಗೆಲ್ಲರಿಗೂ ಕಾವೇರಿ ಮಾತೆ ಉತ್ತಮ ಭವಿಷ್ಯವನ್ನು ರೂಪಿಸಲು ಆಶೀರ್ವಾದ ಮಾಡಲಿ ಎಂದು ಹಾರೈಸಿದರಲ್ಲದೆ, ದೇವರು ಮತ್ತು ತಂದೆ-ತಾಯಿಯ ನಂತರ ಸಮಾಜದಲ್ಲಿ ಅತ್ಯಂತ ಗೌರವಿಸಲ್ಪಡುವವರು ವೈದ್ಯರು ಎಂದು ವಿಶ್ಲೇಷಿಸಿದರು.

ವೈದ್ಯರ ಸೇವೆಯೇ ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ ಎಂದು ಅಭಿಪ್ರಾಯಪಟ್ಟ ಅವರು, ವೈದ್ಯ ವೃತ್ತಿಗೆ ಶ್ರೇಷ್ಠವಾದ ಗೌರವವಿದ್ದು, ಸರ್ಕಾರಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿರುವ ನಿಮಗೆ ಅಪಾರವಾದ ಅನುಭವ ಸಿಕ್ಕಿದೆ. ಮುಂದಿನ ದಿನಗಳಲ್ಲಿ ಯಾವುದೇ ರೀತಿಯ ಒತ್ತಡಕ್ಕೆ ಮಣಿಯದೆ ನಿಮ್ಮ ವೃತ್ತಿಯನ್ನು ಗೌರವಿಸಿ ಕರ್ತವ್ಯ ನಿರ್ವಹಿಸಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಕಳೆದ 25 ವರ್ಷಗಳಿಂದ ವೈದ್ಯಕೀಯ ಕಾಲೇಜುಗಳಿಗೆ ಕೊಡುಗೆಗಳನ್ನು ನೀಡುತ್ತಾ ಬಂದಿರುವ ಮಂಡ್ಯದ ಡಾ. ಜಯರಾಮ್ ಅವರು, ಕೊಡಗಿನವರಾದ ತಮ್ಮ ಪತ್ನಿಯ ಹೆಸರಿನಲ್ಲಿ ಸ್ಥಾಪಿಸಿರುವ 2.50ಲಕ್ಷ ರೂ. ದತ್ತಿಯ ಬಡ್ಡಿ ಹಣದಲ್ಲಿ ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗದ ಸ್ನಾತಕೋತ್ತರ ವಿಭಾಗದಲ್ಲಿ ಪ್ರಥಮ ಅಂಕ ಪಡೆದವರಿಗೆ ರೂ. 10,000 ರೂಪಾಯಿಗಳನ್ನು ವಿತರಿಸಿ ಗೌರವಿಸಲಾಯಿತು.

ಸಂಸ್ಥೆಯ ನಿರ್ದೇಶಕ ಹಾಗೂ ಡೀನ್ ಡಾ. ಲೋಕೇಶ್ ಎ.ಜೆ, ಪ್ರಾಂಶುಪಾಲ ಡಾ. ವಿಶಾಲ್ ಕುಮಾರ್, ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ರೋಹಿಣಿ ಕೆ.ಎಂ, ವೈದ್ಯಕೀಯ ಅಧೀಕ್ಷಕ ಡಾ. ಸೋಮಶೇಖರ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ನಂಜುಂಡಯ್ಯ, ಅಕಾಡೆಮಿಕ್ ರಿಜಿಸ್ಟ್ರಾರ್ ಡಾ. ರವಿಕಿರಣ್ ಕಿಸಾನ್, ಸಂಸ್ಥೆಯ ವಿವಿಧ ವಿಭಾಗದ ಮುಖ್ಯಸ್ಥರುಗಳು, ಬೋಧಕ ವರ್ಗದವರು ಉಪಸ್ಥಿತರಿದ್ದರು.

ಸಂಸ್ಥೆಯಲ್ಲಿ ಈ ಬಾರಿ 150 ವೈದ್ಯ ವಿದ್ಯಾರ್ಥಿಗಳು ವೈದ್ಯರಾಗಿ ಹೊರಹೊಮ್ಮಿ ಪದವಿ ಸ್ವೀಕರಿಸಿದರು.



- **ವೈದ್ಯಕೀಯ ವೃತ್ತಿ ಕೇವಲ ಚಿಕಿತ್ಸೆ ನೀಡುವುದಲ್ಲದೆ, ಸಮಾಜದತ್ತ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿದೆ**
- **ಮಾನವೀಯತೆ ವೈದ್ಯರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ.**
- **ಜನರು ವೈದ್ಯರನ್ನು ಕೇವಲ ಆರೋಗ್ಯ ಸಮಸ್ಯೆಗಳಿ ಗಾಗಿ ಮಾತ್ರವಲ್ಲದೆ, ವಿಶ್ವಾಸದ ಆಧಾರದ ಮೇಲೂ ಸಂಪರ್ಕಿಸುತ್ತಾರೆ**
- **ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡಬೇಕು.**

ಕಿರುಸುದ್ದಿ

ಪ್ರಾಂಶುಪಾಲರಾಗಿ ಡಾ. ಕೆ.ಜಿ. ವೀಣಾ ಅಧಿಕಾರ ಸ್ವೀಕಾರ

ವೀರಾಜಪೇಟೆ: ವೀರಾಜಪೇಟೆ ಕಾವೇರಿ ಕಾಲೇಜಿನ ಪದವಿ ವಿಭಾಗದ ನೂತನ ಪ್ರಾಂಶುಪಾಲೆಯಾಗಿ ಡಾ.ಕುಪ್ಪಂಡ ವೀಣಾ ಅಧಿಕಾರ ವಹಿಸಿಕೊಂಡರು.



ಬೆನೆಡಿಕ್ಟ್ ಆರ್ಸ. ಸಲ್ಡಾನರ ನಿವೃತ್ತಿಯಿಂದ ತೆರವಾಗಿದ್ದ ಹುದ್ದೆಗೆ ಆಡಳಿತ ಮಂಡಳಿ ಆದೇಶದ ಮೇರೆಗೆ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ವೀಣಾ ಅವರು ಈ ಹಿಂದೆ ಆಂಗ್ಲ ವಿಭಾಗದ ಉಪನ್ಯಾಸಕರಾಗಿ, ಮುಖ್ಯಸ್ಥರಾಗಿ 20 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು, ಮಂಗಳೂರು ವಿಶ್ವವಿದ್ಯಾನಿಲಯದ ಬಿ.ಓ.ಎಸ್ ಹಾಗೂ ಕೊಡಗು ವಿಶ್ವವಿದ್ಯಾಲಯದ ಬಿ.ಓ.ಇ ಆಗಿ ಸೇವೆ ಸಲ್ಲಿಸಿದ್ದಾರೆ. ಇದರೊಂದಿಗೆ ಕಾವೇರಿ ಕಾಲೇಜಿನ ಐ.ಕ್ಯೂ.ಎ.ಸಿ. ಸಂಯೋಜಕರಾಗಿ ಐದು ವರ್ಷ ಸೇವೆ ಸಲ್ಲಿಸಿದ್ದು, ಕೊಡವ ಭಾಷೆಯ ಕವಿತೆಗಳನ್ನು ಆಂಗ್ಲ ಭಾಷೆಗೆ ಭಾಷಾಂತರ ಮಾಡಿದ್ದಾರೆ. ಇವರು ವೀರಾಜಪೇಟೆ ಸಮೀಪದ ನಾಂಗಾಲ ಗ್ರಾಮದ ವಕೀಲ ಕುಪ್ಪಂಡ ರವೀಂದ್ರ ಅವರ ಪತ್ನಿ.

ನಾಲ್ಕು ಶಾಲಾ ಬಸ್ಸಿನಿಂದ ಬ್ಯಾಟರಿ ಕಳವು

ಬಂಟ್ವಾಳ: ತುಂಬೆ ಪದವಿ ಪೂರ್ವ ಕಾಲೇಜಿನ ಕ್ರೀಡಾಂಗಣದಲ್ಲಿ ನಿಲ್ಲಿಸಲಾಗಿದ್ದ ನಾಲ್ಕು ಶಾಲಾ ಬಸ್ಸಿನ ಬ್ಯಾಟರಿ ಕಳವುಗೈದ ಘಟನೆ ನಡೆದಿದೆ. ಈ ಬಗ್ಗೆ ಕಾಲೇಜಿನ ಕಚೇರಿ ಅಧೀಕ್ಷಕ ಅಬ್ದುಲ್ ಕಬೀರ್ ಅವರು ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಶಾಲೆಯ 4 ಶಾಲಾ ಬಸ್ಸುಗಳನ್ನು ಎಂದಿನಂತೆ ಶಾಲಾ ಕ್ರೀಡಾಂಗಣದ ಮರದಡಿಯಲ್ಲಿ ನಿಲ್ಲಿಸಿದ್ದು, ಎ. 30 ರಂದು ಬೆಳಗ್ಗೆ 11.00 ಗಂಟೆಗೆ ಬಸ್ ಡ್ರೈವರ್‌ಗಳು ಬಂದು ಬಸ್ಸನ್ನು ಸ್ಟಾರ್ಟ್ ಮಾಡುವ ಸಂದರ್ಭ ಸ್ಟಾರ್ಟ್ ಆಗದೇ ಇದ್ದು ಬ್ಯಾಟರಿ ಪರಿಶೀಲಿಸಿದ್ದು, 4 ಶಾಲಾ ಬಸ್ಸಿನ ಬ್ಯಾಟರಿಗಳು ಕಳವಾಗಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮದ್ಯಪಾನ ಮುಕ್ತ ಜಿಲ್ಲೆ' ಸಾರ್ವಜನಿಕರಿಗೆ ಅರಿವು ಕಾರ್ಯಕ್ರಮ

ಮುಲ್ಕಿ: ಕೆಎಸ್ ರಾವ್ ನಗರ ಲಿಂಗಪ್ಪಯ್ಯ ಕಾಡು ಆದರ್ಶ ಯುವಕ ವೃಂದ ಹಾಗೂ ಮಂಗಳೂರಿನ ರೋಷನಿ ನಿಲಯ ಜಂಟಿ ಆಶ್ರಯದಲ್ಲಿ ಧೂಮಪಾನ ಮತ್ತು ಮದ್ಯಪಾನ ಮುಕ್ತ ಜಿಲ್ಲೆ ಮಾಡಲು ಬೀದಿ ನಾಟಕದ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು . ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮುಲ್ಕಿ ನಗರ ಪಂಚಾಯತ್ ಮುಖ್ಯಾಧಿಕಾರಿ ಮಧುಕರ್ ಕೆ. ಮಾತನಾಡಿ, ಯುವ ಜನಾಂಗ ದುಶ್ಚಟಗಳನ್ನು ದೂರ ಮಾಡಿ ಆದರ್ಶದ ವ್ಯಕ್ತಿತ್ವದ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು ಎಂದರು

ಮುಖ್ಯ ಅತಿಥಿಗಳಾಗಿ ಸಾಮಾಜಿಕ ಕಾರ್ಯಕರ್ತ ಶಿವಾನಂದ ಆರ್.ಕೆ. ಮತ್ತು ರೋಷನಿ ನಿಲಯದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದು ಕಾರ್ಯಕ್ರಮ ನಡೆಯಿತು

ಮಹಿಳೆಯ ಕೊಲೆ ಯತ್ನ : ಪ್ರಕರಣದ ಆರೋಪಿಗಳಿಗೆ ಜೀವಾವಧಿ ಶಿಕ್ಷೆ

ಉಡುಪಿ: ಮಣಿಪಾಲದ ಮಂಚಿ ಕುಮೇರಿ ಎಂಬಲ್ಲಿ ಮಹಿಳೆಯೊಬ್ಬರನ್ನು ಉಸಿರುಗಟ್ಟಿಸಿ ಕೊಲೆ ಮಾಡಲು ಯತ್ನಿಸಿ, ಸಾಕ್ಷ್ಯ ನಾಶಪಡಿಸಲು ಅವರನ್ನು ಸೂಟ್‌ಕೇಸ್‌ನಲ್ಲಿ ತುಂಬಿಸಿ ಸಾಗಿಸಲು ಮುಂದಾಗಿದ್ದ ಇಬ್ಬರು ಆರೋಪಿಗಳಿಗೆ ಉಡುಪಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿ ಗುರುವಾರ ತೀರ್ಪು ನೀಡಿದೆ. ಬೆಳ್ತಂಗಡಿ ಮೂಲದ ಮಿಥುನ್ ಹಾಗೂ ಆತನ ಸ್ನೇಹಿತ ನಾಗೇಶ್ ಕರಿಣ ಶಿಕ್ಷೆಗೊಳಗಾದ ಅಪರಾಧಿಗಳಾಗಿದ್ದಾರೆ.

2022ರ ಫೆಬ್ರವರಿ 18ರಂದು ಮಂಚಿ ಕುಮೇರಿಯ ಸುಮತಿ ಎಂಬವರು ಮನೆಯಲ್ಲಿ ಒಬ್ಬರೇ ಇದ್ದ ವೇಳೆ ಅಕ್ಕನ ಮಗನಾದ ಮಿಥುನ್ ಹಾಗೂ ನಾಗೇಶ್ ಮನೆಗೆ ನುಗ್ಗಿ ಅವರ ಕುತ್ತಿಗೆ ಹಿಸುಕಿದ್ದರು. ಸುಮತಿ ಪ್ರಜ್ಞೆ ತಪ್ಪುತ್ತಿದ್ದಂತೆಯೇ ಅವರನ್ನು ಕೊಲೆ ಮಾಡುವ ಉದ್ದೇಶದಿಂದ ಚೀಲವೊಂದರಲ್ಲಿ ಹಾಕಿ, ಬಳಿಕ ದೊಡ್ಡ ಸೂಟ್‌ಕೇಸ್‌ನೊಳಗೆ ತುರುಕಿ ಸಾಗಿಸಲು ಯತ್ನಿಸಿದ್ದರು. ಈ ವೇಳೆ ಸ್ಥಳಕ್ಕೆ ಬಂದ ಸುಮತಿಯವರ ಪತಿ ರಮಾನಾಥ ರೈ ಹಾಗೂ ಸಾರ್ವಜನಿಕರು ಓಡಿ ಹೋಗುತ್ತಿದ್ದ ಆರೋಪಿಗಳನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಕೂಡಲೇ ಸೂಟ್‌ಕೇಸ್‌ನಲ್ಲಿದ್ದ ಸುಮತಿಯವರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಕಿರಣ್ ಎಸ್. ಗಂಗಣ್ಣವರ್ ಅವರು ಆರೋಪಿಗಳ ಮೇಲಿನ ಕೊಲೆ ಯತ್ನ ಹಾಗೂ ಅಕ್ರಮ ಪ್ರವೇಶದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಇಬ್ಬರಿಗೂ ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿದ್ದಾರೆ. ಅಲ್ಲದೆ, ವಸೂಲಾದ ದಂಡದ ಹಣದಲ್ಲಿ 45,000 ರೂಪಾಯಿಗಳನ್ನು ಸಂತ್ರಸ್ತ ಮಹಿಳೆಗೆ ಪರಿಹಾರವಾಗಿ ನೀಡುವಂತೆ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಜಯರಾಮ ಶೆಟ್ಟಿ ವಾದ ಮಂಡಿಸಿದ್ದರು.



ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು, 2025 -26ನೇ ಸಾಲಿನ ಕರ್ನಾಟಕ ಕಲಾ ಶ್ರೀ' ಪ್ರಶಸ್ತಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ಗೇರುಕಟ್ಟೆಯಲ್ಲಿರುವ ರಾಜ್ಯ ಗಮಕ ಪರಿಷತ್ ಅಧ್ಯಕ್ಷ ಪ್ರೊಫೆಸರ್ ಮಧೂರು ಮೋಹನ ಕಲ್ಲೂರಾಯ ಅವರಿಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ಸಮಾರಂಭವೊಂದರಲ್ಲಿ ಪ್ರದಾನ ಮಾಡಲಾಯಿತು.




ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸುಸಂದರ್ಭದಲ್ಲಿ ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಉಡುಪಿ ಶ್ರೀ ಪೇಜಾವರ ಮಠಾಧೀಶ ವಿಶ್ವಪ್ರಸನ್ನತೀರ್ಥ ಶ್ರೀಪಾದರು ದಿವ್ಯ ಸಾನಿಧ್ಯ ವಹಿಸಿ ಸಂಸ್ಥಾನ ಪೂಜೆ ನೆರವೇರಿಸಿ ಆಶೀರ್ವಚನ ನೀಡಿದರು.

ದೇವರಲ್ಲಿ ಅಪರಿಮಿತ ಭಕ್ತಿ, ನಂಬಿಕೆ ಇದ್ದರೆ ಅಭೀಷ್ಟ ಈಡೇರಿಕೆ ಖಚಿತ

ಸುಬ್ರಹ್ಮಣ್ಯ: ಭಕ್ತರ ರಕ್ಷಣೆಗಾಗಿ ಭಗವಂತ ಎಲ್ಲಾ ಕಡೆ ಇದ್ದಾನೆ. ಸರ್ವೆಡೆ ಇರುವ ಭಗವಂತ ಕಂಬದಲ್ಲೂ ಇದ್ದಾನೆ ಎಂದು ಭಕ್ತನಿಗೆ ಸಾಕ್ಷಾತ್ಕರಿಸಿದವನು ನರಸಿಂಹ. ಕಣ್ಣಿಗೆ ಕಾಣದ ಭಗವಂತನು ಸದಾ ಮಗುವಾದ ಭಕ್ತನನ್ನು ಕಾಪಾಡುತ್ತಿರುತ್ತಾನೆ. ಭಕ್ತನ ಭಕ್ತಿಯು ಭಗವಂತನ ಇರುವಿಕೆಗೆ ಮೂಲವಾಗುತ್ತದೆ ಎಂದು ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಹೇಳಿದರು.

ಜಗದ್ಗುರು ಶ್ರೀ ಮಧ್ವಾಚಾರ್ಯ ಮಹಾಸಂಸ್ಥಾನಮ್‌ನ ಸಂಪುಟ ನರಸಿಂಹ ಸ್ವಾಮಿ ಶ್ರೀ ಸುಬ್ರಹ್ಮಣ್ಯ ಮಠದಲ್ಲಿ ನೃಸಿಂಹ ಜಯಂತಿ ಮಹೋತ್ಸವದ ಅಂಗವಾಗಿ ನಡೆದ ಆನಂದ ತೀರ್ಥ ತತ್ವದರ್ಶಿನೀ ಸಭಾದಲ್ಲಿ ಅವರು ಅನುಗ್ರಹ ಸಂದೇಶ ನೀಡಿದರು. ಭಗವಂತನ ಕೃಪೆಗೆ ಹೃದಯಾಂತರಾಳದ ಭಕ್ತಿಯೇ ಮುಖ್ಯ. ದೇವರಲ್ಲಿ ಅಪರಿಮಿತವಾದ ಭಕ್ತಿ ಮತ್ತು ನಂಬಿಕೆಗಳಿದ್ದರೆ ನಮ್ಮ ಅಭೀಷ್ಟಗಳು ಈಡೇರುವುದು ಖಂಡಿತಾ ಎಂದರು. ಭಗವಂತನ ಅವತಾರಗಳಲ್ಲಿ ನೃಸಿಂಹ ಅವತಾರವು ಅಪೂರ್ವವಾದುದು. ಭಗವಂತನ ಮೇಲೆ ನಂಬಿಕೆ ಇಟ್ಟರೆ ಅವನು ನಮ್ಮನ್ನು ರಕ್ಷಿಸುತ್ತಾನೆ. ನರಸಿಂಹ ದೇವರ ಆರಾಧನೆಯಿಂದ ಜ್ಞಾನ ವೃದ್ಧಿಯಾಗುತ್ತದೆ. ನಮಗೆ ಒಳಿತಾದರೆ ಅದು ಭಗವಂತನ ಕೃಪೆ ಎಂಬ ಭಾವನೆ



ಇರಬೇಕು. ನಮಗೆ ಕಷ್ಟ ಬಂದಾಗ ಭಗವಂತನೇ ಅದನ್ನು ದೂರೀಕರಿಸುತ್ತಾನೆ ಎಂಬ ನಂಬಿಕೆ ಇರಿಸಿಕೊಳ್ಳಬೇಕು ಎಂದು ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ವಿದ್ವಾನ್ ವಾಗೀಶಾಚಾರ್ಯ ಗೊರೆಬಾಳ ಉಪನ್ಯಾಸ ನೀಡಿದರು. ನಿವೃತ್ತ ಪ್ರಾಂಶುಪಾಲ ಎ. ಹರಿದಾಸ್ ಭಟ್, ವಿದ್ವಾಂಸರಾದ ವಿದ್ವಾನ್ ಸಗ್ರಿ ಆನಂದ ತೀರ್ಥ, ವಿದ್ವಾನ್ ಕಿರಣ್ ಆಚಾರ್ಯ, ಶ್ರೀ ಮಠದ ದಿವಾನ ಸುದರ್ಶನ ಜೋಯಿಸ, ಪ್ರಮುಖರಾದ ಕೆ. ಯಜ್ಞೇಶ್ ಆಚಾರ್, ಶ್ರೀಕೃಷ್ಣ ಶರ್ಮ, ಸುಹಾಸ್ ಉಪಾಧ್ಯಾಯ ದೇವರಗದ್ದೆ, ರವೀಂದ್ರ ಭಟ್ ಉಪಸ್ಥಿತರಿದ್ದರು.

ಪುಚ್ಚಮೊಗರು ಡ್ಯಾಂ ಬರಿದು, ನೀರಿನ ಮಟ್ಟ ತೀವ್ರ ಕುಸಿತ

ಎಲ್ಲೆಲ್ಲೂ ಜಲಕ್ಷಾಮದ ಭೀತಿ

ಮೂಡುಬಿದಿರೆ: ದಿನದಿಂದ ದಿನಕ್ಕೆ ಬಿಸಿಲಿನ ತೀವ್ರತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜೀವಜಲದ ಕೊರತೆ ಉಲ್ಬಣಗೊಂಡಿದ್ದು, ಮೂಡುಬಿದಿರೆ ಪಟ್ಟಣಕ್ಕೆ ಜಲಕ್ಷಾಮದ ಭೀತಿ ಎದುರಾಗಿದೆ. ಪುರಸಭಾ ವ್ಯಾಪ್ತಿಯ ಪ್ರಮುಖ ಜಲಾಶಯವಾದ ಪುಚ್ಚಮೊಗರು ಡ್ಯಾಂ ಸಂಪೂರ್ಣವಾಗಿ ಬರಿದಾಗಿರುವುದು ಆತಂಕಕ್ಕೆ ಕಾರಣವಾಗಿದೆ.

ಮೂಡುಬಿದಿರೆ ಹಾಗೂ ಬಂಟ್ವಾಳ ತಾಲೂಕುಗಳ ಗಡಿ ಭಾಗದಲ್ಲಿರುವ ಫಲ್ಗುಣಿ ನದಿಯಿಂದ ಎರಡೂ ತಾಲೂಕುಗಳಿಗೆ ನೀರು ಪೂರೈಕೆಯಾಗುತ್ತಿದ್ದು, ಇತ್ತೀಚಿನ ದಿನಗಳಲ್ಲಿ ನದಿಯಲ್ಲಿನ ನೀರಿನ ಪ್ರಮಾಣ ಗಣನೀಯವಾಗಿ ಕುಸಿದಿದೆ. ಪರಿಣಾಮವಾಗಿ, ನಗರ ಪ್ರದೇಶದ ಜನತೆಗೆ ಕುಡಿಯುವ ನೀರಿನ ಪೂರೈಕೆ ಸಂಪೂರ್ಣವಾಗಿ ನೆರವೇರಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ.

ಪುರಸಭಾ ವ್ಯಾಪ್ತಿಯಲ್ಲಿ ಬೋರ್‌ವೆಲ್‌ಗಳ ಮೂಲಕ ನೀರು ಪೂರೈಸಲಾಗುತ್ತಿದ್ದರೂ, ಅವುಗಳ ಮೇಲಿನ ಅವಲಂಬನೆ ಹೆಚ್ಚಾಗಿದೆ. ಕಳೆದ ಕೆಲವು ದಿನಗಳಿಂದ ಅಣೆಕಟ್ಟಿನ ನೀರಿನ ಮಟ್ಟ ಏಕಾಏಕಿ ಕುಸಿದಿರುವುದರಿಂದ ಜನತೆ ನೀರಿನ ಅಭಾವವನ್ನು ಎದುರಿಸುವಂತಾಗಿದೆ.

ಬೋರ್‌ವೆಲ್‌ನ ನೀರಿನ ಲಭ್ಯತೆ ಕುಂಠಿತ

ಇದೀಗ ತಾಲೂಕಿನ 12 ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಜಲಸಂಕಷ್ಟ ತಾರಕಕ್ಕೇರಿಲ್ಲ. ಸ್ಥಳೀಯ ಕೆರೆ-ಬಾವಿಗಳಲ್ಲಿ ನೀರಿನ ಮಟ್ಟ ಕಡಿಮೆಯಾಗಿದ್ದರೂ, ಸಂಪೂರ್ಣ ಸಮಸ್ಯೆ ಉಂಟಾಗಿಲ್ಲ. ಹೊಸಬೆಟ್ಟು ಪಂಚಾಯಿತಿಯ ಗಾಜಿಗಾರ ಪಲ್ಕೆಯಲ್ಲಿರುವ ಪರಿಶಿಷ್ಟ ಪಂಗಡದ ಕಾಲನಿಯಲ್ಲಿ ಮಾತ್ರ ಬೋರ್‌ವೆಲ್‌ನ ನೀರಿನ ಲಭ್ಯತೆ ಕುಂಠಿತವಾಗಿದೆ.



ಎರಡು ದಿನಕ್ಕೊಮ್ಮೆ ನೀರು ಪೂರೈಕೆ

ಪ್ರಸ್ತುತ ಪರಿಸ್ಥಿತಿಯನ್ನು ಮನಗಂಡು, ಎರಡು ದಿನಕ್ಕೊಮ್ಮೆ ನೀರು ಪೂರೈಕೆ ಮಾಡಲಾಗುತ್ತಿದೆ. ಅಗತ್ಯವಿರುವ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ವ್ಯವಸ್ಥೆಯನ್ನೂ ಜಾರಿಗೆ ತರಲಾಗಿದೆ. ಶೀಘ್ರದಲ್ಲೇ ಮಳೆಯಾದರೆ ನೀರಿನ ಅಭಾವ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಪುರಸಭಾ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ಕುಡಿಯುವ ನೀರಿನ ಪೂರೈಕೆ ಸಮರ್ಪಕವಿಲ್ಲ

ಬೆಳುವಾಯಿ ಪಾಲಡ್ಕ ಹಾಗೂ ತೆಂಕಮಿಜಾರು ಗ್ರಾಮ ಪಂಚಾಯತ್‌ಗಳ ಕೆಲವು ಎತ್ತರ ಪ್ರದೇಶಗಳಲ್ಲಿ ತಾಂತ್ರಿಕ ಸಮಸ್ಯೆಗಳ ಕಾರಣದಿಂದ ನೀರಿನ ಪೂರೈಕೆ ಸಮರ್ಪಕವಾಗಿ ನಡೆಯುತ್ತಿಲ್ಲ. ಶಿರ್ತಾಡಿ, ನೆಲ್ಲಿಕಾರು, ದರೆಗುಡ್ಡೆ, ಪಡುಮಾರ್ನಾಡು, ಕಲ್ಲಮುಂಡೂರು, ಪುತ್ತಿಗೆ ಹಾಗೂ ಇರುವೈಲು ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿಲ್ಲ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಹಲವು ಕಡೆಗಳಲ್ಲಿ ಸಹಾಯಕರವಾಗಿವೆ.

ಮನೆಯಲ್ಲಿ ಶಾರ್ಟ್ ಸರ್ಕ್ಯೂಟ್: ಬೆಂಕಿ ಕೆನ್ನಾಲಿಗೆಗೆ ಸೊತ್ತುಗಳು ಭಸ್ಮ


ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯ ತೋಕೂರು ಗ್ರಾಮದ ತಾಳಿಗುರಿ ಚರ್ಚ್ ಶಾಲೆಯ ಬಳಿ ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ಶಾರ್ಟ್ ಸರ್ಕ್ಯೂಟ್ ಆಗಿ ಆಕಸ್ಮಿಕ ಬೆಂಕಿ ಕಾಣಿಸಿಕೊಂಡು ಮನೆಯ ಸಾಮಾನುಗಳು ಹೊತ್ತಿ ಉರಿದು ಲಕ್ಷಾಂತರ ರೂ.ನಷ್ಟ ಸಂಭವಿಸಿದ ಘಟನೆ ಗುರುವಾರ ರಾತ್ರಿ ನಡೆದಿದೆ

ತಾಳಿಗುರಿ ಬಳಿಯ ನಿವಾಸಿ ಶಾಂತಿ ಮಸ್ಕರೇಞಸ್ ಎಂಬವರು ಕುಟುಂಬ ಸಮೇತ ನೆರೆಮನೆಯಲ್ಲಿರುವ ಮೆಹಂದಿ ಕಾರ್ಯಕ್ರಮಕ್ಕೆ ಹೋಗಿರುವಾಗ ಮನೆಯ ಅಡುಗೆ ಕೋಣೆಯಲ್ಲಿದ್ದ ಇನ್ವರ್ಟರ್ ಬ್ಯಾಟರಿಯಲ್ಲಿ ದೋಷ ಕಾಣಿಸಿಕೊಂಡು ಶಾರ್ಟ್ ಸರ್ಕ್ಯೂಟ್ ಆಗಿ ಭಾರೀ ಶಬ್ದ ಉಂಟಾಗಿ ಅಡುಗೆ ಕೋಣೆಯ ಎಲೆಕ್ಟ್ರಾನಿಕ್ ವಸ್ತುಗಳಾದ ವಾಷಿಂಗ್ ಮೆಷಿನ್, ಫ್ರಿಡ್ಜ್‌ಗೆ ಬೆಂಕಿ ತಗಲಿದೆ. ಬೆಂಕಿಯ ಕೆನ್ನಾಲಿಗೆಯಿಂದ ಅಡುಗೆ ಕೋಣೆಯ ಮೇಲ್ಛಾವಣಿಗೆ ಹಾನಿಯಾಗಿದೆ

ಅಡುಗೆ ಕೋಣೆಯಲ್ಲಿ ಯಾರು ಇಲ್ಲದ ಕಾರಣ ಜೀವ ಹಾನಿ ತಪ್ಪಿದೆ. ಅಗ್ನಿ ಅವಘಡದಿಂದ ಸುಮಾರು 10 ಲಕ್ಷಕ್ಕೂ ಮಿಕ್ಕಿ ನಷ್ಟ ಸಂಭವಿಸಿದ್ದು ಸ್ಥಳಕ್ಕೆ ಪಡುಪಣಂಬೂರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಮೋಹನ್‌ದಾಸ್, ಮುಲ್ಕಿ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ

ಮನೆ ಹಾನಿ ಬಗ್ಗೆ ಮುಲ್ಕಿ ತಹಶಿಲ್ದಾರ್





ಹಾಗೂ ಕಂದಾಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ.

ಪ್ರಸಾದ್ ನೇತ್ರಾಲಯದಿಂದ ಉಚಿತ ಕನ್ನಡಕ ವಿತರಣೆ



ಮಂಗಳೂರು: ಶಿಕಾರಿಪುರ ಶಾಸಕ, ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ, ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಇವರ ನೇತೃತ್ವದಲ್ಲಿ ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ನೇತ್ರಜ್ಯೋತಿ ಚಾರಿಟೇಬಲ್ ಟ್ರಸ್ಟ್, ಉಡುಪಿ, ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಹಾಗೂ ಒನ್‌ಸೈಟ್ ಎಸ್ಸಿಲಾರ್ ಲಕ್ಸೋಟ್ಟಿಕಾ ಫೌಂಡೇಶನ್, ಬೆಂಗಳೂರು ಇವರ ಆಶ್ರಯದಲ್ಲಿ ಇತ್ತೀಚೆಗೆ ಶಿಕಾರಿಪುರದ ಮಂಗಳ ಭವನದಲ್ಲಿ ಇತ್ತೀಚೆಗೆ ಉಚಿತ ನೇತ್ರ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ ಆಯೋಜಿಸಲಾಗಿತ್ತು. ಶಿಬಿರದಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಪ್ರಸಾದ್ ನೇತ್ರಾಲಯದಿಂದ ಉಚಿತ ಕನ್ನಡಕ ವಿತರಣೆ ನಡೆಯಿತು. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅತಿಥಿಯಾಗಿ ಭಾಗವಹಿಸಿದರು. ಬಿ.ವೈ. ವಿಜಯೇಂದ್ರ ಫಲಾನುಭವಿಗಳಿಗೆ ಕನ್ನಡಕ ವಿತರಿಸಿದರು. ಈ ಸಂದರ್ಭದಲ್ಲಿ ಪ್ರಸಾದ್ ನೇತ್ರಾಲಯ ಸಮೂಹ ಕಣ್ಣಿನ ಆಸ್ಪತ್ರೆಗಳ ವೈದ್ಯಕೀಯ ನಿರ್ದೇಶಕ ನಾಡೋಜ ಡಾ. ಕೃಷ್ಣಪ್ರಸಾದ್ ಕೂಡ್ಲು ಅವರನ್ನು ಅವರ ಅವಿರತ ಸಾಮಾಜಿಕ ಸೇವಾ ಕಾರ್ಯಗಳಿಗಾಗಿ ಸನ್ಮಾನಿಸಲಾಯಿತು. ಶಿಬಿರದಲ್ಲಿ ಆಯ್ಕೆಯಾದವರಲ್ಲಿ ಈಗಾಗಲೇ 82 ಮಂದಿಗೆ ಉಚಿತ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು. 342 ಮಂದಿಗೆ ಉಚಿತ ಕನ್ನಡಕ ವಿತರಿಸಲಾಯಿತು.

ಕೆನರಾ ಇಂಜಿನಿಯರಿಂಗ್ ಇಂಡಸ್ಟ್ರಿಯಲ್ ಟೆಕ್-ಎಕ್ಸ್‌ಪೋ 2026 ಉದ್ಘಾಟನೆ

ಮಂಗಳೂರಿಗೆ ಕೌಶಲ ತರಬೇತಿ ಕೇಂದ್ರ: ಖಾದರ್

ಮಂಗಳೂರು: ವಿದ್ಯಾರ್ಥಿಗಳಿಗೆ ತಳಮಟ್ಟದಿಂದ ಕೌಶಲಯುತ ಶಿಕ್ಷಣ ಸಿಗಬೇಕಿದೆ. ನನ್ನ ಕೋರಿಕೆಯಂತೆ ಮಂಗಳೂರಿಗೆ ಕೌಶಲ ತರಬೇತಿ ಕೇಂದ್ರ ಒದಗಿಸಲು ಮುಖ್ಯಮಂತ್ರಿ ಒಪ್ಪಿಗೆ ನೀಡಿದ್ದಾರೆ ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದರು.

ಕೆನರಾ ಇಂಡಸ್ಟ್ರೀಸ್ ಅಸೋಸಿಯೇಶನ್ ವತಿಯಿಂದ ಮಂಗಳೂರಿನ ಕರಾವಳಿ ಉತ್ಸವ ಮೈದಾನದ ಗುರುಪುರ ಸದಾನಂದ ಪ್ರಭು ವೇದಿಕೆಯಲ್ಲಿ ಶುಕ್ರವಾರ ನಡೆದ ಕೆನರಾ ಇಂಜಿನಿಯರಿಂಗ್ ಇಂಡಸ್ಟ್ರಿಯಲ್ ಟೆಕ್-ಎಕ್ಸ್‌ಪೋ 2026 ಉದ್ಘಾಟಿಸಿ ಅವರು ಮಾತನಾಡಿದರು.

ಮಂಗಳೂರಿನ ಅಭಿವೃದ್ಧಿಯಲ್ಲಿ ಕೆನರಾ ಇಂಡಸ್ಟ್ರೀಸ್ ಅಸೋಸಿಯೇಶನ್‌ನವರ ಕೊಡುಗೆ ದೊಡ್ಡಮಟ್ಟದಲ್ಲಿ ಇದೆ. ಕರಾವಳಿಯ ಯುವಸಮೂಹ ಉದ್ಯೋಗಕ್ಕಾಗಿ ಬೇರೆಡೆಗೆ ವಲಸೆ ಹೋಗುತ್ತಿದ್ದಾರೆ. ನಮ್ಮ ಇಲ್ಲಿನ ಯುವಕರು ಇಲ್ಲೇ ಉದ್ಯೋಗ ಮಾಡುವಂತಾಗಬೇಕು. ಅದಕ್ಕಾಗಿ ಗುಣಮಟ್ಟದ ಉದ್ಯಮ ಕಟ್ಟಿ ಬೆಳೆಸಬೇಕು ಎಂದರು.

ಅಚಲ್ ಇಂಡಸ್ಟ್ರೀಸ್ ಅವರ ಹೊಸ ಉತ್ಪನ್ನವನ್ನು ಯು.ಟಿ. ಖಾದರ್ ಅನಾವರಣ ಮಾಡಿದರು. ಕೆನರಾ ಇಂಡಸ್ಟ್ರೀಸ್ ಅಸೋಸಿಯೇಶನ್ ಅಧ್ಯಕ್ಷ ಎಂ.ಡಿ. ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಅಚಲ್ ಗ್ರೂಪ್‌ನ ಚೆಯರ್‌ಮೆನ್ ಜಿ. ಗಿರಿಧರ ಪ್ರಭು, ಕೆನರಾ ಬ್ಯಾಂಕಿನ ಜನರಲ್ ಮ್ಯಾನೇಜರ್ ಮಂಜುನಾಥ ಎಸ್. ಸಿಂಗೈ, ಗರೋಡಿ ಸ್ಟೀಲ್ಸ್‌ನ ಮಾಲಕ ಮನೋಜ್ ಸರಿಪಳ್ಳ, ಟೆಕ್ ಎಕ್ಸ್‌ಪೋ ಚೆಯರ್‌ಮೆನ್ ಎನ್. ಅರುಣ್ ಪಡಿಯಾರ್, ಎಂಆರ್‌ಪಿಎಲ್‌ನ ಗ್ರೂಪ್ ಜನರಲ್ ಮ್ಯಾನೇಜರ್ ಪ್ರಸಾದ್, ಎಸ್‌ಐಡಿಬಿಐ ಎಜಿಎಂ ಎಲ್.ಆರ್. ನಾರಾಯಣ್, ಎನ್‌ಎಂಪಿಎ ಅಧಿಕಾರಿ ಚಂದ್ರಶೇಖರ್ ಪಾಲೇಕರ್, ಎಂಆರ್‌ಪಿಎಲ್‌ನ ಡಾ. ಪ್ರಶಾಂತ್ ಶಂಕರ್ ಉಪಸ್ಥಿತರಿದ್ದರು.



ಉತ್ಪಾದನಾ ವಲಯದ ಬೇರು ಇನ್ನಷ್ಟು ಗಟ್ಟಿಯಾಗಬೇಕಿದೆ. ದೇಶದ ಬೆಳವಣಿಗೆಯನ್ನು ಈ ಕ್ಷೇತ್ರದ ಕೊಡುಗೆ ಹೆಚ್ಚಿದೆ. ಉತ್ಪಾದನೆಯೊಂದಿಗೆ ಸೇವಾ ಕ್ಷೇತ್ರಗಳಿಗೂ ಒತ್ತು ಸಿಗಬೇಕಿದೆ. ಕೈಗಾರಿಕೆಗಳಿಗೆ ಯಾವುದೇ ಅಡೆತಡೆಗಳಿಲ್ಲದೆ ಮೂಲಸೌಕರ್ಯಗಳು ಸರಕಾರದಿಂದ ಲಭಿಸಬೇಕು. ಈ ಬಗ್ಗೆ ವಿಧಾನಸಭೆಯಲ್ಲಿ ಧ್ವನಿ ಎತ್ತಿ ಸಹಕಾರ ನೀಡುತ್ತೇನೆ.

■ **ಡಾ. ಭರತ್ ಶೆಟ್ಟಿ,** ಶಾಸಕರು

ಉದ್ಯಮ ಕ್ಷೇತ್ರಕ್ಕೆ ಹಲವಾರು ಸವಾಲುಗಳ ಜತೆಗೆ ತೊಂದರೆಗಳೂ ಇವೆ. ಸ್ವತಃ ಉದ್ಯಮಿಯಾಗಿ ನನಗೆ ಅದರ ಬಗ್ಗೆ ಅರಿವಿದೆ. ಉದ್ಯಮ ಕ್ಷೇತ್ರದಿಂದಾಗಿ ದೇಶದ ಆರ್ಥಿಕ ಶಕ್ತಿ ಹೆಚ್ಚುತ್ತದೆ. ಉದ್ಯಮಿಗಳಿಗೆ ಸುಲಭವಾಗಿ ಬ್ಯಾಂಕುಗಳಿಂದ ಸಾಲ ಸಿಗುವಂತಾಗಬೇಕು.

■ **ವೇದವ್ಯಾಸ ಕಾಮತ್,** ಶಾಸಕರು,

ಮೊದಲನೇ ಬಾರಿಗೆ ಆಯೋಜನೆಗೊಂಡಿರುವ ಟೆಕ್ ಎಕ್ಸ್‌ಪೋ ನಿರಂತರವಾಗಿ ನಡೆಯುವಂತಾಗಬೇಕು. ಎಂಎಸ್‌ಎಂಇಯಿಂದ ದೇಶಕ್ಕೆ ಅಪಾರವಾದ ಕೊಡುಗೆ ಇದೆ. ಉದ್ಯಮ ವಲಯದಲ್ಲಿ ದೇಶದ 32 ಕೋಟಿ ಮಂದಿ ಉದ್ಯೋಗದಲ್ಲಿದ್ದಾರೆ. ರಕ್ಷಣ ವಲಯದಲ್ಲಿ ಪ್ರಧಾನಿ ಮೋದಿ ಕ್ರಾಂತಿಯನ್ನೇ ಮಾಡಿದ್ದಾರೆ. ರಕ್ಷಣೆಗೆ ಬಜೆಟ್‌ನಲ್ಲಿ 1,82,000 ಕೋಟಿ ರೂ. ಮೀಸಲಿರಿಸಿದ್ದಾರೆ. ಕೊಯಮುತ್ತೂರಿನಲ್ಲಿ ಉದ್ಯಮ ವಲಯ ಭಾರೀ ಮುಂದುವರಿದಿದೆ. ಅದರಂತೆಯೇ ಮಂಗಳೂರಿನ ಉದ್ಯಮ ವಲಯ ಅಪ್‌ಗ್ರೇಡ್ ಆದರೆ ಉದ್ಯೋಗ ಸೃಷ್ಟಿಗೆ ಸಹಕಾರಿಯಾಗುತ್ತದೆ.

■ **ಕ್ಯಾ.ಬ್ರಿಜೇಶ್ ಚೌಟ ,** ದ.ಕ.ಸಂಸದರು

ಮಹಾಲಕ್ಷ್ಮೀ ಬ್ಯಾಂಕ್ ವತಿಯಿಂದ ಉಚ್ಚಿಲ ಮಹಾಲಕ್ಷ್ಮೀ ಸನ್ನಿಧಿಯಲ್ಲಿ ಚಂಡಿಕಾಯಾಗ ಸಂಪನ್ನ

ಪ್ರಾಮಾಣಿಕ ಸಂಕಲ್ಪ ಸಿದ್ಧಿಗೆ ದೈವಿಕ ಅನುಗ್ರಹ: ಪೇಜಾವರ ಶ್ರೀ

ಉಡುಪಿ: ಮನುಷ್ಯನ ಎಲ್ಲಾ ಪ್ರಾಮಾಣಿಕ ಪರಿಶ್ರಮದ ಪ್ರಯತ್ನದ ಸಂಕಲ್ಪಗಳು ಸಿದ್ಧಿಯಾಗಲು ದೈವಿಕ ಅನುಗ್ರಹವೇ ಪ್ರೇರಣೆಯಾಗಲಿದ್ದು, ಇಂದು ಉಚ್ಚಿಲ ಮಹಾಲಕ್ಷ್ಮೀ ದೇವಿಯ ಸನ್ನಿಧಿಯಲ್ಲಿ ಮಹಾಲಕ್ಷ್ಮೀ ಕೋ ಆಪರೇಟಿವ್ ಬ್ಯಾಂಕ್ ನಿರಂತರ ಪ್ರಗತಿ, ಗ್ರಾಹಕರಿಗೆ ಉತ್ತಮ ಸೇವೆಯ ಜೊತೆಗೆ ಸಮಾಜಕ್ಕೆ ಆರ್ಥಿಕ ಚೈತನ್ಯ ತುಂಬುವ ಸಂಕಲ್ಪದೊಂದಿಗೆ ನಡೆಸಿದ ಚಂಡಿಕಾಯಾಗದ ಮೂಲಕ ದೇವರ ಅನುಗ್ರಹದಿಂದ ಬ್ಯಾಂಕಿನ ಅಧ್ಯಕ್ಷರಾದ ಶಾಸಕ ಯಶ್‌ಪಾಲ್ ಸುವರ್ಣ ನೇತೃತ್ವದಲ್ಲಿ ಮುಂದಿನ ಯೋಜನೆಗಳು ಸಾಕಾರವಾಗಲಿ ಎಂದು ಪೇಜಾವರ ಮಠದ ಪರಮ ಪೂಜ್ಯ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಹೇಳಿದರು.

ಉಚ್ಚಿಲ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಮಹಾಲಕ್ಷ್ಮೀ ಕೋ ಆಪರೇಟಿವ್ ಬ್ಯಾಂಕಿನ ವತಿಯಿಂದ ಆಯೋಜಿಸಿದ್ದ ಚಂಡಿಕಾಯಾಗದ ಪೂರ್ಣಾಹುತಿ ಸಂದರ್ಭದಲ್ಲಿ ಆಶೀರ್ವದಿಸಿ ಅನುಗ್ರಹ ಸಂದೇಶ ನೀಡಿದರು.

ಉಚ್ಚಿಲ ಮಹಾಲಕ್ಷ್ಮೀ ದೇವಸ್ಥಾನದ ಪ್ರಧಾನ ಅರ್ಚಕರಾದ ರಾಘವೇಂದ್ರ ತಂತ್ರಿಗಳ ನೇತೃತ್ವದಲ್ಲಿ ಚಂಡಿಕಾಯಾಗ ಸಂಪನ್ನಗೊಂಡಿತು. ಈ ಸಂದರ್ಭದಲ್ಲಿ ಕಾಪು ಶಾಸಕರಾದ ಸುರೇಶ್ ಶೆಟ್ಟಿ ಗುರ್ಮೆ, ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಜಯ ಸಿ. ಕೋಟ್ಯಾನ್, ಬಿಜೆಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ, ಕೋಲಾರದ ಮಾಜಿ ಸಂಸದರಾದ ಮುನಿ ಸ್ವಾಮಿ, ಮೀನುಗಾರ ಮುಖಂಡರಾದ ದಯಾನಂದ ಸುವರ್ಣ, ಆನಂದ ಪಿ. ಸುವರ್ಣ, ಸಾಧು ಸಾಲ್ಯಾನ್, ರಾಮಚಂದ್ರ ಕುಂದರ್, ನಾಗರಾಜ ಸುವರ್ಣ, ಕೃಷ್ಣ ಸುವರ್ಣ, ಸುಭಾಷ್ ಮೆಂಡನ್, ಹಿರಿಯಣ್ಣ ಕಿದಿಯೂರು, ದಯಾನಂದ ಕುಂದರ್, ಕರುಣಾಕರ ಸಾಲ್ಯಾನ್, ಚೇತನ್ ಬೆಂಗ್ರೆ, ಗಣ್ಯರಾದ ಭುವನೇಂದ್ರ ಕಿದಿಯೂರು, ಪುರುಷೋತ್ತಮ ಶೆಟ್ಟಿ, ಅಜಯ್ ಪಿ. ಶೆಟ್ಟಿ, ಮನೋಹರ ಶೆಟ್ಟಿ, ಸತ್ಯನಾಥ ಶೆಟ್ಟಿ ಹಿರಿಯಡ್ಕ, ಅಮರನಾಥ ಶೆಟ್ಟಿ ಹಿರಿಯಡ್ಕ, ಡಾ ಜಿ. ಎಸ್. ಚಂದ್ರಶೇಖರ್, ಎಂ.ಹರೀಶ್ಚಂದ್ರ, ಗೋಪಾಲಕೃಷ್ಣ ಸಾಮಗ, ಶೀರೂರು ಮಠದ ದಿವಾನರಾದ ಡಾ. ಉದಯ ಕುಮಾರ್ ಸರಳತ್ತಾಯ, ದಿವಾಕರ ಶೆಟ್ಟಿ ತೋಟದ ಮನೆ, ಮಟ್ಟಾರು ರತ್ನಾಕರ ಹೆಗ್ಡೆ, ರಾಜೇಶ್ ಶೆಟ್ಟಿ ಬಿರ್ತಿ, ಪ್ರತಾಪ್ ಹೆಗ್ಡೆ ಮಾರಾಳಿ, ಹರೀಶ್ ಶೆಟ್ಟಿ ಚೇರ್ಕಾಡಿ, ಬೈಕಾಡಿ ಸುಪ್ರಸಾದ್ ಶೆಟ್ಟಿ, ಶ್ರೀ ತಿಂಗಳೆ ವಿಕ್ರಮಾರ್ಜುನ ಹೆಗ್ಗಡೆ, ಕಿರಣ್ ಕುಮಾರ್ ಬೈಲೂರು, ಪ್ರಭಾಕರ ಪೂಜಾರಿ, ಗಿರೀಶ್ ಅಂಚನ್, ಕಮಲಾಕ್ಷ ಹೆಬ್ಬಾರ್, ರಾಜೀವ್ ಕುಲಾಲ್, ದಿನೇಶ್ ಅಮೀನ್, ಸಂಧ್ಯಾ ರಮೇಶ್, ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ, ವೀಣಾ ಶೆಟ್ಟಿ, ಗೀತಾಂಜಲಿ ಸುವರ್ಣ, ರವೀಂದ್ರ ಶೆಟ್ಟಿ ಕೊಲ್ಲಬೆಟ್ಟು, ಜಿತೇಂದ್ರ ಶೆಟ್ಟಿ ಉದ್ಯಾವರ, ಯೋಗೀಶ್ ಶೆಟ್ಟಿ ಬಾಲಾಜಿ, ಉಚ್ಚಿಲ ಮಹಾಲಕ್ಷ್ಮೀ ದೇವಸ್ಥಾನದ ಅಧ್ಯಕ್ಷರಾದ ಗಿರಿಧರ ಸುವರ್ಣ, ಬ್ಯಾಂಕಿನ ಉಪಾಧ್ಯಕ್ಷ ವಾಸುದೇವ ಸಾಲ್ಯಾನ್, ಬ್ಯಾಂಕಿನ ನಿರ್ದೇಶಕರು, ಸಿಬ್ಬಂದಿಗಳು ಹಾಗೂ ಸದಸ್ಯರು ಹಿತೈಷಿಗಳು ಉಪಸ್ಥಿತರಿದ್ದರು.



ಸುವರ್ಣ ಸಂಭ್ರಮದ ಹೊಸ್ತಿಲಲ್ಲಿರುವ ಮಹಾಲಕ್ಷ್ಮೀ ಬ್ಯಾಂಕ್ ಗ್ರಾಹಕರಿಗೆ ಉತ್ತಮ ಸೇವೆಯ ಮೂಲಕ ಜನರ ವಿಶ್ವಾಸಕ್ಕೆ ಪಾತ್ರವಾಗಿ, ಸಿಬ್ಬಂದಿ ವರ್ಗದ ಸೇವೆಯ ಮೂಲಕ ಉತ್ತಮ ಸಹಕಾರಿ ಸಂಸ್ಥೆಯಾಗಿ ಸಮಾಜಕ್ಕೆ ವಿಶೇಷ ಕೊಡುಗೆ ನೀಡುವ ಸಂಕಲ್ಪದೊಂದಿಗೆ ಚಂಡಿಕಾಯಾಗ ನಡೆಸಿದ್ದು, ಈ ಮೂಲಕ ಬ್ಯಾಂಕಿನ ಸರ್ವಾಂಗೀಣ ಪ್ರಗತಿಗೆ ದೇವರ ಹಾಗೂ ಸಮಾಜದ ಸರ್ವರ ಸಹಕಾರ ಸಿಗುವಂತಾಗಲಿ.

■ **ಯಶ್‌ಪಾಲ್ ಸುವರ್ಣ,** ಅಧ್ಯಕ್ಷರು, ಮಹಾಲಕ್ಷ್ಮೀ ಕೋ ಆಪರೇಟಿವ್ ಬ್ಯಾಂಕ್



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	9	6	3	0	12	+0.832
ರಾಜಸ್ಥಾನ	9	6	3	0	12	+0.617
ಗುಜರಾತ್	9	5	4	0	10	-0.192
ಚೆನ್ನೈ	8	3	5	0	6	-0.121
ದಿಲ್ಲಿ	8	3	5	0	6	-1.060
ಕೆಕೆಆರ್	8	2	5	1	5	-0.751
ಮುಂಬೈ	8	2	6	0	4	-0.784
ಲಖನೌ	8	2	6	0	4	-1.106

ಕಿರುಸುದ್ದಿ

ಕ್ರಿಕೆಟ್ ಕೆನಡಾಗೆ ಮಾಂಟಿ ದೇಸಾಯಿ ಕೋಚ್

ಹೊಸದಿಲ್ಲಿ: ಕ್ರಿಕೆಟ್ ಕೆನಡಾಗೆ ಭಾರತ ಮೂಲದ ಮಾಂಟಿ ದೇಸಾಯಿ ಅವರನ್ನು ಪ್ರಧಾನ ತರಬೇತುದಾರನ್ನಾಗಿ ನೇಮಕ ಮಾಡಲಾಗಿದೆ. ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗ ವಿಚಾರಕ್ಕೆ ಸಂಬಂಧಿಸಿದಂತೆ ಹಳೆಯ ತರಬೇತುದಾರರನ್ನು ಅಮಾನತುಗೊಳಿಸಿದ ಬೆನ್ನಲ್ಲೇ ಫ್ರಾಂಚೈಸಿ ಮತ್ತು ವಿದೇಶಿ ತಂಡಗಳಿಗೆ ತರಬೇತಿ ನೀಡಲು ಖ್ಯಾತರಾದ ಮಾಂಟಿ ಅವರನ್ನು ನೇಮಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿಲಾಗಿದೆ. ಮುಂದಿನ ಟಿ20 ವಿಶ್ವಕಪ್‌ಗೆ ತಯಾರಿ ನಡೆಸುವತ್ತ ಸಾಗಿರುವ ಕೆನಡಾ ತೀಕ್ಷ್ಣ ಅಭ್ಯಾಸ ಮತ್ತು ಗುರಿಯ ಯೋಜನೆಯ ಅಡಿಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ನೇಪಾಳ ಮತ್ತು ಅಫ್ಘಾನಿಸ್ತಾನ ಅಂಥ ತಂಡಗಳಿಗೆ ಅವರು ನೀಡಿದ ತರಬೇತಿ ಗಮನಾರ್ಹ. ಅವರ ಅನುಭವ ನಮ್ಮ ವಿಶ್ವಕಪ್ ಗುರಿಗೆ ಬೂಸ್ಟರ್ ನೀಡಲಿದೆ, ಮಾಂಟಿ ಅಂಥವರು ದೀರ್ಘಕಾಲದವರೆಗೂ ಕೋಚ್ ಆಗಿ ಇರುತ್ತಾರೆ ಎಂದು ಕ್ರಿಕೆಟ್ ಕೆನಡಾ ತಿಳಿಸಿದೆ.

ರಗ್ಬಿ ಪ್ರೀಮಿಯರ್ ಲೀಗ್ ಹರಾಜು ಪೂರ್ಣ

ಹೈದರಾಬಾದ್: ಜಿಎಂಆರ್ ಸ್ಪೋರ್ಟ್ಸ್ ಹಾಗೂ ರಗ್ಬಿ ಇಂಡಿಯಾ ಸಹಯೋಗದಲ್ಲಿ ಎಚ್‌ಎಸ್‌ಬಿಸಿ ರಗ್ಬಿ ಪ್ರೀಮಿಯರ್ ಲೀಗ್ ಎರಡನೇ ಆವೃತ್ತಿಗಾಗಿ ಆಟಗಾರರ ಹರಾಜು ಮತ್ತು ಡ್ರಾಫ್ಟ್ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಂಡಿದೆ. ಎಲ್ಲಾ ಫ್ರಾಂಚೈಸಿಗಳು ಸಮತೋಲನ ಹೊಂದಿದ ಬಲಿಷ್ಠ ತಂಡಗಳನ್ನು ರಚಿಸಿವೆ. ಈ ಬಾರಿ ಭಾರತೀಯ ರಗ್ಬಿ ಇತಿಹಾಸದಲ್ಲಿ ಮೊದಲ ಬಾರಿಗೆ ಮಹಿಳಾ ಫ್ರಾಂಚೈಸಿಗಳು ಕೂಡ ಹರಾಜಿನಲ್ಲಿ ಭಾಗವಹಿಸಿದ್ದು, ಚೆನ್ನೈ ಬುಲ್ಸ್, ಮುಂಬೈ ಡ್ರೀಮರ್ಸ್, ಕೊಲ್ಕತ್ತಾ ಬಂಗಾ ಟೈಗರ್ಸ್ ಹಾಗೂ ಡೆಲ್ಲಿ ರೆಡ್ಜ್ ತಂಡಗಳು ತಮ್ಮ ಮೊದಲ ತಂಡಗಳನ್ನು ಕಟ್ಟಿಕೊಂಡಿವೆ. ಪುರುಷ ಮತ್ತು ಮಹಿಳಾ ಎರಡೂ ಸ್ಪರ್ಧೆಗಳು ಜೂನ್ 16ರಿಂದ 28ರವರೆಗೆ ಹೈದರಾಬಾದ್‌ನ ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ನಡೆಯಲಿವೆ. ಪುರುಷರ ವಿಭಾಗದಲ್ಲಿ ವೆಸ್ಟ್ ಬೆಂಗಾಲ್‌ನ ಸುಮಿತ್ ಕುಮಾರ್ ರಾಯ್ 3.75 ಲಕ್ಷ ರೂಪಾಯಿಗೆ ಹೈದರಾಬಾದ್ ಹೀರೋಸ್ ತಂಡಕ್ಕೆ ಸೇರ್ಪಡೆಯಾಗಿ ಅತಿ ದುಬಾರಿ ಭಾರತೀಯ ಆಟಗಾರರಾದರು. ಮೊಹಿತ್ ಖತ್ರಿ (3.5 ಲಕ್ಷ, ಚೆನ್ನೈ ಬುಲ್ಸ್), ದೀಪಕ್ ಕುಮಾರ್ ಪುನಿಯಾ (2.75 ಲಕ್ಷ, ಡೆಲ್ಲಿ ರೆಡ್ಜ್) ಮತ್ತು ಪ್ರಶಾಂತ್ ಅರವಿಂದ್ ಪ್ರತಾಪ್ ಸಿಂಗ್ (2.75 ಲಕ್ಷ, ಕೊಲ್ಕತ್ತಾ) ಪ್ರಮುಖ ಖರೀದಿಗಳಾಗಿದ್ದರು. ಮಹಿಳಾ ವಿಭಾಗದಲ್ಲಿ ಡೆಲ್ಲಿ ರೆಡ್ಜ್ ತಂಡದ ಶಿಖಾ ಯಾದವ್ 2.4 ಲಕ್ಷ ರೂಪಾಯಿಗೆ ಅತಿ ಹೆಚ್ಚು ಮೊತ್ತಕ್ಕೆ ಸೇರ್ಪಡೆಯಾದರು. ಮುಂಬೈ ಡ್ರೀಮರ್ಸ್‌ನ ಭೂಮಿಕಾ ಶುಕ್ಲಾ (2.2 ಲಕ್ಷ), ನಿರ್ಮಲ್ಯ ರೌತ್ (1.6 ಲಕ್ಷ, ಕೊಲ್ಕತ್ತಾ) ಹಾಗೂ ಅಮಂದೀಪ್ ಕೌರ್ (1.6 ಲಕ್ಷ, ಚೆನ್ನೈ) ಇತರ ಪ್ರಮುಖ ಖರೀದಿಗಳಾಗಿದ್ದಾರೆ.

ಶಾಟ್‌ಗನ್ ವಿಶ್ವಕಪ್‌ನಲ್ಲಿ 12 ಭಾರತೀಯರು

ಹೊಸದಿಲ್ಲಿ: ಸೋಮವಾರದಿಂದ ಶುರುವಾಗಲಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್ ಕೂಟದಲ್ಲಿ ಭಾಗವಹಿಸಲು 12 ಭಾರತೀಯ ಶೂಟರ್‌ಗಳು ಸಿದ್ಧವಾಗಿದ್ದಾರೆ. ಕಜಕಿಸ್ತಾನದಲ್ಲಿ ನಡೆಯಲಿರುವ ಈ ಕೂಟಕ್ಕಾಗಿ ಶೂಟಿಂಗ್ ತಂಡ ಆತಿಥ್ಯ ದೇಶಕ್ಕೆ ತಲುಪಿದೆ. 284 ಶೂಟರ್‌ಗಳು 42 ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಗಳನ್ನು ಪ್ರತಿನಿಧಿಸಲಿದ್ದಾರೆ. ಒಟ್ಟು ಐದು ಒಲಿಂಪಿಕ್ಸ್ ಇವೆಂಟ್‌ಗಳು 10ದಿನ ನಡೆಯಲಿವೆ. 8 ಜನರ ಭಾರತ ತಂಡವು ರ್‍ಯಾಂಕಿಂಗ್ ಪಾಯಿಂಟ್ಸ್ ಓನ್ಲಿ ವಿಭಾಗದಲ್ಲಿ ಸ್ಪರ್ಧಿಸಲು ಪ್ರಯಾಣಿಸಿದೆ. ಮಹಿಳೆಯರ ಸ್ಕೀಟ್ ವಿಭಾಗದ ಸ್ಪರ್ಧೆಯಿಂದ ಕೂಟ ಶುರುವಾಗಲಿದೆ. ಸೋಮವಾರದಂದು ಅರ್ಹತಾ ಸುತ್ತು ನಡೆಯಲಿದೆ. ಮುಂದಿನ ದಿನ ಫೈನಲ್ಸ್ ನಡೆಯಲಿವೆ. ಕೂಟದ ಮೊದಲ ದಿನ, ಮೈರಾಜ್ ಅಹ್ಮದ್, ಅನಂತಜೀತ್ ಸಿಂಗ್ ಮಹಿಳಾ ಶೂಟರ್ ರೈಝಾ ಧಿಲ್ಲೊನ್ ಭಾಗವಹಿಸಲಿದ್ದಾರೆ.

ದಿಲ್ಲಿ ಕ್ಯಾಪಿಟಲ್ಸ್‌ಗೆ 226 ರನ್ ಗುರಿ | ಫೆರೇರಾ ಆರ್ಭಟ

ಪರಾಗ್ ಪರಾಕ್ರಮ

ಜೈಪುರ: ನಾಯಕನ ಆಟ ಪ್ರದರ್ಶಿಸಿದ ರಿಯಾನ್ ಪರಾಗ್(90; 50ಎ, 8ಬೌ, 5ಸಿ) ಈ ಬಾರಿಯ ಐಪಿಎಲ್‌ನಲ್ಲಿ ತಮ್ಮ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶಿಸಿದ್ದು, ರಾಜಸ್ಥಾನ ದಿಲ್ಲಿ ಕ್ಯಾಪಿಟಲ್ಸ್‌ಗೆ ದೊಡ್ಡ ಗುರಿ ನೀಡಿದೆ.

ಪರಾಗ್, ಜುರೇಲ್ ಕಟ್ಟಿದ ಇನ್ನಿಂಗ್ಸ್‌ಗೆ ಕೊನೆಯಲ್ಲಿ ಡೊನೋವಾನ್ ಫೆರೇರಾ(47★; 14ಎ, 2ಬೌ, 6ಸಿ) ಬೂಸ್ಟರ್ ಸಿಕ್ಕಿದ್ದು ಆರ್‌ಆರ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 225 ರನ್ ಗಳಿಸಿದೆ. ಬೇಗನೇ ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿ ಸಿಲುಕಿಕೊಂಡರೂ ಧ್ರುವ್ ಜುರೇಲ್ ಮತ್ತು ಪರಾಗ್ ಉತ್ತಮ ಬ್ಯಾಟಿಂಗ್ ಮಾಡಿ ಆಸರೆಯಾದರು. ಅಂತಿಮದಲ್ಲಿ ಫೆರೇರಾ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು. ಇದೇ ಪಂದ್ಯದ ಮೂಲಕ ಮೈದಾನಕ್ಕಿಳಿದ ಮಿಚೆಲ್ ಸ್ಟಾರ್ಕ್ 40 ರನ್ ನೀಡಿ 3 ವಿಕೆಟ್ ಪಡೆದುಕೊಂಡರು.

ಆರಂಭಿಕ ಕುಸಿತ: ಟಾಸ್ ಗೆದ್ದು ರಾಜಸ್ಥಾನ ಬ್ಯಾಟಿಂಗ್ ಆಯ್ದುಕೊಂಡಿತು. ಸ್ಟಾರ್ಕ್ ಬಲದೊಂದಿಗೆ ಮೈದಾನಕ್ಕಿಳಿದ ದಿಲ್ಲಿ ಆರಂಭದಲ್ಲೇ ಮಿಂಚಿತು. ಮೊದಲನೇ ಬಾಲ್‌ನಲ್ಲಿ ಸಿಕ್ಸರ್ ಬಾರಿಸಿದ ಜೈಸ್ವಾಲ್ ಮೂರನೇ ಎಸೆತದಲ್ಲೇ ಕ್ಯಾಚಿತ್ತರು. ಮುಂದಿನ ಓವರ್‌ನಲ್ಲಿ ವೈಭವ್ ಮೊದಲನೇ ಬಾಲ್‌ನಲ್ಲೇ ಬೌಂಡರಿ ಬಾರಿಸಿದರು. ಆದರೆ ಆಡಲಾಗದ ಯಾರ್ಕರ್ ಎಸೆದು ಪೆವಿಲಿಯನ್ ಹಾದಿ ತೋರಿಸಿಬಿಟ್ಟರು ಕೇಲ್ ಜಮಿಸನ್. ರಾಜಸ್ಥಾನಕ್ಕೆ ದೊಡ್ಡ ಆಘಾತ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಧ್ರುವ್ ಜುರೇಲ್ ಉತ್ತಮ ಬ್ಯಾಟಿಂಗ್ ಮಾಡುವತ್ತ ಸಾಗಿದರು.

ರಿಯಾನ್ ಪರಾಗ್ ಆಸರೆ: ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ನಾಯಕ ರಿಯಾನ್ ಪರಾಗ್ ಪಂದ್ಯಾವಳಿಯಲ್ಲಿ ತಮ್ಮ ಶ್ರೇಷ್ಠ ಬ್ಯಾಟಿಂಗ್ ಮಾಡಿದರು. ಆರಂಭದಲ್ಲಿ ಸಿಂಗಲ್, ಟು-ಡಿಗಳಿಂದ ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡರು. ಅವರಿಗೆ ಜುರೇಲ್ ತಕ್ಕ ಸಾಥ್ ಕೊಟ್ಟರು. ಈ ನಡುವೆ ರಿಯಾನ್ ಬಾನಿನೆತ್ತರದ ಸಿಕ್ಸರ್‌ಗಳನ್ನೂ ಬಾರಿಸಿದರು. ಪವರ್‌ಪ್ಲೇ ಮುಕ್ತಾಯಕ್ಕೆ ರಾಯಲ್ಸ್ 56 ರನ್ ಗಳಿಸಿತ್ತು. ಮಧ್ಯಮ ಓವರ್‌ನಲ್ಲಿ ಇಬ್ಬರ ಜೊತೆಯಾಟ ವಿಸ್ತರಿಸಿತು. ಪರಾಗ್ ಅರ್ಧಶತಕ ಬಾರಿಸಿದರು. ಧ್ರುವ್ ಜುರೇಲ್ ಕೂಡ ಅರ್ಧ ಶತಕದತ್ತ ಸಾಗಿದರು. ಈ ಜೋಡಿ 59 ಎಸೆತಲ್ಲಿ 102 ರನ್‌ಗಳ ದೊಡ್ಡ ಜೊತೆಯಾಟ ನಿರ್ಮಿಸಿತು. ಜುರೇಲ್ 42 ರನ್‌ಗೆ ವಿಕೆಟ್ ಒಪ್ಪಿಸಿದರು. ರವಿಂದ್ರ ಜಡೇಜಾ ಕೂಡ ಪರಾಗ್ ಅವರೊಂದಿಗೆ ಆಸರೆಯಾದರು. ಮಧ್ಯಮ ಓವರ್ ಮುಕ್ತಾಯದವರೆಗೂ ಜಡೇಜಾ ಮತ್ತು ಪರಾಗ್ ಮಿಂಚಿದರು. ಡೆತ್ ಓವರ್ ಶುರುವಾಗುವ ಮುನ್ನ ರಾಜಸ್ಥಾನ 163 ರನ್ ಗಳಿಸತು. 17ನೇ ಓವರ್ ಬೌಲಿಂಗ್ ಮಾಡಲು ಬಂದ ಸ್ಟಾರ್ಕ್, ಜಡೇಜಾ(20; 13ಎ, 1ಬೌ, 1ಸಿ) ವಿಕೆಟ್ ಒಪ್ಪಿಸಿದರು. ಅದೇ ಓವರ್‌ನಲ್ಲಿ ಶತಕ ವಂಚಿತ ರಿಯಾನ್ ಪರಾಗ್(90; 50ಎ, 8 ಬೌ, 5ಸಿ) ಕೂಡ ವಿಕೆಟ್ ಒಪ್ಪಿಸಿದರು.



ಫೆರೇರಾ ಅಬ್ಬರ

ಡೆತ್ ಓವರ್‌ನಲ್ಲಿ ಫೆರೇರಾ ಅಬ್ಬರ. 18ನೇ ಓವರ್ ಮಾಡಲು ಬಂದ ಕುಲ್ದೀಪ್ ಬೆವರಿಳಿಸಿದರು. ಮೂರು ಸಿಕ್ಸರ್ ಬಾರಿಸಿದರು. 18ನೇ ಓವರ್‌ನಲ್ಲಿ ಸ್ಟಾರ್ಕ್ ಮತ್ತೆ ಕೌಂಟರ್ ಅಟ್ಯಾಕ್ ಮಾಡಲೆತ್ನಿಸಿದರು. ಆದರೆ ಫೆರೇರಾ ಅವರನ್ನೂ ದಂಡಿಸಿದರು. ಕೊನೆಯ ಓವರ್‌ನಲ್ಲಿ ನಟರಾಜನ್ ಬಂದರು. ಅವರ ಬಾಲಿಂಗ್‌ನಲ್ಲೂ 3 ಭರ್ಜರಿ ಸಿಕ್ಸರ್ ಬಾರಿಸಿದರು. ಈ ಮೂಲಕ ಕೇವಲ 14 ಎಸೆತ ಎದುರಿಸಿದ ಫೆರೇರಾ ಔಟಾಗದೆ 47 ರನ್ ಚಚ್ಚಿದರು. ಡೆತ್ ಓವರ್‌ಗಳಲ್ಲಿ ರಾಜಸ್ಥಾನ ಬರೋಬ್ಬರಿ 63 ರನ್ ಬಾರಿಸಿತು. ತಂಡ 225 ರನ್ ಮಾಡಿತು.

ಬಾಲಕ ಇಶಾಂಕ್ ಇತಿಹಾಸ!

ಏಳು ವರ್ಷದ ಬಾಲಕ ಇಶಾಕ್ ಸಿಂಗ್ ಜಗತ್ತೇ ನಿಬ್ಬೆರಗಾಗುವಂತಹ ಸಾಧನೆ ಮಾಡಿದ್ದು 29 ಕಿ.ಮೀ. ದೂರವನ್ನು ಈಜುತ್ತಾ ಕ್ರಮಿಸಿದ್ದಾರೆ. ರಾಂಚಿ ಮೂಲದ ಇಶಾಂಕ್ ಶ್ರೀಲಂಕಾ ಮತ್ತು ಭಾರತ ನಡುವೆ ಇರುವ ಅಪಾಯಕಾರಿ ಪಾಕ್ ಜಲಸಂಧಿಯನ್ನು ಕೇವಲ 9 ಗಂಟೆ 50 ನಿಮಿಷಗಳಲ್ಲಿ ಈಜುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ.



29 ಕಿ.ಮೀ. ದೂರ ಈಜಿದ ಬಾಲಕ | **9** 9 ಗಂಟೆ 50 ನಿಮಿಷ ತೆಗೆದುಕೊಂಡ ಸಮಯ

ವಿಶ್ವ ದಾಖಲೆ
ಈ ಮಾರ್ಗ ದಾಟುದ ಅತ್ಯಂತ ಕಿರಿಯ

ಎಲ್ಲಿಂದ ಎಲ್ಲಿ
ಶ್ರೀಲಂಕಾದ ತಲೈಮನ್ನಾರ್‌ನಿಂದ ಭಾರತದ ಧನುಷ್ಕೋಡಿಯವರೆಗೆ



ಇಂದು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಪಂದ್ಯ
ಮುಂಬೈ ಸೋತರೆ ಹೊರಬೀಳುವ ಸಾಧ್ಯತೆ

ಮುಂಬೈಗೆ ಸೇಡಿನ ತವಕ



ಚೆನ್ನೈ: ತವರು ಅಭಿಮಾನಿಗಳೆದುರು ಹೀನಾಯವಾಗಿ ಸೋಲಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೋಲಿಸುವ ಗುರಿಯಲ್ಲಿ ಮುಂಬೈ ಇಂಡಿಯನ್ಸ್ ತಂಡವಿದೆ. ಐಪಿಎಲ್ ರೋಚಕ ಹಂತಕ್ಕೆ ತಲುಪಿದೆ. ಪಂಜಾಬ್, ಆರ್‌ಸಿಬಿ ಮತ್ತು ರಾಜಸ್ಥಾನ ತಂಡಗಳು ಈಗಾಗಲೇ ಭರ್ಜರಿ ಪ್ರದರ್ಶನದೊಂದಿಗೆ ಮೂರು ಸ್ಥಾನಗಳಲ್ಲಿ ಗಟ್ಟಿಯಾಗಿ ನಿಂತುಕೊಂಡಿವೆ. ಇತ್ತ ನಾಲ್ಕನೇ ಸ್ಥಾನದಲ್ಲಿರುವ ಸನ್‌ರೈಸರ್ಸ್ ಹೈದರಾಬಾದ್ ಕೂಡ ಕರಾರುವಾಕ್ ಪ್ರದರ್ಶನ ನೀಡುತ್ತಿದೆ. ಈ ಮಧ್ಯೆ ಗುಜರಾತ್, ಚೆನ್ನೈ ನಂತರದ ಸ್ಥಾನಗಳಲ್ಲಿವೆ. ಅಂಕಪಟ್ಟಿಯ ಹೊಡೆದಾಟದಲ್ಲಿ ಉಳಿಯಲು ಎಲ್ಲಾ ಪಂದ್ಯಗಳನ್ನು ಗೆಲ್ಲಬೇಕಾದ ಅನಿವಾರ್ಯತೆ ಚೆನ್ನೈ ಮತ್ತು ಮುಂಬೈ ಎರಡೂ ತಂಡಗಳಿವೆ.

ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದ ಮೂಲಕ ಸಿಎಸ್‌ಕೆಯ ಮಹೇಂದ್ರ ಸಿಂಗ್ ಧೋನಿ ಮತ್ತು ಮುಂಬೈನ ರೋಹಿತ್ ಶರ್ಮ ಐಪಿಎಲ್‌ಗೆ ಕಂಬ್ಯಾಕ್ ಮಾಡುವ ಸಾಧ್ಯತೆ ಇದೆ. ಆರ್‌ಸಿಬಿ ಪಂದ್ಯದ ವೇಳೆ ಗಾಯಗೊಂಡಿರುವ ನಿಟ್ಟಿನಲ್ಲಿ ರೋಹಿತ್ ಶರ್ಮ ಹೊರಗುಳಿದಿದ್ದಾರೆ. ಧೋನಿ ಐಪಿಎಲ್‌ನಲ್ಲಿ ಇದೂವರೆಗೂ ಕಣಕ್ಕಿಳಿದಿಲ್ಲ. ಚೆಪಾಕ್‌ನಲ್ಲಿ ನಡೆದ ಅಭ್ಯಾಸದ ವೇಳೆ ಧೋನಿ ಕೀಪಿಂಗ್ ಮಾಡಿದರೆ, ರೋಹಿತ್ ಶರ್ಮ ಕೂಡ ತಂಡದೊಂದಿಗೆ ಕಾಣಿಸಿಕೊಂಡಿದ್ದಾರೆ.

ಚೆನ್ನೈಗೆ ಒತ್ತಡ: ಸಂಜು ಸ್ಯಾಮ್ಸನ್ ಹೊರತುಪಡಿಸಿ ಇನ್ನುಳಿದ ಯಾವುದೇ ಬ್ಯಾಟರ್ ಕೂಡ ಲಯದಲ್ಲಿಲ್ಲ. ಚೆನ್ನೈ ಆಡಿರುವ 8 ಪಂದ್ಯಗಳಲ್ಲಿ 3 ಪಂದ್ಯಗಳನ್ನು ಗೆದ್ದಿದೆ. ಇದರಲ್ಲಿ ಸಂಜು ಸ್ಯಾಮ್ಸನ್ ಎರಡು ಪಂದ್ಯದಲ್ಲಿ ಶತಕ ಬಾರಿಸಿದ್ದರು. ಗಾಯದ ಸಮಸ್ಯೆಗೆ ತುತ್ತಾಗಿರುವ ಚೆನ್ನೈಗೆ ಧೋನಿ ಅನುಭವದ ಬಲ ಸಿಗಬಹುದು. ರುತುರಾಜ್ ನಿಧಾನ ಇನ್ನಿಂಗ್ಸ್‌ನೊಂದಿಗೆ ಲಯಕ್ಕೆ ಬಂದಂತಿದೆ. ಉರ್ವಿಲ್ ಪಟೇಲ್‌ಗೆ ಮತ್ತೊಮ್ಮೆ ಅವಕಾಶ ಸಿಹಬಹುದು. ಮಧ್ಯಮ ಕ್ರಮಾಂಕದಲ್ಲಿ ಕಾರ್ತಿಕ್ ಶರ್ಮ, ಪ್ರಶಾಂತ್ ವೀರ್ ಲಯದ ಹುಡುಕಾಟದಲ್ಲಿದ್ದರೆ. ಶಿವಂ ದುಬೆ ವಿಫಲರಾಗಿದ್ದಾರೆ. ಬೌಲಿಂಗ್ ವಿಚಾರಕ್ಕೆ ಬಂದರೆ ಜೆಮಿ ಓವರ್‌ಟನ್, ಅನ್ಶುಲ್ ಮಾತ್ರವೇ ವಿಕೆಟ್ ಪಡೆದಿದ್ದು, ಇನ್ನುಳಿದವರು ದುಬಾರಿಯಾಗಿದ್ದಾರೆ.

ಮುಂಬೈಗೆ ಮಾಡು ಇಲ್ಲವೇ ಮಡಿ: ಅಂಕಪಟ್ಟಿಯ ತೀರಾ ಕೆಳಗಿನ ಸ್ಥಾನದಲ್ಲಿರುವ ಮುಂಬೈ ಇಂಡಿಯನ್ಸ್ ಭಾರೀ ಹಿನ್ನಡೆ ಅನುಭವಿಸಿದೆ. ಆಡಿರುವ ಪಂದ್ಯಗಳಲ್ಲಿ ಎರಡು ಮಾತ್ರ ಗೆಲುವು ಸಾಧಿಸಿರುವ ಹಾರ್ದಿಕ್ ಪಡೆ ಇನ್ನುಳಿದ ಎಲ್ಲಾ ಪಂದ್ಯಗಳಲ್ಲಿ ಸೋತಿದೆ. ಹೀಗಿರುವಾಗ ಎಲ್ಲಾ ಪಂದ್ಯಗಳನ್ನು ಗೆಲ್ಲಲೇಬೇಕಾದ ಅನಿವಾರ್ಯತೆಯಲ್ಲಿದ್ದು, ಚೆನ್ನೈ ಪಂದ್ಯ ಮಾಡು ಇಲ್ಲವೇ ಮಡಿ ಅಂತಯೇ ಇರಲಿದೆ. ಮುಖ್ಯವಾಗಿ ಮುಂಬೈನಲ್ಲಿ ಕಳೆದ ವಾರ ನಡೆದಿದ್ದ ಚೆನ್ನೈ ವಿರುದ್ಧದ ಪಂದ್ಯದಲ್ಲೇ ಸೋಲನುಭವಿಸಿದ್ದು, ಸೇಡಿನ ತವಕದಲ್ಲಿ ಕಾಣಿಸಿಕೊಂಡಿದೆ. ರಯಾನ್ ರಿಕೆಲ್ಟನ್ ಲಯಕ್ಕೆ ಬಂದಿದ್ದಾರೆ. ಇನ್ನೋರ್ವ ಆರಂಭಿಕ ವಿಲ್ ಜ್ಯಾಕ್ಸ್ ತಂಡಕ್ಕೆ ಶಕ್ತಿ ತುಂಬಿದ್ದಾರೆ. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಲಯಕ್ಕೆ ಬರಬೇಕಿದೆ. ಸೂರ್ಯಕುಮಾರ್ ಯಾದವ್ ಭಾರೀ ಪರದಾಟ ನಡೆಸಿರುವುದೇ ದೊಡ್ಡ ಹಿನ್ನಡೆ. ಬೌಲಿಂಗ್ ವಿಚಾರಕ್ಕೆ ಬಂದರೆ ತಂಡದಲ್ಲಿರುವ ದೊಡ್ಡ ದೊಡ್ಡ ಬೌಲರ್‌ಗಳು ದಂಡಿಸಿಕೊಂಡಿದ್ದಾರೆ. ಬೂಮ್ರಾ ಹಿಡಿದು ಬೋಲ್ಟ್ ತನಕ ಎಲ್ಲಾ ಬೌಲರ್‌ಗಳು ದುಬಾರಿಯಾಗಿದ್ದಾರೆ.

ಪಿಚ್

ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಬ್ಯಾಟರ್ ಹಾಗೂ ಬೌಲರ್‌ಗಳು ಸಮತೋಲಿತ ಪ್ರದರ್ಶನ ನೀಡುವ ಸಾಧ್ಯತೆ ಇದೆ. ಬ್ಯಾಟರ್‌ಗಳು 200ಕ್ಕೂ ಹೆಚ್ಚು ಸ್ಕೋರ್ ಮಾಡಬಹುದಾದರೂ, ಅತ್ಯಧಿಕ ಸ್ಕೋರ್ ಮಾಡಲಾಗುವುದಿಲ್ಲ. ಸ್ಪಿನ್ನರ್‌ಗಳಿಗೆ ಲಾಭ ನೀಡುತ್ತದೆ. ಹೆಚ್ಚಿನ ಬೌನ್ಸ್, ಎರಡನೇ ಇನ್ನಿಂಗ್ಸ್ ವೇಳೆ ತುಸು ಇಬ್ಬನಿ ಕಾಟ ಇರಲಿದೆ.

ಪಂದ್ಯದ ವಿವರ

ಯಾವಾಗ: ಶನಿವಾರ
ಎಲ್ಲಿ: ಚೆನ್ನೈ
ಸಮಯ: ಸಂಜೆ 7:30
ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಅಂಡರ್-17 ಫುಟ್ಬಾಲ್: ಏಷ್ಯಾಕಪ್‌ಗೆ ಭಾರತ ತಂಡ

ಹೊಸದಿಲ್ಲಿ: ಸೌದಿ ಅರೆಬಿಯಾದಲ್ಲಿ ನಡೆಯಲಿರುವ ಅಂಡರ್-17 ಫುಟ್ಬಾಲ್ ಏಷ್ಯನ್ ಕಪ್ ಪಂದ್ಯಾವಳಿಗಾಗಿ ಭಾರತ ತಂಡವನ್ನು ಎಐಎಫ್‌ಎಫ್ ಶುಕ್ರವಾರ ಪ್ರಕಟಿಸಿತು. ಭಾರತದ ಪ್ರಧಾನ ಕೋಚ್ ಬಿಬಿಯಾನೋ ಫರ್ನಾಂಡೀಸ್ 23 ಜನರ ತಂಡ ಬಿಡುಗಡೆ ಮಾಡಿದರು. ಭಾರತ ಡ್ರಾದಲ್ಲಿ ಆಸ್ಟ್ರೇಲಿಯಾ, ಉಜ್ಬೇಕಿಸ್ತಾನ, ಕೋರಿಯಾ ರಿಪಬ್ಲಿಕ್‌ನೊಂದಿಗೆ ಎ ಗುಂಪಿನಲ್ಲಿದೆ. ಕೋರಿಯಾ ತನ್ನ ಸ್ಪರ್ಧೆಯನ್ನು ಹಿಂಪಡೆದಿರುವ ನಿಟ್ಟಿನಲ್ಲಿ ಗುಂಪು ಕೇವಲ ಮೂರು ತಂಡಕ್ಕೆ ಸೀಮಿತವಾಗಿರಲಿದೆ. ಪಂದ್ಯಾವಳಿಯಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳು ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಪಂದ್ಯಾವಳಿಯಲ್ಲಿ ಸ್ಥಾನ ಪಡೆಯಲಿವೆ.

ಭಾರತ ತಂಡ

ಗೋಲ್ ಕೀಪರ್‌ಗಳು: ಅಲೋಕ್ ನಿಶಾದ್, ಮನಶ್‌ಜ್ಯೋತಿ ಬರುವಾ, ರಾಜ್ ರೂಪ್ ಸರ್ಕಾರ್.

ಡಿಫೆಂಡರ್ಸ್: ಅಭಿಷೇಕ್ ಕುಮಾರ್ ಮೊಂಡಲ್, ಇಂದ್ರ ರಾಣಾ ಮರ್ಗ, ಕೊರೌ ಮೈತೆಯ್ ಕೊಂಥೌಜಮ್, ಲಾಮ್ಸಂಗ್ ಜುವಾಲಾ, ಲೆಸ್ಲಿನ್ ರೆಬೆಲೊ, ಎಂಡಿ ಐಮಾನ್ ಬಿನ್, ಶುಭಂ ಪೂನಿಯಾ.

ಮಿಡ್‌ಫೀಲ್ಡರ್‌ಗಳು: ದಲ್ಲಾಲ್‌ಮುವಾನ್ ಗ್ಯಾಂಗ್ಟೆ, ಡೆನ್ನಿ ಸಿಂಗ್ ವಾಂಗ್‌ಖೇಮ್, ಡೈಮಂಡ್ ಸಿಂಗ್ ಥೋಕ್‌ಚೋಮ್, ಮೂಸಾ ಆಶಿಕ್ ಸೋಫಿ, ನಿತೀಶ್‌ಕುಮಾರ್ ಮೈತೇಯ್ ಯೆಂಗ್‌ಖೋಮ್.

ಫಾರ್ವರ್ಡ್‌ರ್‌ಗಳು: ಆದಿಲ್ ಅಮನ್ ಎ, ಅಜ್ಲಾನ್ ಶಾ ಖ್, ಗುನ್ಲೀಬಾ ವಾಂಗ್‌ಖೈರಕ್‌ಪಂ, ಹೀರಂಗಂಬಾ ಸೆರಾಮ್, ರಹಾನ್ ಅಹ್ಮದ್, ರಾಜ್ ಸಿಂಗ್ ವಾಹೆಂಗ್‌ಬಾಮ್, ವಾಷಿಂಗ್ಟನ್ ಸಿಂಗ್ ನ್ಗಾಂಗೊಮ್, ಯುವರಾಜ್ ಕದಮ್.

ಕ್ವಾರ್ಟರ್‌ನಲ್ಲಿ ತೈವಾನ್ ವಿರುದ್ಧ ಜಯ | ಸೆಮಿನಲ್ಲಿ ಜಪಾನ್/ಫ್ರಾನ್ಸ್ ಎದುರಾಳಿ

ಭಾರತಕ್ಕೆ ಥಾಮಸ್ ಕಪ್ ಪದಕ ಖಚಿತ

ಹೊಸದಿಲ್ಲಿ: ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆದ ಥಾಮಸ್ ಕಪ್ ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ತಂಡವು ತೈವಾನ್ ವಿರುದ್ಧ 3-0 ಅಂತರದ ಭರ್ಜರಿ ಜಯ ಸಾಧಿಸಿ, ಪುರುಷರ ತಂಡ ಸ್ಪರ್ಧೆಯಲ್ಲಿ ತನ್ನ ಪದಕ ಖಚಿತಪಡಿಸಿಕೊಂಡಿದೆ.

ಆಯುಷ್ ಶೆಟ್ಟಿ ಅಂತಿಮ ಪಂದ್ಯದಲ್ಲಿ ವಿಶ್ವ ಕ್ರಮಾಂಕ 8 ಮತ್ತು ಆಲ್ ಇಂಗ್ಲೆಂಡ್ ಚಾಂಪಿಯನ್ ಲಿನ್ ಚುನ್-ಯಿ ವಿರುದ್ಧ 21-16, 21-17 ಅಂಕಗಳಿಂದ 48 ನಿಮಿಷಗಳಲ್ಲಿ ಗೆದ್ದು ತಂಡದ ಗೆಲುವಿಗೆ ಮುದ್ರೆ ಹಾಕಿದರು. ಇದಕ್ಕೂ ಮೊದಲು ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಡಬಲ್ಸ್ ಜೋಡಿ ವಾಂಗ್ ಚಿ-ಲಿನ್ ಚಿಯು ಹ್ಸಿಯಾಂಗ್ ಚಿಹ್ ವಿರುದ್ಧ 23-21, 19-21, 21-12 ಅಂತರದಲ್ಲಿ 75 ನಿಮಿಷಗಳ ಹೋರಾಟದ ಪಂದ್ಯದಲ್ಲಿ ಜಯ ಸಾಧಿಸಿತು.

ಸೇನ್‌ನಿಂದ ಶುಭಾರಂಭ: ಮೊದಲ ಸಿಂಗಲ್ಸ್ ಪಂದ್ಯದಲ್ಲಿ ಲಕ್ಷ್ಯ ಸೇನ್ ವಿಶ್ವ ಕ್ರಮಾಂಕ 6ರ ಅನುಭವೀ ಆಟಗಾರ ಚೌ ತಿಯೆನ್ ಚೆನ್ ವಿರುದ್ಧ 18-21, 22-20, 21-17 ಅಂಕಗಳಿಂದ 1 ಗಂಟೆ 28 ನಿಮಿಷಗಳ ರೋಚಕ ಹೋರಾಟದಲ್ಲಿ ಗೆಲುವು ಸಾಧಿಸಿ ಭಾರತಕ್ಕೆ ಮುನ್ನಡೆ ನೀಡಿದರು. ಲಕ್ಷ್ಯ ಮತ್ತು ಚೌ ನಡುವಿನ ಮೊದಲ ಪಂದ್ಯದಲ್ಲಿ ಕಠಿಣ ಪೈಪೋಟಿ ಕಂಡುಬಂದಿತು. ಮೊದಲ ಗೇಮ್‌ನಲ್ಲಿ ಉತ್ತಮ ಆರಂಭ ಮಾಡಿದರೂ, ಲಕ್ಷ್ಯ 15-10 ಮುನ್ನಡೆಯನ್ನು ಕಳೆದುಕೊಂಡು 18-21 ಅಂತರದಲ್ಲಿ ಸೋತರು. ಎರಡನೇ ಗೇಮ್‌ನಲ್ಲಿ ಚೌ 13-7 ಮುನ್ನಡೆ ಪಡೆದಿದ್ದರೂ, ಲಕ್ಷ್ಯ 17-17 ಸಮಬಲ ಸಾಧಿಸಿ, ಎರಡು ಮ್ಯಾಚ್ ಪಾಯಿಂಟ್‌ಗಳನ್ನು ಉಳಿಸಿಕೊಂಡು 22-20 ಅಂತರದಲ್ಲಿ ಗೆದ್ದು ಪಂದ್ಯವನ್ನು ಸಮಬಲಕ್ಕೆ ತಂದರು. ನಿರ್ಣಾಯಕ ಮೂರನೇ ಗೇಮ್‌ನಲ್ಲಿ ಲಕ್ಷ್ಯ 11-7 ಮುನ್ನಡೆಯೊಂದಿಗೆ ಮಧ್ಯಂತರ ಪ್ರವೇಶಿಸಿ, ನಂತರ 18-12 ಮುನ್ನಡೆಯನ್ನೂ ಪಡೆದರು. ಚೌ ಮತ್ತೆ ಹೋರಾಟ ನಡೆಸಿದರೂ, ಅಂತಿಮವಾಗಿ ಲಕ್ಷ್ಯ 21-17 ಅಂತರದಲ್ಲಿ ಗೆಲುವು ಸಾಧಿಸಿದರು.



ಡಬಲ್ಸ್ ಅಲ್ಲೂ ಭಾರತ ಕಮಾಲ್: ಡಬಲ್ಸ್ ಪಂದ್ಯದಲ್ಲಿ ಸಾತ್ವಿಕ್‌ಚಿರಾಗ್ ಮೊದಲ ಗೇಮ್‌ನಲ್ಲಿ ಎರಡು ಗೇಮ್ ಪಾಯಿಂಟ್‌ಗಳನ್ನು ಉಳಿಸಿಕೊಂಡು ಗೆದ್ದರು. ಎರಡನೇ ಗೇಮ್‌ನಲ್ಲಿ ಎದುರಾಳಿ ತಂಡ ಹಿಂತಿರುಗಿದರೂ, ಮೂರನೇ ಗೇಮ್‌ನಲ್ಲಿ ಭಾರತೀಯ ಜೋಡಿ ಸಂಪೂರ್ಣ ಮೇಲುಗೈ ಸಾಧಿಸಿ ಗೆಲುವು ತನ್ನದಾಗಿಸಿಕೊಂಡಿತು.

ಆಯುಷ್ ಅಬ್ಬರ: ಕೊನೆಯ ಸಿಂಗಲ್ಸ್‌ನಲ್ಲಿ ಆಯುಷ್ ಶೆಟ್ಟಿ ಆರಂಭದಲ್ಲಿ 7-11 ಹಿನ್ನಡೆಯಲ್ಲಿದ್ದರು. ಆದರೆ ಮಧ್ಯಂತರದ ಬಳಿಕ ಅದ್ಭುತವಾಗಿ ಆಟ ತಿರುಗಿಸಿ ಮುಂದಿನ 11 ಪಾಯಿಂಟ್‌ಗಳಲ್ಲಿ 10ನ್ನು ಗೆದ್ದು ಮೊದಲ ಗೇಮ್ ಕೈಗಿಟ್ಟರು. ಎರಡನೇ ಗೇಮ್‌ನಲ್ಲಿ 7-7 ನಂತರ ಆಯುಷ್ ಮುನ್ನಡೆ ಸಾಧಿಸಿ ಅದನ್ನು ಕೊನೆವರೆಗೂ ಕಾಪಾಡಿಕೊಂಡರು. ಕೊನೆಯಲ್ಲಿ ಲಿನ್ ಚುನ್-ಯಿ ಸರ್ವ್ ತಪ್ಪಿದ ಕಾರಣ ಪಂದ್ಯ ಭಾರತ ಪರ ಅಂತ್ಯಗೊಂಡಿತು.

ಭಾರತಕ್ಕೆ ಐದನೇ ಪದಕ: 2022ರ ಚಾಂಪಿಯನ್ ಭಾರತ, ಸೆಮಿಫೈನಲ್‌ನಲ್ಲಿ ಜಪಾನ್ ಅಥವಾ ಫ್ರಾನ್ಸ್ ವಿರುದ್ಧ ಶನಿವಾರ ಮುಖಾಮುಖಿಯಾಗಲಿದೆ. ಭಾರತವು ಹಿಂದೆ 1952, 1955 ಮತ್ತು 1979ರಲ್ಲಿ ಕಂಚಿನ ಪದಕಗಳನ್ನು ಗೆದ್ದಿದೆ.

ಫಿಡೆಯಿಂದ ಬದಲಿ ದಿನಾಂಕ ಘೋಷಣೆ | ಬಿಡ್ಡಿಂಗ್‌ಗೆ ಬುಲಾವ್

ನವೆಂಬರ್‌ನಲ್ಲಿ ಚೆಸ್ ಚಾಂಪಿಯನ್‌ಶಿಪ್

ಹೊಸದಿಲ್ಲಿ: ವಿಶ್ವ ಚಾಂಪಿಯನ್ ಡಿ. ಗುಕೇಶ್ ಹಾಗೂ ಜೋಫ್ಸಿರ್ ಸಿಂಡ್ರೋವ್ ನಡುವೆ ನಡೆಯಲಿರುವ ಫಿಡೆ ವಿಶ್ವ ಚಾಂಪಿಯನ್‌ಶಿಪ್ ಫೈನಲ್ ಪಂದ್ಯವು ನವೆಂಬರ್ 23ರಿಂದ ಡಿಸೆಂಬರ್ 17ರವರೆಗೆ ನಡೆಯಲಿದೆ.


ವಿವಿಧ ಕಾರಣಗಳಿಂದ ಮುಂದೂಡಿದ ಬಹುದಿನಗಳ ನಂತರ ಬದಲಿ ದಿನಾಂಕವನ್ನು ಪ್ರಕಟಿಸಲಾಗಿದೆ. ಗುರುವಾರದಂದು ಈ ಬಗ್ಗೆ ಪ್ರಕಟಣೆಯಲ್ಲಿ ತಿಳಿಸಿರುವ ಫಿಡೆ, ಬಿಡ್ಡಿಂಗ್ ಮುಕ್ತಗೊಳಿಸಲಾಗಿದ್ದು ರಾಷ್ಟ್ರಗಳು ಭಾಗಿಯಾಗಬಹುದು ಎಂದು ಹೇಳಿದೆ. ಮಹಿಳೆಯರ ಚಾಲೆಂಜರ್ ಮಹಿಳಾ ವಿಶ್ವ ಚಾಂಪಿಯನ್‌ಶಿಪ್ ಪಂದ್ಯಾವಳಿಯನ್ನು ತಮಿಳು ನಾಡು ಆಯೋಜಿಸಲು ಎದುರು ನೋಡುತ್ತಿದ್ದು ಬಿಡ್ಡಿಂಗ್‌ನಲ್ಲಿ ಬಲಿಷ್ಠ ಆಸಕ್ತಿಯೊಂದಿಗೆ ಕಣಕ್ಕಿಳಿಯಲಿದೆ. ಸ್ಥಳೀಯ ಆಟಗಾರ್ತಿ ಆರ್. ವೈಶಾಲಿ ಈ ಬಾರಿ ಫೈನಲ್‌ನಲ್ಲಿ ಭಾಗವಹಿಸುತ್ತಿರುವುದು, ಮಹಿಳೆಯರಲ್ಲಿ ಮತ್ತು ಪುರುಷರಲ್ಲಿ ಭಾರತದ ಆಟಗಾರರು ಭಾಗವಹಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಬಿಡ್ಡಿಂಗ್‌ನಲ್ಲಿ ಭಾರತ ಬಲಿಷ್ಠ ದೇಶವಾಗಿ ಭಾಗವಹಿಸಲಿದೆ ಎಂದು ಭಾರತೀಯ ಚೆಸ್ ಸಂಸ್ಥೆ ಈಗಾಗಲೇ ತಿಳಿಸಿದೆ. ಇದರೊಂದಿಗೆ ಫಿಡೆ ವಿಶ್ವ ಚಾಂಪಿಯನ್‌ಶಿಪ್‌ಗೆ ಬೇಕಾದ ವ್ಯವಸ್ಥೆಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಪ್ರತಿಷ್ಠಿತ ಕೂಟಕ್ಕೊಂದು ಮೊತ್ತ ನಿಗದಿ ಮಾಡಲಾಗಿದ್ದು, ಅಂದಾಜು 8.5 ಯುಎಸ್ ಮಿಲಿಯನ್ ಡಾಲರ್ ಖರ್ಚು ಬರಬಹುದು ಎಂದು ಹೇಳಿದೆ. ಇದರಲ್ಲಿ 2.5 ಮಿಲಿಯನ್ ಡಾಲರ್ ಮೊತ್ತ ಬಹುಮಾನವಾದರೆ, 1.1 ಮಿಲಿಯನ್ ಡಾಲರ್ ಫಿಡೆ ಫೀ ಆಗಿರಲಿದೆ.



» ಭಾರತ ಬಲಿಷ್ಠ ಕಂಟೆಂಡರ್
» ಮಹಿಳೆಯರಲ್ಲಿ ವೈಶಾಲಿ, ಪುರುಷರಲ್ಲಿ ಗುಕೇಶ್ ಸ್ಪರ್ಧೆ

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5971

ಎಡದಿಂದ ಬಲಕ್ಕೆ
2.ಮನತಟ್ಟುವ ಕಲಾತ್ಮಕ ಪದರಚನೆ (3)
5.ಸರಕ್ಕನೆ ಒಳಗೆ ಬಂದ ರಾಕ್ಷಸ (3)
6.ಮನೋಭಿಲಾಷೆ ನೀಡುವ ದೈವ (3)
7.ನಾಟಕದ ಒಂದು ಭಾಗ-ಸಂಖ್ಯೆಯೂ ಹೌದು (2)
8.ಸ್ವಭಾವವಿಲ್ಲಿ ತಿರುಗಿ ಕಾಣುತ್ತಿದೆ (2)
10.ಆಕರ್ಷಣೆಯ ಸಮಾನಪದ (3)
11.ತತ್ವಶಾಸ್ತ್ರಕ್ಕೆ ಸಂಬಂಧಿಸಿದ್ದು (3)
13.ಮತಬೇಧದಿಂದುಂಟಾಗುವ ಕಲಹ (4)
15.ವ್ಯಾಪಾರದಲ್ಲಾಗುವ ಫಾಯಿದೆ-ನಷ್ಟ (4)
17.ಶರೀರದಲ್ಲಿ ಹರಿಯುವ ರಕ್ತ (3)

ಮೇಲಿನಿಂದ ಕೆಳಕ್ಕೆ
1.ನೂಲು ತೆಗೆಯುವ ಸಾಧನ (3)
2.ಬಿಳಿಯ ಬಣ್ಣದ ಸಾಂಬಾರುಕಾಳು (4)
3.ಕೆನೆ ಕಡೆದು ಹೊಸದಾಗಿ ಕಡೆದ ಬೆಣ್ಣೆ (4)
4.ಮೇನೆ-ಪಲ್ಲಕ್ಕಿಯಿದು (3)
7.ಸಂಖ್ಯೆಗಳ ಮೂಲಕ ಮಾಡುವ ಲೆಕ್ಕಶಾಸ್ತ್ರ (5)
9.ಇದು ಪನ್ನೀರಿನ ಪಾತ್ರೆ (5)
11.ಮಾರುತ್ತಾ ಇರುವುದು ಹೀಗೆ ಅರ್ಥವಿಲ್ಲದೆ (4)
12.ಸೃಜನಶೀಲ ಕುಶಲತೆಯುಳ್ಳವ (4)
14.ಅಭ್ಯಾಸ ಮಾಡುವ ಬಗೆಯಿದು (3)
16.ಇದು ಶಕುನದ ಹಕ್ಕಿ (3)

5970 ಉತ್ತರ

ಎಡದಿಂದ ಬಲಕ್ಕೆ:
2.ಅಡವಿ 5.ಲಾಭಕೋರ
6.ವರ್ಧಮಾನ 7.ದಕ್ಷಿಣೆ
8.ನಗದು 10.ಐನಾತಿ
12.ಅನುಜ 14.ಗಮನ
15.ಮಂಜುಳ 16.ತಿರುಕ
17.ಆನನ 18.ಜಲಸಾ

ಮೇಲಿನಿಂದ ಕೆಳಕ್ಕೆ:
1.ತೈಲಾಭ್ಯಂಜನ
2.ಅರವಿಂದ 3.ವಿವರಣೆ
4.ಜನವಸತಿ 9.ಗಜಗಮನ
11.ನಾಗಮಂಡಲ
12.ಅನತಿ 13.ಜಳಕ

ಕಿರುಸುದ್ದಿ

ಬಿಜೆಪಿ ವಿವಿಧ ಭಾಷಿಕರ ಪ್ರಕೋಷ್ಠದ ಜಿಲ್ಲಾ ಸಂಚಾಲಕರಾಗಿ ಸುರೇಶ್ ಕಣೆಮರಡ್ಕ

ಸುಳ್ಯ: ಬಿಜೆಪಿ ವತಿಯಿಂದ ಜಿಲ್ಲೆಯ ವಿವಿಧ ಪ್ರಕೋಷ್ಠಗಳ ಪದಾಧಿಕಾರಿಗಳನ್ನು ಗುರುವಾರ ದ.ಕ. ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಪ್ರಕಟಿಸಿದ್ದು, ವಿವಿಧ ಭಾಷಿಕರ ಪ್ರಕೋಷ್ಠದ ಜಿಲ್ಲಾ ಸಂಚಾಲಕರಾಗಿ ಸುರೇಶ್ ಕಣೆಮರಡ್ಕ ಅವರನ್ನು ನೇಮಕ ಮಾಡಲಾಗಿದೆ. ಸಹ ಸಂಚಾಲಕರಾಗಿ ಮಂಗಳೂರು ದಕ್ಷಿಣ ಮಂಡಲದ ರಮೇಶ್ ಪಟೇಲ್, ಪಂಚಾಯತ್‌ರಾಜ್ ಪ್ರಕೋಷ್ಠಕ್ಕೆ ಸಂಚಾಲಕರಾಗಿ ನೆಲ್ಯಾಡಿ ಬಾಲಕೃಷ್ಣ ಬಾಣಜಾಲು, ನಗರಾಡಳಿತ ಪ್ರಕೋಷ್ಠದ ಸಹ ಸಂಚಾಲಕರಾಗಿ ಸುಳ್ಯದ ಅವಿನಾಶ್ ಕುರುಂಜಿಯವರನ್ನು ನೇಮಕ ಮಾಡಲಾಗಿದೆ.



ನಾಥಂಗಲ್ ಶ್ರೀ ಕಾಳಿ ದೇವರ ಜಾತ್ರೆ: ಕುಟ್ಟದಲ್ಲಿ ಮದ್ಯ ಮಾರಾಟ ನಿಷೇಧ

ಮಡಿಕೇರಿ: ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕಿನ ಕುಟ್ಟ ಗ್ರಾಮದಲ್ಲಿ ನಡೆಯುವ ನಾಥಂಗಲ್ ಶ್ರೀ ಕಾಳಿ ದೇವರ ಜಾತ್ರೆಯ ಹಿನ್ನೆಲೆಯಲ್ಲಿ ಮೇ 5 ರಂದು ಬೆಳಗ್ಗೆ 6 ಗಂಟೆಯಿಂದ ಮೇ 6 ರ ಸಂಜೆ 6 ಗಂಟೆಯವರೆಗೆ ಕುಟ್ಟ ಪೊಲೀಸ್ ಠಾಣಾ ವ್ಯಾಪ್ತಿಯ ಸುತ್ತಮುತ್ತಲಿನ 1 ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಮದ್ಯದ ಅಂಗಡಿ, ಬಾರ್, ಹೊಟೇಲ್ ಮತ್ತು ಕ್ಲಬ್‌ಗಳಲ್ಲಿ ಎಲ್ಲಾ ವಿಧದ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ಆದೇಶಿಸಿದ್ದಾರೆ.

ಹಂಪನಕಟ್ಟೆಯ ವೆನ್ಲಾಕ್ ಆಸ್ಪತ್ರೆಯ ಬಳಿ ಅಪರಿಚಿತ ವ್ಯಕ್ತಿ ಮೃತ್ಯು

ಮಂಗಳೂರು: ನಗರದ ಹಂಪನಕಟ್ಟೆಯ ವೆನ್ಲಾಕ್ ಆಸ್ಪತ್ರೆಯ ಬಳಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಸುಮಾರು 65 ವರ್ಷ ಪ್ರಾಯದ ಸುಮಾರು 5.4 ಅಡಿ ಎತ್ತರದ ಅಪರಿಚಿತ ವ್ಯಕ್ತಿಯೋರ್ವರನ್ನು ಆಸ್ಪತ್ರೆಗೆ ಸಾಗಿಸುವ ಹಾದಿಯಲ್ಲೇ ಮೃತಪಟ್ಟ ಘಟನೆ ಏ.30ರಂದು ನಡೆದಿದೆ.

ಅಪರಿಚಿತ ವ್ಯಕ್ತಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದುಕೊಂಡಿರುವುದನ್ನು ಗಮನಿಸಿದ ರಿಕ್ಷಾ ಚಾಲಕರೋರ್ವರು ಮಾನವೀಯ ನೆಲೆಯಲ್ಲಿ ಸಾರ್ವಜನಿಕರ ಸಹಕಾರದೊಂದಿಗೆ ಅಂಬ್ಯುಲೆನ್ಸ್ ಮೂಲಕ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದರು. ಆದರೆ, ಅಪರಿಚಿತ ವ್ಯಕ್ತಿ ಆ ವೇಳೆಗಾಗಲೇ ಮೃತಪಟ್ಟಿದ್ದರು. ಈ ಕುರಿತು ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಮೆಯ ಕ್ಲೈಮ್ ತಿರಸ್ಕಾರ: ವಿಮಾ ಕಂಪನಿಗೆ ಭಾರೀ ಮೊತ್ತದ ದಂಡ

ಕುಂದಾಪುರ: ಆರೋಗ್ಯ ವಿಮೆಯ ಕ್ಲೈಮ್‌ನ್ನು ಅಸಮರ್ಪಕವಾಗಿ ತಿರಸ್ಕರಿಸಿದ್ದ ಸ್ಟಾರ್ ಹೆಲ್ತ್ ಇನ್ಶೂರೆನ್ಸ್ ಕಂಪನಿಗೆ ಉಡುಪಿಯ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗವು ಭಾರಿ ಮೊತ್ತದ ದಂಡ ಮತ್ತು ಪರಿಹಾರ ಪಾವತಿಸುವಂತೆ ಆದೇಶಿಸಿದೆ. ಕೋಟ ಮಣೂರು–ಪಡುಕರೆ ನಿವಾಸಿಯಾದ ದೇವರಾಜ್ ಅವರು ಸ್ಟಾರ್ ಹೆಲ್ತ್ ಇನ್ಶೂರೆನ್ಸ್ ಸಂಸ್ಥೆಯಿಂದ ಆರೋಗ್ಯ ವಿಮಾ ಪಾಲಿಸಿಯನ್ನು ಪಡೆದಿದ್ದರು. ಇವರು ಡೆಂಗ್ಯೂ ಜ್ವರದಿಂದ ತೀವ್ರವಾಗಿ ಅಸ್ವಸ್ಥಗೊಂಡು ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದರು. ಆದರೆ, ವಿಮಾ ಕಂಪನಿಯು ತಾಂತ್ರಿಕ ಕಾರಣಗಳನ್ನು ಒಡ್ಡಿ ಇವರ ವಿಮಾ ಮೊತ್ತದ ಬೇಡಿಕೆಯನ್ನು ತಿರಸ್ಕರಿಸಿತ್ತು. ಕಂಪನಿಯ ಈ ಕ್ರಮದಿಂದ ನೊಂದ ದೇವರಾಜ್ ಅವರು ಉಡುಪಿ ಜಿಲ್ಲಾ ಗ್ರಾಹಕ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು ವಿಮಾ ಕಂಪನಿಯ ನಡೆ 'ಸೇವಾ ನ್ಯೂನತೆ' ಎಂದು ಪರಿಗಣಿಸಿ ವೈದ್ಯಕೀಯ ಚಿಕಿತ್ಸೆಗೆ ತಗುಲಿದ ರೂ. 23,294 ಮೊತ್ತವನ್ನು ಪಾವತಿಸಬೇಕು ಹಾಗೂ ಸದರಿ ಅಸಲು ಮೊತ್ತದ ಮೇಲೆ ಶೇ. 6ರಷ್ಟು ಬಡ್ಡಿ ನೀಡಬೇಕು. ಸೇವಾ ನ್ಯೂನತೆ, ಅನಾನುಕೂಲತೆ ಮತ್ತು ಮಾನಸಿಕ ಕಿರುಕುಳಕ್ಕಾಗಿ ರೂ. 15,000 ದಂಡ. ಕಾನೂನು ಹೋರಾಟದ ವೆಚ್ಚವಾಗಿ ರೂ. 10,000 ಪಾವತಿಸಲು ಆದೇಶಿಸಿದೆ.

ಇಂದು ಕರಾವಳಿಯ ಕೆಲವೆಡೆ ಮಳೆ ಸಾಧ್ಯತೆ

ಮಂಗಳೂರು: ಇಂದು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಒಂದೆರಡು ಕಡೆಗಳಲ್ಲಿ ಗುಡುಗಿನಿಂದ ಕೂಡಿದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉಳಿದಂತೆ ಬಿಸಿಲಿನ ವಾತಾವರಣ ಇರಲಿದೆ.

ಗ್ರಾಮೀಣ ಕೃಷಿ ಉತ್ಪನ್ನಗಳಿಗೆ ಬೂಸ್ಟರ್ ಡೋಸ್ | ಗಮನ ಸೆಳೆದಿದೆ ಗ್ರಾಮೀಣ ಮಹಿಳೆಯರ ಈ ಸಾಧನೆ

ಗುತ್ತಿಗಾರಿನ ಗತ್ತು ಹೆಚ್ಚಿಸಿದ ಗೇರು ಜ್ಯೂಸ್!

ಸುಬ್ರಹ್ಮಣ್ಯ: ದಕ್ಷಿಣ ಕನ್ನಡ ಜಿಲ್ಲೆಯ ಗುತ್ತಿಗಾರಿನಲ್ಲಿ ರಾಜ್ಯದ ಮೊದಲ ಗೇರುಹಣ್ಣು ಜ್ಯೂಸ್ ಅಂಗಡಿ ಪ್ರಯೋಗಾತ್ಮಕವಾಗಿ ಆರಂಭಗೊಂಡಿದೆ.

ಇದು ಗ್ರಾಮೀಣ ಮಟ್ಟದಲ್ಲಿ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಹಾಗೂ ಗ್ರಾಮೀಣ ಉದ್ಯಮ ಮತ್ತು ಮೌಲ್ಯವರ್ಧನೆಯ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಗುತ್ತಿಗಾರಿನ ಲತಾ ಕುಮಾರಿ ಅವರ ನೇತೃತ್ವದ ಮಹಿಳಾ ತಂಡ ಈ ಘಟಕವನ್ನು ಆರಂಭಿಸಿದ್ದು, ಆರಂಭದಲ್ಲೇ ಉತ್ತಮ ಪ್ರತಿಕ್ರಿಯೆ ದೊರೆತಿದೆ.

ವಿಶೇಷ ಸಾಧನೆ

ಗುತ್ತಿಗಾರಿನ ಲತಾ ಕುಮಾರಿ ಆಜಡ್ಕ ಅವರ ನೇತೃತ್ವದಲ್ಲಿ ಮಹಿಳಾ ತಂಡ ಗೇರುಹಣ್ಣಿನ ಜ್ಯೂಸ್ ಉತ್ಪಾದನೆ ಮತ್ತು ಮಾರಾಟ ಆರಂಭಿಸಿದೆ. ಈ ಬಾರಿ ಇದು ಪ್ರಯೋಗಾತ್ಮಕ ಹಂತದಲ್ಲಿದ್ದು, ಗೇರುಹಣ್ಣಿನ ಸೀಸನ್ ಮುಗಿಯುತ್ತಿರುವುದರಿಂದ ಈ ವರ್ಷ ಜ್ಯೂಸ್ ಸೀಮಿತ ಅವಧಿಗೆ ಮಾತ್ರ ಲಭ್ಯವಿರಲಿದೆ. ಆದರೆ, ಮುಂದಿನ ವರ್ಷದಿಂದ ಈ ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ವಿಸ್ತರಿಸಿ, ಗುತ್ತಿಗಾರಿನಲ್ಲಿ ನಿರಂತರ ಜ್ಯೂಸ್ ಮಾರಾಟ ಆರಂಭಿಸಲು ಯೋಜನೆ ರೂಪಿಸಲಾಗಿದೆ.

ಗ್ರಾಮೀಣ ಆರ್ಥಿಕತೆಗೆ ಚೈತನ್ಯ

ಈ ಘಟಕ ಕೇವಲ ಒಂದು ಉದ್ಯಮವಲ್ಲ, ಇದು ರೈತರಿಗೆ ಹೆಚ್ಚುವರಿ ಆದಾಯದ ಅವಕಾಶ, ಮಹಿಳೆಯರಿಗೆ ಉದ್ಯೋಗ ಹಾಗೂ ಆತ್ಮ ನಿರ್ಭರತೆ, ಗ್ರಾಮೀಣ ಆರ್ಥಿಕತೆಗೆ ಹೊಸ ಚೈತನ್ಯ ಎಂಬ ಮೂರು ಪ್ರಮುಖ ಗುರಿಗಳನ್ನು ಹೊಂದಿದೆ.

ಸಾಮಾನ್ಯವಾಗಿ ಗೇರು ಬೀಜ ತೆಗೆದ ನಂತರ ಹಣ್ಣು ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ. ಅಂದಾಜು ಪ್ರಕಾರ ಶೇ.70ರಿಂದ 90ರವರೆಗೆ ಗೇರು ಹಣ್ಣು ವ್ಯರ್ಥವಾಗುತ್ತಿದೆ. ಆದರೆ, ಇದೇ ಹಣ್ಣು ಜ್ಯೂಸ್‌ಗೆ ಬಳಸಿ ಸಾಧನೆ ಮಾಡಿದ್ದಾರೆ. ಗೇರುಹಣ್ಣು ಜ್ಯೂಸ್ ರೂಪದಲ್ಲಿ ಮಾರುಕಟ್ಟೆಗೆ ತರುವ ಮೂಲಕ ಮೌಲ್ಯವರ್ಧನೆ ಮಾಡುವ ಈ ಪ್ರಯತ್ನ, ರಾಜ್ಯದ ಇತರ ಗ್ರಾಮಗಳಿಗೆ ಸಹ ಮಾದರಿಯಾಗುವ ಸಾಧ್ಯತೆ ಇದೆ.

ಘಟಕದ ಆರಂಭದ ವೇಳೆ ಕ್ಯಾಂಪ್ಕೊ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ, ಅಡಿಕೆ ಪತ್ರಿಕೆ ಸಂಪಾದಕ ಶ್ರೀಪಡ್ರೆ ಹಾಗೂ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ ಮಹೇಶ್ ಪುಚ್ಚಪ್ಪಾಡಿ ಅವರು ಮಳಿಗೆಗೆ ಭೇಟಿ ನೀಡಿ ಗೇರು ಹಣ್ಣಿನ ಜ್ಯೂಸ್ ಸವಿದರು.

ದಿಗಂತ ವಿಶೇಷ





ತರಬೇತಿಯಿಂದ ಸಿಕ್ಕಿದೆ ಈ ಜ್ಞಾನ!

ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯವು ಹಮ್ಮಿಕೊಂಡ ಗೇರು ಮೌಲ್ಯವರ್ಧನೆ ಹಾಗೂ ಗೇರು ಹಣ್ಣಿನ ಜ್ಯೂಸ್ ತರಬೇತಿ ಶಿಬಿರದಲ್ಲಿ ತರಬೇತಿ ಪಡೆದ ಗುತ್ತಿಗಾರಿನ ಲತಾ ಕುಮಾರಿ ಆಜಡ್ಕ ಅವರು ಆ ಬಳಿಕ ಯಂತ್ರ ಖರೀದಿ ಮಾಡಿ ಮಹಿಳಾ ಸಂಘದ ಸದಸ್ಯರ ಜೊತೆಗೂಡಿ ಗೇರು ಹಣ್ಣಿನ ಜ್ಯೂಸ್ ತಯಾರಿಕೆ ಮೂಲಕ ಕೃಷಿ ಮೌಲ್ಯವರ್ಧನೆಗೆ ಮುಂದಾಗುವ ಚಿಂತನೆ ಮಾಡಿದ್ದಾರೆ. ಅವರ ಈ ಕಾರ್ಯಕ್ಕೆ ಲತಾ ಅವರ ತಂಡದ ಮಹಿಳಾ ಸದಸ್ಯರು, ಲತಾ ಅವರ ಪತಿ ರವೀಂದ್ರ ಮತ್ತು ಅವರ ಮನೆಯವರ ಸಹಕಾರ ಇದೆ.

ಮೌಲ್ಯವರ್ಧನೆಯ ಘಟಕ

ಕೃಷಿಯಲ್ಲಿ ಲಾಭವು ಬೆಳೆದಲ್ಲಷ್ಟೇ ಸೀಮಿತವಾಗಬಾರದು. ಅದನ್ನು ಉತ್ಪನ್ನವನ್ನಾಗಿ ಮಾಡುವ ಚಿಂತನೆಯೂ ಅಗತ್ಯ.. ಗೇರು ಹಣ್ಣಿನ ಜ್ಯೂಸ್ ಉತ್ತಮ ಸ್ವಾದ ಹೊಂದಿದ್ದು, ಮೌಲ್ಯವರ್ಧನೆಗೆ ಉತ್ತಮ ಉದಾಹರಣೆಯಾಗಿದೆ. ದ.ಕ. ಜಿಲ್ಲೆಯಲ್ಲಿ ಇಂತಹ ಉದ್ಯಮಗಳು ಬೆಳೆಯಬೇಕು.

■ ಎಸ್.ಆರ್. ಸತೀಶ್ಚಂದ್ರ, ಕ್ಯಾಂಪ್ಕೊ ಅಧ್ಯಕ್ಷರು

ಮನಸೆಳೆಯುವ 'ಮಹಾ ಪೂಜೆ'



ಜಗದ್ಗುರು ಶಂಕರಾಚಾರ್ಯ ಸಂಸ್ಥಾನ ಶ್ರೀಮದ್ ಎಡನೀರು ಮಠದಲ್ಲಿ ಶುಕ್ರವಾರ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದಭಾರತೀ ಶ್ರೀಪಾದಂಗಳವರ ಆಶೀರ್ವಾದಗಳೊಂದಿಗೆ ಬ್ರಹ್ಮಶ್ರೀ ಮುಲ್ಲಪ್ಪಳ್ಳಿ ಕೃಷ್ಣನ್ ನಂಬೂದಿರಿ ಅವರ ನೇತೃತ್ವದಲ್ಲಿ ಮಹಾ ಶ್ರೀಚಕ್ರ ನವಾವರಣ ಪೂಜೆ ಜರಗಿತು.

ಮಂಗಳೂರು ವಿಮಾನ ನಿಲ್ದಾಣ ಮುಡಿಗೆ ಚಿನ್ನದ ಪ್ರಶಸ್ತಿಗಳ ಗರಿ!

ಮಂಗಳೂರು: ಕ್ವಾಲಿಟಿ ಸರ್ಕಲ್ ಫೋರಮ್ ಆಫ್ ಇಂಡಿಯಾ, ಬೆಂಗಳೂರು ಚಾಪ್ಟರ್ ಆಯೋಜಿಸಿದ್ದ ಪೋಕಾ ಯೋಕ್, ಜಿಡೋಕಾ ಮತ್ತು ಎಸ್‌ಎಂಇಡಿ ಕುರಿತ 9ನೇ ಸಮ್ಮೇಳನದಲ್ಲಿ ಮಂಗಳೂರು ವಿಮಾನ ನಿಲ್ದಾಣ ವಿಶೇಷ ಸಾಧನೆ ಮಾಡಿದೆ.

ಅಪ್‌ಡೇಟರ್ ಸರ್ವೀಸಸ್ ಲಿಮಿಟೆಡ್ (ಯುಡಿಎಸ್) ಜೊತೆಗಿನ ಸಹಭಾಗಿತ್ವದಲ್ಲಿ, ಮಂಗಳೂರು ವಿಮಾನ ನಿಲ್ದಾಣವು ಮೂರು ಚಿನ್ನದ ಪ್ರಶಸ್ತಿಗಳನ್ನು ಗೆದ್ದು ಕೊಂಡಿದೆ. ಸಜಿತ್ ಇ.ವಿ. ಮತ್ತು ವಿಜಯಲಕ್ಷ್ಮಿ ನೇತೃತ್ವದ ಯುಡಿಎಸ್ ತಂಡಗಳು, ರಿಮೋಟ್–ನಿಯಂತ್ರಿತ ಅಪಾಯ– ತಡೆಗಟ್ಟುವ ಸಾಧನವನ್ನು ಬಳಸಿಕೊಂಡು ಹೈ–ಮಾಸ್ಟ್ ನಿರ್ವಹಣೆಗಾಗಿ ಚಿನ್ನ ಗೆದ್ದ ಪೋಕಾ–ಯೋಕ್ ಪರಿಹಾರ ಪ್ರದರ್ಶಿಸಿದವು. ಕಿರಣ್ ಕುಮಾರ್ ಮತ್ತು ಮಂಜುನಾಥ ಅವರನ್ನೊಳಗೊಂಡ ಮತ್ತೊಂದು ಯುಡಿಎಸ್ ತಂಡವು ಪಿಎಲ್‌ಸಿ ಆಧಾರಿತ ನೀರಿನ ಮಟ್ಟದ ಮೇಲ್ವಿಚಾರಣಾ ವ್ಯವಸ್ಥೆಯನ್ನು ಪ್ರಸ್ತುತಪಡಿಸಿತು.

ಇಪ್ಸಿತಾ ಚೌಧರಿ ಮತ್ತು ಸಿದ್ಧಾರ್ಥ್ ಓಜಾ ಪ್ರತಿನಿಧಿಸುವ ವಿಮಾನ ನಿಲ್ದಾಣದ ಇ ಮತ್ತು ಎಂ ವಿಭಾಗವು ಮಾನವ ದೋಷಗಳನ್ನು ನಿವಾರಿಸುವ ಮತ್ತು ವಾಯುನೆಲೆಯಲ್ಲಿ ದಟ್ಟಣೆ, ಡೌನ್‌ಟೈಮ್ ಅನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿರುವ ಕಾರ್ಯಾಚರಣೆಗಳು ಮತ್ತು ನಿರ್ವಹಣೆಯಲ್ಲಿ ಪೋಕಾ– ಯೋಕ್ ಆಧಾರಿತ ಪರಿಹಾರಗಳಿಗಾಗಿ ಚಿನ್ನವನ್ನು ಗಳಿಸಿತು.

ತಪ್ಪು–ನಿರೋಧಕದ ಮೇಲೆ ಕೇಂದ್ರೀಕರಿಸಿದ ಜಪಾನಿನ ತಂತ್ರವಾದ ಪೋಕಾ– ಯೋಕ್, ಸುರಕ್ಷತೆ ಮತ್ತು ದಕ್ಷತೆಗೆ ನಮ್ಮ ಬದ್ಧತೆಯನ್ನು ಹೆಚ್ಚಿಸುತ್ತಲೇ ಇದೆ.



ಆತಂಕದಲ್ಲಿ ಸ್ಥಳೀಯರು | ಅರಣ್ಯ ಇಲಾಖೆಗೆ ಮೊರೆ


ಹಾರಂಗಿ ಹೊಳೆಯಲ್ಲಿ ಮೊಸಳೆ!

ಮಡಿಕೇರಿ: ಹಾರಂಗಿ ಹೊಳೆಯಲ್ಲಿ ಶುಕ್ರವಾರ ಹಠಾತ್ ಮೊಸಳೆಯೊಂದು ಕಾಣಿಸಿಕೊಂಡಿದ್ದು, ಈ ಬೆಳವಣಿಗೆ ಸಾರ್ವಜನಿಕರಲ್ಲಿ ಭೀತಿ ಸೃಷ್ಟಿಸಿದೆ.

ಹಾರಂಗಿ ಜಲಾಶಯದಿಂದ ಕೆಳಭಾಗದಲ್ಲಿ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿ ನದಿಗೆ ಅಡ್ಡಲಾಗಿ ಕಟ್ಟೆಯೊಂದು ಇದ್ದು, ಇಲ್ಲಿಗೆ ಹಲವಾರು ಪ್ರವಾಸಿಗರು ಮತ್ತು ಕಾಲೇಜು ವಿದ್ಯಾರ್ಥಿಗಳು ಬಂದು ಈಜಾಡುವುದರೊಂದಿಗೆ ಮೋಜು–ಮಸ್ತಿ ಮಾಡಿ ತೆರಳುತ್ತಿದ್ದರು. ಇದೀಗ ಅದೇ ಪರಿಸರದಲ್ಲಿ ದೊಡ್ಡ ಗಾತ್ರದ ಮೊಸಳೆಯೊಂದು ಕಾಣಿಸಿ ಕೊಂಡು ಭಯದ ವಾತಾವರಣ ಸೃಷ್ಟಿಸಿದೆ.

ಮೊಸಳೆಯನ್ನು ಕಂಡು ಓಡಿ ಹೋದ ಕೆಲವು ವ್ಯಕ್ತಿಗಳು ಕೆಳಗೆ ಬಿದ್ದು ಗಾಯಗೊಂಡಿರುವುದಾಗಿ ಸ್ಥಳೀಯರು ಮಾಹಿತಿ ನೀಡಿದ್ದಾರೆ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಈ ಕುರಿತು ಗಮನ ಹರಿಸುವುದರೊಂದಿಗೆ ಪ್ರವಾಸಿಗರು ಹಾಗೂ ಕಾಲೇಜು ವಿದ್ಯಾರ್ಥಿಗಳು ಮೋಜು ಮಸ್ತಿ ಮಾಡಲು ಬಂದು ಮೊಸಳೆ ಬಾಯಿಗೆ ಬಲಿಯಾಗದಂತೆ ಎಚ್ಚರಿಕೆ ವಹಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಮೊಸಳೆ ಪತ್ತೆಯಾಗಿರುವ ಬೆಳವಣಿಗೆ ಈ ಭಾಗದ ಜನತೆಯಲ್ಲಿಯೂ ಆತಂಕವನ್ನು ಇನ್ನಷ್ಟು ಹೆಚ್ಚಿಸಿದೆ.



- ಜಲಾಶಯದಿಂದ ಒಂದು ಕಿಲೋ ಮೀಟರ್ ದೂರದಲ್ಲಿ ಕಾಣಸಿಕ್ಕಿದ ಮೊಸಳೆ
- ವಿದ್ಯಾರ್ಥಿಗಳು ಈಜಾಟ ನಡೆಸುವಹೊಳೆಯ ಸ್ಥಳದಲ್ಲಿಯೇ ಈಗ ಈ ಮೊಸಳೆಯ ಚಲನವಲನ ಪತ್ತೆ

ಕಾಸರಗೋಡು ಜಿಲ್ಲೆಯಲ್ಲಿ ಹೆಚ್ಚುತ್ತಿದೆ ಉರಗಗಳ ಸಂಚಾರ

ನಡೆವಾಗ ಇರಲಿ ತುಸು ಎಚ್ಚರ

ಕಾಸರಗೋಡು: ಒಂದೆಡೆ ಬಿಸಿಲಿಗೆ ತಾಪಮಾನ ಕಾಡುತ್ತಿದ್ದರೆ ಇನ್ನೊಂದೆಡೆ ಜಿಲ್ಲೆಯಲ್ಲಿ ಹಾವುಗಳ ಸಂಚಾರ ಭಾರೀ ಪ್ರಮಾಣದಲ್ಲಿ ಹೆಚ್ಚುತ್ತಿದೆ.

ಸುಡು ಬಿಸಿಲಿಗೆ ಹಾವುಗಳು ಹೊರಬರುತ್ತಿದ್ದು, ಕಳೆದ ಕೆಲವು ದಿನಗಳ ಅವಧಿಯಲ್ಲಿ ಜಿಲ್ಲೆಯ ವಿವಿಧೆಡೆ ಹಾವು ಪದೇ ಪದೇ ಪ್ರತ್ಯಕ್ಷಗೊಳ್ಳುತ್ತಿದೆ. ಕೆಲವೆಡೆ ಮನೆಯೊಳಗೆ ಕೂಡಾ ಹಾವುಗಳು ಬರುತ್ತಿದ್ದು, ಮಂಚದಡಿಯಲ್ಲಿ ಅವಿತು ಕುಳಿತುಕೊಳ್ಳುವ ದೃಶ್ಯ ಕಂಡಿವೆ.

ವಿಷಪೂರಿತ ಹಾವುಗಳು ಹೆಚ್ಚಾಗಿ ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಹಾವಿನ ಮೊಟ್ಟೆ ಒಡೆಯುವುದು ಕೂಡಾ ಇದೇ ತಿಂಗಳಲ್ಲಿ. ಬಿಸಿಲು ಏರಿಕೆಯಾದಾಗ ಶರೀರದ ತಾಪಮಾನವನ್ನು ನಿಯಂತ್ರಿಸಲು ಹಾವುಗಳು ತಂಪಾಗಿರುವ ಸ್ಥಳಗಳನ್ನು ಹುಡುಕಿಕೊಂಡು ಹೋಗುತ್ತವೆ. ಇದರಿಂದ ಮನೆಯೊಳಗೆ ಹಾವುಗಳು ಗೋಚರಿಸುವುದಾಗಿದೆ.

ಹಾವು ಕಡಿದರೆ ಏನು ಮಾಡಬೇಕು

ಹಾವು ಕಚ್ಚಿದ ವ್ಯಕ್ತಿಯನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಬೇಕು ಹಾಗೂ ಧೈರ್ಯ ತುಂಬಬೇಕು. ಭಯ ಮತ್ತು ಗಾಬರಿ ಇದ್ದರೆ ರಕ್ತದೊತ್ತಡ ಹೆಚ್ಚಾಗುತ್ತದೆ. ಅಲ್ಲದೆ ವಿಷವು ಮೂತ್ರಪಿಂಡ, ಮೆದುಳು ಮತ್ತು ಹೃದಯದಂತಹ ಅಂಗಗಳನ್ನು ತ್ವರಿತವಾಗಿ ತಲುಪುತ್ತದೆ. ಉರಗ ಕಚ್ಚಿದ ಸ್ಥಳಕ್ಕೆ ತಕ್ಷಣ ಏನನ್ನೂ ಮಾಡಬಾರದು. ವ್ಯಕ್ತಿಯ ದೇಹದಿಂದ ಬಿಗಿಯಾದ ಬಟ್ಟೆಗಳನ್ನು ತೆಗೆದುಹಾಕಬೇಕು. ಹಾವು ಕಡಿದ ವ್ಯಕ್ತಿಯನ್ನು ಕೂಡಲೇ ಸಮೀಪದ ಹಾವಿನ ವಿಷ ವಿರೋಧಿ ಲಸಿಕೆ ಇರುವ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನೀಡಬೇಕು ಎಂದು ಜಿಲ್ಲಾ ವೈದ್ಯಕೀಯ ವಿಭಾಗವು ಮಾಹಿತಿ ನೀಡಿದೆ.



ವಾರ್ಡ್‌ಗಳಲ್ಲಿ ತಿಳುವಳಿಕೆ ಕಾರ್ಯ

ಕಾಸರಗೋಡು ಜಿಲ್ಲೆಯಲ್ಲಿ ಹಾವು ಕಡಿತ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯು ಪ್ರತಿರೋಧ ಕ್ರಮಗಳನ್ನು ಜಾರಿಗೊಳಿಸಿದೆ. ಜನವಾಸ ವಲಯಗಳಲ್ಲಿ ಜೀವಹಾನಿಗಳನ್ನು ತಪ್ಪಿಸಲು ಹಾಗೂ ಜನರ ಸುರಕ್ಷತೆಯನ್ನು ಖಾತರಿಪಡಿಸಲು ಕಟ್ಟುನಿಟ್ಟಿನ ನಿರ್ದೇಶನಗಳನ್ನು ನೀಡಲಾಗಿದೆ. ಹಾವುಗಳು ಜನವಾಸ ವಲಯಗಳಲ್ಲಿ ಕಂಡುಬಂದರೆ ಸುರಕ್ಷಿತವಾಗಿ ಹಿಡಿದು ಕಾಡಿನೊಳಗೆ ಬಿಡಲು ತಜ್ಞರ ತಂಡವನ್ನು ರೂಪಿಸಲಾಗಿದೆ. ಹಾವುಗಳ ಕಡಿತ ವಿಚಾರದಲ್ಲಿ ವಾರ್ಡ್ ಮಟ್ಟದಲ್ಲಿ ತಿಳುವಳಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಭರದಿಂದ ಸಾಗಿದೆ ಜಮೀನು ಗುರುತಿಸುವ ಹೆಸರಿನಲ್ಲಿ ಕಲ್ಲಿನ ಗುಪ್ಪೆ ಹಾಕುವ ಕಾರ್ಯ | ಬೆಳ್ತಂಗಡಿ ತಾಲೂಕಿನ ಕೊಯ್ಯೂರು ಗ್ರಾಮದಲ್ಲಿ ಹೊಸ ಆತಂಕ

ಮಲೆಕುಡಿಯ ಸಮುದಾಯದ ತಲತಲಾಂತರದ ಕೃಷಿ ಭೂಮಿಗೆ ಆಪತ್ತು?

ಬೆಳ್ತಂಗಡಿ: ತಾಲೂಕಿನ ಕೊಯ್ಯೂರು ಗ್ರಾಮದಲ್ಲಿ ತಮ್ಮ ಜಮೀನು ಗುರುತಿಸುವ ಹೆಸರಿನಲ್ಲಿ ಅರಣ್ಯ ಇಲಾಖೆ ಈಗ ಏಕಾ ಏಕಿ ಮಲೆಕುಡಿಯ ಸಮುದಾಯದ ಮಂದಿ ತಮ್ಮ ತಲತಲಾಂತರದಿಂದ ಕೃಷಿ ಮಾಡಿಕೊಂಡು ಬಂದಿದ್ದ ಕೃಷಿಭೂಮಿಯೊಳಗೆ ನುಗ್ಗಿ ಕಲ್ಲಿನ ಗುಪ್ಪೆ ಹಾಕುವ ಕಾರ್ಯ ಮಾಡಿದ್ದು, ಈ ಬೆಳವಣಿಗೆ ಜನರಲ್ಲಿ ಆತಂಕ ಮೂಡಿಸಿದೆ.

ಹಕ್ಕುಪತ್ರ, ದಾಖಲೆ ಎಲ್ಲಾ ಇದೆ...

ಇಲ್ಲಿನ ದುಗಲಾಯಿಬೆಟ್ಟು, ಕುಲ್ಲಾಜೆ ಪ್ರದೇಶದಲ್ಲಿ ಸುಮಾರು 80 ವರ್ಷ ಹಿಂದಿನಿಂದಲೂ ಮಲೆಕುಡಿಯ ಸಮುದಾಯದ ಜನರು ಬದುಕನ್ನು ನಡೆಸುತ್ತಾ ಬಂದಿದ್ದು , ಅರಣ್ಯ ಇಲಾಖೆ ಕ್ರಮ ಈ ಜನರಲ್ಲಿ ಆತಂಕ ತಂದಿದೆ. ಇಲ್ಲಿನ ನಿವಾಸಿಗಳಾದ ನಿರಂಜನ ಮಲೆಕುಡಿಯ, ಕೃಷ್ಣಪ್ಪ ಮಲೆಕುಡಿಯ, ನೋಣಯ್ಯ ಮಲೆಕುಡಿಯ, ಧರ್ಮರಾಜ್ ಮಲೆಕುಡಿಯ ಎಂಬವರ ಕೃಷಿ ಭೂಮಿ ನಡುವೆ ಅರಣ್ಯ ಇಲಾಖೆ ತಮ್ಮ ಗಡಿ ಗುಪ್ಪೆ ನಿರ್ಮಿಸಿದೆ. ಸರ್ವೆ ನಂಬರ್ 60ರಲ್ಲಿ ಇವರಿಗೆ ಸರಕಾರದಿಂದ ಹಕ್ಕುಪತ್ರ ನೀಡಲಾಗಿದೆ. ಜಮೀನಿಗೆ ಸಂಬಂಧಿಸಿದ ಎಲ್ಲ ದಾಖಲೆಗಳೂ ಇವರ ಬಳಿ ಇದೆ. ಆದರೆ ಕೃಷಿಕರಿಗೆ ಯಾವುದೇ ಮಾಹಿತಿ ನೀಡದೆ ಜಂಟಿ ಸರ್ವೆ ಮಾಡದೆ ಏಕಾಏಕಿ ಇಲಾಖೆ ಕೃಷಿಭೂಮಿಗೆ ಪ್ರವೇಶಿಸಿ ಗುಪ್ಪೆ ನಿರ್ಮಿಸುವ ಕಾರ್ಯ ಮಾಡಿದೆ.

ನೋಟೀಸ್ ನೀಡಿಲ್ಲ ಎನ್ನುತ್ತಾರೆ ಸ್ಥಳೀಯರು

ಇದಲ್ಲದೆ ಇದರ ಸಮೀಪವಿರುವ ಮ್ಯಾಥ್ಯೂ ಹಾಗೂ ಸಿಬಿ ಎಂಬವರ ಜಾಗದಲ್ಲಿಯು ಇಲಾಖೆ ಗುಪ್ಪೆ ನಿರ್ಮಿಸಿರುವುದಾಗಿ ತಿಳಿದು ಬಂದಿದೆ. ಸರ್ವೆ ಮಾಡದೆ ನೋಟೀಸ್ ನೀಡದೆ ಯಾವ ಆಧಾರದ ಮೇಲೆ ಕೃಷಿ ಭೂಮಿಯಲ್ಲಿ ಗುಪ್ಪೆ ನಿರ್ಮಿಸಲಾಗಿದೆ ಎಂದು ಪ್ರಶ್ನಿಸುತ್ತಿದ್ದಾರೆ ಸಂತ್ರಸ್ತರು. ಇಲ್ಲಿನ ನಿವಾಸಿಗಳು ಆದಿವಾಸಿ ಸಮುದಾಯದವರು. ಒಂದು ವೇಳೆ ಅರಣ್ಯ ಅತಿಕ್ರಮಣ ಮಾಡಿ ಕೃಷಿ ಮಾಡಿದ್ದೇ ಆದಲ್ಲಿ ಅವರಿಗೆ ಅರಣ್ಯ ಹಕ್ಕು ಕಾಯ್ದೆಯ ಅಡಿಯಲ್ಲಿ ಹಕ್ಕುಪತ್ರ ಪಡೆಯಲು ಅವಕಾಶವಿದೆ. ಹೀಗಿರುವಾಗ ಅರಣ್ಯ ಇಲಾಖೆಯ ಈ ಆತುರ ಯಾಕೆ ಎಂಬ ಪ್ರಶ್ನೆ ಉದ್ಭವವಾಗಿದೆ.

ದಕ್ಷಿಣ ಕನ್ನಡದಲ್ಲಿ ಈಗಾಗಲೇ ಕಂದಾಯ, ಅರಣ್ಯ ಜಮೀನಿನ ನಡುವೆ ಬಾರಿ ಗೊಂದಲವಿದೆ. ಈ ಜಮೀನಿನ ಸಮಸ್ಯೆ ಪರಿಹರಿಸಲು ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ರಚಿಸುವ ನಿರ್ಧಾರ ಕೈಗೊಂಡಿರುವುದಾಗಿ ಪ್ರಕಟಿಸಿದೆ. ಆದರೆ ಇದರ ನಡುವೆ ಈ ಬೆಳವಣಿಗೆ ಆತಂಕ ಹೆಚ್ಚಿಸುತ್ತಿದೆ.

ದೊಡ್ಡ ವಿವಾದವನ್ನೇ ಸೃಷ್ಟಿಸಿತ್ತು...

ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಅರಣ್ಯದಂಚಿನ ಜಿಲ್ಲೆಗಳಲ್ಲಿ ವ್ಯಾಪಕವಾಗಿರುವ ಕಂದಾಯ– ಅರಣ್ಯ ಜಮೀನಿನ ಸಮಸ್ಯೆ ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಒಂದೇ ಸರ್ವೆ ನಂಬರ್‌ನಲ್ಲಿ ಕಂದಾಯ ಹಾಗೂ ಅರಣ್ಯ ಇಲಾಖೆಯ ಜಮೀನಿದ್ದು ಅದರ ಗಡಿಗಳನ್ನು ಗುರುತಿಸುವ ಕಾರ್ಯ ಇನ್ನೂ ನಡೆದಿಲ್ಲ. ಇದರಿಂದಾಗಿ ಅಲ್ಲಿ ಅರಣ್ಯ ಇಲಾಖೆ ಹಾಗೂ ಕೃಷಿಕರ ನಡುವೆ ಸಂಘರ್ಷಕ್ಕೂ ಕಾರಣವಾಗುತ್ತಿದೆ.

ಕಳೆಂಜ ಗ್ರಾಮದಲ್ಲಿ ಅರಣ್ಯ ಇಲಾಖೆ ಹಾಗು ಕೃಷಿಕರ ನಡುವಿನ ಸಂಘರ್ಷ ದೊಡ್ಡ ವಿವಾದವನ್ನೇ ಸೃಷ್ಟಿಸಿತ್ತು. ಇಲ್ಲಿ ಕಳೆದ ಕೆಲವು ತಿಂಗಳುಗಳಿಂದ ಜಂಟಿ ಸರ್ವೆ ನಡೆಯುತ್ತಿದ್ದರೂ ಇನ್ನೂ ಜಮೀನಿನ ಬಗ್ಗೆ ಸ್ಪಷ್ಟವಾದ ಚಿತ್ರಣ ಲಭ್ಯವಾಗಿಲ್ಲ.





ತಲತಲಾಂತರಗಳಿಂದಲೂ ಇಲ್ಲಿ ಕೃಷಿ ಮಾಡಿಕೊಂಡು ವಾಸಿಸುವ ನಮಗೆ ಯಾವುದೇ ರೀತಿಯ ನೋಟಿಸ್ ನೀಡದೆ ಏಕಾಏಕಿ ಮನೆಯ ಸಮೀಪ, ತೋಟದ ಮಧ್ಯೆ ಅರಣ್ಯ ಇಲಾಖೆ ಕಲ್ಲಿನ ಗುಪ್ಪೆ ಹಾಕಿದ್ದು ಸರಿಯಲ್ಲ. ತಕ್ಷಣ ಹಾಕಿರುವ ಗುಪ್ಪೆಯನ್ನು ತೆರವು ಮಾಡಬೇಕು.

■ ನಿರಂಜನ ಮಲೆಕುಡಿಯ, ದುಗಲಾಯಿಬೆಟ್ಟು

ಅಧಿಕೃತ ಸರ್ವೆ ನಡೆಸದೆ ಗಡಿ ಗುರುತು ಮಾಡಿರುವುದು ಸರಿಯಲ್ಲ. ತಕ್ಷಣ ಆದಿವಾಸಿಗಳ ಮೇಲೆ ಕೃಷಿಕರ ಮೇಲೆ ನಡೆಯುತ್ತಿರುವ ಈ ದಾಳಿಯನ್ನು ನಿಲ್ಲಿಸಬೇಕು. ಇಲ್ಲವಾದಲ್ಲಿ ಅರಣ್ಯ ಇಲಾಖೆಯ ನೀತಿಯ ವಿರುದ್ಧ ಉಗ್ರ ಹೋರಾಟ ಅನಿವಾರ್ಯವಾಗಲಿದೆ

■ ಶೇಖರ ಲಾಯಿಲ, ಸಮಾಜಿಕ ಹೋರಾಟಗಾರ, ಬೆಳ್ತಂಗಡಿ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಶನಿವಾರ 02, ಮೇ 2026 | e-mail diganthamlr@gmail.com | Website hosadigantha.com

ತುಸು ನೆಮ್ಮದಿ ನೀಡಿದೆ ಸಂಪತ್ತು



ಬಿಳಿಯೂರು ಭಾಗದಲ್ಲಿ ಅಣೆಕಟ್ಟು ಬಂದ್ ಮಾಡಲಾಗಿರುವ ಹಿನ್ನೆಲೆಯಲ್ಲಿ ಉಪ್ಪಿನಂಗಡಿ ಭಾಗದಲ್ಲಿ ಒಡಲು ತುಂಬಿಕೊಂಡಿರುವ ಜೀವನದಿ ನೇತ್ರಾವತಿ ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕಿದ್ದು ಹೀಗೆ...

ಸುತ್ತಮುತ್ತ

ಮತ್ತಷ್ಟು ಬಿಸಿಯೇರಿದ ಹವೆ: ಈಗ ಕರಾವಳಿಯತ್ತ ಸುಳಿಯುತ್ತಿಲ್ಲ ಮಳೆ

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ತಾಪಮಾನ ಮತ್ತಷ್ಟು ಏರಿಕೆಯಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗರಿಷ್ಠ 36 ಡಿಗ್ರಿ ಸೆಲ್ಸಿಯೆಸ್ ತಾಪಮಾನ ಶುಕ್ರವಾರ ದಾಖಲಾಗಿದೆ. ಈ ನಡುವೆ ಮೋಡ ಮುಸುಕಿದ ವಾತಾವರಣ ಕಂಡುಬಂದರೂ ಮಳೆಯಾಗುತ್ತಿಲ್ಲ.

ಚಾರ್ಮಾಡಿಯಲ್ಲಿ ಆನೆಗಳ ದಂಡು: ವಾಹನ ಸಂಚಾರಕ್ಕೆ ತೀವ್ರ ಅಡ್ಡಿ

ಮಂಗಳೂರು: ಚಾರ್ಮಾಡಿ ಘಾಟ್ ರಸ್ತೆಯಲ್ಲಿ ಗುರುವಾರ ರಸ್ತೆಯಲ್ಲಿ ಆನೆಗಳ ಹಿಂಡು ಕಂಡು ಬಂದು ಕೆಲಕಾಲ ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಬಿರು ಬಿಸಿಲಿಗೆ ಬಸವಳಿದ ಪ್ರಯಾಣಿಕ

ಟ್ರಾಫಿಕ್ ಟ್ರಾಫಿಕ್

ಹೆದ್ದಾರಿಯಲ್ಲಿ ವಾಹನಗಳ ಸಾಲು!

ಮಂಗಳೂರು/ಮುಲ್ಕಿ: ಮಂಗಳೂರು ನಗರದ ಹೊರವಲಯ ತೊಕ್ಕೊಟ್ಟಿನಿಂದ ಜಪ್ಪಿನಮೊಗರು ನೇತ್ರಾವತಿ ಸೇತುವೆ ತನಕ ಶುಕ್ರವಾರ ಮಧ್ಯಾಹ್ನ ವೇಳೆ ತಾಸುಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗಿ, ಬಿರು ಬಿಸಿಲಿಗೆ ಪ್ರಾಯಣಿಕರು ಹೈರಾಣಾದರು. ಅಪಘಾತವೊಂದರ ಹಿನ್ನೆಲೆಯಲ್ಲಿ ಈ ಟ್ರಾಫಿಕ್ ಜಾಮ್ ಉಂಟಾಗಿತ್ತು. ಸಂಚಾರ ಪೊಲೀಸರು ಬಳಿಕ ಸಂಚಾರ ಸುಗಮಗೊಳಿಸಿದರು.

ಮುಲ್ಕಿಯಿಂದ ಸುರತ್ಕಲ್ ತನಕ ಸಂಕಷ್ಟ

ಗುರುವಾರ ಸಂಜೆ ಏಳರ ಬಳಿಕ ಮುಲ್ಕಿಯಿಂದ



ಸುರತ್ಕಲ್ ಮಂಗಳೂರಿನವರೆಗೂ ಹೆದ್ದಾರಿಯಲ್ಲಿ ಏಕಾಏಕಿ ವಾಹನ ಸಂಚಾರಕ್ಕೆ ತಡೆ ಉಂಟಾಗಿದ್ದು ಪ್ರಯಾಣಿಕರು ಸಂಕಷ್ಟಕ್ಕೀಡಾದರು. »ಪುಟ 6

ಸುತ್ತ ಮುತ್ತ

ಆರ್ಯಭಟ ಪ್ರಶಸ್ತಿಗೆ ವಿದುಷಿ ರೋಹಿಣಿ ಉದಯ್ ಆಯ್ಕೆ

ಬಂಟ್ವಾಳ: ಆರ್ಯಭಟ ಸಾಂಸ್ಕೃತಿಕ ಸಂಸ್ಥೆ ಬೆಂಗಳೂರು ಇವರು ಕೊಡಮಾಡುವ ಪ್ರತಿಷ್ಠಿತ ಆರ್ಯಭಟ ಅಂತರಾಷ್ಟ್ರೀಯ 2026 ಪ್ರಶಸ್ತಿಗೆ ಶ್ರೀ ದೇವಿ ನೃತ್ಯಾರಾಧನಾ ಕಲಾ ಕೇಂದ್ರ (ರಿ)



ಪುತ್ತೂರು ಇದರ ನೃತ್ಯಗುರು ಮತ್ತು ಶರ್ವಾಣಿ ಕ್ರೆಡಿಟ್ ಸೌಹಾರ್ದ ಕೋ ಅಪರೇಟಿವ್ ಸೊಸೈಟಿ ಬಿ.ಸಿ.ರೋಡ್ ಇದರ ಅಧ್ಯಕ್ಷೆ ವಿದುಷಿ ರೋಹಿಣಿ ಉದಯ್ ಆಯ್ಕೆಯಾಗಿರುತ್ತಾರೆ. ಭರತನಾಟ್ಯ ಕ್ಷೇತ್ರದ ಸಾಧನೆ ಹಾಗೂ ಕಲಾ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ . ಮೇ 23, 2026ರಂದು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಕೊಡಲಾಗುವುದು ಎಂದು ಆರ್ಯಭಟ ಸಾಂಸ್ಕೃತಿಕ ಸಂಸ್ಥೆಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ನಾಟ್ಯ ಕ್ಷೇತ್ರದ ಅಪ್ರತಿಮ ಸಾಧಕಿ

ವಿದುಷಿ ರೋಹಿಣಿ ಉದಯ್ ಇವರು ಕಳೆದ 22 ವರ್ಷಗಳಿಂದ ಭರತ ನೃತ್ಯ ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಕಡೆಗಳಲ್ಲಿ ನೃತ್ಯ ತರಗತಿಗಳನ್ನು ನಡೆಸುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ಕೂಡ ನೀಡುತ್ತಿದ್ದಾರೆ. ಶ್ರೀ ದೇವಿ ನೃತ್ಯಾರಾಧನಾ ಕಲಾಕೇಂದ್ರ ಪುತ್ತೂರು ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಕಳೆದ 19 ವರ್ಷಗಳಿಂದ ಈ ಸಂಸ್ಥೆಯ ಮೂಲಕ ಅಂತರಾಷ್ಟ್ರೀಯ ನೃತ್ಯ ಕಲಾವಿದರನ್ನು ಕರೆಸಿ ನೃತ್ಯ ವಿದ್ಯಾರ್ಥಿಗಳಿಗೆ ಉಪಯುಕ್ತ ಕಾರ್ಯಗಾರಗಳನ್ನು, ಪ್ರಾತ್ಯಕ್ಷಿಕೆಗಳನ್ನು, ನೃತ್ಯ ಪ್ರದರ್ಶನಗಳನ್ನು ನೀಡಲಾಗುತ್ತಿದೆ.

ಮಟ್ಟು ದೈವಗಳ ನೇಮ

ಮುಲ್ಕಿ: ಇತಿಹಾಸ ಪ್ರಸಿದ್ಧ ಮುಲ್ಕಿ ಸೀಮೆಯ ಮಟ್ಟು ಶ್ರೀ ಕೋರ್ದಬ್ಬು-ತನ್ನಿಮಾನಿಗ ದೈವಸ್ಥಾನದಲ್ಲಿ



ಶ್ರೀ ಕೋರ್ದಬ್ಬು ಹಾಗೂ ತನ್ನಿಮಾನಿಗ ದೈವಗಳ ನೇಮ ವೈಭವದಿಂದ ನಡೆಯಿತು. ಏ.30 ಗುರುವಾರ ಮಧ್ಯಾಹ್ನ ಗಂಟೆ 12.15ಕ್ಕೆ ಚಪ್ಪರ ಆರೋಹಣ,ಮಧ್ಯಾಹ್ನ ಗಂಟೆ 1.00ಕ್ಕೆ ಸಾರ್ವಜನಿಕ ಅನ್ನಸಂತರ್ಪಣೆ , ಸಂಜೆ 6ಕ್ಕೆ ಶ್ರೀ ದೈವಗಳ ಭಂಡಾರ ಇಳಿಯುವುದು, ರಾತ್ರಿ 10ಕ್ಕೆ ಶ್ರೀ ಕೋರ್ದಬ್ಬ – ತನ್ನಿಮಾನಿಗ ದೈವಗಳ ನೇಮ ನಡೆಯಿತು. ಈ ಸಂದರ್ಭ ಗುತ್ತಿನಾರ್ ಸುಧಾಕರ ಶೆಟ್ಟಿ ದೆಪ್ಪುಣಿ ಗುತ್ತು, ರಾಷ್ಟ್ರೀಯ ಬಿಲ್ಲವರ ಮಹಾಮಂಡಲದ ಅಧ್ಯಕ್ಷ ಸೂರ್ಯಕಾಂತ ಜಯ ಸುವರ್ಣ,ದಿನೇಶ್ ಅಮೀನ್ ಮಟ್ಟು, ವಿವೇಕ್ ಶೆಟ್ಟಿ ಬಟಾರ ಬಾಳಿಕೆಮನೆ, ಶಿವರಾಮ ಶೆಟ್ಟಿ ಹೊಸಮನೆ, ಶ್ರೀನಿವಾಸ ಪೂಜಾರಿ ತೆಂಕುಮನೆ, ಸಮಿತಿ ಅಧ್ಯಕ್ಷ ಹರೀಶ್ ಕರ್ಕೇರ,,ಹರಿಶ್ಚಂದ್ರ ಸುವರ್ಣ ಮೂಡು ಮನೆ ಮಟ್ಟು, ಗೋವಾ, ಪ್ರೇಮಾನಂದ ಪೂಜಾರಿ, ಧನಂಜಯ ಮಟ್ಟು, ಉದಯ ಅಮೀನ್ ಪೂಜಾರಿ, ಪ್ರವೀಣ್ ಬರ್ಕೆ ಮನೆ, ಅಶೋಕ್ ಕೋಟ್ಯಾನ್, ವಿಶ್ವೇಂದ್ರ ಅಮೀನ್, ಶೇಖರ ಪೂಜಾರಿ ಅಂಗಡಿ ತೋಟ, ಶಶೀಂದ್ರ ಸಾಲ್ಯಾನ್ ಮುಂಬೈ, ವಿಶ್ವನಾಥ ಅಮೀನ್, ಯೋಗೀಶ್ ಮೂಡುಮನೆ,, ಅಜಯ್ ಶೆಟ್ಟಿ ರಮೇಶ್ ಸುವರ್ಣ ಪಡುಮನೆ, ರೇಷ್ಮಾ ರವಿರಾಜ್, ದಯಾನಂದ ಮಟ್ಟು ಮತ್ತಿತರರು ಇದ್ದರು. ಮೇ 1 ಬೆಳಿಗ್ಗೆ ಶ್ರೀ ಪಂಜುರ್ಲಿ ಮತ್ತು ಶ್ರೀ ಗುಳಿಗ ದೈವಗಳ ನೇಮ ಮಧ್ಯಾಹ್ನ ಸಾರ್ವಜನಿಕ ಅನ್ನಸಂತರ್ಪಣೆ,ಬಳಿಕ ಶ್ರೀ ಧೂಮಾವತಿ ನೇಮ ಬಂಟ ದೈವಗಳ ನೇಮ ನಡೆಯಿತು.

ಶೌಚಾಲಯ ನಿರ್ಮಾಣಕ್ಕೆ ಗುದ್ದಲಿಪೂಜೆ

ಕಡಬ: ಕಡಬ ತಾಲೂಕಿನ ಕ್ಯೊಲ ಗ್ರಾಮದ ಗಂಡಿಬಾಗಿಲು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಂಆರ್‌ಪಿಎಲ್ ಸಂಸ್ಥೆಯ ಸಿಎಸ್ ಆರ್ ನಿಧಿಯ ರೂ.10 ಲಕ್ಷ ಅನುದಾನದಲ್ಲಿ ನಿರ್ಮಾಣವಾಗಲಿರುವ ಸುಸಜ್ಜಿತ ಶೌಚಾಲಯ ಕಟ್ಟಡ ನಿರ್ಮಾಣಕ್ಕೆ ಗುದ್ದಲಿಪೂಜೆ ನಡೆಯಿತು. ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರು ಗುದ್ದಲಿ ಪೂಜೆ ನೆರವೇರಿಸಿ ಶುಭ ಹಾರೈಸಿದರು. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಪ್ರಮುಖರಾದ ರವಿಪ್ರಸಾದ್ ಶೆಟ್ಟಿ, ಪ್ರದೀಪ್ ರೈ ಮನವಳಿಕೆ, ಶೀನಪ್ಪ ಗೌಡ ವಳಕಡಮ, ಬಾಲಕೃಷ್ಣ ಗೌಡ ಬೇಂಗದಪಡ್ಪು, ಸೀತಾರಾಮ ಗೌಡ ವಳಕಡಮ, ಲಕ್ಷ್ಮೀನಾರಾಯಣ ರಾವ್ ಆತೂರು, ವಿನಯ ರೈ ಕ್ಯೊಲಪಟ್ಟೆ, ಕಮಲಾಕ್ಷಿ, ಶಾಲಾ ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು, ಸದಸ್ಯರು, ಪೋಷಕರು ಮತ್ತಿತರರು ಇದ್ದರು. ಶಾಲಾ ಮುಖ್ಯ ಶಿಕ್ಷಕಿ ತುಳಸಿ ಸ್ವಾಗತಿಸಿ, ವಂದಿಸಿದರು.ಎಸ್.ನ ಡಾ. ಪ್ರಮೋದ್ ಸ್ವಾಗತಿಸಿ, ಕನ್ನಡ ವಿಭಾಗ ಉಪನ್ಯಾಸಕ ಹರಿಶ್ಚಂದ್ರ ವಂದಿಸಿದರು. ವಾಣಿಜ್ಯ ವಿಭಾಗದ ಉದಿತ್ ನಿರ್ವಹಿಸಿದರು.

ವೃಷಭ ಲಗ್ನ ಸುಮೂಹೂರ್ತದಲ್ಲಿ ನೆರವೇರಿದ ಧಾರ್ಮಿಕ ವಿಧಿ ವಿಧಾನ | ನೂರಾರು ಭಕ್ತರು ಭಾಗಿ

ಶ್ರೀ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಾನಿಧ್ಯಗಳ ಪುನರ್ ಪ್ರತಿಷ್ಠೆ

ಉಳ್ಳಾಲ: ತೊಕ್ಕೊಟ್ಟು ಗಾಂಧಿನಗರದ ಶ್ರೀ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಶುಕ್ರವಾರದಂದು ಶ್ರೀ ಚಾಮುಂಡೇಶ್ವರಿ ಅಮ್ಮನವರು ಹಾಗೂ ಪರಿವಾರ ಸಾನಿಧ್ಯಗಳ ಪುನರ್ ಪ್ರತಿಷ್ಠಾ ಕಲಶೋತ್ಸವು ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಪ್ರತಿಷ್ಠಾ ಕಲಶೋತ್ಸವ

ಶುಕ್ರವಾರ ಬೆಳಿಗ್ಗೆ ವೃಷಭ ಲಗ್ನ ಸುಮೂಹೂರ್ತದಲ್ಲಿ ಕ್ಷೇತ್ರ ತಂತ್ರಿವರ್ಯರಾದ ವೇದಮೂರ್ತಿ ಬ್ರಹ್ಮಶ್ರೀ ಪ್ರಕಾಶ್ ವಿ.ಹೊಳ್ಳ ಶಕ್ತಿನಗರ ಅವರ ನೇತೃತ್ವದಲ್ಲಿ ತರವಾಡು ಚಾವಡಿಯ ಗೃಹಪ್ರವೇಶ ನಡೆಯಿತು.

ಬಳಿಕ ಮಿಥುನ ಲಗ್ನ ಸುಮೂಹೂರ್ತದಲ್ಲಿ ಶ್ರೀ ಚಾಮುಂಡೇಶ್ವರಿ ಅಮ್ಮನವರು ಹಾಗೂ ಪರಿವಾರ ದೈವಗಳಾದ ಕತ್ತಲೆಕಾನ ಗುಳಿಗ, ಕೊರಗತನಿಯ ಸಾನಿಧ್ಯಗಳ ಶಿಖರ ಪ್ರತಿಷ್ಠಾಪನೆ, ಕಲಶಾಭಿಷೇಕ, ಪ್ರಸನ್ನ ಪೂಜೆ ನೆರವೇರಿತು. ಮಧ್ಯಾಹ್ನ ಮಹಾ ಪೂಜೆಯ ಬಳಿಕ, ಮಹಾ ಅನ್ನಸಂತರ್ಪಣೆ ನಡೆಯಿತು. ಊರ ಪರವೂರಿನ ಅನೇಕ ಸಂಖ್ಯೆಯ ಭಕ್ತಾದಿಗಳು ಪ್ರತಿಷ್ಠಾ ಕಲಶೋತ್ಸವದಲ್ಲಿ ಭಾಗವಹಿಸಿ ಕೃತಾರ್ಥರಾದರು.





ಮಾಜಿ ಸಂಸದರಾದ ನಳಿನ್ ಕುಮಾರ್ ಕಟೀಲು, ಕರ್ನಾಟಕ ಪರಿಸರ-ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಶಾರ್ಲೆಟ್ ಪಿಂಟೊ, ಬಿಜೆಪಿ ಜಿಲ್ಲಾಧ್ಯಕ್ಷರಾದ ಸತೀಶ್ ಕುಂಪಲ, ಉಪಾಧ್ಯಕ್ಷರಾದ ಕೆ.ರವೀಂದ್ರ ಶೆಟ್ಟಿ ಉಳಿದೊಟ್ಟು ಕ್ಷೇತ್ರಾಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲು, ಸೋಮೇಶ್ವರ ಪುರಸಭಾ ಉಪಾಧ್ಯಕ್ಷ ರವಿಶಂಕರ್ ಸೋಮೇಶ್ವರ, ಚಾಮುಂಡೇಶ್ವರಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಗಿರೀಶ್ ಕುಮಾರ್ ಯು.ಕೆ, ಮೊಕ್ತೇಸರರಾದ ಕುಸುಮ, ಇಂದುಶೇಖರ್, ಜಯಂತ್ ಕುಮಾರ್, ಸುದರ್ಶನ್, ವನಿತಾ ಜಯಕುಮಾರ್, ಶೈಲಜಾ ಶಶಿಕಾಂತ್,ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸುರೇಶ್ ಭಟ್ನಗರ, ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷರಾದ ಭಾಸ್ಕರ ತೊಕ್ಕೊಟ್ಟು, ಪ್ರಧಾನ ಕಾರ್ಯದರ್ಶಿ ಸತೀಶ್ ದೀಪಮ್, ಮಹಿಳಾ ಸಮಿತಿಯ ಪ್ರಧಾನ ಸಂಚಾಲಕಿ ಸುರೇಖಾ ಚಂದ್ರಹಾಸ್, ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವ ಸಮಿತಿಯ ಸರ್ವ ಸದಸ್ಯರು ಉಪಸ್ಥಿತರಿದ್ದರು.

ಇಂದು ಕ್ಷೇತ್ರದಲ್ಲಿ ವಾರ್ಷಿಕೋತ್ಸವ, ನೇಮ

ಕ್ಷೇತ್ರದಲ್ಲಿ ಇಂದು (ಶನಿವಾರ) ವಾರ್ಷಿಕೋತ್ಸವದ ಅಂಗವಾಗಿ ಬೆಳಿಗ್ಗೆ ಮಹಾಗಣಪತಿಯಾಗ, ಕಲಶಪೂಜೆ, ಕಲಶ ಪ್ರಧಾನ ಹೋಮ, ಕಲಶಾಭಿಷೇಕ, ಪ್ರಸನ್ನ ಪೂಜೆ, ಅಶ್ಲೇಷ ಬಲಿ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಲಿದೆ.ಸಂಜೆ 6 ಗಂಟೆಗೆ ಕ್ಷೇತ್ರ ದೈವ ಕತ್ತಲೆಕಾನ ಗುಳಿಗ ದೈವಕ್ಕೆ ಆವೇಶದ ಎಣ್ಣೆ ಬೂಳ್ಯ ನಡೆದ ಬಳಿಕ ನೇಮ ನಡೆಯಲಿದೆ. ನಾಳೆ (ಭಾನುವಾರ) ಸಂಜೆ 7 ಗಂಟೆಗೆ ಆರಾಧನಾ ಕೊರಗತನಿಯ ಕೋಲ, ಬಲಿಸೇವೆ ಮತ್ತು ಅನ್ನ ಸಂತರ್ಪಣೆ ನಡೆಯಲಿದೆ. ಕಾರ್ಯಕ್ರಮದಲ್ಲಿ ಭಕ್ತಾದಿಗಳು ಭಾಗವಹಿಸುವಂತೆ ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಪ್ರಮುಖರು ತಿಳಿಸಿದ್ದಾರೆ.

ಬಪ್ಪನಾಡು ದೇವಸ್ಥಾನದ ಸ್ವಾಗತ ಗೋಪುರ ಸ್ಥಳಾಂತರಕ್ಕೆ ಪ್ರಾರ್ಥನೆ ಸಲ್ಲಿಕೆ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಶ್ರೀ ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನದ ಸ್ವಾಗತ ಗೋಪುರವನ್ನು ಸ್ಥಳಾಂತರಿಸುವ ಕಾರ್ಯಾರಂಭದ ಅಂಗವಾಗಿ ಇಂದು ದೇವಸ್ಥಾನದಲ್ಲಿ ವಿಶೇಷ ಪ್ರಾರ್ಥನೆ ನೆರವೇರಿಸಲಾಯಿತು.

ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತರ ಮಾರ್ಗದರ್ಶನದಲ್ಲಿ ದೇವಸ್ಥಾನದ ಅರ್ಚಕ ಪ್ರಸಾದ್ ಭಟ್ ಅವರು ಪ್ರಾರ್ಥನೆ ನೆರವೇರಿಸಿದರು

ಮುಲ್ಕಿ ಅಸೋಸಿಯೇಷನ್ ಆಫ್ ಸಿವಿಲ್ ಎಂಜಿನಿಯರ್ಸ್, ಅಧ್ಯಕ್ಷ ಜೀವನ್ ಕೆ. ಶೆಟ್ಟಿ ಕಾರ್ನಾಡ್ ಅವರು ಅವರು ದೇವಸ್ಥಾನ ಆಡಳಿತ, ದಾನಿದಾರರ ಕುಟುಂಬ ಹಾಗೂ ಸ್ವಾಗತ ಗೋಪುರ ಸ್ಥಳಾಂತರ ಗುತ್ತಿಗೆ ವಹಿಸಿಕೊಂಡ ಹರಿಯಾಣ ಮೂಲದ ಸಂಸ್ಥೆಯ ನಿರ್ದೇಶಕ ರಾಹುಲ್ ಚೌಹಾನ್ ವಿ. ಅವರ ಜೊತೆ ಸಮನ್ವಯ ನಡೆಸಿದರು.

ಎಸಿಇಎಂ ಕಾರ್ಯದರ್ಶಿ ಸುಜಿತ್ ಸಾಲಿಯನ್, ಮುಲ್ಕಿ ನ.ಪಂ ಮಾಜಿ ಅಧ್ಯಕ್ಷ ಸತೀಶ್ ಅಂಚನ್, ದೇವಸ್ಥಾನದ ಅಭಿವೃದ್ಧಿ ಸಮಿತಿಯ ಸಂಜೀವ ದೇವಾಡಿಗ, ಕೊಲ್ಲಾಡಿ ಬಾಲಕೃಷ್ಣ ರೈ ಹಾಗೂ ರವಿ ಶೆಟ್ಟಿ ಜತ್ತಬೆಟ್ಟು ಮತ್ತಿತರರು ಉಪಸ್ಥಿತರಿದ್ದರು.

ಪರಿಸರ ಸ್ನೇಹಿ ಕ್ರಮ

1999ರಲ್ಲಿ ಐಕಳ ಹರೀಶ್ ಶೆಟ್ಟಿ ಕುಟುಂಬದಿಂದ ನಿರ್ಮಿಸಲಾದ ಸ್ವಾಗತ ಗೋಪುರವನ್ನು ತೆರವು ಬದಲು ಸ್ಥಳಾಂತರಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಈ ಕ್ರಮವು ಹಸಿರು ಹಾಗೂ ಪರಿಸರ ಸ್ನೇಹಿ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತಿದ್ದು, ನಿರ್ಮಾಣ ತ್ಯಾಜ್ಯವನ್ನು ಕಡಿಮೆ ಮಾಡುವುದರ ಜೊತೆಗೆ ಪರಿಸರ ಸಂರಕ್ಷಣೆಗೆ ಸಹಕಾರಿಯಾಗಲಿದೆ. ಜೊತೆಗೆ, ಗೋಪುರದ ಭಕ್ತರ ಭಾವನಾತ್ಮಕ ಹಾಗೂ ಧಾರ್ಮಿಕ ಮೌಲ್ಯವೂ ಉಳಿಯಲಿದೆ.

ಮುಲ್ಕಿ ನಗರ ಪಂಚಾಯತ್‌ನಿಂದ ಜನಗಣತಿ ಶೇ.100 ಪೂರ್ಣ ಸಾಧನೆ

ಮುಲ್ಕಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ 'ಪ್ರಥಮವಾಗಿ' ಜನಗಣತಿ 2027ರ ಮೊದಲನೇ ಹಂತವನ್ನು ಶೇ.100ರಷ್ಟು ಪೂರ್ಣಗೊಳಿಸಿದ ಖ್ಯಾತಿಗೆ ಮುಲ್ಕಿ ನಗರ ಪಂಚಾಯತ್ ಪಾತ್ರವಾಗಿದೆ.

ಜನಗಣತಿ 2027 ರ ಮೊದಲ ಹಂತವಾದ ಮನೆಗಳ ಪಟ್ಟಿ ವಸತಿ ಗಣತಿ ಹಾಗೂ ಮನೆಯಲ್ಲಿರುವ ಸೌಕರ್ಯಗಳು (ನೀರು, ವಿದ್ಯುತ್, ಮತ್ತಿತರ ಆಸ್ತಿ ಮತ್ತು ಕಟ್ಟಡದ ಸಂಪೂರ್ಣ ವಿವರ ಸಂಗ್ರಹ ಕಾರ್ಯವನ್ನು ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ 'ಸ್ವಯಂ ಗಣತಿ' ಮೂಲಕ ಏ.1ರಿಂದ 15ರ ವರೆಗೆ ಚಾಲನೆಗೊಳಿಸಲಾಗಿತ್ತು. ತದನಂತರ ಏ.16. ರಿಂದ ಮುಲ್ಕಿ ನಗರ ವ್ಯಾಪ್ತಿಯಲ್ಲಿರುವ ಎಲ್ಲಾ ಮನೆಗಳಿಗೆ ಭೇಟಿ ನೀಡಿ ಮನೆ ಪಟ್ಟಿ ಮತ್ತು ವಸತಿ ಗಣತಿ ಮಾಡಲು ಮುಲ್ಕಿ ನಗರವನ್ನು ಭೌಗೋಳಿಕವಾಗಿ 40 ಬ್ಲಾಕ್ ಗಳಾಗಿ ರಚಿಸಿ, ಸದರಿ ಬ್ಲಾಕ್ ಗಳಿಗೆ 32 ಗಣತಿದಾರರು, 6 ಮೇಲ್ವಿಚಾರಕರು ಹಾಗೂ ಜನಗಣತಿಯ ಚಾರ್ಜ್ ಅಧಿಕಾರಿಯಾಗಿ ನಗರ ಪಂಚಾಯತ್ ಮುಖ್ಯಾಧಿಕಾರಿ ಮಧುಕರ್ ಕೆ. ಅವರನ್ನು ನೇಮಿಸಿ ಜಿಲ್ಲಾಧಿಕಾರಿಗಳು ಆದೇಶಿಸಿದ್ದರು.



ಕೂಡಲೇ ಕಾರ್ಯಪ್ರವೃತ್ತರಾದ ಮುಖ್ಯಾಧಿಕಾರಿ ಮಧುಕರ್ ಕ್ಷೇತ್ರ ವ್ಯಾಪ್ತಿಯಲ್ಲಿ 32 ಗಣತಿದಾರರು, 6 ಮೇಲ್ವಿಚಾರಕರ ಮೇಲ್ವಿಚಾರಣೆಯಲ್ಲಿ, ನಿಯೋಜಿಸಲಾದ ಬ್ಲಾಕ್ ಗಳಿಗೆ ಭೇಟಿ ನೀಡಿ ಮನೆ ಪಟ್ಟಿ ಮತ್ತು ವಸತಿ ಗಣತಿ ಹಾಗೂ ಮನೆಯಲ್ಲಿರುವ ಸೌಕರ್ಯಗಳ (ನೀರು, ವಿದ್ಯುತ್, ಮತ್ತಿತರ) ಆಸ್ತಿ ಮತ್ತು ಕಟ್ಟಡಗಳ ಸಂಪೂರ್ಣ ವಿವರಗಳನ್ನು ಕೇವಲ 15 ದಿನಗಳಲ್ಲಿಯೇ ಸಂಗ್ರಹಿಸಿ ಮೊದಲನೇ ಹಂತದ ಜನಗಣತಿಯ ಕಾರ್ಯವನ್ನು ಶೇ.100ರಷ್ಟು ಪೂರ್ಣಗೊಳಿಸಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಜನಗಣತಿ 2027 ಮೊದಲನೇ ಹಂತವನ್ನು ಪ್ರಥಮವಾಗಿ ಪೂರ್ಣಗೊಳಿಸಿದ ಹೆಗ್ಗಳಿಕೆಗೆ ಮುಲ್ಕಿ ನಗರ ಪಂಚಾಯತ್ ಪಾತ್ರವಾಗಿದೆ.

ದ.ಕ. ಡಿಸಿ ದರ್ಶನ್ ಎಚ್.ವಿ ಹಾಗೂ ಅಪರ ಜಿಲ್ಲಾಧಿಕಾರಿಗಳಾದ ರಾಜು ರವರು ಚಾರ್ಜ್ ಅಧಿಕಾರಿ ಮಧುಕರ್.ಕೆ ರವರಿಗೆ, ಗಣತಿದಾರರಿಗೆ, ಮೇಲ್ವಿಚಾರಕರಿರಿಗೆ ಫೀಲ್ಡ್ ತರಬೇತಿದಾರರಿಗೆ ಹಾಗೂ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಸುಬ್ರಹ್ಮಣ್ಯ ಶ್ರೀಮಠದಲ್ಲಿ ನೃಸಿಂಹ ದೇವರಿಗೆ ವಿಮಾನೋತ್ಸವ



ಸುಬ್ರಹ್ಮಣ್ಯ: ಜಗದ್ಗುರು ಶ್ರೀ ಮಧ್ವಾಚಾರ್ಯ ಮಹಾಸಂಸ್ಥಾನಮ್ ನ ಶ್ರೀ ಸಂಪುಟ ನರಸಿಂಹ ಸ್ವಾಮಿ ಸುಬ್ರಹ್ಮಣ್ಯ ಮಠದಲ್ಲಿ ನೃಸಿಂಹ ಜಯಂತಿ ಉತ್ಸವದ ಪ್ರಯುಕ್ತ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಗಳ ಉಪಸ್ಥಿತಿಯಲ್ಲಿ ಶ್ರೀ ದೇವರ ವಿಮಾನೋತ್ಸವ ಭಕ್ತಿ ಸಾಗರದಿಂದ ಗುರುವಾರ ರಾತ್ರಿ ನಡೆಯಿತು.

ಮಂಟಪೋತ್ಸವ

ರಾತ್ರಿ ಮಹಾಪೂಜೆಯ ಬಳಿಕ ಶ್ರೀ ದೇವರ ಹೊರಾಂಗಣ ಉತ್ಸವಗಳು ಆರಂಭವಾಯಿತು. ಆರಂಭದಲ್ಲಿ ಬಂಡಿ ಉತ್ಸವ ಮತ್ತು ವಸಂತಪೂಜೆ ನಡೆಯಿತು. ನಂತರ ಮಂತ್ರಘೋಷ, ನಾಮಸಂಕೀರ್ತನೆ, ಭಜನೆ, ನಾದಸ್ವರ, ಸ್ಯಾಕ್ಸೋಫೋನ್, ಚೆಂಡೆ ಸುತ್ತುಗಳು ನೆರವೇರಿತು. ಬಳಿಕ ರಾಜಬೀದಿಯಲ್ಲಿ ದೇವರ ರಥೋತ್ಸವ ನಡೆಯಿತು. ಕಾಶಿಕಟ್ಟೆಗೆ ಶ್ರೀ ದೇವರು ಆಗಮಿಸಿ ಅಲ್ಲಿ ಪೂಜೆ ಸ್ವೀಕರಿಸಿದರು. ಶ್ರೀ ಮಠಕ್ಕೆ ದೇವರು ಆಗಮಿಸಿದ ಬಳಿಕ ಸುಬ್ರಹ್ಮಣ್ಯ ಶ್ರೀಗಳು ನೃಸಿಂಹ ದೇವರಿಗೆ ಮಂಟಪೋತ್ಸವ ನೆರವೇರಿಸಿದರು. ಅರ್ಚಕ ವೇದಮೂರ್ತಿ ಶ್ರೀಕರ ಉಪಾಧ್ಯಾಯರು ಉತ್ಸವದ ವಿಧಿ ವಿಧಾನಗಳನ್ನು ನೆರವೇರಿಸಿದರು.

ಶ್ರೀ ಮಠದ ದಿವಾನ ಸುದರ್ಶನ ಜೋಯಿಸ, ಪ್ರಮುಖರಾದ ಕೆ. ಯಜ್ಞೇಶ್ ಆಚಾರ್, ಶ್ರೀಕೃಷ್ಣಶರ್ಮ, ಸುಹಾಸ್ ಉಪಾಧ್ಯಾಯ ದೇವರಗದ್ದೆ, ರವೀಂದ್ರ ಭಟ್, ವಿದ್ವಾನ್ ಸಗ್ರಿ ಆನಂದ ತೀರ್ಥ, ವಿದ್ವಾನ್ ಕಿರಣ್ ಆಚಾರ್ಯ ಮತ್ತಿತರರು ಉಪಸ್ಥಿತರಿದ್ದರು.

ಮೇ 9ಕ್ಕೆ ಪಂಜ ಪ್ರಾಥಮಿಕ ಸಹಕಾರ ಸಂಘದ ನೂತನ ಶಾಖೆಯ ಉದ್ಘಾಟನೆ



ಸುಳ್ಯ: ಪಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಶಾಖೆಯ ನೂತನ ಕಟ್ಟಡ ಲೋಕಾರ್ಪಣೆ ಹಾಗೂ ಬೀಳ್ಕೊಡುಗೆ ಸಮಾರಂಭವು ಮೇ 9ರ ಶನಿವಾರ ಕಲ್ಲೇಗ ಪೂವಣಿ ಹೆಗ್ಡೆ ಸಭಾಭವನದಲ್ಲಿ ನಡೆಯಲಿದ್ದು ಈ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಗುರುವಾರ ಪಂಜ ಕಚೇರಿಯಲ್ಲಿ ನಡೆಯಿತು.

ಸಂಘದ ಕೇನ್ಯ ಶಾಖೆಯ ನೂತನ ಕಟ್ಟಡದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸಹಕಾರ ಮರಾಟ ಮಹಾಮಂಡಳ ಅಧ್ಯಕ್ಷ ಹಾಗೂ ದ.ಕ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ನೆರವೇರಿಸಲಿದ್ದಾರೆ. ಶ್ರೀ ವಿಷ್ಣು ಸಭಾಭವನ ಕೇನ್ಯ ಇದರ ಉದ್ಘಾಟನೆಯನ್ನು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ನೆರವೇರಿಸಲಿದ್ದು ಪ್ರಾ.ಕೃ.ಸ ಸಂಘ ಅಧ್ಯಕ್ಷ ಚಂದ್ರಶೇಖರ ಶಾಸ್ತ್ರಿ ಅಧ್ಯಕ್ಷತೆ ವಹಿಸಲಿದ್ದಾರೆ. ಅಭಿನಂದನಾ ಮಾತುಗಳನ್ನು ಚಾಕೆ ಮಾಧವ ಗೌಡ ನೆರವೇರಿಸಲಿದ್ದಾರೆ. ದ.ಕ. ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು ಗೋದಾಮು, ಕ್ಯಾಮ್ಕೊ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಭದ್ರತಾ ಕೋಠಡಿಯನ್ನು, ನಿತ್ಯಾನಂದ ಮುಂಡೋಡಿ ವಸತಿಗೃಹದ ಉದ್ಘಾಟನೆ ನೆರವೇರಿಸಲಿದ್ದಾರೆ. ಎಸ್. ಎನ್. ಮನ್ಮಥ, ರಘು ಎಸ್.ಎಂ. ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ನೇಮಿರಾಜ ಪಲ್ಲೋಡಿ ಅವರಿಗೆ ಬೀಳ್ಕೊಡುಗೆ ಕಾರ್ಯಕ್ರಮವು ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಚಂದ್ರಶೇಖರ ಶಾಸ್ತ್ರೀ ಈ ಸಂದರ್ಭ ತಿಳಿಸಿದ್ದಾರೆ.

ಭಜನೆಯಿಂದ ಒಗ್ಗಟ್ಟು, ಸಂಘಟನೆ ಬಲಗೊಳ್ಳುತ್ತದೆ: ಶಾಸಕ ಪೂಂಜ ವಿಶ್ವಾಸ



ಬಂಟ್ವಾಳ: ಕುಕ್ಕಳ ಗ್ರಾಮದ ಮಂಜಲಪಲ್ಕೆ ಶ್ರೀ ಜೈ ಹನುಮಾನ್ ಭಜನ ಮಂದಿರದ 19ನೇ ವಾರ್ಷಿಕೋತ್ಸವ ಹಾಗೂ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ಧಾರ್ಮಿಕ ಸಭೆ, ಸಾಧಕರಿಗೆ ಸನ್ಮಾನ ನಡೆಯಿತು.

ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಭಾಗವಹಿಸಿ ಮಾತನಾಡಿ, ಭಜನಾ ಮಂದಿರದ ಮೂಲಕ ಯುವಕರು ಸಂಘಟಿತರಾಗಿ ಧರ್ಮ ರಕ್ಷಣೆ, ದೇಶ ರಕ್ಷಣೆಯ ಕಾರ್ಯ ಕೈಗೊಂಡಿರುವುದು ಶ್ಲಾಘನೀಯ. ಭಜನೆಯಿಂದ ಒಗ್ಗಟ್ಟು, ಸಂಘಟನೆ ಬಲಗೊಳ್ಳುತ್ತದೆ ಎಂದರು.

ಮಡಂತ್ಯಾರು ಜೆಸಿಐ ಅಧ್ಯಕ್ಷೆ ಸಾಯಿ ಸುಮಾ ನಾವಡ ಕಾರಿಂಜ ಕಾರ್ಯಕ್ರಮ ಉದ್ಘಾಟಿಸಿ, ನಮ್ಮ ಧರ್ಮ, ಸಂಸ್ಕೃತಿಯನ್ನು ಉಳಿಸುವ ಕಾರ್ಯವಾಗಬೇಕು. ಈ ನಿಟ್ಟಿನಲ್ಲಿ ಹಿರಿಯರು ಮಕ್ಕಳಿಗೆ ಧಾರ್ಮಿಕ ಚಿಂತನೆಯ ಅರಿವು ಮೂಡಿಸಲಿ ಎಂದರು.

ಧಾರ್ಮಿಕ ಮುಖಂಡ ಕಿರಣ್‌ಚಂದ್ರ ಪುಷ್ಪಗಿರಿ ಮಾತನಾಡಿ, ಅಯೋಧ್ಯೆಯಲ್ಲಿ ಶ್ರೀ ರಾಮಚಂದ್ರನ ಭವ್ಯ ಮಂದಿರ ನಿರ್ಮಾಣವಾದ ಕಾಲಘಟ್ಟದಲ್ಲಿ ಇಲ್ಲಿ ಜೈ ಹನುಮಾನ್ ಭಜನ ಮಂದಿರದಲ್ಲಿ ನಿರಂತರವಾಗಿ ಧರ್ಮಕಾರ್ಯಗಳು ನಡೆಯುತ್ತಿರುವುದು ಅಭಿನಂದನೀಯ ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಧರ್ಣಪ್ಪ ಗೌಡ ಹಟತ್ತೋಡಿ ಅಧ್ಯಕ್ಷತೆ ವಹಿಸಿದ್ದರು. ಮಡಂತ್ಯಾರು ವಾಣಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ನಿರ್ದೇಶಕಿ ಭವಾನಿ ಕಾಂತಪ್ಪ ಗೌಡ, ರಂಗ ನಿರ್ದೇಶಕ ರತ್ನದೇವ ಪುಂಜಾಲಕಟ್ಟೆ, ಪುಂಜಾಲಕಟ್ಟೆ ಶ್ರೀ ಮುರುಘೇಂದ್ರ ವನಿತಾ ಸಮಾಜ ಅಧ್ಯಕ್ಷೆ ನವೀನ ಶೆಟ್ಟಿಗಾರ್, ಸ್ಥಳದಾನಿ ಲಿಂಗಪ್ಪ ನಾಯಕ್, ಮಹಿಳಾ ಭಜನಾ ಮಂಡಳಿ ಅಧ್ಯಕ್ಷೆ ಹೇಮಾವತಿ ಗೌಡ ಇದ್ದರು. ಈ ಸಂದರ್ಭ ಶಿಕ್ಷಣ ಕ್ಷೇತ್ರದ ಸಾಧಕ ಸುಶೀಲಾ, ಮಲ್ಲಿಕಾ ಮೋಹನ್, ಉಮಾ ಡಿ.ಗೌಡ ಅವರನ್ನು ಸನ್ಮಾನಿಸಲಾಯಿತು. ಸಮಿತಿ ಅಧ್ಯಕ್ಷ ಸಂದೀಪ್ ಹಟ್ಟತ್ತೋಡಿ ಅವರು ಸ್ವಾಗತಿಸಿ, ಕಾರ್ಯದರ್ಶಿ ಶರತ್ ಗೌಡ ವಂದಿಸಿದರು. ಕಿಶೋರ್ ಮಂಜಲಪಲ್ಕೆ ನಿರೂಪಿಸಿದರು. ಬೆಳಗ್ಗೆ ಭಜನೆ, ಶ್ರೀ ಸತ್ಯನಾರಾಯಣ ಪೂಜೆ, ಪ್ರಸಾದ ವಿತರಣೆ, ಸಂಜೆ ಭಜನೆ, ರಾತ್ರಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, 'ಎಲ್ಲೆದಾದ ಏರೆಗ್ ಗೊತ್ತು ' ತುಳು ನಾಟಕ ಪ್ರದರ್ಶನ ನಡೆಯಿತು.



ಶಿವಮೊಗ್ಗ ಜಿಲ್ಲೆಯ ಕಾರ್ಗಲ್‌ನಲ್ಲಿ ಬಂಟ್ವಾಳ ತಾಲೂಕಿನ ಶಂಬೂರಿನ ಪ್ರವಾಸಿಗರಿದ್ದ ಬಸ್ ಮಗುಚಿಬಿದ್ದ ಘಟನೆಯಲ್ಲಿ ತನ್ನ ಕೈ ಕಳೆದುಕೊಂಡ ಯಶೋಧ ಕಮಲಾಕ್ಷ ಅವರಿಗೆ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ ಕೃತಕ ಕೈ ವಿತರಿಸಿದರು.ಈ ಸಂದರ್ಭದಲ್ಲಿ ಆನಂದ ಶಂಭೂರು, ಯಶೋಧರ ಕರ್ಬೆಟ್ಟು ಉಪಸ್ಥಿತರಿದ್ದರು.



ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅತೀ ಹೆಚ್ಚು ಮಾನವ ದಿನ ಸೃಜಿಸಿದ ಬಂದಾರು ಗ್ರಾಮ ಪಂಚಾಯತ್ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪ್ರಶಸ್ತಿ ಪಡೆದಿದೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ನರ್ವಡೆ ವಿನಾಯಕ ಕಾರ್ಭಾರಿ , ಮಾಜಿ ಸಚಿವರಾದ ಅಭಯಚಂದ್ರ ಜೈನ್,ಬೆಳ್ತಂಗಡಿ ತಾ.ಪಂ. ಕಾರ್ಯನಿರ್ವಾಣಾಧಿಕಾರಿ ಎನ್.ಭವಾನಿ ಶಂಕರ್ ಹಾಗೂ ಇನ್ನಿತರ ಗಣ್ಯರು ಪ್ರಶಸ್ತಿ ಹಸ್ತಾಂತರಿಸಿದರು ಬಂದಾರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪುರುಷೋತ್ತಮ,ಮಾಜಿ ಅಧ್ಯಕ್ಷ ದಿನೇಶ್ ಗೌಡ ಖಂಡಿಗ, ಸಿಬ್ಬಂದಿಗಳಾದ ಶಾಂತಿ, ಪ್ರವೀಣ್ ಹಾಗೂ ದಿನಕರ್ ಇವರುಗಳು ಪ್ರಶಸ್ತಿ ಸ್ವೀಕರಿಸಿ ಉಪಸ್ಥಿತರಿದ್ದರು.

ಉಪ್ಪಿನಂಗಡಿ ಚಂದ್ರನಾಥ ಸ್ವಾಮಿ ಬಸದಿ ಪುನರ್ ಪ್ರತಿಷ್ಠಾ ಮಹೋತ್ಸವ, ಧಾರ್ಮಿಕ ಸಭೆ | ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಹೇಳಿಕೆ

1.10 ಕೋ.ರೂ. ಒದಗಿಸುವ ಮೂಲಕ ಜೈನ ಸಮುದಾಯದ ಬೇಡಿಕೆಗಳಿಗೆ ಸ್ಪಂದಿಸಲಾಗಿದೆ

ಉಪ್ಪಿನಂಗಡಿ: ಕೇವಲ ನಾಲ್ಕು ಜೈನ ಮನೆಗಳಿರುವ ಉಪ್ಪಿನಂಗಡಿಯಲ್ಲಿ ಸರ್ವಾಂಗ ಸುಂದರವಾದ ಬಸದಿಯನ್ನು ನಿರ್ಮಿಸಲು ಸರಕಾರದಿಂದ 1.10 ಕೋಟಿ ರೂಪಾಯಿ ಒದಗಿಸುವ ಮೂಲಕ ಜೈನ ಸಮುದಾಯದ ಭಾವನೆಗಳಿಗೆ ಸ್ಪಂದಿಸಲಾಗಿದೆ ಎಂದು ಶಾಸಕ ಅಶೋಕ್ ಕುಮಾರ್ ರೈ ತಿಳಿಸಿದರು.

ಅವರು ಮೇ 1ರ ಶುಕ್ರವಾರ ಉಪ್ಪಿನಂಗಡಿ ಗಾಂಧಿ ಪಾರ್ಕ್ ಎಂಬಲ್ಲಿ ಹೆದ್ದಾರಿ ಪಾರ್ಶ್ವದಲ್ಲಿ ಪುನರ್ ನಿರ್ಮಿತಕದಿಕಾರು ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ಏಕಶಿಲಾ ಚತುರ್ಮುಖ ಮಾನಸ್ತಂಭೋಪರಿ ಶ್ರೀ ಜಿನಬಿಂಬಗಳ ಪಂಚಕಲ್ಯಾಣ ಹಾಗೂ ಧಾಮ ಸಂಪ್ರೋಕ್ಷಣಾಪೂರ್ವಕ ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಹಾಗೂ ಮಹಾಮಾತೆ ಶ್ರೀ ಪದ್ಮಾವತೀ ದೇವಿ ಬಿಂಬಗಳ ಪುನರ್ ಪ್ರತಿಷ್ಠಾ ಮಹೋತ್ಸವದ 3ನೇ ದಿನದ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಶಾಂತಿಯನ್ನೇ ಧ್ಯೇಯವಾಗಿರಿಸಿಕೊಂಡ ಜೈನ ಧರ್ಮ ಸಿದ್ಧಾಂತಗಳು ಸಕಲ ಜೀವರಾಶಿಯ ಹಿತವನ್ನು ಬಯಸುತ್ತಿದ್ದು, ಅದರದ್ದೇ ಆದ ಮೌಲ್ಯವನ್ನು ಹೊಂದಿದೆ ಎಂದರು. ಇನ್ನು ಮುಂದಕ್ಕೂ ಈ ಬಸದಿಯ ಅಭಿವೃದ್ಧಿ ಕಾರ್ಯಕ್ಕೆ ಸರಕಾರದ ಸಹಕಾರ ಬೇಕಾದಲ್ಲಿ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಪ್ರಸ್ತಾವಿಕ ಮಾತುಗಳನ್ನಾಡಿದ ಭರತ್ ರಾಜ್ ಜೈನ್ ಮೂಡಾರು, ಒಂದೆಡೆ ನೀರವರತೆಯ ಭೂಮಿ, ಇನ್ನೊಂದೆಡೆ ಜೌಗು ಪ್ರದೇಶ ,ಮತ್ತೊಂದೆಡೆ ಭಾರಿ ವಾಹನಗಳ ಸಂಚಾರವಿರುವ ಹೆದ್ದಾರಿ, ಈ ಎಲ್ಲಾ ಸೂಕ್ಷ್ಮತೆಯ ನಡುವೆ ಯಾವುದೇ ಬೌಗೋಳಿಕ ಸೌಕರ್ಯವಿಲ್ಲದ ಇಲ್ಲಿನ ಜಾಗದಲ್ಲಿ ಬಸದಿಯ ನಿರ್ಮಾಣಕ್ಕೆ 40 ಅಡಿ ಆಳದಿಂದ ಮೊದಲುಗೊಂಡು ಮೂರು ಹಂತದಲ್ಲಿ ಭೂಮಿಯನ್ನು ಗಟ್ಟಿಗೊಳಿಸುವ ಕಾರ್ಯ ನಡೆಸಬೇಕಾಯಿತು. ಬಳಿಕ ಸರಕಾರದಿಂದ ಅಗತ್ಯ ಅನುದಾನ ಲಭಿಸಿ ಸುಂದರವಾಠ ಬಸದಿಯನ್ನು ನಿರ್ಮಿಸಲು ಸಾಧ್ಯವಾಯಿತ್ತೆಂದರು.

ಉದ್ಯಮಿ ಹಾಗೂ ಜೀರ್ಣೋದ್ದಾರ ಸಮಿತಿಯ ಅಧ್ಯಕ್ಷ ವಜ್ರಕುಮಾರ್ ಜೈನ್ ಅಧ್ಯಕ್ಷತೆಯಲ್ಲಿ ನಡೆದ ಈ ಸಭಾ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣ ಸಂಸ್ಥೆಯ ಅಧ್ಯಕ್ಷೆ ಲಾವಣ್ಯ ಬಲ್ಲಾಳ್ ಜೈನ್ , ಭಾರತೀಯ ಜೈನ್ ಮಿಲನ್ ವಲಯ 8ರ ಅಧ್ಯಕ್ಷ ಸುದರ್ಶನ್ ಜೈನ್ ಪಂಜಿಕಲ್ಲು, ವಾಸ್ತು ತಜ್ಞ ಸುದರ್ಶನ್ ಇಂದ್ರ ಪಾದೂರು, ಆಳ್ವ ಕನ್‌ಸ್ಟ್ರಕ್ಷನ್‌ನ ಧನಂಜಯ್ ಆಳ್ವ, ಪುತ್ತೂರು ಸಮವಸರಣದ ವಿ.ಕೆ. ಜೈನ್, ಜೀರ್ಣೋದ್ದಾರ ಸಮಿತಿಯ ಕಾರ್ಯಾಧ್ಯಕ್ಷ ಧನ್ಯ ಕುಮಾರ್ ರೈ, ಬಸದಿಯ ಸ್ಥಳದಾನಿಗಳಾದ ಪದ್ಮನಾಭ ಚಕ್ರವರ್ತಿ, ವಜ್ರ ಕುಮಾರ್ ಇಂದ್ರ ಉಪಸ್ಥಿತರಿದ್ದರು.

ಡಾ. ಸುವೀರ್ ಜೈನ್ ನಿರೂಪಿಸಿದರು. ಮಿತ್ರಸೇನ್ ಜೈನ್ ಸ್ವಾಗತಿಸಿ, ನಿರನ್ ಜೈನ್ ವಂದಿಸಿದರು. ನವೀನ್ ಪಡಿವಾಳ್ ಪ್ರಾರ್ಥಿಸಿದರು. ಶುಕ್ರವಾರದಂದು ಬಸದಿಯಲ್ಲಿ ಜಿನಬಾಲಕನ ಜನ್ಮ ಕಲ್ಯಾಣ, ಅಷ್ಟ ದಿಕ್ಪು ಧಾಮ ಸಂಪ್ರೋಕ್ಷಣೆ, ಚತುರ್ದಿಕ್ಪು ಹೋಮ, ಗ್ರಹ ಯಜ್ಞ ವಿಧಾನ ,ಜಲಾಗ್ನಿ ಹೋಮ, ಪಾಂಡುಕಾಶಿ ಲೋಪರಿ 108 ಕಲಶಗಳಿಂದ ಜಿನ ಬಾಲಕನ ಜನ್ಮಅಭಿಷೇಕ, , ನಾಮಕರಣ, ಬಾಲಲೀಲಾ ಮಹೋತ್ಸವ , ಪಂಚ ಕಲ್ಯಾಣ ಆರಾಧನಾ ವಿಧಾನ ,ಯಾಗ ಮಂಡಲ ಆರಾಧಾನಾ ವಿಧಾನ, ಶ್ರೀ ಸ್ವಾಮಿಗೆ ನವಕಲಶಾಭಿಷೇಕ,ಮಹಾಮಂಗಳಾರತಿ, ಶ್ರೀ ಜಿನ ಗಂಧೋಧಕ ನಡೆಯಿತು. ಸಮಾರಂಭದಲ್ಲಿ ಪಂಚಕಲ್ಯಾಣ ಸಮಿತಿ ಅಧ್ಯಕ್ಷ ವಿಧ್ಯಾಧರ ಜೈನ್ , ಕಾರ್ಯದರ್ಶಿ ಶಾಂತಿಪ್ರಕಾಶ್, ಸಮಿತಿಯ ಸದಸ್ಯರಾದ ಪ್ರಶಾಂತ್ ಜೈನ್ ಬಾರ್ಯ, ಅನುದೀಪ್ ರೈ, ಸುಭಾಶ್ ಜೈನ್, ನಿರಂಜನ್ ಕೊಂಡೆ, ಪಾರ್ಶ್ವನಾಥ್ ನೆಲ್ಯಾಡಿ, ಸಮಂತ್ ನೆಲ್ಯಾಡಿ, ಮಹೇಶ್ ಪಡಿವಾಳ, ಪಾರ್ಶ್ವನಾಥ ಜೈನ್ , ಪುನಿತ್ ನೆಲ್ಯಾಡಿ, ಉದಯ ಕುಮಾರ್ ಜೈನ್, ಅಭಯ್ ಜೈನ್, ವಿಜೇತ್ ಜೈನ್, ಸಂಪತ್ ಕುಮಾರ್ ಅಲಂಕಾರು, ಸನ್ಮತಿ ಹೆಗ್ಡೆ, ಸತೀಶ್ ಪಡಿವಾಳ್, ಮೊದಲಾದವರು ಭಾಗವಹಿಸಿದ್ದರು.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಿಮ್ಮೂರಿನ ಸುದ್ದಿ

ಹೊಸ ದಿಗಂತ ಸಂಗಮ 3

ಶನಿವಾರ 02, ಮೇ 2026

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಸುತ್ತಮುತ್ತ

ಇಂದು, ನಾಳೆ ಕಯ್ಯಾರು ಮಹಿಳಾ ಯಕ್ಷಕೂಟ ಕೇಂದ್ರದ ವಾರ್ಷಿಕೋತ್ಸವ

ಉಪ್ಪಳ: ಮಹಿಳಾ ಯಕ್ಷಕೂಟ ಹಾಗೂ ಬಾಲ ಕಲಾವಿದರ ಯಕ್ಷ ಕಲಾ ಕೇಂದ್ರ ಪೊನ್ನೆತ್ತೋಡು ಕಯ್ಯಾರು ಈ ಎರಡೂ ತರಬೇತಿ ಕೇಂದ್ರದ 11ನೇ ವಾರ್ಷಿಕೋತ್ಸವವು ಮೇ 2 ಹಾಗೂ 3ರಂದು ಬಂದ್ಯೋಡು ಅಡ್ಕ ಭಗವತೀ ನಗರ ಶ್ರೀ ಭಗವತೀ ಕೃಪಾ ವೀರಾಂಜನೇಯ ವ್ಯಾಯಾಮ ಶಾಲೆಯಲ್ಲಿ ಜರಗಲಿದೆ. ಮೇ 2ರಂದು ಬೆಳಿಗ್ಗೆ 10 ಗಂಟೆಗೆ ವಾರ್ಷಿಕೋತ್ಸವದ ಉದ್ಘಾಟನೆ, 11ಕ್ಕೆ ಮಹಿಳಾ ಯಕ್ಷಕೂಟದ ಸದಸ್ಯರಿಂದ ಇಂದ್ರಜಿತು ಕಾಳಗ ಯಕ್ಷಗಾನ ತಾಳಮದ್ದಳೆ, ಅಪರಾಹ್ನ 3ಕ್ಕೆ ಪೂರ್ವರಂಗ ವೈಭವ ಹಾಗೂ ಸಂಜೆ 5ರಿಂದ ಬಾಲ ಕಲಾವಿದರ ಕೇಂದ್ರದ ವಿದ್ಯಾರ್ಥಿಗಳಿಂದ ಕೃಷ್ಣಲೀಲೆ ಅಗ್ರಪೂಜೆ ಯಕ್ಷಗಾನ ಬಯಲಾಟ ನಡೆಯಲಿದೆ. ಮೇ 3 ರಂದು ಬೆಳಗ್ಗೆ 10ಕ್ಕೆ ಪ್ರಸಿದ್ಧ ಮಹಿಳಾ ಕಲಾವಿದರಿಂದ ಸಮರ ಸೌಗಂಧಿಕಾ ಯಕ್ಷಗಾನ ತಾಳಮದ್ದಳೆ, ಅಪರಾಹ್ನ 2ರಿಂದ ಶ್ರೀ ಹರಿ ಬಾಲಗೋಕುಲದ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಕಾರ್ಯಕ್ರಮ, 3ಗಂಟೆಗೆ ಜರಗುವ ಸಮಾರೋಪ ಸಮಾರಂಭವನ್ನು ಎಡನೀರು ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಉದ್ಘಾಟಿಸಿ ಆಶೀರ್ವಚನ ನೀಡುವರು. ಕೊಡುಗೈದಾನಿ ಇ.ಎಸ್.ಮಹಾಬಲೇಶ್ವರ ಭಟ್ ಎಡಕ್ಕಾನ ಅಧ್ಯಕ್ಷತೆ ವಹಿಸಲಿದ್ದಾರೆ. 2026ನೇ ಸಾಲಿನ ಯಕ್ಷ ಕಯ್ಯಾರು ಪ್ರಶಸ್ತಿಯನ್ನು ಪುತ್ತಿಗೆ ರಘುರಾಮ ಹೊಳ್ಳರಿಗೆ ಪ್ರದಾನ ಮಾಡಲಾಗುವುದು. ಜೊತೆಗೆ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ, ಗೌರವಾರ್ಪಣೆ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 6 ಗಂಟೆಗೆ ಬಾಲ ಕಲಾವಿದರ ಕೇಂದ್ರದ ವಿದ್ಯಾರ್ಥಿಗಳಿಂದ ವೀರಾಂಜನೇಯ ಯಕ್ಷಗಾನ ಪ್ರದರ್ಶನಗೊಳ್ಳಲಿದೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ಪೊನ್ನಂಪೇಟೆಯ 66/11ಕೆವಿ ವಿದ್ಯುತ್ ವಿತರಣಾ ಉಪಕೇಂದ್ರದಿಂದ ಹೊರಹೊಮ್ಮುವ ಎಫ್11 ಕೋಟೂರು ಹಾಗೂ ಎಫ್15 ಬೆಕ್ಕೆಸೊಡ್ಲೂರು ಫೀಡರ್'ನಲ್ಲಿ ಮೇ 2 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ತುರ್ತು ನಿರ್ವಹಣೆ ಕಾಮಗಾರಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಈ ಮಾರ್ಗದಿಂದ ವಿದ್ಯುತ್ ಸರಬರಾಜಾಗುವ ತೂಚಮಕೇರಿ, ಬಲ್ಯಮಂಡೂರು, ಚಿಕ್ಕಮಂಡೂರು, ಕೋಟೂರು, ಮುಗುಟಗೇರಿ, ಬೆಕ್ಕೆಸೊಡ್ಲೂರು, ಬಲ್ಯಮಂಡೂರು, ಕೋತೂರು, ಕಾನೂರು, ವಡ್ಡರಮಾಡು, ನಿಡುಗುಂಬ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯ ನಿರ್ವಾಹಕ ಎಂಜಿನಿಯರ್ ಅವರು ತಿಳಿಸಿದ್ದಾರೆ.

ನಾಳೆ ಕ್ರಿಕೆಟ್ ಪಂದ್ಯಾಟ

ಬೆಳ್ತಂಗಡಿ: ಶ್ರೀ ಸೋಮನಾಥೇಶ್ವರಿ ಕ್ರಿಕೇಟರ್ಸ್ ಅಳದಂಗಡಿ ಇವರ ಆಶ್ರಯದಲ್ಲಿ ಮೇ 3 ರಂದು ಬೆಳಿಗ್ಗೆ 9 ರಿಂದ ಅಳದಂಗಡಿ ಮೈದಾನದಲ್ಲಿ ವಿಪ್ರ ಬಾಂಧವರಿಗಾಗಿ 12 ತಂಡಗಳ ಅಂಡರ್ ಆರ್ಮ್ಸ್ ಮಾದರಿಯ ಕ್ರಿಕೇಟ್ ಪಂದ್ಯಾಟ ಶ್ರೀ ಸೋಮನಾಥೇಶ್ವರಿ ಕಪ್ 2026 ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಅಯ್ಯಪ್ಪ ಸೇವಾ ಸಮಾಜ ಜಿಲ್ಲಾ ಸಮ್ಮೇಳನ

ಬದಿಯಡ್ಕ: ಶಬರಿಮಲೆ ಶ್ರೀ ಅಯ್ಯಪ್ಪ ಸೇವಾ ಸಮಾಜ ಕಾಸರಗೋಡು ಜಿಲ್ಲಾ ಸಮ್ಮೇಳನವು ಮೇ 3ರಂದು ಬೆಳಗ್ಗೆ 9 ಗಂಟೆಗೆ ಉದಯಗಿರಿ ಶ್ರೀ ಅಯ್ಯಪ್ಪ ಮಂದಿರ ಪರಿಸರದಲ್ಲಿ ನಡೆಯಲಿದೆ. ಸಮ್ಮೇಳನದಲ್ಲಿ ಸೇವಾ ಸಮಾಜದ ತಾಲೂಕು, ಜಿಲ್ಲಾ ಪದಾಧಿಕಾರಿಗಳು, ಗುರುಸ್ವಾಮಿಗಳು, ಅಯ್ಯಪ್ಪ ಭಕ್ತರು ಭಾಗವಹಿಸುವರು.

ಡಿಪ್ಲೋಮಾ ಪ್ರವೇಶಾತಿ : ಅರ್ಜಿ ಆಹ್ವಾನ

ಉಡುಪಿ: ಪ್ರಸಕ್ತ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಾತಿಗಾಗಿ ಎಸ್ಸೆಸ್ಸೆಲ್ಸಿ, ಪಿ.ಯು.ಸಿ ಹಾಗೂ ಐ.ಟಿ.ಐ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ಶೇ. 35 ರಷ್ಟು ಅಂಕ ಪಡೆದಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಉಡುಪಿಯ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳು ಸಂಸ್ಥೆಯಲ್ಲಿ ಆಫ್ ಲೈನ್ ಮೂಲಕ ಅರ್ಜಿಯನ್ನು ಪಡೆದು, ಮೇ 18 ರ ಒಳಗಾಗಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ ದೂ.ಸಂಖ್ಯೆ: 0820-2570244 ಅನ್ನು ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಾಚಾರ್ಯರ ಕಚೇರಿ ಪ್ರಕಟಣೆ ತಿಳಿಸಿದೆ.

ಸಾರ್ವಜನಿಕರ ಭೇಟಿಗೆ ಶಾಸಕ ಕೋಟ್ಯಾನ್ ಲಭ್ಯ

ಮುಲ್ಕಿ: ಶಾಸಕ ಉಮಾನಾಥ್ ಎ. ಕೋಟ್ಯಾನ್ ರವರು ಮೇ 2 ರಂದು ಬೆಳಿಗ್ಗೆ 10 ರಿಂದ 11 ಗಂಟೆ ವರೆಗೆ ಸಾರ್ವಜನಿಕ ಭೇಟಿಗೆ ಲಭರಿದ್ದಾರೆಂದು ಮುಲ್ಕಿ ಸೇವಕ ಕಚೇರಿ ಪ್ರಜಾ ಸೌಧದ ಪ್ರಕಟಣೆ ತಿಳಿಸಿದೆ

ಪಂಚ ಗ್ಯಾರಂಟಿ ಪ್ರಗತಿ ಪರಿಶೀಲನಾ ಸಭೆ

ಪುತ್ತೂರು: ತಾಲೂಕು ಮಟ್ಟದ ಪಂಚ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಉಮಾನಾಥ ಶೆಟ್ಟಿ ರವರ ಅಧ್ಯಕ್ಷತೆಯಲ್ಲಿ ಪುತ್ತೂರು ತಾಲೂಕು ಮಟ್ಟದ ಪಂಚ ಗ್ಯಾರಂಟಿ ಪ್ರಗತಿ ಪರಿಶೀಲನಾ ಸಭೆಯು ಪುತ್ತೂರು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ದ.ಕ ಜಿಲ್ಲಾ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷ ಜೋಕಿಮ್ ಡಿಸೋಜ ತಾಲೂಕು ಪಂಚಾಯತ್ ಕಾರ್ಯನಿರ್ವಾಹನಾಧಿಕಾರಿ/ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನವೀನ್ ಭಂಡಾರಿ ಹಾಗೂ ಪುತ್ತೂರು ತಾಲೂಕು ಪ್ರಾಧಿಕಾರದ ಸದಸ್ಯರು ಸೇರಿದಂತೆ ಪಂಚ ಗ್ಯಾರಂಟಿ ಅನುಷ್ಠಾನದ ಎಲ್ಲಾ ಇಲಾಖಾಧಿಕಾರಿ ಉಪಸ್ಥಿತರಿದ್ದರು.

ಉಡುಪಿಗೆ ಹೆಚ್ಚಿದ ಪ್ರವಾಸಿಗರ ಲಗ್ಗೆ। ಕಡಲಬ್ಬರಕ್ಕೆ ಬಂದಿದೆ ಹೊಸಕಳೆ

ರಜೆಯ ಮೋಜಿನ ನಡುವೆ ಸವಾಲಾಗಿದೆ ತ್ಯಾಜ್ಯ ನಿರ್ವಹಣೆ

ಉಡುಪಿ: ಏಪ್ರಿಲ್ ಮತ್ತು ಮೇ ತಿಂಗಳ ಬಿಸಿಲ ಬೇಗೆಯ ನಡುವೆಯೂ ಕರಾವಳಿಯ ತಂಪು ಗಾಳಿಯ ಆಸ್ವಾದನೆಗೆ ಪ್ರವಾಸಿಗರು ದಂಡು ದಂಡಾಗಿ ಆಗಮಿಸುತ್ತಿದ್ದಾರೆ. ಶಾಲಾ-ಕಾಲೇಜುಗಳಿಗೆ ವರ್ಷಾಂತ್ಯದ ರಜೆ ಇರುವುದು ಮತ್ತು ಮೇ 1ರ ಕಾರ್ಮಿಕರ ದಿನಾಚರಣೆಯೊಂದಿಗೆ ವಾರಾಂತ್ಯದ ರಜೆಗಳು ಸಾಲಾಗಿ ಬಂದಿರುವುದು ಉಡುಪಿ ಜಿಲ್ಲೆಯ ಪ್ರವಾಸೋದ್ಯಮಕ್ಕೆ ಹೊಸ ಕಳೆ ತಂದಿದೆ. ಮಲ್ಪೆ, ಕಾಪು, ಪಡುಬಿದ್ರಿ ಹಾಗೂ ಮರವಂತೆ ಬೀಚ್‌ಗಳಲ್ಲಿ ಜನವೋ ಜನ ಎಂಬಂತ ಪರಿಸ್ಥಿತಿ ನಿರ್ಮಾಣವಾಗಿದೆ.



ಮಿತಿ ಮೀರಿದ ಜನಸಂದಣಿ

ಕೇವಲ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ ನೆರೆ ರಾಜ್ಯಗಳಿಂದಲೂ ಸಾವಿರಾರು ಪ್ರವಾಸಿಗರು ಖಾಸಗಿ ವಾಹನ ಹಾಗೂ ಬಸ್ಸುಗಳ ಮೂಲಕ ಉಡುಪಿಗೆ ಹರಿದು ಬರುತ್ತಿದ್ದಾರೆ. ಮುಂಜಾನೆಯಿಂದಲೇ ಆರಂಭವಾಗುವ ಪ್ರವಾಸಿಗರ ದಟ್ಟಣೆ ತಡರಾತ್ರಿಯವರೆಗೂ ಮುಂದುವರಿಯುತ್ತಿದೆ. ಮಲ್ಪೆಯ ಸೀ ವಾಕ್, ಸೇಂಟ್ ಮೇರಿಸ್ ದ್ವೀಪ ಹಾಗೂ ಕಾಪುವಿನ ಲೈಟ್ ಹೌಸ್ ಭಾಗಗಳಲ್ಲಿ ಜನಸಂದಣಿ ಮಿತಿ ಮೀರಿದ್ದು ಹೋಟೆಲ್ ಹಾಗೂ ಹೋಂ ಸ್ಟೇಗಳು ಈಗಾಗಲೇ ಭರ್ತಿಯಾಗಿವೆ.

ಹೆಚ್ಚಿದ ತ್ಯಾಜ್ಯ, ಸ್ವಚ್ಛತೆಗಿಲ್ಲ ಮುಕ್ತಿ

ಬೀಚ್‌ಗಳಿಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದು ಒಂದೆಡೆಯಾದರೆ, ಇಲ್ಲಿನ ಸ್ವಚ್ಛತೆ ಕಾಪಾಡುವುದು ಈಗ ದೊಡ್ಡ ಸವಾಲಾಗಿದೆ. ಜಿಲ್ಲಾಡಳಿತ ಎಷ್ಟೇ ಜಾಗೃತಿ ಮೂಡಿಸಿದರೂ ಪ್ರವಾಸಿಗರು ಪ್ಲಾಸ್ಟಿಕ್ ಬಾಟಲಿಗಳು, ತಿಂಡಿ ಪೊಟ್ಟಣಗಳನ್ನು ಎಲ್ಲೆಂದರಲ್ಲಿ ಎಸೆಯುತ್ತಿದ್ದಾರೆ. ವಿಶೇಷವಾಗಿ ಸಮುದ್ರದ ಮರಳಿನ ಮೇಲೆ ಬಳಸಿದ ಡೈಪರ್ ಎಸೆಯುತ್ತಿರುವುದು ಕಡಲತೀರದ ಸೌಂದರ್ಯಕ್ಕೆ ಕಪ್ಪುಚುಕ್ಕೆಯಾಗಿದೆ. ಸಮುದ್ರಕ್ಕೆ ಸೇರುತ್ತಿರುವ ಈ ತ್ಯಾಜ್ಯಗಳು ಪರಿಸರ ಮೇಲೆ ಗಂಭೀರ ಪರಿಣಾಮವನ್ನು ಬೀರುತ್ತಿದ್ದು ಸ್ಥಳೀಯ ಸಂಸ್ಥೆಗಳು ಹಗಲಿರುಳು ಕೆಲಸ ಮಾಡಿದರೂ ಕಸದ ರಾಶಿಯನ್ನು ನಿಯಂತ್ರಿಸಲು ಇಲ್ಲಿ ಸಾಧ್ಯವಾಗುತ್ತಿಲ್ಲ.

ಕಾಪು ಬೀಚ್‌ನಲ್ಲಿ ಡಿಜಿಟಲ್ ಸುರಕ್ಷತೆ: 'ಟಕ್ಕಿಟ್' ಲಾಕರ್

ಕಾಪು ಬೀಚ್‌ಗೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಇತ್ತೀಚೆಗೆ 'ಟಕ್ಕಿಟ್' (Tuckit) ಡಿಜಿಟಲ್ ಬ್ಯಾಗೇಜ್ ಲಾಕರ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಸಮುದ್ರಕ್ಕೆ ಇಳಿಯುವಾಗ ಮೊಬೈಲ್, ಪರ್ಸ್, ಚಿನ್ನಾಭರಣ ಹಾಗೂ ಬ್ಯಾಗ್‌ಗಳ ಸುರಕ್ಷತೆಯ ಬಗ್ಗೆ ಆತಂಕ ಪಡುತ್ತಿದ್ದ ಪ್ರವಾಸಿಗರಿಗೆ ಇದು ವರದಾನವಾಗಿದೆ. ವಿವಿಧ ಗಾತ್ರದ ಈ ಲಾಕರ್‌ಗಳನ್ನು ಡಿಜಿಟಲ್ ರೂಪದಲ್ಲಿ ಬುಕ್ ಮಾಡಬಹುದಾಗಿದ್ದು, ಪ್ರವಾಸಿಗರು ತಮ್ಮ ಬೆಲೆಬಾಳುವ ವಸ್ತುಗಳನ್ನು ಇಲ್ಲಿ ಸುರಕ್ಷಿತವಾಗಿ ಇಟ್ಟು ನಿಶ್ಚಿಂತೆಯಿಂದ ಸಮುದ್ರದ ಅಲೆಗಳೊಂದಿಗೆ ಆಟವಾಡಬಹುದಾಗಿದೆ. ತಂತ್ರಜ್ಞಾನ ಆಧಾರಿತ ಈ ಸೌಲಭ್ಯಕ್ಕೆ ಪ್ರವಾಸಿಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಸುರಕ್ಷತೆ ಇನ್ನೂ ಸುಧಾರಿಸಬೇಕಿದೆ

ಪ್ರವಾಸಿಗರ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದರೂ, ಅದಕ್ಕೆ ಪೂರಕವಾದ ರಕ್ಷಣಾ ವ್ಯವಸ್ಥೆಗಳ ಕೊರತೆ ಎದ್ದು ಕಾಣುತ್ತಿದೆ. ಕೆಲವು ಕಡೆಗಳಲ್ಲಿ ಲೈಫ್ ಗಾರ್ಡ್‌ಗಳ ಸಂಖ್ಯೆ ಕಡಿಮೆ ಇರುವುದು ಮತ್ತು ಸಮುದ್ರ ಪ್ರಕ್ಷುಬ್ಧವಾಗಿರುವ ಜಾಗಗಳಲ್ಲಿ ಸರಿಯಾದ ಮುನ್ನೆಚ್ಚರಿಕೆ ಫಲಕಗಳಿಲ್ಲದಿರುವುದು ಆತಂಕಕ್ಕೆ ಕಾರಣವಾಗಿದೆ. ಪ್ರವಾಸಿಗರು ಆಕಸ್ಮಿಕವಾಗಿ ಅಪಾಯಕ್ಕೆ ಸಿಲುಕಿದರೆ ತಕ್ಷಣ ಸ್ಪಂದಿಸಲು ಬೇಕಾದ ಸುಧಾರಿತ ರಕ್ಷಣಾ ಉಪಕರಣಗಳು ಹಾಗೂ ಹೆಚ್ಚಿನ ಸಿಬ್ಬಂದಿಯ ನಿಯೋಜನೆ ಆಗಬೇಕಿದೆ.

ಎಳತ್ತೂರು ಫ್ರೆಂಡ್ಸ್ ಕ್ಲಬ್, ಮಹಿಳಾ ಘಟಕದ ವಾರ್ಷಿಕೋತ್ಸವ ಸಂಭ್ರಮ



ಕಿನ್ನಿಗೋಳಿ: ಸಂಘ ಸಂಸ್ಥೆಗಳು ಸಮಾಜಮುಖಿ ಕೆಲಸ ಕಾರ್ಯಮಾಡಿದಾಗ ಸಂಘಕ್ಕೂ ಗ್ರಾಮಕ್ಕೂ ಕೀರ್ತಿ ಬರುತ್ತದೆ ಎಂದು ಎಳತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ಸಂತೋಷ್ ಕುಮಾರ್ ಹೆಗ್ಡೆ ಹೇಳಿದ್ದಾರೆ. ಅವರು ಕಿನ್ನಿಗೋಳಿ ಎಳತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಠಾರದಲ್ಲಿ ಎಳತ್ತೂರು ಫ್ರೆಂಡ್ಸ್ ಕ್ಲಬ್ ಮತ್ತು ಮಹಿಳಾ ಘಟಕದ 15 ನೇ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡಿದರು. ಕವಿ ಶ್ರೀಧರ ಡಿ. ಎಸ್, ಯುಗಪುರುಷದ ಸಂಪಾದಕ ಭುವನಾಭಿರಾಮ ಉಡುಪ, ಮಾಜಿ ತಾಲೂಕು ಪಂಚಾಯತ್ ಸದಸ್ಯ ದಿವಾಕರ ಕರ್ಕೇರಾ, ಎಳತ್ತೂರು ಶ್ರೀ ಮಹಮ್ಮಾಯಿ ಹಾಗೂ ಕೋರ್ದಬ್ಬು ದೈವಸ್ಥಾನದ ಆಡಳಿತ ಮೊಕ್ತೇಸರ ಸುರೇಶ್ ಶೆಟ್ಟಿನಡಿಯಾಲಗುತ್ತು, ಶಾಂತಿನಗರ ಧರ್ಮಪರಿಪಾಲಾನ ಸಮಿತಿಯ ಅಧ್ಯಕ್ಷ ಕುಶಲ ಪೂಜಾರಿ, ರಾಮಚಂದ್ರ ಶೆಟ್ಟಿ ತಾಳಿಪಾಡಿಗುತ್ತು, ಕೇಶವ ದೇವಾಡಿಗ, ಫ್ರೆಂಡ್ಸ್ ಕ್ಲಬ್ ಅಧ್ಯಕ್ಷ ಪಾಂಡು ಪೂಜಾರಿ ಎಳತ್ತೂರು, ಮಹಿಳಾ ಘಟಕದ ಸರೋಜಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಶಶಿಕಾಂತ ರಾವ್ ಎಳತ್ತೂರು ಸ್ವಾಗತಿಸಿ, ಶ್ರೀಸರಫ್ ಐಕಳ ಕಾರ್ಯಕ್ರಮ ನಿರೂಪಿಸಿದರು.

ಸಾಧಕರಿಗೆ ಗೌರವ

ಜೇನು ಕೃಷಿಯಲ್ಲಿ ಸಾಧನೆ ಮಾಡಿದ ಪ್ರಜ್ವಲ್ ಎಮ್ ಕಿನ್ನಿಗೋಳಿ ಹಾಗೂ ಎಸ್ಸೆಸೆಲ್ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸಾಧಕ ವಿದ್ಯಾರ್ಥಿಗನ್ನು ಅವರನ್ನು ಗೌರವಿಸಲಾಯಿತು.

ಕಾರ್ಮಿಕ ವರ್ಗದವರ ಮಕ್ಕಳು ಉತ್ತಮ ಶಿಕ್ಷಣ ಪಡೆದು ಉನ್ನತ ಹುದ್ದೆ ಅಲಂಕರಿಸಬೇಕು



ಬೆಳ್ತಂಗಡಿ: ಕಾರ್ಮಿಕರ ನ್ಯಾಯಕ್ಕಾಗಿ ಅಂಬೇಡ್ಕರ್ ನಿರಂತರ ಹೋರಾಟ ನಡೆಸಿ, ನ್ಯಾಯ ಒದಗಿಸಿ ಕೊಟ್ಟಿದ್ದಾರೆ. ಅವರ ಹೋರಾಟದ ಫಲವಾಗಿ ಕಾರ್ಮಿಕರ ದಿನ ಆಚರಿಸುವಂತಾಗಿದೆ. ಕಾರ್ಮಿಕರು ಅಂಬೇಡ್ಕರ್ ಅವರನ್ನು ಪ್ರತಿ ಸಂದರ್ಭ ನೆನೆಯಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾ ಪೌರ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಕಂಕನಾಡಿ ಹೇಳಿದರು.

ಅವರು ಪಟ್ಟಣ ಮತ್ತು ಗ್ರಾ.ಪಂ. ಪೌರಕಾರ್ಮಿಕರ ಸಂಘ ದಕ್ಷಿಣ ಕನ್ನಡ ಜಿಲ್ಲೆ ಇದರ ನೇತೃತ್ವದಲ್ಲಿ ಬೆಳ್ತಂಗಡಿ ಶ್ರೀ ನಾರಾಯಣ ಗುರು ಸಭಾಂಗಣದಲ್ಲಿ ನಡೆದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಮತ್ತು ವಿಶ್ವ ಕಾರ್ಮಿಕ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಜಿ.ಪಂ. ಮಾಜಿ ಸದಸ್ಯ, ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾ ಉಪಾಧ್ಯಕ್ಷ ಶೇಖರ್ ಕುಕ್ಕೇಡಿ ಮಾತನಾಡಿ, ಕಾರ್ಮಿಕರ ಬಗ್ಗೆ ಅನುಕಂಪ ಬೇಡ ಅವರಿಗೂ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಲು ಅವಕಾಶನೀಡಿ. ಕಾರ್ಮಿಕರಶ್ರಮದಿಂದ ದೇಶ ನಿರ್ಮಾಣ ಆಗಿದೆ. ಕಾರ್ಮಿಕರ ವರ್ಗದವರ ಮಕ್ಕಳು ಉತ್ತಮ ಶಿಕ್ಷಣ ಪಡೆದು ಉನ್ನತ ಹುದ್ದೆ ಅಲಂಕರಿಸುವಂತಾಗಬೇಕು ಎಂದರು. ಪ.ಪಂ.ಮುಖ್ಯಾಧಿಕಾರಿ ರಾಜೇಶ್ ಕೆ. ಮಾತನಾಡಿ, ಅಂಬೇಡ್ಕರ್ ಚಿಂತನೆ, ಆದರ್ಶಗಳನ್ನು ಮೈಗೂಡಿಸಿಕೊಂಡು ಮುನ್ನಡೆಯಬೇಕು ಜೊತೆಗೆ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಬೇಕು. ಕಾರ್ಮಿಕರು ತಮ್ಮ ಹಕ್ಕುಗಳ ಪಡೆಯಲು ಸಂಘಟಿತರಾಗಬೇಕೆಂದರು.

ಪಟ್ಟಣ ಮತ್ತು ಗ್ರಾ.ಪಂ. ಪೌರ ಕಾರ್ಮಿಕರ ಸಂಘದ ಅಧ್ಯಕ್ಷ, ಸುರೇಶ್ ಸುದೆಮುಗೇರು ಅಧ್ಯಕ್ಷತೆ ವಹಿಸಿದ್ದರು. ಪೌರ ಕಾರ್ಮಿಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ ಎಸ್.ಪಿ., ದಸಂಸ (ಅಂಬೇಡ್ಕರ್ ವಾದ) ಮೈಸೂರು ವಿಭಾಗ ಸಂ.ಸಂಚಾಲಕ ಬಿ.ಕೆ ವಸಂತ, ದಸಂಸ (ಅಂಬೇಡ್ಕರ್ ವಾದ) ಬೆಳ್ತಂಗಡಿ ತಾಲೂಕು ಘಟಕ ಸಂಚಾಲಕ ರಮೇಶ್ ಆರ್., ಗ್ರಾ.ಪಂ. ಪೌರಕಾರ್ಮಿಕರ ಸಂಘದ ಅಧ್ಯಕ್ಷೆ ರೇಣುಕಾ, ಸಫಾಯಿ ಕರ್ಮಚಾರಿ ಸಂಘದ ಜಿಲ್ಲಾಧ್ಯಕ್ಷ ಪ್ರೇಮ್ ಬಲ್ಲಾಳ್ ಬಾಗ್ ಇದ್ದರು. ಸಂಘದ ಗೌರವ ಸಲಹೆಗಾರ ಶೇಖರ್ ಲಾಯಿಲಾ ನಿರೂಪಿಸಿ, ಪ.ಪಂ. ಚಾಲಕ ಶಿವಕುಮಾರ್ ಸ್ವಾಗತಿಸಿದರು.

ಸಾಧಕ ಮಕ್ಕಳಿಗೆ ಸನ್ಮಾನ

ಎಸ್ಸೆಸೆಲ್ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ಪೌರ ಕಾರ್ಮಿಕರ ಮಕ್ಕಳಾದ ಗಗನ್ ಕುಮಾರ್, ಹರ್ಷಿತಾ, ಕೀರ್ತನಾ, ಶ್ರಾವ್ಯ, ಧನುಶ್ರೀ, ಕಿರಣ್, ಹರಿಣಾಕ್ಷಿ ಅವರನ್ನು ಸನ್ಮಾನಿಸಲಾಯಿತು.

ಉದ್ಯೋಗದಲ್ಲಿ ಪ್ರಾಮಾಣಿಕತೆ ಜೊತೆಗೆ ಕ್ರೀಡೆ ಮೂಲಕ ಸಾಧಕರಾಗಿ: ಕೋಟ್ಯಾನ್



ಮುಲ್ಕಿ: ದಕ್ಷಿಣ ಕನ್ನಡ ಜಿಲ್ಲೆ, ಮುಲ್ಕಿ ತಾಲೂಕು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಶ್ರಯದಲ್ಲಿ ಜಿಲ್ಲಾ ಪಂಚಾಯತ್, ತಾ.ಪಂ. ಹಾಗೂ ಗ್ರಾ.ಪಂ. ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ದ.ಕ ಜಿಲ್ಲಾ ಮಟ್ಟದ ಸೌಹಾರ್ದ ಕ್ರೀಡಾಕೂಟ 2026 ಕಾರ್ಯಕ್ರಮ ಶುಕ್ರವಾರ ಮುಲ್ಕಿ ಕಾರ್ನಾಡ್ ಸರಕಾರಿ ಪ.ಪೂ. ಕಾಲೇಜು ಮೈದಾನದಲ್ಲಿ ನಡೆಯಿತು. ಕ್ರೀಡಾಕೂಟವನ್ನು, ಶಾಸಕ ಉಮಾನಾಥ ಕೋಟ್ಯಾನ್ ಉದ್ಘಾಟಿಸಿ ಮಾತನಾಡಿ, ಕ್ರೀಡೆ ಮನುಷ್ಯನ ಅವಿಭಾಜ್ಯ ಅಂಗವಾಗಿದ್ದು ಕ್ರೀಡೆಯಿಂದ ಗೆಳೆತನ ಮತ್ತು ಆತ್ಮವಿಶ್ವಾಸ ಹೆಚ್ಚಿಸುತ್ತದೆ, ಸರಕಾರಿ ನೌಕರರು ಉದ್ಯೋಗದಲ್ಲಿ ಪ್ರಾಮಾಣಿಕತೆ ಜೊತೆ ಕ್ರೀಡೆ ಮೂಲಕ ಸಾಧಕರಾಗಿ ಎಂದರು. ಅತಿಥಿಗಳಾಗಿ ಮಾಜಿ ಸಚಿವ ಅಭಯಚಂದ್ರ ಜೈನ್ ಕ್ರೀಡಾಕೂಟಕ್ಕೆ ಶುಭ ಹಾರೈಸಿದರು. ವೇದಿಕೆಯಲ್ಲಿ ದ.ಕ.ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಡೆ ವಿನಾಯಕ್ ಕಾರ್ಭಾರಿ, ಕರ್ನಾಟಕ ರಾಜ್ಯ ಪಂ.ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ನೋಂ) ಬೆಂಗಳೂರಿನ ರಾಜ್ಯಾಧ್ಯಕ್ಷ ದಿಲೀಪ್ ಕುಮಾರ್ ಬಿ.ಎಂ., ದ.ಕ.ಜಿಲ್ಲೆಯ ಉಳ್ಳಾಲ, ಮೂಡಬಿದ್ರೆ, ಬಂಟ್ವಾಳ ಬೆಳ್ತಂಗಡಿ ಕಡಬ ತಾ.ಪಂ. ಕಾರ್ಯ ನಿರ್ವಹಣಾಧಿಕಾರಿಗಳಾದ ಗುರುದತ್ ಎಂ., ಮಹೇಶ್ ಹೊಳ್ಳ ಎನ್., ಸಚಿನ್ ಕುಮಾರ್, ಎನ್. ಭವಾನಿ ಶಂಕರ್, ನವೀನ್ ಕುಮಾರ್ ಭಂಡಾರಿ, ಮುಲ್ಕಿ ಸ.ಪ.ಪೂ. ಕಾಲೇಜು, ಪ್ರಾಂಶುಪಾಲ ವಾಸುದೇವ ಬೆಳ್ಳೆ, ಮುಲ್ಕಿ ತಾಲೂಕು ಗ್ಯಾರಂಟಿ ಸಮಿತಿಯ ಅಧ್ಯಕ್ಷ ಆಲ್ವಿನ್ ಕುಟಿನೋ, ಕೆಮ್ರಾಲ್ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಅರುಣ್ ಪ್ರದೀಪ್ ಡಿಸೋಜಾ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು ಅರುಣ್ ಪ್ರದೀಪ್ ಸ್ವಾಗತಿಸಿದರು, ಅತಿಕಾರಿಬೆಟ್ಟು ಗ್ರಾ.ಪಂ.ಅಭಿವೃದ್ಧಿ ಅಧಿಕಾರಿ ಶೈಲಜಾ ವಂದಿಸಿದರು. ಅರ್ಪಿತಾ ಶೆಟ್ಟಿ ನಿರೂಪಿಸಿದರು ಬಳಿಕ ಕ್ರೀಡಾಕೂಟ ನಡೆಯಿತು.

ಗೌರವ

ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಪಡೆದ ಗ್ರಾಮ ಪಂಚಾಯತ್ ಗಳನ್ನು ಗೌರವಿಸಲಾಯಿತು.

ಸೋಮವಾರಪೇಟೆ ಸಮುದಾಯ ಭವನ: ಮಣ್ಣು ಪರೀಕ್ಷೆ -ತರಬೇತಿ ಕಾರ್ಯಾಗಾರ



ಸೋಮವಾರಪೇಟೆ: ಮಣ್ಣು ಪರೀಕ್ಷೆ ಮಾಡದೇ ಕಾಫಿ ತೋಟಗಳಿಗೆ ರಸಾಯನಿಕ ಅಥವಾ ಸಾವಯವ ಗೊಬ್ಬರಗಳನ್ನು ಅಜಾಗರೂಕವಾಗಿ ಬಳಸುವುದರಿಂದ ಬೆಳೆಗಾರರು ಅನಾವಶ್ಯಕ ಖರ್ಚು ಮಾಡಿಕೊಳ್ಳುತ್ತಿದ್ದಾರೆ ಎಂದು ಕಾಫಿ ಮಂಡಳಿಯ ಉಪ ನಿರ್ದೇಶಕರಾದ ಡಾ. ಚಂದ್ರಶೇಖರ್ ಎಚ್ಚರಿಸಿದರು. ಸೋಮವಾರಪೇಟೆ ತಾಲ್ಲೂಕು ಒಕ್ಕಲಿಗರ ಸಂಘ, ಕಾಫಿ ಬೆಳೆಗಾರರ ಸಂಘ ಹಾಗೂ ಭಾರತೀಯ ಕಾಫಿ ಮಂಡಳಿ ಮತ್ತು ಸಂಶೋಧನಾ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಈಚೆಗೆ ಒಕ್ಕಲಿಗರ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಮಣ್ಣು ಪರೀಕ್ಷೆ - ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಪ್ರತಿ ತೋಟದ ಮಣ್ಣಿನಗುಣಲಕ್ಷಣಗಳು ವಿಭಿನ್ನವಾಗಿರುತ್ತವೆ. ಅದರ ಪ್ರಕಾರವೇ ಗೊಬ್ಬರದ ಪ್ರಮಾಣ-ಪ್ರಕಾರವನ್ನು ಆಯ್ಕೆ ಮಾಡಬೇಕು. ಮಣ್ಣಿನ ಪೋಷಕಾಂಶಗಳ ಸಮತೋಲನ ಕಾಪಾಡಿಕೊಳ್ಳುವುದು ಉತ್ತಮ ಇಳುವರಿಗೆ ಪ್ರಮುಖ ಅಂಶ ಎಂದರು.

ವಿಜ್ಞಾನಿ ನಾಡಾಫ್ ಮಣ್ಣಿನ ರಚನೆ, ಅದರ ಆರೋಗ್ಯ ಮತ್ತು ಪೋಷಕಾಂಶಗಳ ಬಗ್ಗೆ ಮಾಹಿತಿ ನೀಡಿದರು. ಡಾ. ನಾಗರಾಜ್ ಗಿಡ ಸಂರಕ್ಷಣಾ ಕ್ರಮಗಳು ಹಾಗೂ ಕೀಟ- ರೋಗ ನಿಯಂತ್ರಣದ ಬಗ್ಗೆ ವಿವರಿಸಿದರು. ಯು.ಡಿ. ಆರ್. ಯೋಜನೆ ಕುರಿತು ಬಸವರಾಜ್ ಮಾಹಿತಿ ನೀಡಿದರೆ, ಕಾಫಿ ರಫ್ತು ಅವಕಾಶಗಳ ಬಗ್ಗೆ ಪ್ರಕೃತಿ ಹೊನ್ನಮ್ಮ ಮಾತನಾಡಿದರು. ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಬಿ.ಯಂ. ಲವ ಒಕ್ಕಲಿಗರ ಸಂಘದ ತಾ.ಅಧ್ಯಕ್ಷ ಎ.ಆರ್. ಮುತ್ತಣ್ಣ ಮಾಜಿ ಎಂಎಲ್ಸಿ ಎಸ್.ಜಿ. ಮೇದಪ್ಪ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಸ್.ಎಂ. ಚಂಗಪ್ಪ ಕೆಜಿಎಫ್ ನಿರ್ದೇಶಕರಾದ ಸಿ.ಕೆ. ಮಲ್ಲಪ್ಪ ಇದ್ದರು. ಕೊಡಗು ಜಿಲ್ಲಾ ಸಂಪರ್ಕ ಅಧಿಕಾರಿ ಬೋವಿ, ಸಂಘದ ಪದಾಧಿಕಾರಿ ತಿಲೋತ್ತಮೆ ನಂದಕುಮಾರ್ ಹಾಜರಿದ್ದರು. 45 ಕಾಫಿ ಬೆಳೆಗಾರರು ಭಾಗವಹಿಸಿ ತಮ್ಮ ತೋಟದ ಮಣ್ಣನ್ನು ಪರೀಕ್ಷಿಸಿಕೊಂಡರು.

ಕಾಳ್ಯಂಗಾಡು ದೇವಸ್ಥಾನದಲ್ಲಿ ಬ್ರಹ್ಮಕಲಶ : 'ಭಜನೆ ಆಲಿಸಿ' ಎಲ್ಲರ ಗಮನಸೆಳೆದ ಶ್ವಾನ!


ಕಾಸರಗೋಡು: ಶ್ರೀ ಕ್ಷೇತ್ರ ಕಾಳ್ಯಂಗಾಡು ಬ್ರಹ್ಮಕಲಶೋತ್ಸವ ವೈಶಿಷ್ಟ್ಯದ ಜೊತೆಗೆ ಅನೇಕ ವಿಭಿನ್ನತೆಗೂ ಭೂಮಿಕೆಯಾಗಿದೆ. ಇಲ್ಲಿನ ಸರಸ್ವತಿ ಮಂಟಪದಲ್ಲಿ ನಡೆಯುತ್ತಿರುವ ಸರಣಿ ಭಜನೆ ಕಾರ್ಯಕ್ರಮ ತನ್ನದೇ ಪ್ರೇಕ್ಷಕ ವೃಂದ ಹೊಂದಿದೆ. ವಿಭಿನ್ನ ತಂಡಗಳು ಇಲ್ಲಿ ಸತತ ಸಂಕೀರ್ತನೆ ನಡೆಸಿಕೊಡುತ್ತಿದ್ದಾರೆ. ಇದೆಲ್ಲವನ್ನೂ ಮೀರಿ ಸ್ಥಳೀಯ ಸಾಕುನಾಯಿಯೊಂದು ಶ್ರದ್ಧೆಯಿಂದ ಪ್ರತಿ ಭಜನೆ ಆಲಿಸುತ್ತಿರುವುದು ಎಲ್ಲರ ಅಚ್ಚರಿಗೆ ಕಾರಣವಾಗಿದೆ. ಹಾಡುಗಳು ಮನುಜಕುಲಕ್ಕೆ ಮಾತ್ರವಲ್ಲ, ಸಕಲ ಜೀವರಾಶಿಗಳಿಗೂ ಮೋಡಿ ಮಾಡುವ ವಿಧಾನ ಎಂಬುದನ್ನು ನಮ್ಮ ಸನಾತನ ಸಂಸ್ಕೃತಿ ತಿಳಿಸಿಕೊಡುತ್ತದೆ. ಶ್ರೀಕೃಷ್ಣ ಪರಮಾತ್ಮ ಕೊಳಲ ಗಾಯನ ಮಾಡಿದಾಗ ಗೋವುಗಳೆಲ್ಲ ಮಂತ್ರಮುಗ್ಧವಾಗುತ್ತಿದ್ದುದನ್ನು ನಾವು ಕಥಾನಕಗಳಲ್ಲಿ ಕೇಳಿದ್ದೇವೆ. ನಾರದ, ತುಂಬುರರು ಹಾಡಿದಾಗ ಪ್ರಕೃತಿಯೇ ಮೋಡಿಗೊಳಗಾಗುತ್ತಿದ್ದ ವರ್ಣನೆ ಆಲಿಸಿದ್ದೇವೆ.



ಆಂಜನೇಯ ಹಾಡಿದರೆ ಸಾಕ್ಷಾತ್ ಶ್ರೀರಾಮನೇ ಎದ್ದು ಬರುತ್ತಿದ್ದನಂತೆ. ತುಳಸೀದಾಸರು ರಾಮಭಜನೆ ಮಾಡಿದಾಗ ಹನುಮನೇ ಮಾರುವೇಷದಲ್ಲಿ ಕುಳಿತು ಕೇಳುತ್ತಿದ್ದನಂತೆ. ಹಾಗೆಯೇ ಈ ಸಾಕುನಾಯಿ ಭಜನೆ ಆಲಿಸುತ್ತಿರುವುದು ಎಲ್ಲರಿಗೆ ಅಚ್ಚರಿ ಮೂಡಿಸಿದೆ.

ನಿಡ್ಪಳ್ಳ ದೇವಳ: ಬ್ರಹ್ಮಕಲಶ ಪೂಜೆ

ಸುಬ್ರಹ್ಮಣ್ಯ: ನಿಡ್ಪಳ್ಳ ಶ್ರೀ ಮಹಾವಿಷ್ಣು ದೇವಳಲ್ಲಿ ಬ್ರಹ್ಮಕಲಶಪೂಜೆ ಶುಕ್ರವಾರ ಶ್ರದ್ಧಾ ಭಕ್ತಿಯಿಂದ ನೆರವೇರಿಸಿತು. ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ವಿವಿಧ ವೈದಿಕ ವಿಧಿ ವಿಧಾನಗಳು ನೆರವೇರಿತು. ಬೆಳಿಗ್ಗೆ ಸೋಪಾನ ಪೂಜೆ, ಮಹಾಗಣಪತಿ ಹೋಮ, ಅಂಕುರಪೂಜೆ, ಮಂಟಪ ಸಂಸ್ಕಾರ, ಕುಂಭೇಶ ಕರ್ಕರಿ ಪೂಜೆ, ಅಗ್ನಿ ಜನನ, ಪರಿಕಲಶ ಪೂಜೆ, ಪ್ರಾಯಶ್ಚಿತ್ತ ಹೋಮ, ಅಗ್ನಿ ಜನನ , ಶಾಂತಿ ಹೋಮ, ತತ್ವ ಹೋಮ, ತತ್ವಕಲಶ ಪೂಜೆ ನಡೆಯಿತು. ರಾತ್ರಿ ಅಧಿವಾಸ ಹೋಮ, ಕಲಶಾಧಿವಾಸ, ಸೋಪಾನ ಪೂಜೆ, ಪ್ರಸಾದ ವಿತರಣೆ ನಡೆಯಿತು.



ಪರಿವಾರ ಪ್ರತಿಷ್ಠೆ

ಗುರುವಾರ ಸೋಪಾನ ಪೂಜೆ, ಮಹಾಗಣಪತಿ ಹೋಮ, ಅಂಕುರ ಪೂಜೆ, ಇಂದ್ರಾದಿ ದಿಕ್ಪಾಲ ಪ್ರತಿಷ್ಠೆ, ಪರಿವಾರ ಪ್ರತಿಷ್ಠೆ ಮಹಾಬಲಿ ಪೀಠ ಪ್ರತಿಷ್ಠೆ ನೆರವೇರಿತು. ಈ ಸಂದರ್ಭ ದೇವಳದ ಆಡಳಿತ ಟ್ರಸ್ಟ್ ಅಧ್ಯಕ್ಷ ಚಂದ್ರಪ್ರಕಾಶ್ ಕಂಬಳ, ಕೋಶಾಧಿಕಾರಿ ಗುರುಪ್ರಸಾದ್ ತೋಟ, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ನೇಮಿರಾಜ ಪಲ್ಲೋಡಿ, ಪ್ರಧಾನ ಕಾರ್ಯದರ್ಶಿ ಕುಸುಮಾಧರ ಕರಿಮಜಲು, ಕಾರ್ಯದರ್ಶಿ ಅಶೋಕ್ ಮೇಲ್ಪಾಡಿ, ಪ್ರಧಾನ ಸಂಚಾಲಕ ರಾಮಕೃಷ್ಣ ಪುರಿಯಮನ, ಕೋಶಾಧಿಕಾರಿ ಕುಶಾಲಪ್ಪ ಮೇಲ್ಪಾಡಿ, ಪ್ರಧಾನ ಅರ್ಚಕ ಅಕ್ಷಯ್ ಭಟ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ತೊಕ್ಕೊಟ್ಟು ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಪುನರ್‌ಪ್ರತಿಷ್ಠಾ ಬ್ರಹ್ಮಕಲಶೋತ್ಸವ । ಧಾರ್ಮಿಕ ಸಭೆ

ಸಂಸ್ಕೃತಿ, ಆಚಾರ ವಿಚಾರಗಳಿಂದ ವಿಮುಕ್ತರಾಗುತ್ತಿರುವುದು ವಿಷಾದಕರ: ಧನಲಕ್ಷ್ಮೀ ಗಟ್ಟಿ

ಉಳ್ಳಾಲ: ನಾವಿಂದು ಹಬ್ಬಗಳನ್ನು ಆಚರಿಸುತ್ತೇವೆಯೇ ಹೊರತು ಹಬ್ಬಗಳ ಹಿನ್ನಲೆಗಳನ್ನು ಮಕ್ಕಳಿಗೆ ತಿಳಿಸುವಲ್ಲಿ ವಿಫಲರಾಗಿದ್ದೇವೆ. ವಿದೇಶಿಗರು ಇಲ್ಲಿಗೆ ಬಂದು ನಮ್ಮ ಕಲೆ, ಸಂಸ್ಕೃತಿ, ದೈವಾರಾಧನೆಗಳ ಬಗ್ಗೆ ಅಧ್ಯಯನ ಮಾಡುತ್ತಿದ್ದರೆ, ನಾವು ಮಾತ್ರ ನಮ್ಮ ಸಂಸ್ಕೃತಿ,ಆಚಾರ ವಿಚಾರಗಳಿಂದ ವಿಮುಕ್ತರಾಗುತ್ತಿರುವುದು ವಿಷಾದಕರ ಎಂದು ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಧನಲಕ್ಷ್ಮಿ ಗಟ್ಟಿ ಹೇಳಿದ್ದಾರೆ. ತೊಕ್ಕೊಟ್ಟು ಗಾಂಧಿನಗರದ ಶ್ರೀ ಚಾಮುಂಡೇಶ್ವರಿ ದೇವಳದಲ್ಲಿ ನಡೆಯುತ್ತಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರು, ಪರಿವಾರ ಸಾನಿಧ್ಯಗಳ ಪುನರ್ ಪ್ರತಿಷ್ಠಾಪನಾ ಕಲಶ ಪ್ರಯುಕ್ತ ಗುರುವಾರ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇಂದು ಮನುಷ್ಯ ಖಿನ್ನತೆಗೊಳಗಾದರೆ ಆಪ್ತ ಸಮಾಲೋಚನ ಕೇಂದ್ರ , ಮನೋ ವೈದ್ಯರ ಬಳಿ ಅವರನ್ನು ಚಿಕಿತ್ಸೆಗೆ ಕರೆದೊಯ್ಯುತ್ತೇವೆ. ಆದರೆ ಹಿಂದಿನ ಕಾಲದಲ್ಲಿ ಇಂತಹ ಆಧುನಿಕ ಚಿಕಿತ್ಸಾ ಪದ್ಧತಿ ಇಲ್ಲದ ಸಂದರ್ಭ ಎಲ್ಲಾ ಸಮಸ್ಯೆಗಳೂ ನಾವು ನಂಬಿದ ದೈವ, ದೇವರ ಕ್ಷೇತ್ರದ ಅಂಗಳದಲ್ಲೇ ಬಗೆಹರಿಯುತ್ತಿತ್ತು. ನಮ್ಮ ಜಿಲ್ಲೆಯಲ್ಲಿ ಇದ್ದಷ್ಟು ದೈವ, ದೇವಳ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ ಎಂದರು.



ಧಾರ್ಮಿಕ ಸಭೆ ಉದ್ಘಾಟಿಸಿದ ಪಿಲಾರು ಸಾಯಿ ಬಾಬಾ ಮಂದಿರದ ದಿನೇಶ್ ಶರ್ಮ ಮಾತನಾಡಿ, ಯಾವುದೇ ಧಾರ್ಮಿಕ ಕ್ಷೇತ್ರದಲ್ಲಿ ನಡೆಯುವಂತಹ ಧಾರ್ಮಿಕ ಚಟುವಟಿಕೆಗಳು ಹಾಗೂ ಅಲ್ಲಿನ ಸುಸಜ್ಜಿತ ವ್ಯವಸ್ಥೆಗೆ ನಾವೆಲ್ಲರೂ ಬೆನ್ನು ತಟ್ಟಿ ಪ್ರೋತ್ಸಾಹಿಸಬೇಕಿದೆ. ಮಕ್ಕಳಿಗೆ ಎಳೆಯ ಪ್ರಾಯದಲ್ಲೇ ಭಜನೆ,ಧರ್ಮ ಶಿಕ್ಷಣ , ಜೀವನದ ಮೌಲ್ಯಗಳ ಕಲಿಸಿಕೊಟ್ಟರೆ ಅವರು ಭವಿಷ್ಯದ ಉತ್ತಮ ಪ್ರಜೆಗಳಾಗಲು ಸಾಧ್ಯವೆಂದರು. ಉಚ್ಚಿಲ ಸಂಕೋಳಿಗೆ ಭಗವತಿ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ಚಂದ್ರಹಾಸ್ ಉಳ್ಳಾಲ್ ಅಧ್ಯಕ್ಷತೆ ವಹಿಸಿದ್ದರು.ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರು ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರಾದ ಸುರೇಶ್ ಭಟ್ನಗರ, ಚಾಮುಂಡೇಶ್ವರಿ ಕ್ಷೇತ್ರದ ಆಡಳಿತ ಮೊಕ್ತೇಸರ ಗಿರೀಶ್ ಕುಮಾರ್ ಯು.ಕೆ., ಕೊಣಾಜೆ ಮೆಸ್ಕಾಂ ಉಪ ಕೇಂದ್ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ನಿತೇಶ್ ಹೊಸಗದ್ದೆ, ಎಸ್‌ಬಿಐ ಬ್ಯಾಂಕ್ ಮಾಡೂರು ಶಾಖಾ ಪ್ರಬಂಧಕಿ ಅಶ್ವಿನಿ ಪ್ರಶಾಂತ್ ಮಾಡೂರು, ಮೀನುಗಾರಿಕಾ ಇಲಾಖೆ ಅಧಿಕಾರಿ ಸದಾಶಿವ ಉರ್ವ ಸ್ಟೋರ್, ಕಾಪಿಕಾಡು ಬಬ್ಬುಸ್ವಾಮಿ ದೈವಸ್ಥಾನ ರಾಜು ಗುರಿಕಾರ, ಚೆಂಬುಗುಡ್ಡೆ ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನ ಅಧ್ಯಕ್ಷ ಹರೀಶ್ಚಂದ್ರ ಕಾಪಿಕಾಡು, ಬ್ರಹ್ಮಕಲಶ ಸಮಿತಿ ಕಾರ್ಯಾಧ್ಯಕ್ಷ ಭಾಸ್ಕರ್ ತೊಕ್ಕೊಟ್ಟು, ಮಹಿಳಾ ಸಮಿತಿ ಪ್ರಧಾನ ಸಂಚಾಲಕ ಸುರೇಖಾ ಚಂದ್ರಹಾಸ್, ಚಾಮುಂಡೇಶ್ವರಿ ಕ್ಷೇತ್ರ ಮೊಕ್ತೇಸರ ಸುದರ್ಶನ್ ಮತ್ತಿತರರಿದ್ದರು. ಬ್ರಹ್ಮಕಲಶ ಸಮಿತಿ ಪ್ರ.ಕಾರ್ಯದರ್ಶಿ ಆನಂದ ಶೆಟ್ಟಿ ಭಟ್ನಗರ ಸ್ವಾಗತಿಸಿ, ಪ್ರವೀಣ್ ಬಸ್ತಿ ನಿರೂಪಿಸಿದರು.

ಎಲ್ಲರಿಗೂ ಮಾದರಿ

ಯಾವುದೇ ಉತ್ಸವಗಳಲ್ಲೂ ಅಗತ್ಯತೆಗೆ ತಕ್ಕಷ್ಟೆ ಖರ್ಚು, ವೆಚ್ಚ ಮಾಡಿದರೆ ಕಾರ್ಯಕ್ರಮಗಳು ಸರಳ, ಸುಂದರವಾಗಿ ಯಶಸ್ವಿಗೊಳ್ಳಲು ಸಾಧ್ಯ.. ಆ ಕಾರ್ಯವು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಡೆದಿರುವುದು ಎಲ್ಲರಿಗೂ ಮಾದರಿಯಾಗಿದೆ.

● ಧನಲಕ್ಷ್ಮೀ ಗಟ್ಟಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ

ಸುತ್ತ ಮುತ್ತ

ಸುಳ್ಯ ಪಶು ಆಸ್ಪತ್ರೆ : ಚಿಕಿತ್ಸಾ ಸಮಯದ ಬದಲಾವಣೆ

ಸುಳ್ಯ: ಸುಳ್ಯ ತಾಲೂಕಿನಾದ್ಯಂತ ಮೇ 22ರವರೆಗೆ ಜಾನುವಾರುಗಳಿಗೆ ಕಾಲು ಬಾಯಿ ರೋಗದ ಲಸಿಕಾ ಕಾರ್ಯಕ್ರಮ ನಡೆಯಲಿರುವುದರಿಂದ ತಾಲೂಕಿನ ಎಲ್ಲಾ ಅಧಿಕಾರಿ ಸಿಬ್ಬಂದಿಗಳು ಈ ಕಾರ್ಯಕ್ರಮದಲ್ಲಿ ನಿರತರಾಗಿರುತ್ತಾರೆ. ಆದ್ದರಿಂದ ಪಶು ಆಸ್ಪತ್ರೆ ಸುಳ್ಯದಲ್ಲಿ ನಾಯಿ ಬೆಕ್ಕು ಮತ್ತು ಇತರ ಸಾಕು ಪ್ರಾಣಿಗಳ ದೈನಂದಿನ ಚಿಕಿತ್ಸಾ ಸೇವೆಯನ್ನು ಮಧ್ಯಾಹ್ನ 2ರಿಂದ ಸಂಜೆ 4 ಗಂಟೆಯ ಒಳಗೆ ಮಾತ್ರ ನಿಗದಿಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. 2 ಮತ್ತು 4ನೇ ಶನಿವಾರಗಳು, ಭಾನುವಾರ ಮತ್ತು ರಜಾ ದಿನಗಳಂದು ಬೆಳಗ್ಗೆ 9ರಿಂದ ಮಧ್ಯಾಹ್ನ ಒಂದರವರೆಗೆ ಚಿಕಿತ್ಸಾ ಸೇವೆ ಲಭ್ಯವಿದ್ದು ಈ ಅವಧಿಯಲ್ಲಿ ಹಸು ಎಮ್ಮೆಗಳ ತುರ್ತು ಚಿಕಿತ್ಸೆಗಾಗಿ ಇಲಾಖೆಯ ಪಸು ಸಂಜೀವಿನಿ ಸಹಾಯವಾಣಿ ಟೋಲ್ ಫ್ರೀ ಸಂಖ್ಯೆ 1962ಯನ್ನು ಸಂಪರ್ಕಿಸಬಹುದು ಎಂದು ಸುಳ್ಯ ತಾಲೂಕು ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಡಾ. ನಿತಿನ್ ಪ್ರಭು ತಿಳಿಸಿದ್ದಾರೆ.

ಮೇ 4ರಿಂದ ಅಸ್ತಮಾ ತಪಾಸಣಾ ಶಿಬಿರ

ಮಂಗಳೂರು: ವಿಶ್ವ ಅಸ್ತಮಾ ದಿನದ ಪ್ರಯುಕ್ತ ಮಂಗಳೂರಿನ ಇಂಡಿಯಾನಾ ಆಸ್ಪತ್ರೆ ಮತ್ತು ಹಾರ್ಟ್ ಇನ್‌ಸ್ಟಿಟ್ಯೂಟ್ ವತಿಯಿಂದ ಮೇ 4ರಿಂದ 9ರ ವರೆಗೆ ಅಸ್ತಮಾ ತಪಾಸಣ ಉಚಿತ ಶಿಬಿರ ಆಯೋಜಿಸಲಾಗಿದೆ ಎಂದು ಆಸ್ಪತ್ರೆಯ ಕನ್ಸಲ್ಟಿಂಗ್ ಪಲ್ಮನಾಲಜಿಸ್ಟ್ ಡಾ.ಕೀರ್ತನ್ ಗಣಪತಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮೇ 5ರಂದು ವಿಶ್ವ ಅಸ್ತಮಾ ದಿನವನ್ನು ಆಚರಿಸಲಾಗುತ್ತದೆ. ಅದರ ಅಂಗವಾಗಿ ಒಂದು ವಾರಗಳ ಉಚಿತ ತಪಾಸಣೆ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಭಾಗವಹಿಸುವವರು ಮುಂಗಡವಾಗಿ ನೋಂದಣಿ ಮಾಡಬೇಕು ಎಂದರು. ಲಿಡ್ವಿನ್ ಡಿ'ಸೋಜಾ ಉಪಸ್ಥಿತರಿದ್ದರು.

ಕೊಳಚಿಕಂಬಳ ದೈವಸ್ಥಾನದಲ್ಲಿ ನೇಮ

ಮುಲ್ಕಿ: ಕೊಳಚಿಕಂಬಳ ಶ್ರೀ ಬೊಬ್ಬರ್ಯ ದೈವಸ್ಥಾನದ ನೂತನ ಶಿಲಾಮಯ ಗರ್ಭಗುಡಿಯಲ್ಲಿ ಶ್ರೀ ಬೊಬ್ಬರ್ಯ ದೈವದ ಪುನರ್ ಪ್ರತಿಷ್ಠೆ ಹಾಗೂ



ಕಲಶಾಭಿಷೇಕ ಹಾಗೂ ನೇಮ ನಡೆಯಿತು. ಸಂಜೆ 5ಕ್ಕೆ ಭಂಡಾರ ಇಳಿದು ಧ್ವಜಾರೋಹಣ, ರಾತ್ರಿ 10ಕ್ಕೆ ಬೊಬ್ಬರ್ಯ ದೈವದ ನೇಮ ನಡೆಯಿತು. ವಿದ್ವಾನ್ ಕೃಷ್ಣರಾಜ್ ಎನ್. ಭಟ್, ಬಪ್ಪನಾಡು, ಗುರಿಕಾರ ಸುಜಿತ್ ಎಸ್.ಅಮೀನ್ ರೇಖಾ ಸುಜಿತ್, ಬಪ್ಪನಾಡು ಮೊಗವೀರ ಮಹಾ ಸಭಾದ ಅಧ್ಯಕ್ಷ ಪುಂಡರಿಕಾಕ್ಷ ಎಸ್. ಕೋಟ್ಯಾನ್, ಕಾರ್ಯದರ್ಶಿ ಸಂದೀಪ್ ಕೋಟ್ಯಾನ್, ಕೋಶಾಧಿಕಾರಿ ಸೀತಾರಾಮ ಬಂಗೇರ, ಮಹಿಳಾ ಸಭಾದ ಅಧ್ಯಕ್ಷೆ ಪ್ರೇಮಾ ಎಂ.ಕುಂದರ್, ದೈವಸ್ಥಾನ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ನಾಗೇಶ್ ಬಂಗೇರ, ಗೌರವಾಧ್ಯಕ್ಷ ನವೀನ್ ಕೋಟ್ಯಾನ್, ವಿಕ್ರಂರಾಜ್, ಬಪ್ಪನಾಡು ಮೊಗವೀರ ಸಭಾ ಮುಂಬೈ ಸಮಿತಿ ಅಧ್ಯಕ್ಷ ನಾರಾಯಣ ತಿಂಗಳಾಯ , ಹಾಗೂ ಸಮಿತಿ ಸದಸ್ಯ ಶ್ರೀನಿವಾಸ ಸುವರ್ಣ, ಪ್ರಕಾಶ್ ಕೋಟ್ಯಾನ್,ಶರತ್ ಕೋಟ್ಯಾನ್, ಮುಖೇಶ್ ಬಂಗೇರ, ದಿಲೀಪ್ ಮುಲ್ಕಿ, ಪ್ರೀತಿ ಹರೀಶ್ ಶ್ರೀಯಾನ್ ಮತ್ತಿತರರಿದ್ದರು.

ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಹಿಂದೆ ದುರುದ್ದೇಶ: ಲಕ್ಷ್ಮಣ್

ಮಡಿಕೇರಿ: ಜನಸಂಖ್ಯಾ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಗೆ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಮುಂದಾಗಿದ್ದು, ಇದರ ಹಿಂದೆ ದುರುದ್ದೇಶ ಅಡಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರ ಭಾರತದಲ್ಲಿ ತಾನು ಆವರಿಸಿಕೊಂಡಿರುವ ಸ್ಥಾನಗಳನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳುವುದಕ್ಕಾಗಿ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಶೇ.50 ರಷ್ಟು ಏರಿಕೆ ಮಾಡಲು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಮುಂದಾಗಿದೆ. ಆ ಮೂಲಕ ದಕ್ಷಿಣ ಭಾರತದ ಬಗ್ಗೆ ತಾರತಮ್ಯ ಧೋರಣೆಯನ್ನು ಅನುಸರಿಸುತ್ತಿದೆ ಎಂದು ದೂರಿದರು. ಉತ್ತರ ಭಾರತದಲ್ಲಿ ಶೇ.195ರಷ್ಟು ಜನಸಂಖ್ಯೆ ಏರಿಕೆಯಾಗಿದ್ದರೆ, ದಕ್ಷಿಣ ಭಾರತದಲ್ಲಿ ಶೇ.135ರಷ್ಟು ಮಾತ್ರ ಅಧಿಕವಾಗಿದೆ. ಜನಸಂಖ್ಯಾ ಆಧಾರದಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆಯಾದರೆ ಉತ್ತರ ಭಾರತದ ರಾಜ್ಯಗಳಲ್ಲಿ ಲೋಕಸಭಾ ಸ್ಥಾನಗಳು ಹೆಚ್ಚಾಗಲಿವೆ. ಇದು ಬಿಜೆಪಿಗೆ ಲಾಭವಾಗಲಿದೆ ಎನ್ನುವ ದುರುದ್ದೇಶ ಕೇಂದ್ರದ ಮುಂದಿದೆ ಎಂದು ಲಕ್ಷ್ಮಣ್ ಟೀಕಿಸಿದರು.

ಕರ್ನಾಟಕ ರಾಜ್ಯ ತೆರಿಗೆ ರೂಪದಲ್ಲಿ 5 ಲಕ್ಷ ಕೋ.ರೂ.ಗಳನ್ನು ಕೇಂದ್ರಕ್ಕೆ ನೀಡುತ್ತಿದೆ. ಆದರೆ ಕೇಂದ್ರ ರಾಜ್ಯಕ್ಕೆ ಕೇವಲ 60 ಸಾವಿರ ಕೋಟಿ ಮಾತ್ರ ಮರಳಿ ನೀಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಮಹಿಳಾ ಮೀಸಲಾತಿಯನ್ನು ಕಾಂಗ್ರೆಸ್ ಸರಕಾರ ಜಾರಿಗೆ ತಂದಿದ್ದು, 2023 ರಲ್ಲಿ ಮೇಲ್ಮನೆಯಲ್ಲಿ ಮಸೂದೆ ಅಂಗೀಕಾರಗೊಂಡಿತ್ತು. ಆದರೆ ಕೆಳಮನೆಯಲ್ಲಿ ಬಿಜೆಪಿ ವಿರೋಧ ವ್ಯಕ್ತಪಡಿಸಿತ್ತು. ಮಹಿಳಾ ಮೀಸಲಾತಿ ಶೇ.33ಕ್ಕೆ 2023ರಲ್ಲಿ ರಾಷ್ಟ್ರಪತಿಗಳ ಅಂಕಿತವಾಗಿದೆ. ಕೇಂದ್ರ ಸರಕಾರ ಗೆಜೆಟ್ ನೋಟಿಫಿಕೇಷನ್ ಅನ್ನು 2026ರಲ್ಲಿ ಹೊರಡಿಸಿದೆ. ಮೂರು ವರ್ಷಗಳ ಕಾಲ ಯಾಕೆ ಕೆಪಿಸಿಸಿ ಸದಸ್ಯ ಎಚ್.ಎಂ. ನಂದಕುಮಾರ್, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಎ.ಹಂಸ, ಡಿಸಿಸಿ ಸದಸ್ಯ ಸಲೀಂ ಹ್ಯಾರಿಸ್, ಹಿಂದುಳಿದ ವರ್ಗಗಳ ಪ್ರಮುಖ ಜಯೇಂದ್ರ, ಸಾಮಾಜಿಕ ಜಾಲತಾಣ ಘಟಕದ ಅಧ್ಯಕ್ಷ ಸೂರಜ್ ಹೊಸೂರು ಉಪಸ್ಥಿತರಿದ್ದರು.

ಹಲೋ ಆಕಾಶವಾಣಿ 'ಬೆಳಕ ಹುಡುಕುತ್ತಾ' ನೇರ ಫೋನ್ ಇನ್ ಜನಸ್ಪಂದನದಲ್ಲಿ ಜಿಲ್ಲಾಧಿಕಾರಿ ಮಾಹಿತಿ

ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯವಾಗಿಲ್ಲ, ಆತಂಕ ಬೇಡ

ಮಡಿಕೇರಿ: ಹಲೋ ಆಕಾಶವಾಣಿ 'ಬೆಳಕ ಹುಡುಕುತ್ತಾ' ನೇರ ಫೋನ್‌ಇನ್ ಜನಸ್ಪಂದನ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಪಾಲ್ಗೊಂಡು ಸಾರ್ವಜನಿಕರ ಕುಂದುಕೊರತೆ ಆಲಿಸಿದರು.

ಒಂದು ಗಂಟೆ ಕಾಲ ನಡೆದ ನೇರ ಫೋನ್‌ಇನ್ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧೆಡೆಯ 16ಕ್ಕೂ ಹೆಚ್ಚು ಜನ ದೂರವಾಣಿ ಮೂಲಕ ಕರೆ ಮಾಡಿ ಭೂಮಿ ದುರಸ್ತಿ, ರಸ್ತೆ ಸರಿಪಡಿಸುವುದು, ಕುಡಿಯುವ ನೀರು ಪೂರೈಕೆ, ಬೀದಿ ದೀಪ ಅಳವಡಿಕೆ, ಮತ್ತಿತರ ಮೂಲ ಸೌಲಭ್ಯ ಸಂಬಂಧಿಸಿದಂತೆ ಸಾರ್ವಜನಿಕ ಹಿತಾಸಕ್ತಿ ಒಳಗೊಂಡ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರು.

ಆರಂಭದಲ್ಲಿ ಕರೆ ಮಾಡಿದ ವೀರಾಜಪೇಟೆ ತಾಲೂಕಿನ ಕೋತೂರು ಗ್ರಾಮದ ಗಣೇಶ್ ಕುಮಾರ್ ಅವರು ಎಫ್‌ಐಡಿ ಗುರುತಿನ ಚೀಟಿ ಇಲ್ಲದೆ ರಸಗೊಬ್ಬರ ಖರೀದಿಸಲು ತೊಂದರೆಯಾಗಿದೆ ಎಂದು ಕೋರಿದರು.

ಈ ಕುರಿತು ಮಾತನಾಡಿದ ಜಿಲ್ಲಾಧಿಕಾರಿ ಅವರು ರಸಗೊಬ್ಬರ ಪೂರೈಕೆಯಲ್ಲಿ ಯಾವುದೇ ರೀತಿಯ



ವ್ಯತ್ಯಯವಿಲ್ಲ, ಆತಂಕ ಪಡುವ ಅಗತ್ಯವೂ ಇಲ್ಲ ಎಂದರು. ಸುಂಟಿಕೊಪ್ಪ ಬಳಿಯ 7ನೇ ಹೊಸ ಕೋಟೆಯ ಹ್ಯಾರಿಸ್ ಅವರು ಮಾತನಾಡಿ, ಜಾಗ ಸಂಬಂಧ ತಿದ್ದುಪಡಿಗೆ ಮನವಿ ಮಾಡಲಾಗಿದೆ. ಆದರೆ ಇದುವರೆಗೆ ಯಾವುದೇ ಕೆಲಸ ಆಗಿಲ್ಲ ಎಂದರು. ಈ ಕುರಿತು ಮಾತನಾಡಿದ ಜಿಲ್ಲಾಧಿಕಾರಿ ಅವರು ಜಾಗ ತಿದ್ದುಪಡಿ ಸಂಬಂಧ ಸಂಬಂಧಪಟ್ಟ ಅಧಿಕಾರಿಗೆ ನಿರ್ದೇಶನ ನೀಡಲಾಗುವುದು ಎಂದು ಹೇಳಿದರು. ಮಡಿಕೇರಿ ತಾಲೂಕಿನ ಚೇರಂಬಾಣೆ ಬಳಿಯ ಕೊಳಗದಾಳು ಗ್ರಾಮದ ವಾಣಿ ಅವರು ಕರೆ ಮಾಡಿ ನಮ್ಮ ಕುಟುಂಬದಲ್ಲಿ ಹಿರಿಯರೊಬ್ಬರು ಶೇ.100 ರಷ್ಟು ವಿಕಲಚೇತನರಿದ್ದು, ರಸ್ತೆ ಸಂಪರ್ಕವಿಲ್ಲದೆ ಮಳೆಗಾಲದಲ್ಲಿ ತುಂಬಾ ತೊಂದರೆ ಅನುಭವಿಸಬೇಕಿದೆ ಎಂದು ತಿಳಿಸಿದರು. ಈ ಕುರಿತು ಜಿಲ್ಲಾಧಿಕಾರಿ ಅವರು ಆದ್ಯತೆ ಮೇಲೆ ರಸ್ತೆ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು ಎಂದರು. ಪೊನ್ನಂಪೇಟೆ ತಾಲೂಕಿನ ಬಲ್ಯಮಂಡೂರು ಗ್ರಾಮದ ಸತೀಶ್ ಅವರು, ತಾನು ಪ್ರವಾಹ ಪೀಡಿತ ಪ್ರದೇಶದಲ್ಲಿ ವಾಸ ಮಾಡುತ್ತಿದ್ದು, ಜಾಗ ನೀಡುವಂತೆ ತಹಶೀಲ್ದಾರರಿಗೆ ಮನವಿ ಮಾಡಿದರು. ತೂಚಮಕೇರಿ ಬಳಿ ಜಾಗ ಗುರುತಿಸಲಾಗಿದೆ. ಆದರೆ ಸರ್ವೆ ಅವರು ಜಾಗ ಅಳತೆ ಮಾಡಿಲ್ಲ ಎಂದು ಜಿಲ್ಲಾಧಿಕಾರಿ ಅವರ ಗಮನಕ್ಕೆ ತಂದರು. ಈ ಕುರಿತು ಮಾತನಾಡಿದ ಜಿಲ್ಲಾಧಿಕಾರಿ ಅವರು ಜಾಗ ಅಳತೆ ಮಾಡುವ ಬಗ್ಗೆ ಸರ್ವೆ ಇಲಾಖೆ ಉಪ ನಿರ್ದೇಶಕರಿಗೆ ಸೂಚಿಸಲಾಗುವುದು. ಹಾಗೆಯೇ ಶಾಸಕರ ಜೊತೆ ಚರ್ಚಿಸಿ ಪರಿಹರಿಸಲಾಗುವುದು ಎಂದರು. ಚೇರಂಬಾಣೆಯ ರಘು ಅವರು ಮಾತನಾಡಿ, ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದ್ದು, ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಕ್ರಮವಹಿಸಬೇಕು ಎಂದು ಹೇಳಿದರು. ಈ ಬಗ್ಗೆ ಮಾತನಾಡಿದ ಜಿಲ್ಲಾಧಿಕಾರಿ ಅವರು ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಗ್ರಾ.ಪಂ.ಗಳಿಗೆ ಈಗಾಗಲೇ ಸೂಚಿಸಲಾಗಿದೆ ಎಂದರು.

ಮಡಿಕೇರಿಯ ರೂಪಾ ಅವರು ಕರೆ ಮಾಡಿ, ಕನ್ನಿಕಾ ಪರಮೇಶ್ವರಿ ದೇವಸ್ಥಾನ ಬಳಿ ಕುಡಿಯುವ ನೀರು ಪೂರೈಸುವ ಪೈಪ್‌ಲೈನ್ ಕಾಮಗಾರಿ ಅರ್ಧಕ್ಕೆ ಸ್ಥಗಿತಗೊಳಿಸಲಾಗಿದೆ ಎಂದು ದೂರಿದರು.

ಸುಂಟಿಕೊಪ್ಪ ಬಳಿಯ ಕಂಬಿಬಾಣೆಯ ಸಾರ್ವಜನಿಕರೊಬ್ಬರು ಕರೆ ಮಾಡಿ ಅರ್ಧ ಎಕರೆ ಜಾಗಕ್ಕಾಗಿ 1987 ರಿಂದ ಉಪ ವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿ ನ್ಯಾಯಾಲಯಕ್ಕೆ ಅಲೆಯುತ್ತಿದ್ದೇನೆ, ಆದರೂ ಸಹ ಕೆಲಸ ಆಗಿಲ್ಲ ಎಂದು ದೂರಿದರು. ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಅವರು ದಾಖಲೆ ಪರಿಶೀಲಿಸಿ ಮುಂದಿನ ಕ್ರಮ ವಹಿಸಲಾಗುವುದು ಎಂದು ಹೇಳಿದರು. ಸೋಮವಾರಪೇಟೆಯ ಬೋಪಯ್ಯ ಮಾತನಾಡಿ, ಸರ್ಕಾರಿ ಕಚೇರಿಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡುವ ಕಾರ್ಯ ಆಗಬೇಕು ಎಂದು ಸಲಹೆ ಮಾಡಿದರು. ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಕಿ ಎಂ.ಶಕುಂತಲಾ ಅವರು ನಡೆಸಿಕೊಟ್ಟರು. ಮಡಿಕೇರಿ ಆಕಾಶವಾಣಿ ಮುಖ್ಯಸ್ಥರಾದ ಪಿ.ಎಂ.ಜಗದೀಶ್, ತಾ.ಪ.ಇಒ ಶೇಖರ್, ನಗರಾಭಿವೃದ್ಧಿ ಯೋಜನಾ ಶಾಖೆಯ ಯೋಜನಾ ನಿರ್ದೇಶಕ ಬಿ.ಬಸಪ್ಪ, ಆಹಾರ ಇಲಾಖೆ ಉಪ ನಿರ್ದೇಶಕ ಭೀಮರಾಯ, ಇತರರು ಇದ್ದರು.

ಮಂಗಳೂರಿನ ದತ್ತ ನಗರ ನಿವಾಸಿಗಳ ಸಂಘದ ವಾರ್ಷಿಕೋತ್ಸವ

ಸ್ತ್ರೀಯರ ಸಮಾನತೆಗಾಗಿ ಹೋರಾಟ: ಹರಿಕೃಷ್ಣ

ಮಂಗಳೂರು: ಇಲ್ಲಿನ ಮಂಗಳೂರಿನ ದತ್ತ ನಗರ ನಿವಾಸಿಗಳ ಸಂಘದ ವತಿಯಿಂದ ವಾರ್ಷಿಕೋತ್ಸವ ಸಮಾರಂಭ ದತ್ತ ನಗರ ರಂಗಮಂದಿರದಲ್ಲಿ ಶನಿವಾರ ಜರಗಿತು.

ಕಾರ್ಯಕ್ರಮವನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿಭಾಗ ಸಹ ಕಾರ್ಯವಾಹ ಹರಿಕೃಷ್ಣ ಉದ್ಘಾಟಿಸಿ, ಸಂಸ್ಕಾರ ಸಂಸ್ಕೃತಿ ಮಕ್ಕಳಿಗೆ ಮನೆಯಿಂದಲೇ ಹೇಳಿಕೊಡುವ ಮೂಲಕ ದೇಶಕ್ಕೆ ಸತ್ಪ್ರಜೆಗಳನ್ನು ಸೃಷ್ಟಿಸುವ ಮೂಲಕ ವ್ಯಕ್ತಿತ್ವವನ್ನು ನಿರ್ಮಿಸಿ, ದೇಶವನ್ನು ಬಲಿಷ್ಠ ಗೊಳಿಸುವ ಕಾಯಕಕ್ಕೆ ದೇಶದ ತಾಯಂದಿರ ಕೊಡುಗೆ ಅಮೂಲ್ಯವಾದಾಗಿದೆ. ದೇಶದಲ್ಲಿ ಸ್ತ್ರೀಯರಿಗೆ ಸಮಾನತೆ ಕೊಡುವ ವಿಚಾರದಲ್ಲಿ ಇತ್ತೀಚೆಗೆ ಹೋರಾಟ ನಡೆಯುತ್ತಿದ್ದರೂ, ಭಾರತದಲ್ಲಿ ಸ್ತ್ರೀಯರಿಗೆ ಪೂಜ್ಯವಾದ ಸ್ಥಾನವನ್ನು ನೀಡಲಾಗಿದೆ. ದೇವರ ಆರಾಧನೆಯಲ್ಲಿಯೂ ಲಕ್ಷ್ಮಿ, ಸರಸ್ವತಿ ದುರ್ಗೆ ಹೀಗೆ ಶಕ್ತಿಗಳ ಆರಾಧನೆ ನಡೆಯುತ್ತದೆ. ಹೀಗಾಗಿ ಪ್ರಪಂಚಕ್ಕೆ ಭಾರತ ಮಾದರಿಯಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಯುವ ಸಮೂಹವು ಭಜನಾ ಕ್ಲಬ್‌ಗಳನ್ನು ಆರಂಭಿಸುವ ಮೂಲಕ ದೇವರಲ್ಲಿ ಭಕ್ತಿಯನ್ನು ತೋರಿಸಿದರೆ ಅದರಲ್ಲಿ ಮನಃ ಶಾಂತಿಯು ಇದೆ ಎಂಬುದನ್ನು ಅರಿತುಕೊಂಡಿರುವುದು ಒಳ್ಳೆಯ ಬೆಳವಣಿಗೆ ಎಂದರು.

ದತ್ತ ಸಂಘದ ಅಧ್ಯಕ್ಷ ಹರೀಶ್ ಗೌಡ ಮಾತನಾಡಿ, ಸಂಘದ ವತಿಯಿಂದ ಬಡಾವಣೆಯ ವ್ಯಾಪ್ತಿಯಲ್ಲಿ ಹೆಚ್ಚು ಅಭಿವೃದ್ಧಿ ಕಾರ್ಯ ಮಾಡಲು ಎಲ್ಲರ ಸಹಕಾರವಿರಲಿ ಎಂದರು.

ಸಂಚಾಲಕ ಎಚ್.ಕೆ. ಪುರುಷೋತ್ತಮ್ ಮಾತನಾಡಿ, ಸಂಘದಿಂದ ಪ್ರತಿ ವರ್ಷವೂ ಸಾಧಕರನ್ನು ಸನ್ಮಾನಿಸುವ, ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಅಂಕ ಪಡೆದವರನ್ನು ಗೌರವಿಸುವ ಹಾಗೂ ವಿಶೇಷವಾಗಿ ನಮ್ಮ ಜೀವನದ ಒಡನಾಡಿಯಾಗಿರುವಂತಹ ಮೂಕ ಪ್ರಾಣಿಗಳನ್ನು ಗುರುತಿಸುವ ಕೆಲಸವನ್ನು ಮಾಡುತ್ತಾ ಬರುತ್ತಿದ್ದೇವೆ. ಈ ಹಿಂದೆ ಪೊಲೀಸ್ ಇಲಾಖೆಯ ಶ್ವಾನದಳ, ಕಂಬಳದ ಕೋಣ ಗೌರವಿಸಿದ್ದೇವೆ. ಈ ಬಾರಿ ಹಿಂದೂ ಸಂಪ್ರದಾಯದಲ್ಲಿ ಪವಿತ್ರ ಸ್ಥಾನವನ್ನು ಪಡೆದಿರುವ ಅಶ್ವಕ್ಕೆ ಸನ್ಮಾನವನ್ನು ಮಾಡಿದ್ದೇವೆ ಎಂದರು. ಪ್ರಧಾನ ಕಾರ್ಯದರ್ಶಿ ಹರೀಶ್ ಭಂಡಾರಿ, ಕೋಶಾಧಿಕಾರಿ ಸತೀಶ್ ಕೆ. ನಿರೂಪಿಸಿದರು. ನಿಕಟಪೂರ್ವ ಅಧ್ಯಕ್ಷ ಪ್ರವೀಣ್ ಶೆಟ್ಟಿ ಬಡಾವಣೆಯ ಸದಸ್ಯರು ಉಪಸ್ಥಿತರಿದ್ದರು. ಬಡಾವಣೆಯ ನಿವಾಸಿಗಳಿಂದ ವೈವಿಧ್ಯಮಯ ಕಾರ್ಯಕ್ರಮ, ಹಾಗೂ ಮಂಜೇಶ್ವರದ ಶಾರದಾ ಆರ್ಟ್ಸ್ ತಂಡದ ಐಸಿರಿ ಕಲಾವಿದರು ಅಭಿನಯಿಸಿದ ಜೈ ಭಜರಂಗಬಲಿ ತುಳು ಸಾಮಾಜಿಕ ನೀತಿ ಬೋಧಕ ನಾಟಕ ಪ್ರದರ್ಶನ ನಡೆಯಿತು.



ಸನ್ಮಾನ

ದೈವಾರಾಧಕ ಉಮೇಶ್, ದೇಶದ ನೌಕಾಪಡೆಯಲ್ಲಿ ಸೇವೆ ಸಲ್ಲಿಸಿದ ಅತುಲ್ ಕುಮಾರ್ ರಸ್ತೋಗಿ, ಅನ್ಯ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಹಿಮನಿ ಬಿ ಸುವರ್ಣ, ಅಖಿಲ ಎಸ್ ನಾಯಕ್, ಶ್ರಾವ್ಯ ಕೆ ಅವರನ್ನು ಸನ್ಮಾನಿಸಲಾಯಿತು.

ಪೊಳಲಿ ಮಠದ ಆಶ್ರಯದಲ್ಲಿ ಶಾರಂಗ ತಂಡದಿಂದ ಅರ್ಧ ಏಕಾಹ ಭಜನೆ

ಭಜನೆಯಿಂದ ಸಮಾಜದ ಒಗ್ಗಟ್ಟು: ಡಾ. ಕೃಷ್ಣಪ್ರಸನ್ನ

ಪುತ್ತೂರು: ಪೊಳಲಿ ಶ್ರೀ ಲಕ್ಷ್ಮೀ ವೆಂಕಟರಮಣ ಮಠದ ಆಶ್ರಯದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಶಾರಂಗ ತಂಡದ ಸಾರಥ್ಯದಲ್ಲಿ ಅರ್ಧ ಏಕಾಹ ಭಜನೆ ಏ.26ರಂದು ಬೆಳಗ್ಗೆ 6.30ರಿಂದ ಸಂಜೆ 6.30ರವರೆಗೆ ನಡೆಯಿತು.

ಸಂಜೆ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿಶ್ವ ಹಿಂದೂ ಪರಿಷದ್ ಜಿಲ್ಲಾಧ್ಯಕ್ಷ ಡಾ. ಕೃಷ್ಣಪ್ರಸನ್ನ, ಮಕ್ಕಳು ಮೊಬೈಲಿನಲ್ಲಿ ಬ್ಯುಸಿ, ಹೆಣ್ಣು ಮಕ್ಕಳು ಧಾರವಾಹಿಯಲ್ಲಿ, ಗಂಡಸರು ಕೆಲಸದಲ್ಲಿ ಬ್ಯುಸಿ. ಹೀಗಿರುವಾಗ ಸಮಾಜವನ್ನು ಭಜನೆ ಮೂಲಕ ಧಾರ್ಮಿಕತೆಯೆಡೆಗೆ, ಸಂಸ್ಕೃತಿಯೆಡೆಗೆ ಕೊಂಡೊಯ್ಯಬೇಕೆಂಬ ಶಾರಂಗ ತಂಡದ ಕಾರ್ಯ ಶ್ಲಾಘನೀಯ ಎಂದರು.

ಶಾರಂಗ ಎಂದರೆ ಕೃಷ್ಣ ಅಥವಾ ವೆಂಕಟರಮಣ ದೇವರ ಬಿಲ್ಲು, ವಿಷ್ಣುವನ್ನು ಶಾರಂಗ ಪಾಣಿ ಎಂದೇ ಕರೆಯುತ್ತಾರೆ. ಒಂದು ಗುರಿ ಇಟ್ಟುಕೊಂಡು ರಚಿತವಾದ ಶಾರಂಗ ತಂಡ, ಸಾಮಾಜಿಕ, ಧಾರ್ಮಿಕ ಕಾರ್ಯಗಳ ಉದ್ದೇಶದೊಂದಿಗೆ ಹಿಂದೂ ಸಮಾಜದಲ್ಲಿ ಗುರುತಿಸುವಂತಾಗಲಿ ಎಂದು ಹಾರೈಸಿದರು.

ಯು.ಆರ್. ಪ್ರಾಪರ್ಟೀಸ್ ಮಾಲಕ ಉಜ್ವಲ್ ಪ್ರಭು ಮಾತನಾಡಿ, ಭಜನೆ ಇದ್ದಲ್ಲಿ ವಿಭಜನೆ ಇಲ್ಲ ಎಂದು ಹಿರಿಯರು ಹೇಳಿದ್ದಾರೆ. ಈ ಮಾತನ್ನು ಸಾಕಾರಗೊಳಿಸಲು ಶಾರಂಗ ತಂಡದ ಕಾರ್ಯ ಅಭಿನಂದನೀಯ ಎಂದರು.

ದುರ್ಗಾಲಕ್ಷ್ಮೀ ಜ್ಯುವೆಲ್ಲರ್ಸ್ ಮಾಲಕ ಶಿವಾಜಿ ಸುರ್ವೆ, ಪೊಳಲಿ ಮಠ ಆಡಳಿತ ಸಮಿತಿ ಅಧ್ಯಕ್ಷ ಉಮಾಶಂಕರ ಎದುರ್ಕಳ, ಪೊಳಲಿ ಮಠದ ಅರ್ಚಕ ವೇದಮೂರ್ತಿ ಸತ್ಯನಾರಾಯಣ್ ಭಟ್, ಶಾರಂಗ ತಂಡದ ಸಂಚಾಲಕ ರಮೇಶ್ ಪದೆಂಜಾರು ಇದ್ದರು. ಶಾರಂಗ ತಂಡದ ಆದಿತ್ಯ ಸ್ವಾಗತಿಸಿ, ಕಾರ್ತಿಕ್ ವಂದಿಸಿದರು. ಸಂತೋಷ್ ಕುಮಾರ್ ನಿರ್ವಹಿಸಿದರು. ಸಹ ಸಂಚಾಲಕರಾದ ಕಾರ್ತಿಕ್, ಅಶ್ವಥ್, ಈಶ್ವರ್ ಸಹಕರಿಸಿದರು.



ನೂತನ ತಂಡ

ಪೊಳಲಿ ಶ್ರೀ ಲಕ್ಷ್ಮೀ ವೆಂಕಟರಮಣ ಮಠದಲ್ಲಿ ನೂತನ ತಂಡ ಅಸ್ತಿತ್ವಕ್ಕೆ ಬಂದಿದ್ದು, ಶಾರಂಗ ಎಂದು ಹೆಸರಿಡಲಾಗಿದೆ. ಟೀಮ್ ವಿತ್ ಏಮ್ ಎಂಬ ಧ್ಯೇಯ ವಾಕ್ಯದಂತೆ ಕಾರ್ಯ ನಿರ್ವಹಿಸಲಿರುವ ಈ ತಂಡ ಮೊದಲ ಕಾರ್ಯಕ್ರಮವಾಗಿ ಅರ್ಧ ಏಕಾಹ ಭಜನೆಯನ್ನು ಆಯೋಜಿಸಿದ್ದು, ಶ್ಲಾಘನೆಗೆ ಪಾತ್ರವಾಗಿದೆ.

ಅರ್ಧ ಏಕಾಹ ಭಜನೆ

ಬೆಳಗ್ಗೆ 6 ಗಂಟೆಗೆ ಪೊಳಲಿ ಮಠದ ಅರ್ಚಕ ವೇದಮೂರ್ತಿ ಸತ್ಯನಾರಾಯಣ್ ಭಟ್ ಅವರು ದೀಪೋಜ್ವಲನೆ ಮಾಡುವ ಮೂಲಕ ಅರ್ಧ ಏಕಾಹ ಭಜನೆಯನ್ನು ಉದ್ಘಾಟಿಸಲಾಯಿತು. ಬೆಳಗ್ಗೆ 6.30ಕ್ಕೆ ಆರಂಭವಾದ ಭಜನೆ ಸಂಜೆಯವರೆಗೆ ನಿರಂತರವಾಗಿ ನಡೆಯಿತು. ಬೆಳಗ್ಗೆ ಗಣಪತಿ ಹವನ, ಮಧ್ಯಾಹ್ನ ಮಹಾಪೂಜೆ, ಅನ್ನಪ್ರಸಾದ ಹಾಗೂ ಸಂಜೆ ಧಾರ್ಮಿಕ ಕಾರ್ಯಕ್ರಮ ಜರಗಿತು.

ತುಳು ಭಾಷೆ ಬೆಳವಣಿಗೆಗೆ ವಿಶೇಷ ಕಾರ್ಯಕ್ರಮಕ್ಕೆ ಶೀಘ್ರ ಚಾಲನೆ: ಭಂಡಾರಿ



ಮಂಗಳೂರು: ಉಳ್ಳಾಲ ನರಿಂಗಾನ ಗ್ರಾಮದಲ್ಲಿ ತುಳು ಗ್ರಾಮ ನಿರ್ಮಿಸಲು ಸರಕಾರ ಒಕ್ಕೂಟಕ್ಕೆ ಕಾದಿರಿಸಿದ ಜಾಗದಲ್ಲಿ ತುಳು ಭಾಷೆ ಸಂಸ್ಕೃತಿ, ಅಭಿವೃದ್ಧಿ ನೆಲೆಯಲ್ಲಿ ವಿವಿಧ ಕಾರ್ಯಕ್ರಮಗಳು, ಸ್ಪರ್ಧೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಗೌರವ ಮತ್ತು 2027–2029ನೇ ಸಾಲಿನ ನೂತನ ಅಧ್ಯಕ್ಷರ ಸಹಿತ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಒಕ್ಕೂಟದ ಸಂಘಟನಾ ಕಾರ್ಯದರ್ಶಿ ಕದ್ರಿ ನವನೀತ ಶೆಟ್ಟಿ ಅವರ ಮಾರ್ಗದರ್ಶನದಲ್ಲಿ ನಡೆಯಲಿದೆ ಎಂದು ಒಕ್ಕೂಟದ ಅಧ್ಯಕ್ಷ ಎ.ಸಿ. ಭಂಡಾರಿ ಹೇಳಿದರು.

ಕಾವೂರು ಗಾಂಧಿನಗರದ ಒಕ್ಕೂಟ ಕಚೇರಿ ಸಭಾಂಗಣದಲ್ಲಿ ನಡೆದ ಒಕ್ಕೂಟದ ಕಾರ್ಯಕಾರಿ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಉಳ್ಳಾಲ ನರಿಂಗಾನದಲ್ಲಿ ಈಗಾಗಲೇ ಒಂದು ಎಕರೆ ಜಾಗವನ್ನು ತುಳು ಗ್ರಾಮ ನಿರ್ಮಿಸಲು ಸರಕಾರ ಒಕ್ಕೂಟಕ್ಕೆ ಕಾದಿರಿಸಿದೆ. ಆದರೆ ಇನ್ನಷ್ಟು ಜಾಗದ ಅವಶ್ಯಕತೆ ಇರುವುದರಿಂದ ಸರಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ. ಒಕ್ಕೂಟದ ಸದಸ್ಯರ ಸಂಖ್ಯೆಯನ್ನು 100ಕ್ಕೆ ಹೆಚ್ಚಿಸಲು ಪ್ರಯತ್ನಿಸಲಾಗುವುದು ಎಂದರು.

ಪ್ರಧಾನ ಕಾರ್ಯದರ್ಶಿ ಪಿ.ಎ. ಪೂಜಾರಿ ಮಾತನಾಡಿದರು. ಒಕ್ಕೂಟದ ಕೋಶಾಧಿಕಾರಿ ವಿಜಯಲಕ್ಷ್ಮಿ ಬಿ. ಶೆಟ್ಟಿ ಪ್ರಸ್ತುತ ಸಾಲಿನ ಲೆಕ್ಕಪತ್ರವನ್ನು ಮಂಡಿಸಿ ಅನುಮೋದನೆ ಪಡೆದರು. ಒಕ್ಕೂಟದ ಉಪಾಧ್ಯಕ್ಷ ಯೋಗೀಶ್ ಶೆಟ್ಟಿ ಜೆಪ್ಪು ಜೊತೆ ಕಾರ್ಯದರ್ಶಿ ಗಣೇಶ್ ಮಲ್ಲಿ ಮರಕಡ, ಸದಸ್ಯರಾದ ಸುಧಾಕರ್ ಆಳ್ವ, ಜಯಂತಿ ಬಂಗೇರ ಮೂಡಬಿದ್ರೆ ಮತ್ತು ಮಾಧ್ಯಮ ವಕ್ತಾರ ಮುಲ್ಕಿ ಕರುಣಾಕರ ಶೆಟ್ಟಿ ಉಪಸ್ಥಿತರಿದ್ದರು. ಪ್ರಶಾಂತ್ ಭಟ್ ಕಡಬ ವಂದಿಸಿದರು.

ಶ್ರೀ ಅಮೃತೇಶ್ವರ ಯಕ್ಷಗಾನ ಪ್ರತಿಷ್ಠಾನದ ದ್ವಾದಶ ಸಂಭ್ರಮಾಚರಣೆ



ಕೈಕಂಬ: ವಾಮಂಜೂರು ತಿರುವೈಲಿನ ಶ್ರೀ ಅಮೃತೇಶ್ವರ ಯಕ್ಷಗಾನ ಪ್ರತಿಷ್ಠಾನ ದ್ವಾದಶ ಸಂಭ್ರಮದ ಪ್ರಯುಕ್ತ ಯಕ್ಷಗುರು ರಾಕೇಶ್ ರೈ ಅಡ್ಕ ಶಿಷ್ಯವೃಂದದ ಆಯ್ದ 5 ತಂಡಗಳ ಸನಾತನ ಯಕ್ಷಗಾನ ಸ್ಪರ್ಧಾ ಕಾರ್ಯಕ್ರಮವು ಶ್ರೀ ಅಮೃತೇಶ್ವರ ದೇವಸ್ಥಾನದ ಮುಂಭಾಗ ಶನಿವಾರ ನಡೆಯಿತು.

ಗೆಜ್ಜೆಪೂಜೆ ಮತ್ತು ಚೌಕಿ ಪೂಜೆ ನಡೆದ ಬಳಿಕ ಆಯೋಜಿಸಲಾಗಿದ್ದ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೇವಸ್ಥಾನದ ಆಡಳಿತಾಧಿಕಾರಿ, ಕಂದಾಯ ಅಧಿಕಾರಿ ಪೂರ್ಣಚಂದ್ರ ತೇಜಸ್ವಿ ಮಾತನಾಡಿ, ಯಕ್ಷಗಾನಕ್ಕೆ ಪೂರಕವಾಗಿರುವ ಈ ಊರಿನಲ್ಲಿ ಯಕ್ಷಗಾನ ಕಲಾ ಪ್ರಕಾರಕ್ಕೆ ಸೀಮಿತವಾದ ಸಂಸ್ಥೆಯೊಂದು ಹುಟ್ಟಿಕೊಂಡಿದೆ. ಈ ಸಂಸ್ಥೆ ಯಶಸ್ವಿಯಾಗಿ ಮುನ್ನಡೆಯಲಿ ಎಂದರು.

ಪ್ರತಿಷ್ಠಾನದ ಅಧ್ಯಕ್ಷ ದೀಪಕ್ ಶೆಟ್ಟಿ ಲಿಂಗಮಾರುಗುತ್ತು ಪ್ರಸ್ತಾವಿಸಿದರು. ದೇವಸ್ಥಾನದ ಪ್ರಧಾನ ಅರ್ಚಕ ಬಾಲಕೃಷ್ಣ ಭಟ್ ಆಶೀರ್ವಚನ ನೀಡಿದರು. ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಸತ್ಯನಾರಾಯಣ ಹೊಳ್ಳ ಬೊಂಡಂತಿಲ ಅವರನ್ನು ಗೌರವಿಸಲಾಯಿತು. ಹರಿ ಉಪಾಧ್ಯಾಯ, ಸುದರ್ಶನ ಶೆಟ್ಟಿ ಪೆರ್ಮಂಕಿ, ಕಿರಣ್ ಪಕ್ಕಳ ಪೆರ್ಮಂಕಿಗುತ್ತು, ರಾಜಕುಮಾರ ಶೆಟ್ಟಿ ಮಾತನಾಡಿದರು. ಬಿ. ಚಂದ್ರಹಾಸ ರೈ ವಾಮಂಜೂರು, ಸಂತೋಷ್ ಶೆಟ್ಟಿ ಶೆಡ್ಡೆ ಹೊಸಲಕ್ಕೆ, ಸೀತಾರಾಮ ಜಾಣು ಶೆಟ್ಟಿ, ಮಾರಪ್ಪ ಪೂಜಾರಿ ವಾಮಂಜೂರು, ರಾಜೀವ ಶೆಟ್ಟಿ ಸಲ್ಲಾಜೆ, ಚಂದ್ರಶೇಖರ ಶೆಟ್ಟಿ ಕೊಳಕೆಬೈಲು, ಸುಭಾಷ್ ಬಾಲಕಟ್ಟ ವಾಮಂಜೂರು, ಭಾಗವತ ಶ್ರೀನಿವಾಸ ಬಳ್ಳಮಂಜ, ಸೌಮ್ಯಾ ಡಿ. ಬಂಗೇರ ಬೊಂಡಂತಿಲ ಮತ್ತಿತರರು ಇದ್ದರು. ಅಶ್ವಿನಿ ಶೆಟ್ಟಿ ಬೊಂಡಂತಿಲ ನಿರೂಪಿಸಿ, ಪ್ರತಿಷ್ಠಾನದ ಕಾರ್ಯದರ್ಶಿ ಗೋಕುಲದಾಸ್ ಶೆಟ್ಟಿ ಪಡುಪಳ್ಳಿ ವಂದಿಸಿದರು. ಬಳಿಕ ಯಕ್ಷಗಾನ ಸ್ಪರ್ಧೆಯಲ್ಲಿ ರಾಕೇಶ್ ರೈ ಅವರಿಂದ ತರಬೇತಿ ಹೊಂದಿದ ದ.ಕ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳ ಶಿಷ್ಯವೃಂದಗಳ 5 ತಂಡಗಳು ಪಾಲ್ಗೊಂಡಿದ್ದವು.

ಸುಬ್ರಹ್ಮಣ್ಯ ಮಠದಲ್ಲಿ ನೃಸಿಂಹ ಜಯಂತಿ: ಮಹಾರಥೋತ್ಸವಕ್ಕೆ ತೆರೆ



ಸುಬ್ರಹ್ಮಣ್ಯ: ಜಗದ್ಗುರು ಶ್ರೀ ಮಧ್ವಾಚಾರ್ಯ ಮಹಾಸಂಸ್ಥಾನಮ್‌ನ ಸಂಪುಟ ನರಸಿಂಹ ಸ್ವಾಮಿ ಸುಬ್ರಹ್ಮಣ್ಯ ಮಠದಲ್ಲಿ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀ ಪಾದರ ಉಪಸ್ಥಿತಿಯಲ್ಲಿ ಶುಕ್ರವಾರ ನರಸಿಂಹ ಜಯಂತಿ ಮಹಾರಥೋತ್ಸವವು ನೆರವೇರಿತು. ಪ್ರಧಾನ ಅರ್ಚಕ ವೇದಮೂರ್ತಿ ಶ್ರೀಕರ ಉಪಾಧ್ಯಾಯರು ಶ್ರೀ ದೇವರ ಉತ್ಸವಾದಿ ವಿಧಿ ವಿಧಾನ ನೆರವೇರಿಸಿದರು.

ವ್ಯಾಸಪೂಜೆ

ವ್ಯಾಸ ಪೂರ್ಣಿಮದ ದಿನವಾದ ಶುಕ್ರವಾರ ಪ್ರಾತ:ಕಾಲ ವ್ಯಾಸಪೂಜೆ ನೆರವೇರಿತು. ಆ ಬಳಿಕ ನಿತ್ಯ ಉತ್ಸವ ನಡೆಯಿತು. ತದನಂತರ ರಥಬೀದಿಗೆ ಆಗಮಿಸಿದ ದೇವರು ಮಹಾರಥದಲ್ಲಿ ಆರೂಢರಾದರು. ನಂತರ ರಥದಲ್ಲಿ ಶ್ರೀ ದೇವರಿಗೆ ಪೂಜೆ ನೆರವೇರಿತು. ಭಕ್ತಾದಿಗಳು ಶ್ರೀ ದೇವರಿಗೆ ಆರತಿ, ಹಣ್ಣುಹಂಪಲು ಅರ್ಪಿಸಿದರು.

ವಸಂತ ಪೂಜೆ

ರಥೋತ್ಸವದ ಬಳಿಕ ಶ್ರೀ ಮಠದಲ್ಲಿ ವಸಂತಪೂಜೆಯನ್ನು ಶ್ರೀಗಳು ನೆರವೇರಿಸಿದರು. ನಂತರ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಗಳು ರಥೋತ್ಸವ ಸೇವೆ ನೆರವೇರಿಸಿದ ಭಕ್ತರಿಗೆ ಶಾಲು ಹೊದಿಸಿ ಫಲ ಮಂತ್ರಾಕ್ಷತೆಯೊಂದಿಗೆ ಶ್ರೀ ದೇವರ ಪ್ರಸಾದ ನೀಡಿ ಹರಸಿದರು. ಈ ಸಂದರ್ಭ ಶ್ರೀ ಮಠದ ದಿವಾನ ಸುದರ್ಶನ ಜೋಯಿಸ, ಪ್ರಮುಖರಾದ ಕೆ. ಯಜ್ಞೇಶ್ ಆಚಾರ್, ಶ್ರೀಕೃಷ್ಣ ಶರ್ಮ, ಸುಹಾಸ್ ಉಪಾಧ್ಯಾಯ ದೇವರಗದ್ದೆ, ರವೀಂದ್ರ ಭಟ್ ಮತ್ತಿತರರು ಉಪಸ್ಥಿತರಿದ್ದರು.

ಉಳ್ಳಾಲ ಶ್ರೀ ಶಾರದಾನಿಕೇತನದಲ್ಲಿ 20 ದಿನಗಳ ಉಚಿತ ಧರ್ಮ ಶಿಕ್ಷಣ ಶಿಬಿರದ ಸಮಾರೋಪ ಕಾರ್ಯಕ್ರಮ

ಧರ್ಮ ಶಿಕ್ಷಣದ ಕೊರತೆಯಿಂದ ಮಕ್ಕಳು ದುಶ್ಚಟಗಳಿಗೆ ಬಲಿ: ಪುಷ್ಪರಾಜ್

ಉಳ್ಳಾಲ: ಶಾಲೆ ಹಾಗೂ ಮನೆಗಳಲ್ಲಿ ಧರ್ಮದ ಕುರಿತಂತೆ ಯಾವುದೇ ರೀತಿಯ ಶಿಕ್ಷಣ ಸಿಗದ ಕಾಲ ಘಟ್ಟದಲ್ಲಿ ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರಗಳನ್ನು ಕಲಿಸಲು ಧರ್ಮ ಶಿಕ್ಷಣ ಶಿಬಿರಗಳು ಪರಿಣಾಮಕಾರಿಯಾಗಿದೆ. ಮಕ್ಕಳಿಗೆ ಎಳೆಯ ಪ್ರಾಯದಲ್ಲೇ ಧರ್ಮ, ಸಂಸ್ಕೃತಿ, ಸಂಸ್ಕಾರಗಳನ್ನ ಕಲಿಸಿ ಕೊಟ್ಟರೆ ಅವರು ಜೀವನದಲ್ಲಿ ಎಂದಿಗೂ ಹಾದಿ ತಪ್ಪದೆ ಸಮಾಜದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲು ಸಾಧ್ಯವೆಂದು ಸಾಮಾಜಿಕ ಕಾರ್ಯಕರ್ತ ಪುಷ್ಪರಾಜ್ ಕೆರೆಬೈಲ್ ಅಭಿಪ್ರಾಯಪಟ್ಟರು.

ಉಳ್ಳಾಲದ ದುರ್ಗಾ ಕುಣಿತ ಭಜನಾ ತಂಡದ ವತಿಯಿಂದ ಉಳ್ಳಾಲ ಶ್ರೀ ಶಾರದಾನಿಕೇತನದಲ್ಲಿ ಕಳೆದ 20 ದಿನಗಳ ಕಾಲ ನಡೆದ ಉಚಿತ ಧರ್ಮ ಶಿಕ್ಷಣ ಶಿಬಿರದ ಪ್ರಯುಕ್ತ ಬುಧವಾರ ಸಮಾರೋಪ



ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಯುವ ಸಮುದಾಯವು ಮಾದಕ ದ್ರವ್ಯಗಳ ವ್ಯಸನಕ್ಕೆ ಬಲಿಯಾಗಿ ಸಮಾಜ ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ನಿರಂತರ ವರದಿಗಳಾಗುತ್ತಿವೆ. ಮಕ್ಕಳಲ್ಲಿ ಧರ್ಮ ಶಿಕ್ಷಣದ ಕೊರತೆಯೇ ಈ ಅನಾಹುತಗಳಿಗೆ ಕಾರಣವಾಗಿದೆ.ಇಂತಹ ಧರ್ಮ ಶಿಕ್ಷಣ ಶಿಬಿರಗಳಿಂದ ಯುವ ಸಮುದಾಯವನ್ನು ಸರಿ ದಾರಿಗೆ ಕೊಂಡೊಯ್ಯುವ ಪ್ರಯತ್ನ ಎಲ್ಲೆಡೆ ನಡೆಸಬೇಕಿದೆ.ಪೋಷಕರು ತಮ್ಮ ಮಕ್ಕಳನ್ನ ಸ್ವಯಂ ಪ್ರೇರಣೆಯಿಂದ ಇಂತಹ ಶಿಬಿರಗಳಿಗೆ ಕಳಿಸಿಕೊಟ್ಟು ಅವರ ಉತ್ತಮ ಭವಿಷ್ಯವನ್ನ ರೂಪಿಸಬೇಕಿದೆಯೆಂದರು. ಕುತ್ತಾರು ಭ್ರಾಮರಿ ಮಹಿಳಾ ಮಂಡಲದ ಗೌರವಾಧ್ಯಕ್ಷ ಧನಲಕ್ಷ್ಮೀ ಗಟ್ಟಿ ಮಾತನಾಡಿ ದರು. ಪೋಷಕರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರಗಳನ್ನ ಕಲಿಸುವುದು ಅಗತ್ಯವಿದೆ.ಮನೆಯಲ್ಲಿ ನಾವು ಸಂಸ್ಕಾರಯುತ ಜೀವನ ಪದ್ಧತಿ ಅಳವಡಿಸಿಕೊಂಡರೆ ನಮ್ಮ ಮಕ್ಕಳು ಅದನ್ನು ಅನುಕರಿಸಲು ಸಾಧ್ಯ ಎಂದರು. ತೊಕ್ಕೊಟ್ಟು ಅಂಬಾವನ ಧರ್ಮಶಿಕ್ಷಣ ಕೇಂದ್ರದ ಸಂಚಾಲಕ ಡಾ.ಅರುಣ್ ಉಳ್ಳಾಲ್,ಶಿಕ್ಷಕಿ ಮಲ್ಲಿಕಾ ಉಳ್ಳಾಲಬೈಲ್ ಉಪಸ್ಥಿತರಿದ್ದರು. ಶಿಬಿರದ ಸಂಯೋಜಕ ಲತಾ ಶ್ರೀಧರ್ ಸ್ವಾಗತಿಸಿ, ಶಿಬಿರಾರ್ಥಿ ವಿದ್ಯಾರ್ಥಿನಿ ಶಿವಾಲಿ ನಿರೂಪಿಸಿದರು.

ಉತ್ತಮ ಸ್ಪಂದನೆ

ಧರ್ಮ ಶಿಕ್ಷಣ ಶಿಬಿರಕ್ಕೆ ಉತ್ತಮ ಸ್ಪಂದನೆ ದೊರಕಿದ್ದು, ಶಿಬಿರದಲ್ಲಿ ಮಕ್ಕಳಿಗೆ ಶ್ಲೋಕ, ಭಜನೆ, ರಾಮರಕ್ಷಾ ಸ್ತೋತ್ರ, ಹನುಮಾನ್ ಚಾಲೀಸ,ದೇವರ ನೀತಿ ಕಥೆ, ಜೀವನ ಮೌಲ್ಯಗಳನ್ನು ಕಲಿಸಲಾಯಿತು.ಕರಕುಶಲ ಕಲೆಗಳಾದ ಮೂಡೆ ಕಟ್ಟುವುದು, ತೆಂಗಿನ ಕಾಯಿಯ ಗೆರಟೆಯಿಂದ ಕಲಾಕೃತಿ ರಚನೆ, ಹೂ ಕಟ್ಟುವುದು, ಚಿತ್ರ ಬಿಡಿಸುವುದನ್ನ ಕಲಿಸಕೊಡಲಾಯಿತು.

ಸುತ್ತಮುತ್ತ

ಇಂದು ಶ್ರೀ ಅಯ್ಯಪ್ಪ ಕ್ಷೇತ್ರದಲ್ಲಿ ವಾರ್ಷಿಕ ಪ್ರತಿಷ್ಠಾ ಮಹೋತ್ಸವ

ಮಂಜೇಶ್ವರ: ಹೊಸಂಗಡಿ ಶ್ರೀ ಅಯ್ಯಪ್ಪ ಕ್ಷೇತ್ರದಲ್ಲಿ ವಾರ್ಷಿಕ ಪ್ರತಿಷ್ಠಾಪನಾ ಮಹೋತ್ಸವದ ಪ್ರಯುಕ್ತ ಶ್ರೀ ಅಯ್ಯಪ್ಪ ಸ್ವಾಮಿಗೆ ನವಕ ಕಲಶಾಭಿಷೇಕ, ತುಪ್ಪಾಭಿಷೇಕ ಸಹಿತ ವಿವಿಧ ಕಾರ್ಯಕ್ರಮಗಳು ಮೇ 2ರಂದು ಜರಗಲಿದೆ. ಬೆಳಗ್ಗೆ 6ಕ್ಕೆ ಗಣಪತಿಹೋಮ, 8ಕ್ಕೆ ನಿತ್ಯಪೂಜೆ, 8.30ಕ್ಕೆ ಭಜನೆ, ಮಧ್ಯಾಹ್ನ 11ಕ್ಕೆ ನವಕ ಕಲಶಾಭಿಷೇಕ, 12ಕ್ಕೆ ತುಪ್ಪಾಭಿಷೇಕ, 12.30ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ.

ನೇಮಕಾತಿಗೆ ಮೇ 7ರಂದು ಸಂದರ್ಶನ

ಕಾಸರಗೋಡು: ಕಾಸರಗೋಡು ಸರಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಪುರುಷ ಬಹುಪಯೋಗಿ ಕೆಲಸಗಾರರ ನೇಮಕಾತಿಗಾಗಿ ಸಂದರ್ಶನವು ಮೇ 7 ರಂದು ಬೆಳಗ್ಗೆ 10 ಗಂಟೆಗೆ ಸರಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ನಡೆಯಲಿದೆ. ಆಯುರ್ವೇದ ಚಿಕಿತ್ಸಕ ಅರ್ಹತೆ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಪ್ಲಸ್ ಟು ವಿದ್ಯಾರ್ಹತೆಯಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ, ಆಧಾರ್ ಕಾರ್ಡ್ ನಕಲು ಮತ್ತು ಮೂಲ ಪ್ರಮಾಣಪತ್ರಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ 04994 231624 ಕರೆ ಮಾಡಬಹುದು.

ಖಾದಿ ಬಟ್ಟೆಗಳ ಮೇಲೆ ಶೇ. 30ರಷ್ಟು ರಿಯಾಯಿತಿ

ಕಾಸರಗೋಡು: ಖಾದಿ ಗ್ರಾಮೋದ್ಯೋಗ ಮಂಡಳಿ ಮೇ 1 ರಿಂದ 30ರ ವರೆಗೆ ಖಾದಿ ಬಟ್ಟೆಗಳ ಮೇಲೆ ಶೇಕಡಾ 30 ರಷ್ಟು ಸರಕಾರಿ ರಿಯಾಯಿತಿ ನೀಡಿದೆ. ಮಾವುಂಗಾಲ್ ರಾಮನಗರದ ಖಾದಿ ಗ್ರಾಮ ಸೌಭಾಗ್ಯ ಶೋ ರೂಮ್‌ನಲ್ಲಿ ಹತ್ತಿ ಮುಂಡುಗಳು, ಕುಪ್ಪದ ಮುಂಡುಗಳು, ರೆಡಿಮೇಡ್ ಶರ್ಟ್‌ಗಳು, ಮನಿಲಾ ಶರ್ಟ್‌ಗಳು, ಮಸ್ಲಿನ್ ಶರ್ಟ್‌ಗಳು, ಕಾಟನ್ ಸೀರೆಗಳು, ಕೇಸರಿ ಮುಂಡುಗಳು, ರೇಷ್ಮೆ ಸೀರೆಗಳು, ಹಾಸಿಗೆಗಳು, ದಿಂಬುಗಳು ಮತ್ತು ಇತರ ಖಾದಿ ಗ್ರಾಮೋದ್ಯೋಗ ಉತ್ಪನ್ನಗಳನ್ನು ಮಾರಾಟ ನಡೆಸಲಾಗುತ್ತದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗೆ 9947601989 ಕರೆ ಮಾಡಬಹುದು.

ವಿದ್ಯುತ್ ವ್ಯತ್ಯಯ

ಕಾಸರಗೋಡು: ಮೈಲಾಟಿ – ವಿದ್ಯಾನಗರ ಫೀಡರ್‌ನ ಸಾಮರ್ಥ್ಯ ಹೆಚ್ಚಿಸುವ ಕೆಲಸ ಏ.30ರಂದು ಆರಂಭಗೊಂಡು ಜೂನ್ ಮಧ್ಯ ಭಾಗದವರೆಗೆ ನಡೆಯಲಿದ್ದು, ಈ ನಿಟ್ಟಿನಲ್ಲಿ 110 ಕೆವಿ ಸಬ್ ಸ್ಟೇಷನ್‌ಗಳಾದ ವಿದ್ಯಾನಗರ, ಮುಳ್ಳೇರಿಯ, ಕುಬಣೂರು, ಮಂಜೇಶ್ವರ ಮತ್ತು 33 ಕೆವಿ ಸಬ್ ಸ್ಟೇಷನ್‌ಗಳಾದ ಅನಂತಪುರ, ಕಾಸರಗೋಡು ನಗರ, ಬದಿಯಡ್ಕ, ಪೆರ್ಲ ಮುಂತಾದ ಕಡೆಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಭಾಗಶಃ ವ್ಯತ್ಯಯವಾಗಲಿದೆ ಎಂದು ಮೈಲಾಟಿ ಲೈನ್ ನಿರ್ವಹಣೆ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಭಾರತೀಯ ಕಿಸಾನ್ ಸಂಘದ ಮಂಜೇಶ್ವರ ಬ್ಲಾಕ್ ಸಮಿತಿ ಸಭೆ

ಉಪ್ಪಳ: ಭಾರತೀಯ ಕಿಶಾನ್ ಸಂಘ ಕಾಸರಗೋಡು ಜಿಲ್ಲಾ ನೇತೃತ್ವದಲ್ಲಿ ಮಂಜೇಶ್ವರ ಬ್ಲಾಕ್ ಸಮಿತಿ ಸಭೆ ಬಾಯಾರಿನಲ್ಲಿ ನಡೆಯಿತು. ಕೃಷಿಕರಿಗೆ ಉಂಟಾಗುವ ತೊಂದರೆಗಳ ಕುರಿತು ಚರ್ಚಿಸಲಾಯಿತು. ಕೃಷಿಕರು ದೇಶದ ಬೆನ್ನೆಲುಬು ಆದರೆ ಕೇರಳ ಸರಕಾರ ವಂಚಿಸುತ್ತಾ ಇದೆ. ಕೃಷಿಕರಿಗೆ ಸರಕಾರ ನೀಡಿದ ವಿದ್ಯುತ್ ಉಚಿತ ಹೇಳಿ ಇವಾಗ ಕೃಷಿಕರಿಗೆ ವಿದ್ಯುತ್ ಕಚೇರಿಯವರು ಬೆದರಿಕೆ ನೀಡುತ್ತಾ ಇದ್ದಾರೆ. ಈ ಕ್ರಮದ ವಿರುದ್ಧ ಭಾರತೀಯ ಕಿಸಾನ್ ಸಂಘ ಮಂಜೇಶ್ವರ ಬ್ಲಾಕ್ ಸಮಿತಿ ಹೋರಾಟಕ್ಕೆ ತಯಾರಾಗಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ರಾಜ್ಯ ಸಮಿತಿ ಉಪಾಧ್ಯಕ್ಷ ರಾಮ ಮಾಸ್ಟರ್, ಬ್ಲಾಕ್ ಸಮಿತಿ ಅಧ್ಯಕ್ಷ ಜಗದೀಶ್ ಶೆಟ್ಟಿ ಕಲ್ಲಗದ್ದೆ, ಜಿಲ್ಲಾಧ್ಯಕ್ಷ ಪುರುಷೋತ್ತಮ ಬೊಡ್ಡನಗುಚಿ, ಜಿಲ್ಲಾ ಕಾರ್ಯದರ್ಶಿ ದಿನೇಶ್ ಚೆರುಗೋಳಿ, ಜಿಲ್ಲಾ ಉಪಾಧ್ಯಕ್ಷ ಡಾ. ಶಿವರಾಯ ಭಟ್, ತಾಲೂಕು ಕಾರ್ಯದರ್ಶಿ ಕೇಶವಪ್ರಸಾದ್ ಮೀಯಪದವು ಮೊದಲಾದವರು ಮಾತನಾಡಿದರು.

ಉದಯಗಿರಿಯಲ್ಲಿ ಶ್ರೀ ಸತ್ಯನಾರಾಯಣ ಪೂಜೆ

ಬದಿಯಡ್ಕ: ಉದಯಗಿರಿ ಬಾಂಜತ್ತಡ್ಕ ಶ್ರೀ ಸತ್ಯನಾರಾಯಣ ಭಜನಾ ಮಂದಿರದಲ್ಲಿ 26ನೇ



ವಾರ್ಷಿಕೋತ್ಸವವು ಶುಕ್ರವಾರ ವಿವಿಧ ಕಾರ್ಯಕ್ರಮಗಳೊಂದಿಗೆ ಶ್ರದ್ಧಾಭಕ್ತಿಯಿಂದ ಜರಗಿತು. ವೇದಮೂರ್ತಿ ಪಾಂಡೇಲು ಶಿವಶಂಕರ ಭಟ್ ಅವರ ನೇತೃತ್ವದಲ್ಲಿ ಶ್ರೀ ಸತ್ಯನಾರಾಯಣ ಪೂಜೆ ನೆರವೇರಿತು. ಗೀತಾಜ್ಞಾನ ಯಜ್ಞ ಪಾರಾಯಣ ಘಟಕ ಬದಿಯಡ್ಕ ಇವರಿಂದ ಭಗವದ್ಗೀತಾ ಪಾರಾಯಣ, ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ, ಅನ್ನದಾನ ನಡೆಯಿತು. ಶ್ರೀ ಪೂಮಾಣಿ ಕಿನ್ನಿಮಾಣಿ ಶ್ರೀರಾಮ ಅಯ್ಯಪ್ಪ ಭಜನಾ ಮಂಡಳಿ ಪೂಂಗೋಡಿ ಮಾಡ ಮಾಡತ್ತಡ್ಕ ಹಾಗೂ ಶ್ರೀ ಕುದುರೆಕ್ಕಾಳಿ ಅಮ್ಮ ಮಹಿಳಾ ಭಜನಾ ಸಂಘ ರತ್ನಗಿರಿ ನೀರ್ಚಾಲು ಇವರಿಂದ ಭಜನಾ ಸೇವೆ ಜರಗಿತು. ರಾಮ ಇಕ್ಕೇರಿ ಭಾಗವತ ಪಾರಾಯಣ ನಡೆಸಿಕೊಟ್ಟರು.

ಸಾಂಸ್ಕೃತಿಕ ಕಾರ್ಯಕ್ರಮ

ರಾತ್ರಿ ಮಂಗಳಾರತಿ, ಪ್ರಸಾದ ವಿತರಣೆಯ ನಂತರ ಗಡಿನಾಡ ಸಾಂಸ್ಕೃತಿಕ ಕಲಾವೇದಿಕೆ ಕಾಸರಗೋಡು ಇವರಿಂದ ನಡೆದ ಸಾಂಸ್ಕೃತಿಕ ಕಲಾವೈಭವ ಕಾರ್ಯಕ್ರಮ ಜನಮನ ಸೂರೆಗೊಂಡಿತು.

ಸಮಸ್ಯೆಗೆ ಕಾರಣವಾಗುತ್ತಿದೆ ಕೆಳಸೇತುವೆ | ಅವೈಜ್ಞಾನಿಕ ಕಾಮಗಾರಿಯ ಆರೋಪ

ರಾಷ್ಟ್ರೀಯ ಹೆದ್ದಾರಿ ಅಂಡರ್ ಪ್ಯಾಸೇಜ್‌ನಲ್ಲಿ ವಾಹನಗಳ ಫಜೀತಿ!

ಕಾಸರಗೋಡು: ಅತ್ಯಂತ ಮಹತ್ವಾಕಾಂಕ್ಷೆಯ ಹಾಗೂ ಕಾಸರಗೋಡು ಜಿಲ್ಲೆಯ ಅಭಿವೃದ್ಧಿಗೆ ಹೆಬ್ಬಾಗಿಲು ಎಂದೇ ಕರೆಯಲ್ಪಡುವ ತಲಪಾಡಿ – ಚೆಂಗಳ ಪ್ರಥಮ ರೀಚ್ ರಾಷ್ಟ್ರೀಯ ಹೆದ್ದಾರಿ 66ರ ಅಭಿವೃದ್ಧಿ ಯೋಜನೆಯ ಅಂಗವಾಗಿ ವಿವಿಧೆಡೆ ನಿರ್ಮಾಣವಾಗಿರುವ ಅಂಡರ್ ಪ್ಯಾಸೇಜ್ (ಕೆಳಸೇತುವೆ)ಗಳು ವಾಹನಗಳಿಗೆ ಅಡಚಣೆ ಯಾಗುತ್ತಿರುವುದಾಗಿ ದೂರುಗಳು ಕೇಳಿಬಂದಿವೆ.



ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಲ್ಲಿ ಎತ್ತರವು ವ್ಯತ್ಯಾಸವಿರುವುದರಿಂದ ಅಂಡರ್ ಪ್ಯಾಸೇಜ್‌ಗಳಲ್ಲಿ ಪದೇ ಪದೇ ವಾಹನಗಳು ಸಿಲುಕಿಕೊಳ್ಳುತ್ತಿವೆ. ಒಂದು ಬದಿಯ ಪ್ರವೇಶ ದ್ವಾರದ ಎತ್ತರ ನೋಡಿಕೊಂಡು ವಾಹನಗಳು ಸಾಗಿದರೆ ಅಂಡರ್‌ಪಾಸ್‌ನೊಳಗೆ ಬಾಕಿಯಾಗುತ್ತವೆ ಎಂದು ಈ ಮೂಲಕ ಸಾಗಿದ ವಾಹನ ಚಾಲಕರು ತಿಳಿಸಿದ್ದಾರೆ.

ಈ ರೀತಿಯಾಗಿ ಹಲವಾರು ವಾಹನಗಳು ಆಗಾಗ ಅಂಡರ್‌ಪಾಸ್‌ನಲ್ಲಿ ಸಿಲುಕಿಕೊಂಡು ಸಮಸ್ಯೆ ಅನುಭವಿಸಿವೆ. ರಾಷ್ಟ್ರೀಯ ಹೆದ್ದಾರಿಯ ಅಭಿವೃದ್ಧಿಯ ಅಂಗವಾಗಿ ಮೊಗ್ರಾಲ್ ಪುತ್ತೂರು ಪೇಟೆಯಲ್ಲಿ ನಿರ್ಮಿಸಿರುವ ಅಂಡರ್‌ಪಾಸ್‌ನಲ್ಲಿ ಬಹುತೇಕ ವಾಹನಗಳು ಸಿಲುಕಿಕೊಳ್ಳುತ್ತಿರುವುದು ಕಂಡುಬರುತ್ತಿವೆ.

ಕಾಸರಗೋಡಿನಿಂದ ಕುಂಬಳೆಗೆ ಸರ್ವೀಸ್ ರೋಡ್‌ನಲ್ಲಿ ತೆರಳುವಾಗ ಲಭಿಸುವ ಅಂಡರ್‌ಪಾಸ್‌ಗೆ ಎತ್ತರ ಕಡಿಮೆ ಇದೆ. ಆದರೆ ಕುಂಬಳೆಯಿಂದ ಕಾಸರಗೋಡಿಗೆ ಆಗಮಿಸುವ ಸರ್ವೀಸ್ ರೋಡ್‌ನಲ್ಲಿ ಎತ್ತರ ಹೆಚ್ಚು ಇದೆ ಎಂಬುದು ಈಗಾಗಲೇ ಸಾಬೀತಾಗಿದೆ. ಎತ್ತರ ಹೆಚ್ಚಿರುವ ಭಾಗದಿಂದ ಬರುವ ವಾಹನಗಳು ಅಂಡರ್ ಪಾಸ್‌ನಲ್ಲಿ ಹಾದುಬಂದು ಅರ್ಧಕ್ಕೆ ತಲುಪುವಾಗ ಅಂಡರ್‌ಪಾಸ್‌ನ ಮೇಲ್ಭಾವಣಿ ತಾಗಿ ಅಲ್ಲಿಯೇ ಸಿಲುಕುತ್ತಿರುವ ದೃಶ್ಯ ಸಾಮಾನ್ಯವಾಗಿದೆ.

ಈ ಸಂದರ್ಭದಲ್ಲಿ ಬಾಕಿಯಾಗುವ ವಾಹನಗಳು ಹಿಂದಕ್ಕೆ ಅಥವಾ ಮುಂದಕ್ಕೆ ಚಲಿಸಲಾಗದೆ ಬಹಳಷ್ಟು ಸಂಕಷ್ಟ ಅನುಭವಿಸಬೇಕಾಗಿ ಬರುತ್ತದೆ. ನಂತರ ಸಿಲುಕುವ ವಾಹನಗಳನ್ನು ಕ್ರೈನ್‌ನಂತಹ ವಾಹನಗಳ ಮೂಲಕ ಹೊರಗಡೆಗೆ ಎಳೆದು ತೆಗೆಯಬೇಕಾಗುತ್ತದೆ. ಕಳೆದೆರಡು ದಿನಗಳ ಹಿಂದೆ ಮುನ್ನೆಚ್ಚರಿಕೆ ವಹಿಸದೇ ಬಂದ ವ್ಯಾನ್ ಸಿಲುಕಿ ಮೇಲ್ಭಾಗ ಸವೆದು ಹಾನಿಗೀಡಾದ ಘಟನೆ ನಡೆದಿತ್ತು. ವಿಧಾನಸಭಾ ಚುನಾವಣೆ ದಿನಗಳಲ್ಲಿ ಪ್ರಚಾರ ವಾಹನಗಳು ರಾಷ್ಟ್ರೀಯ ಹೆದ್ದಾರಿ ವಿವಿಧೆಡೆ ಅಂಡರ್ ಪ್ಯಾಸೇಜ್‌ನೊಳಗೆ ಸಿಲುಕಿಕೊಂಡ ಉದಾಹರಣೆಗಳಿವೆ. ಕಳೆದ ಒಂದು ವಾರದ ಹಿಂದೆ ಗುಜರಿ ವಸ್ತುಗಳೊಂದಿಗೆ ಬಂದ ಪಿಕ್‌ಅಪ್ ವಾಹನವು ಇದೇ ರೀತಿಯಾಗಿ ಬಾಕಿಯಾಗಿತ್ತು. ನಂತರ ಪ್ರಯಾಸದಿಂದ ವಿವಿಧ ಉಪಕ್ರಮಗಳ ಮೂಲಕ ಹೊರಗಡೆಗೆ ತರಲಾಗಿತ್ತು.

ಅಧ್ಯಯನ ನಡೆಸಬೇಕಾಗಿದೆ

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಗಮನಿಸಬೇಕು ಚೌಕಿಯಲ್ಲಿ ದೊಡ್ಡದಾದ ಅಂಡರ್‌ಪಾಸ್ ಇದೆ. ಆದರೆ ಎರಿಯಾಲ್‌ನಲ್ಲಿರುವ ಅಂಡರ್‌ಪಾಸ್‌ನ ಎತ್ತರ ಅತ್ಯಂತ ಕಡಿಮೆಯಾಗಿದ್ದು ವಾಹನಗಳಿಗೆ ಯಾವುದೇ ಪ್ರಯಾಜನವಿಲ್ಲದಂತಾಗಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಮತ್ತು ಗುತ್ತಿಗೆದಾರ ಸಂಸ್ಥೆಯು ಗಮನಹರಿಸಬೇಕಾಗಿದೆ. ತಲಪಾಡಿಯಿಂದ ಚೆಂಗಳ ವರೆಗಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಅನೇಕ ಅಂಡರ್‌ಪಾಸ್ ಸ್ಥಾಪನೆಯಾಗಿದ್ದು, ಈ ಯೋಜನೆ ಬಗ್ಗೆ ಅಧ್ಯಯನ ನಡೆಸಬೇಕಾಗಿದೆ.

ವಾಹನಗಳಿಗೆ ಹಾನಿ

ಅಂಡರ್‌ಪ್ಯಾಸೇಜ್‌ನ ಅವೈಜ್ಞಾನಿಕವಾದ ನಿರ್ಮಾಣವು ಈ ಸಮಸ್ಯೆಗೆ ಕಾರಣ ಎಂಬುದಾಗಿ ಸಾರ್ವಜನಿಕರು ಆರೋಪಿಸಿದ್ದಾರೆ. ಇಂತಹ ಅವ್ಯವಸ್ಥೆಯ ಕಾಮಗಾರಿ ಯಿಂದ ಕಳೆದ ಒಂದೆರಡು ತಿಂಗಳಗಳ ಅವಧಿಯಲ್ಲಿ ಹಲವಾರು ವಾಹನಗಳು ಹಾನಿಗೀಡಾಗಿವೆ. ಇದೇ ವೇಳೆ ಸರ್ವೀಸ್ ರೋಡ್‌ಗಳ ಮೂಲಕ ಬರುವ ವಾಹನಗಳು ಇಕ್ಕೆಲಗಳಿಗೆ ಹಾದುಹೋಗಬೇಕಾದರೆ ಕಿ.ಮೀ.ಗಳಷ್ಟು ದೂರ ತೆರಳಿ ಸಂಚರಿಸಬೇಕಾಗುತ್ತದೆ. ಇದರಿಂದ ಅಪಾರ ಸಮಸ್ಯೆಗಳು ಉದ್ಭವವಾಗುತ್ತವೆ.

ಬೋಳಂಗಳ ಸ್ಮಶಾನ ಪರಿಸರ ರಸ್ತೆ ಬದಿ ಹೆಚ್ಚಿದ ಪ್ಲಾಸ್ಟಿಕ್ ತ್ಯಾಜ್ಯ: ತೆರವಿಗೆ ಆಗ್ರಹ



ಉಪ್ಪಳ: ಪೈವಳಿಕೆ ಪಂಚಾಯತ್ ವ್ಯಾಪ್ತಿಯ ಕಳಾಯಿ ರಸ್ತೆಯ ಬೋಳಂಗಳ ಸ್ಮಶಾನದ ಸಮೀಪದ ರಸ್ತೆ ಬದಿಯಲ್ಲಿ ವ್ಯಾಪಕ ಪ್ಲಾಸ್ಟಿಕ್ ತ್ಯಾಜ್ಯ ರಾಶಿಯಿಂದ ಸಾರ್ವಜನಿಕರಿಗೆ ಸಮಸ್ಯೆ ಉಂಟಾಗಿದ್ದು, ತೆರವಿಗೆ ಒತ್ತಾಯಿಸಿದ್ದಾರೆ. ನೂರಾರು ಮಂದಿ ಸಂಚರಿಸುವ ಈ ರಸ್ತೆ ಬದಿಯಲ್ಲಿ ಭಾರೀ ಪ್ರಮಾಣದಲ್ಲಿ ತ್ಯಾಜ್ಯ ಎಲ್ಲೆಂದರಲ್ಲಿ ಹರಡಿಕೊಂಡಿದ್ದು, ಇದರಿಂದ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ.

ಕ್ರಮ ಕೈಗೊಳ್ಳಬೇಕು

ತ್ಯಾಜ್ಯ ಎಸೆಯುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲು ಪಂಚಾಯತ್ ಅಧಿಕಾರಿಗಳು ಮುಂದಾಗಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ. ಕೂಡಲೇ ಶುಚೀಕರಣಗೊಳಿಸದಿದ್ದಲ್ಲಿ ಮುಂದಿನ ಮಳೆಗಾಲದಲ್ಲಿ ಈ ತ್ಯಾಜ್ಯ ಶೋಚನೀಯಾವಸ್ಥೆಗೆ ತಲುಪಿ ಸಂಚಾರಕ್ಕೆ ಇನ್ನಷ್ಟು ಸಮಸ್ಯೆ ಉಂಟಾಗಲಿದೆ. ಅಲ್ಲದೆ ಪಂಚಾಯತ್ ವ್ಯಾಪ್ತಿಯ ಸಜಂಕಿಲ, ಪೊಸಡಿಗುಂಪೆ ಸಹಿತ ಪರಿಸರ ಪ್ರದೇಶಗಳಲ್ಲೂ ತ್ಯಾಜ್ಯಗಳ ರಾಶಿ ಕಂಡುಬರುತ್ತಿದ್ದು, ಸಂಬಂಧಪಟ್ಟ ಪಂಚಾಯತ್, ಆರೋಗ್ಯ ಇಲಾಖೆ ಅಧಿಕಾರಿಗಳು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮತ ಎಣಿಕೆಯ ಅಭ್ಯರ್ಥಿಗಳಿಗೆ, ಇತರ ಪ್ರತಿನಿಧಿಗಳಿಗೆ ತರಬೇತಿ ಕಾರ್ಯಾಗಾರ



ಕಾಸರಗೋಡು: ಮತ ಎಣಿಕೆಗೆ ಸಂಬಂಧಿ ಸಿದಂತೆ ಮುಖ್ಯ ಏಜೆಂಟರ್‌ರು ಮತ್ತು ಅಭ್ಯರ್ಥಿಗಳ ಇತರ ಪ್ರತಿನಿಧಿಗಳಿಗೆ ತರಬೇತಿ ಆಯೋಜಿಸಲಾಯಿತು.

ಕಾಸರಗೋಡು ಜಿಲ್ಲಾಧಿಕಾರಿ ಕಚೇರಿಯ ಮಿನಿ ಕಾನ್ಫರೆನ್ಸ್ ಸಭಾಂಗಣದಲ್ಲಿ ಗುರುವಾರ ನಡೆದ ತರಬೇತಿ ಕಾರ್ಯಕ್ರಮವನ್ನು ಚುನಾವಣಾ ಉಪಕಲೆಕ್ಟರ್ ಎ.ಎನ್. ಗೋಪಕುಮಾರ್ ಉದ್ಘಾಟಿಸಿದರು. ರಾಜ್ಯಮಟ್ಟದ ಮಾಸ್ಟರ್ ತರಬೇತುದಾರ ಎಂ.ವಲ್ಸನ್, ಜಿಲ್ಲಾ ಮಟ್ಟದ ಮಾಸ್ಟರ್ ತರಬೇತುದಾರರು ಟಿ.ವಿ.ಸಜೀವನ್, ಕೆ.ಜಯರಾಜನ್, ಕೆ.ಲೋಗೇಶ್ ಮತ್ತು ಇತರರು ಭಾಗವಹಿಸಿದ್ದರು.

ಮಿನಿ ಕಾನ್ಫರೆನ್ಸ್ ಸಭಾಂಗಣ

ಮೊದಲ ಹಂತದ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಲು ಸಾಧ್ಯವಾಗದ ಮೈಕ್ರೋ ವೀಕ್ಷಕರು, ಎಣಿಕೆ ಸೂಪರಿಂಟೆಂಡೆಂಟ್‌ಗಳು, ಎಣಿಕೆಯ ಸಹಾಯಕರು ಮತ್ತು ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಗೆ ಕಾಸರಗೋಡು ಕಲೆಕ್ಟರೇಟ್ ಮಿನಿ ಕಾನ್ಫರೆನ್ಸ್ ಸಭಾಂಗಣದಲ್ಲಿ ತರಬೇತಿಯನ್ನು ನೀಡಲಾಯಿತು.

ಅರಿವು ನೀಡುವ ಉದ್ದೇಶ

ಮತ ಎಣಿಕೆ ಪ್ರಕ್ರಿಯೆಯ ಬಗ್ಗೆ ಏಜೆಂಟರ್‌ಗೆ ಸರಿಯಾದ ಅರಿವು ಮತ್ತು ಮಾಹಿತಿ ನೀಡುವ ಉದ್ದೇಶದಿಂದ ತರಬೇತಿ ಆಯೋಜಿಸಲಾಗಿದೆ.

ಇಂದು ಎರಡನೇ ಹಂತದ ತರಬೇತಿ

ಮೇ 2ರಂದು ನಾಯನ್ಮಾರಮೂಲೆ ಟಿಐಎಚ್‌ಎಸ್ ಶಾಲೆಯಲ್ಲಿ ಎರಡನೇ ಹಂತದ ತರಬೇತಿ ನೀಡಲಾಗುವುದು. ಎರಡನೇ ಹಂತದ ತರಬೇತಿಯನ್ನು ಮೊದಲ ಹಂತದಂತೆಯೇ ಅದೇ ವೇಳಾಪಟ್ಟಿಯಲ್ಲಿ ನಡೆಸಲಾಗುವುದೆಂದು ತರಬೇತಿ ಉಸ್ತುವಾರಿ ನೋಡಲ್ ಅಧಿಕಾರಿ ತಿಳಿಸಿದ್ದಾರೆ.

ಇಂದು ವಿಶೇಷ ತರಬೇತಿ

ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು ಮತ್ತು ಹೆಚ್ಚುವರಿ ಚುನಾವಣಾಧಿಕಾರಿಗಳಿಗೆ ವಿಶೇಷ ತರಬೇತಿ ಮೇ 2ರಂದು ಬೆಳಗ್ಗೆ 11 ಗಂಟೆಗೆ ಕಾಸರಗೋಡು ಕಲೆಕ್ಟರೇಟ್ ಸಭಾಂಗಣದಲ್ಲಿ ನಡೆಯಲಿದೆ.

ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಳದಲ್ಲಿ ಹುಲ್ಪೆ ಸಮರ್ಪಣೆ



ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಾಲಯದಲ್ಲಿ ನಡೆಯುತ್ತಿರುವ ಬ್ರಹ್ಮಕಲಶೋತ್ಸವಕ್ಕೆ ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಳದಿಂದ ರಾತ್ರಿ ಹುಲ್ಪೆ ಸಮರ್ಪಣೆ ಶೋಭಾಯಾತ್ರೆ ಹೊರಟು ಕೂಡ್ಲು ಮೂಲಕ ಕಾಳ್ಯಂಗಾಡು ದೇವಸ್ಥಾನಕ್ಕೆ ತಲುಪಿತು. ವರ್ಣರಂಜಿತ ಮೆರವಣಿಗೆಯಲ್ಲಿ ಮುತ್ತುಕೊಡೆ, ವಾದ್ಯಘೋಷ, ಸಮವಸ್ತ್ರ ಧಾರಣೆ ಮಹಿಳೆಯರು, ಮಕ್ಕಳು , ಮಹನೀಯರು ಗಮನ ಸೆಳೆದರು. ದೇವಾಲಯದ ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಧರ್ಮದರ್ಶಿ ನಾರಾಯಣ ಕಾಳ್ಯಂಗಾಡು, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ, ಪ್ರಧಾನ ಕಾರ್ಯದರ್ಶಿ ದಯಾನಂದ ಕೊಳ್ಕೆಬೈಲು, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿಗಳಾದ ರಂಜಿತ್ ಮನ್ನಿಪ್ಪಾಡಿ, ಗೋವಿಂದ ನಾಯ್ಕ ಕಾಳ್ಯಂಗಾಡು, ಕೋಶಾಧಿಕಾರಿ ಶಾಂತಕುಮಾರ್, ಜೊತೆ ಕಾರ್ಯದರ್ಶಿ ಪುನೀರ್ ಕೆಮ್ಮಣ್ಣು, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮೋಹನ್‌ರಾಜ್ ಕಾಳ್ಯಂಗಾಡು, ಪ್ರಧಾನ ಕಾರ್ಯದರ್ಶಿ ಹರೀಶ್ ಕೆ.ಆರ್., ರಘು ಮೀಪುಗುರಿ ಮುಂತಾದವರು ಹುಲ್ಪೆ ಸಮರ್ಪಣೆಯನ್ನು ಸ್ವಾಗತಿಸಿದರು.



ಉಪ್ಪಳ ಕಯ್ಯಾರು ಮೇರ್ಲ ಶ್ರೀ ಉಳ್ಳಾಲ್ತಿ ಕಾಳಿಚಾಮುಂಡಿ ದೈವಸ್ಥಾನದಲ್ಲಿ ಶ್ರೀ ಉಳ್ಳಾಲ್ತಿ ಕಾಳಿಚಾಮುಂಡಿ ಹಾಗೂ ಪರಿವಾರ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶ ಬ್ರಹ್ಮಶ್ರೀ ವೇದಮೂರ್ತಿ ಶ್ರೀ ಶಂಕರನಾರಾಯಣ ಕಡಮಣ್ಣಾಯ ಬಂಬ್ರಾಣ ಬೂಡು ಕರ್ಕುಳ ಅವರ ದಿವ್ಯಹಸ್ತದಿಂದ ನಡೆಯಿತು.

ಕೇಂದ್ರೀಯ ವಿವಿಯಲ್ಲಿ ಅಥ್ಲೆಟಿಕ್: ಸ್ಕೂಲ್ ಆಫ್ ಎಜುಕೇಶನ್ ಸಂಸ್ಥೆ ಚಾಂಪಿಯನ್



ಕಾಸರಗೋಡು: ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ನೇತೃತ್ವದಲ್ಲಿ ಅಥ್ಲೆಟಿಕ್ ಕೂಟವಾದ ಎನರ್ಜಿ 2026 ಎಂಬ ಸ್ಪರ್ಧೆಯಲ್ಲಿ ಸ್ಕೂಲ್ ಆಫ್ ಎಜುಕೇಶನ್ ಸಂಸ್ಥೆಯು ಚಾಂಪಿಯನ್ ಆಗಿ ಹೊರಹೊಮ್ಮಿತು. ಸ್ಕೂಲ್ ಆಫ್ ಫಿಸಿಕಲ್ ಸೈನ್ಸಸ್ ರನ್ನರ್ ಅಪ್ ಸ್ಥಾನ ಗಳಿಸಿತು.

ವಿದ್ಯಾರ್ಥಿಗಳಲ್ಲಿ ಸ್ಯಾಂಟೋ ಸಾಲಿ (ಸ್ಕೂಲ್ ಆಫ್ ಫಿಸಿಕಲ್ ಸೈನ್ಸಸ್), ಅನಿಲ್ ಎ. (ಸ್ಕೂಲ್ ಆಫ್ ಹೆಲ್ತ್ ಸೈನ್ಸಸ್) ಮತ್ತು ಫಾತಿಮತ್ ಅಸ್ಮಿನಾ (ಸ್ಕೂಲ್ ಆಫ್ ಫಿಸಿಕಲ್ ಸೈನ್ಸಸ್) ಪುರುಷ ವಿಭಾಗದಲ್ಲಿ ವೈಯಕ್ತಿಕ ಚಾಂಪಿಯನ್‌ಶಿಪ್ ಗಳಿಸಿದರು. ಬೋಧನಾ ವಿಭಾಗದಲ್ಲಿ ಡಾ.ಇ.ಪ್ರಸಾದ್ ಮತ್ತು ಡಾ.ಮಂಜು ಪೆರುಂಪಿಲ್ ಹಾಗೂ ಬೋಧಕೇತರ ವಿಭಾಗದಲ್ಲಿ ಕೆ.ಪಿ.ಸಜೀಶ್ ವೈಯಕ್ತಿಕ ಚಾಂಪಿಯನ್ ಪಡೆದರು.

3 ದಿನಗಳ ಅಥ್ಲೆಟಿಕ್ ಕೂಟವನ್ನು ಪ್ರಭಾರ ಉಪಕುಲಪತಿ ಪ್ರೊ.ವಿನ್ಸೆಂಟ್ ಮ್ಯಾಥ್ಯೂ ಉದ್ಘಾಟಿಸಿದರು. ಪ್ರಭಾರ ರಿಜಿಸ್ಟ್ರಾರ್ ಪ್ರೊ.ವಿ.ಬಿ.ಸಮೀರ್ ಕುಮಾರ್, ಡೀನ್ ಅಕಾಡೆಮಿಕ್ ಪ್ರೊ.ಜೋಸೆಫ್ ಕೊಯಿಪಲ್ಲಿ, ಡೀನ್ ಸ್ಟೂಡೆಂಟ್ಸ್ ವೆಲ್ಫೇರ್ ಪ್ರೊ.ರಾಜೇಂದ್ರ ಪಿಲಾಂಕಟ್ಟೆ, ಕ್ರೀಡಾ ಸಂಯೋಜಕ ಡಾ.ಅಲಿ ಅಕ್ಬರ್, ದೈಹಿಕ ಶಿಕ್ಷಣ ವಿಭಾಗದ ಪ್ರಾಧ್ಯಾಪಕರಾದ ಅಶೋಕನ್ ಬಿ., ಲಿಬ್ಬಿ ಕೆ.ಆರ್, ಮತ್ತು ವಿದ್ಯಾರ್ಥಿ ಪರಿಷತ್‌ನ ಅಧ್ಯಕ್ಷ ವಿವೇಕ್ ಎಂ.ಎಸ್. ಮಾತನಾಡಿದರು.

ವಿಶೇಷ ಆದ್ಯತೆ ನೀಡಬೇಕು

ಕ್ರೀಡೆಗಳಿಂದ ಶಾರೀರಿಕ ಹಾಗೂ ಮಾನಸಿಕ ನೆಮ್ಮದಿ ಜೊತೆಗೆ ಫಿಟ್‌ನೆಸ್ ಲಭಿಸುತ್ತದೆ ಎಂದರು. ಶಿಕ್ಷಣ ಸಂಸ್ಥೆಗಳು ವಾರ್ಷಿಕ ಕ್ರೀಡಾಕೂಟದ ಜೊತೆಗೆ ಮಾಸಿಕ ಕ್ರೀಡಾಸ್ಪರ್ಧೆಗಳಿಗೆ ವಿಶೇಷ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ವಿದ್ಯಾಲಯಗಳ ಮುಖ್ಯಸ್ಥರು ಗಮನಹರಿಸಬೇಕು.

• ಪ್ರೊ.ವಿನ್ಸೆಂಟ್ ಮ್ಯಾಥ್ಯೂ, ಪ್ರಭಾರ ಉಪಕುಲಪತಿ

ಎಡನೀರು ಮಠದಲ್ಲಿ ಮಹಾ ಶ್ರೀಚಕ್ರ ನವಾವರಣ ಪೂಜೆ, ಕೃತಿ ಆಲಾಪನೆ



ಕಾಸರಗೋಡು: ಜಗದ್ಗುರು ಶಂಕರಾಚಾರ್ಯ ಸಂಸ್ಥಾನ ಶ್ರೀಮದ್ ಎಡನೀರು ಮಠದಲ್ಲಿ ಶುಕ್ರವಾರ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಆಶೀರ್ವಾದಗಳೊಂದಿಗೆ ಬ್ರಹ್ಮಶ್ರೀ ಮುಲ್ಲಪ್ಪಳ್ಳಿ ಕೃಷ್ಣನ್ ನಂಬೂದಿರಿ ಅವರ ನೇತೃತ್ವದಲ್ಲಿ ಮಹಾ ಶ್ರೀಚಕ್ರ ನವಾವರಣ ಪೂಜೆ ಜರಗಿತು.

ಒಡಿಯೂರು ಶ್ರೀ ಗುರುದೇವ ಸಂಸ್ಥಾನಮ್ ಶ್ರೀ ಗುರುದೇವಾನಂದ ಸ್ವಾಮೀಜಿ ಅವರು ಈ ಸಂದರ್ಭ ಉಪಸ್ಥಿತರಿದ್ದರು.

ವಿದುಷಿ ಎನ್.ಜೆ.ನಂದಿನಿ ಮತ್ತು ಬಳಗದವರು ನವಾವರಣ ಕೃತಿ ಆಲಾಪನೆ ನಡೆಸಿಕೊಟ್ಟರು. ವಯಲಿನ್‌ನಲ್ಲಿ ವಿದ್ವಾನ್ ವಿಠಲ ರಾಮಮೂರ್ತಿ ಚೆನ್ನೈ, ಮೃದಂಗದಲ್ಲಿ ಆನೂರು ಅನಂತಕೃಷ್ಣ ಶರ್ಮಾ ಬೆಂಗಳೂರು, ಮೋರ್ಸಿಂಗ್‌ನಲ್ಲಿ ಪಯ್ಯನ್ನೂರು ಗೋವಿಂದ ಪ್ರಸಾದ್ ಜೊತೆಗೂಡಿದರು. ಅನೇಕ ಮಂದಿ ಭಕ್ತರು ಪಾಲ್ಗೊಂಡು ಕೃತಾರ್ಥರಾದರು.



ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಳದಲ್ಲಿ ಬ್ರಹ್ಮಕಲಶೋತ್ಸವ ಸಂಪನ್ನಗೊಂಡಿದ್ದು, ಶುಕ್ರವಾರ ಚಂಡಿಕಾ ಹೋಮ ಜರಗಿತು. ತಂತ್ರಿವರ್ಯ ಶ್ರೀ ಕೃಷ್ಣ ಗುರೂಜಿ ಅವರ ಮಾರ್ಗದರ್ಶನದಲ್ಲಿ ವೈದಿಕರು ಚಂಡಿಕಾ ಹೋಮ ನಡೆಸಿಕೊಟ್ಟರು. ಉದಯಪೂಜೆ, ಶ್ರೀ ದೇವಿಯ ಮಹಾಪೂಜೆ ಬಳಿಕ ಮಂಗಳಸೇವೆ ಇತ್ಯಾದಿ ಜರಗಿದವು. ಶ್ರೀ ಸರಸ್ವತಿ ಮಂಟಪದಲ್ಲಿ ವಿವಿಧ ತಂಡಗಳಿಂದ ಭಜನಾ ಕಾರ್ಯಕ್ರಮ ಜರಗಿತು.

ಮಹಿಳೆಯರಿಗಾಗಿ ಮೀಸಲಿರಿಸಿದ್ದ ತಾಳಿಪಡ್ಪು ಮೈದಾನದ ಅಭಿವೃದ್ಧಿಗೆ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯ

ಘೋಷಣೆಗೆ ಮಾತ್ರ ಸೀಮಿತವಾಗಿದೆ ಕೇರಳದ ಮೊದಲ ಪಿಂಕ್ ಕ್ರೀಡಾಂಗಣ!

ಕಾಸರಗೋಡು: ಮಹಿಳೆಯರಿಗಾಗಿ ಮಾತ್ರ ಮೀಸಲಿರಿಸಿದ ಕೇರಳ ರಾಜ್ಯದ ಮೊದಲ ಪಿಂಕ್ ಕ್ರೀಡಾಂಗಣವಾದ ತಾಳಿಪಡ್ಪು ಮೈದಾನದ ಸಮಗ್ರ ಅಭಿವೃದ್ಧಿ ಯೋಜನೆಯು ಕೇವಲ ಘೋಷಣೆಗಷ್ಟೇ ಸೀಮಿತವಾಗಿರುವುದು ವಿಪರ್ಯಾಸವಾಗಿದೆ.

ಕಾಸರಗೋಡು ನಗರದ ಪ್ರಧಾನ ಮೈದಾನವಾದ ತಾಳಿಪಡ್ಪುವಿನಲ್ಲಿ ಪಿಂಕ್ ಕ್ರೀಡಾಂಗಣ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿತ್ತು. ಆದರೆ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ಅವಗಣನೆಯಿಂದ ಯೋಜನೆಯು ಮೂಲೆಗುಂಪಾಗಿದೆ.

ಪಿಂಕ್ ಕ್ರೀಡಾಂಗಣದ ಘೋಷಣೆಯಾಗಿ ಐದು ವರ್ಷಗಳು ಕಳೆದಿವೆ. ಆದರೆ ನಗರಕ್ಕೆ ಹೊಂದಿಕೊಂಡಿರುವ ತಾಳಿಪಡ್ಪು ಮೈದಾನದ ಸಣ್ಣಪುಟ್ಟ ಕಾಮಗಾರಿಗಳನ್ನು ನಡೆಸಲು ಸಾಧ್ಯವಾಗದಿರುವುದು ಅಚ್ಚರಿಯಾಗಿದೆ. ಪಿಂಕ್ ಕ್ರೀಡಾಂಗಣವನ್ನು ನಿರ್ಮಿಸಲು ಕಾಸರಗೋಡು ನಗರಸಭೆಯ ಅಧೀನದಲ್ಲಿರುವ ಒಂದೂವರೆ ಎಕ್ರೆ ಪ್ರದೇಶದ ತಾಳಿಪಡ್ಪು ಮೈದಾನವನ್ನು ಒದಗಿಸುವುದಾಗಿ ರಾಜ್ಯ ಸರಕಾರಕ್ಕೆ ಅಧಿಕೃತವಾಗಿ ತಿಳಿಸಲಾಗಿತ್ತು.



ಹೆಣ್ಮಕ್ಕಳಿಗೆ ಸ್ಕೈಕ್ಲಿಂಗ್, ಕರಾಟೆ, ಜೂಡೋ ಮೊದಲಾದ ವಿಭಾಗಗಳಲ್ಲಿ ಅತ್ಯುತ್ತಮ ತರಬೇತಿ ಒದಗಿಸುವ ಉದ್ದೇಶದೊಂದಿಗೆ ತಾಳಿಪಡ್ಪು ಮೈದಾನವನ್ನು ಗುರುತಿಸಲಾಗಿತ್ತು. 2021ರಲ್ಲಿ ಈ ಬಗ್ಗೆ ಘೋಷಣೆ ಕೈಗೊಳ್ಳಲಾಗಿತ್ತು. ತಾಳಿಪಡ್ಪು ಮೈದಾನದಲ್ಲಿ ಪಿಂಕ್ ಕ್ರೀಡಾಂಗಣವನ್ನು ನಿರ್ಮಿಸಿದರೆ ಜಿಲ್ಲಾ ಕೇಂದ್ರವೆಂಬ ನೆಲೆಯಲ್ಲಿ ಹೆಚ್ಚು ಮಂದಿಯನ್ನು ಆಕರ್ಷಿಸಲು, ಕ್ರೀಡಾ ಕ್ಷೇತ್ರದಲ್ಲಿ ಹೊಸ ಮಹಿಳಾ ಕ್ರೀಡಾಳುಗಳನ್ನು ಸಂಘಟಿಸಲು ಸಾಧ್ಯವಿದೆ ಎಂಬ ನಿರೀಕ್ಷೆಯಿರಿಸಲಾಗಿತ್ತು. ಆದರೆ ಯೋಜನೆಯ ಮುಂದಿನ ಕ್ರಮಗಳನ್ನು ಕೈಗೊಳ್ಳದ ಕಾರಣ ಕ್ರೀಡಾಪಟುಗಳ ಆಶಯ ಈಡೇರಲಿಲ್ಲ.

- **ಬರೋಬ್ಬರಿ ಐದು ವರ್ಷಗಳು ಕಳೆದರೂ ಇನ್ನೂ ನಿರ್ಮಾಣವಾಗದ ಪಿಂಕ್ ಕ್ರೀಡಾಂಗಣ**
- **ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಯೋಜನೆಯು ಮೂಲೆಗುಂಪಾಗಿದೆ**
- **ಸಣ್ಣಪುಟ್ಟ ಕಾಮಗಾರಿಯೂ ನಡೆದಿಲ್ಲ**

ಪ್ರಧಾನ ಮೈದಾನ ಖ್ಯಾತಿ

ಒಂದು ಕಾಲದಲ್ಲಿ ಜಿಲ್ಲೆಯ ಪ್ರಧಾನ ಕಾರ್ಯಕ್ರಮಗಳೆಲ್ಲಾ ನಡೆಯುತ್ತಿದ್ದ ತಾಳಿಪಡ್ಪು ಮೈದಾನವು ಇದೀಗ ಸಂಪೂರ್ಣ ಅವಗಣನೆಗೆ ಒಳಗಾಗಿದೆ. ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಯ ಭಾಗವಾಗಿ ಮೈದಾನದ ಸ್ಥಳವು ನಷ್ಟವಾಗಿದೆ. ಪ್ರಸ್ತುತ ವಿವಿಧ ಶಾಲೆಗಳ ಕ್ರೀಡಾಮೇಳಗಳಿಗಷ್ಟೇ ಈ ಮೈದಾನವು ಸೀಮಿತವಾಗಿದೆ. ಇನ್ನಾದರೂ ತಾಳಿಪಡ್ಪು ಮೈದಾನದ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ವ್ಯಾಪಕವಾಗಿ ಕೇಳಿಬರುತ್ತಿದೆ.

ಸುತ್ತಮುತ್ತ

ಮರು ಮೌಲ್ಯಮಾಪನ: ರ‍್ಯಾಂಕ್ ಸಾಧನೆ



ಕುಂದಾಪುರ: ದ್ವಿತೀಯ ಪಿಯು ಫಲಿತಾಂಶದಲ್ಲಿ ಹೆಮ್ಮಾಡಿಯ ಜನತಾ ಪಿಯು ಕಾಲೇಜ್ ರಾಜ್ಯ ಮಟ್ಟದ ದ್ವಿತೀಯ ರ‍್ಯಾಂಕ್ ಮತ್ತು ಉಡುಪಿ ಜಿಲ್ಲೆಗೆ ಪ್ರಥಮ ರ‍್ಯಾಂಕ್ ಗಳಿಸಿದ್ದು ಮರು ಮೌಲ್ಯಮಾಪನದಿಂದ ಜನತಾ ಪಿಯು ಕಾಲೇಜಿನ 22 ವಿದ್ಯಾರ್ಥಿಗಳು ಟಾಪ್ 10 ರ‍್ಯಾಂಕ್‌ನಲ್ಲಿ ರಾಜ್ಯಕ್ಕೆ ಅಗ್ರಸ್ಥಾನ ಪಡೆದುಕೊಂಡಿದ್ದಾರೆ. ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಾದ ಪ್ರಥಮ ಜಿ. ಕಾಂಚನ 597 ಅಂಕ ಪಡೆದು ರಾಜ್ಯಕ್ಕೆ 4ನೇ ರ‍್ಯಾಂಕ್, ಆಕಾಶ್ 594 ಅಂಕ ಪಡೆದು 7ನೇ ರ‍್ಯಾಂಕ್, ಕೃತ್ತಾ ಎ. 593 ಅಂಕ ಪಡೆದು 8ನೇ ರ‍್ಯಾಂಕ್, ಐಶ್ವರ್ಯ 592 ಅಂಕ ಪಡೆದು 9ನೇ ರ‍್ಯಾಂಕ್, ಶ್ರೇಯ 591 ಅಂಕ ಪಡೆದು 10ನೇ ರ‍್ಯಾಂಕ್, ತನ್ವೀರ 591 ಅಂಕ ಪಡೆದು 10ನೇ ರ‍್ಯಾಂಕ್ ಪಡೆದು ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಜನತಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಗಣೇಶ ಮೊಗವೀರ, ಬೋಧಕ, ಬೋಧಕೇತರ ವೃಂದದವರು ಅಭಿನಂದನೆಯನ್ನು ಸಲ್ಲಿಸಿದ್ದಾರೆ.

ಸಿಐಟಿಯು ಕುಂದಾಪುರದಿಂದ ಮೇ ದಿನಾಚರಣೆ

ಕುಂದಾಪುರ: ಸಿಐಟಿಯು ಕುಂದಾಪುರ ಸಂಚಾಲನಾ ಸಮಿತಿ ವತಿಯಿಂದ ಮೇ ದಿನಾಚರಣೆ–2026ರ ಅಂಗವಾಗಿ ಶುಕ್ರವಾರ ಕುಂದಾಪುರ ಶಾಸ್ತ್ರಿ ವೃತ್ತದ ಬಳಿ ನಡೆದ ಬಹಿರಂಗ ಸಭೆ ನಡೆಸಿದರು.

ಪ್ರತಿಭಟನೆ ಚಿಂತಕ ಪ್ರೊ. ರಾಜೇಂದ್ರ ಉಡುಪ ಭಾಗವಹಿಸಿ, ಮಾತನಾಡಿದರು. ಉಡುಪಿ ಜಿಲ್ಲಾ ಹೆಂಚು ಕಾರ್ಮಿಕರ ಸಂಘದ ಅಧ್ಯಕ್ಷ ವಿ. ನರಸಿಂಹ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ವಿ. ಮತ್ತು ಪ್ರಧಾನ ಕಾರ್ಯದರ್ಶಿ ಎಚ್. ನರಸಿಂಹ ಮಾತನಾಡಿದರು. ಈ ಸಂದರ್ಭದಲ್ಲಿ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಚಿಕ್ಕ ಮೊಗವೀರ, ಬೀಡಿ ಕಾರ್ಮಿಕರ ಯೂನಿಯನ್ ಮುಖಂಡರಾದ ಮಹಾಬಲ ವಡೇರ ಹೋಬಳಿ, ಬಲ್ಕೀಸ್, ತಾಲೂಕು ಆಟೋ ರಿಕ್ಷಾ ಮತ್ತು ವಾಹನ ಚಾಲಕರ ಸಂಘದ ಅಧ್ಯಕ್ಷ ರಮೇಶ್ ವಿ., ಕಾರ್ಯದರ್ಶಿ ರಾಜು ದೇವಾಡಿಗ, ಅಂಗನವಾಡಿ ನೌಕರರ ಸಂಘಟನೆಯ ಮುಖಂಡರಾದ ಸುಶೀಲಾ ನಾಡ ಇದ್ದರು. ಚಂದ್ರಶೇಖರ್ ವಿ. ನಿರೂಪಿಸಿದರು. ರಾಜು ದೇವಾಡಿಗ ವಂದಿಸಿದರು.

ಮೊದಲನೇ ಪುಟದಿಂದ

ಟ್ರಾಫಿಕ್

ರಾಷ್ಟ್ರೀಯ ಹೆದ್ದಾರಿ 66ರ ಮುಲ್ಕಿ ಬಸ್ ನಿಲ್ದಾಣ, ಹಳೆಯಂಗಡಿ, ಮುಕ್ಕ ಸುರತ್ಕಲ್, ಬೈಕಂಪಾಡಿ ಪಣಂಬೂರು ಜಂಕ್ಷನ್ ನಲ್ಲಿ ಏಕಾಏಕಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ.

ಕೆಲ ಕಡೆ ಟ್ರಾಫಿಕ್ ಪೊಲೀಸರ ಕೊರತೆ ಉಂಟಾಗಿದ್ದರಿಂದ ಪ್ರಯಾಣಿಕರು ಹಾಗೂ ಕೆಲ ದ್ವಿಚಕ್ರ ವಾಹನ ಸವಾರರು ಪರದಾಡಬೇಕಾಯಿತು. ಗುರುವಾರ ಹಲವಾರು ಸಭೆ ಸಮಾರಂಭಗಳ ಹಾಗೂ ಮದುವೆ ಕಾರ್ಯಕ್ರಮಗಳು ಇದ್ದು ಅಲ್ಲದೆ ಮುಂಬೈನಿಂದಲೂ ಮದುವೆ ಕಾರ್ಯಕ್ರಮಗಳಿಗೆ ಹಲವಾರು ಮಂದಿ ಊರಿಗೆ ಆಗಮಿಸಿದ್ದು ರಾತ್ರಿ ಹೊತ್ತು ಕೂಡ ಮದುವೆ ಪಾರ್ಟಿ ಇದ್ದ ಕಾರಣ ಹೆದ್ದಾರಿ ಬದಿಯ ಪೇಟೆಗಳ ಹೋಟೆಲ್ ಹಾಗೂ ಬಾರ್ ಅಂಡ್ ರೆಸ್ಟೋರೆಂಟ್ ಬಳಿ ಜನಜಂಗುಳಿ ಇದ್ದದ್ದರಿಂದ ಹೆದ್ದಾರಿ ಬಳಿ ರಸ್ತೆ ತಡೆ ಉಂಟಾಯಿತು.

ಪಡುಬಿದ್ರಿ, ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸಂಭ್ರಮ

ನವಕ ಕಲಶಾಭಿಷೇಕ, ಪೇಜಾವರ ಶ್ರೀಗಳಿಂದ ಸಂಸ್ಥಾನ ಪೂಜೆ

ಪಡುಬಿದ್ರಿ: ರೂ.33 ಕೋಟಿ ವೆಚ್ಚದಲ್ಲಿ ಸಮಗ್ರವಾಗಿ ಜೀರ್ಣೋದ್ಧಾರಗೊಂಡ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸುಸಂದರ್ಭದಲ್ಲಿ ವಿವಿಧ ಯಜ್ಞಯಾಗಾದಿಗಳು, ನವಕ ಕಲಶಾಭಿಷೇಕವು ಶ್ರೀ ಕ್ಷೇತ್ರದ ತಂತ್ರಿಗಳಾದ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯರ ನೇತೃತ್ವದಲ್ಲಿ ಶುಕ್ರವಾರ ಜರಗಿತು.

ಸಕಲರಿಗೆ ಸುಭಿಕ್ಷೆ, ಒಳಿತನ್ನು ಕರುಣಿಸಲಿ

ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಉಡುಪಿ ಶ್ರೀ ಪೇಜಾವರ ಮಠಾಧೀಶ ವಿಶ್ವಪ್ರಸನ್ನತೀರ್ಥ ಶ್ರೀಪಾದರು ದಿವ್ಯ ಸಾನಿಧ್ಯ ವಹಿಸಿ ಸಂಸ್ಥಾನ ಪೂಜೆ ನೆರವೇರಿಸಿ ಆಶೀರ್ವಚನ ನೀಡಿದರು.

ರುದ್ರ ದೇವರು ಮತ್ತು ಮಹಾಗಣಪತಿ ದೇವರ ಅನುಗ್ರಹ ನಿತ್ಯ ನಿರಂತರ ನಮಗೆ ಬೇಕು. ಬ್ರಹ್ಮಕಲಶೋತ್ಸವದ ಪರ್ವಕಾಲದಲ್ಲಿ ಗ್ರಾಮದ ಎಲ್ಲರ ಸಹಕಾರದಿಂದ ದೊಡ್ಡ ಉತ್ಸವ ನಡೆಯುವ ಕಾಲವನ್ನು ನೋಡುತ್ತಿದ್ದು, ಸಕಲ ಸಂಕಷ್ಟಗಳನ್ನು ದೂರೀಕರಿಸಿ ಸಕಲರಿಗೆ ಸುಭಿಕ್ಷೆ–ಒಳಿತನ್ನು ಕರುಣಿಸಲಿ ಎಂದು ಅನುಗ್ರಹ ಸಂದೇಶ ನೀಡಿದರು.







ವಿವಿಧ ಧಾರ್ಮಿಕ ಕಾರ್ಯಕ್ರಮ

ಧಾರ್ಮಿಕ ಕಾರ್ಯಕ್ರಮಗಳಡಿ ಶ್ರೀ ಸನ್ನಿಧಿಯಲ್ಲಿ ಅಷ್ಟೋತ್ತರಶತ ನಾರಿಕೇಲ ಗಣಯಾಗ, ಮಹಾ ರುದ್ರಯಾಗ, ತತ್ವಹೋಮ, ತತ್ವಕಲಶ ಪ್ರತಿಷ್ಠೆ, ನವಕ ಪ್ರಧಾನ ಯಾಗ, ತತ್ವಕಲಶಾಭಿಷೇಕ, ಪ್ರಸನ್ನ ಪೂಜೆ, ನ್ಯಾಸ ಪೂಜೆ, ಮಹಾಪೂಜೆ, ಬಲಿ, ಗಣಪತಿ ದೇವರ ಶಾಂತಿಯಾಗ, ಪ್ರಾಯಶ್ಚಿತ್ತಯಾಗ, ಮೂರ್ತಿಯಾಗ, ಪಂಚಬ್ರಹ್ಮಯಾಗ, ಅಥರ್ವಶೀರ್ಷ ಗಣಯಾಗ, ನವಕ ಪ್ರಧಾನ ಕಲಶಾಭಿಷೇಕ, ಪ್ರಸನ್ನ ಪೂಜೆ ಜರಗಿತು. ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು. ಸಂಜೆ ದುರ್ಗಾರಾಧನೆ, ಗಣಪತಿ ದೇವರ ಬ್ರಹ್ಮಕಲಶ ಮಂಟಪ ಸಂಸ್ಕಾರ, ರಾತ್ರಿ ಪೂಜೆ, ಬಲಿ, ಮರು ಆಯನಬಲಿ ಜರಗಿತು.

ಈ ಸಂದರ್ಭ ಜೀರ್ಣೋದ್ಧಾರ ಸಮಿತಿಯ ಅನುವಂಶಿಕ ಮೊಕ್ತೇಸರರಾದ ರತ್ನಾಕರರಾಜ ಅರಸು ಕಿನ್ನಿಕ್ಕ ಬಲ್ಲಾಳ್, ಪೇಟೆಮನೆ ಭವಾನಿ ಶಂಕರ್ ಹೆಗ್ಡೆ, ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ಅರ್ಚಕ ಎಚ್. ಪದ್ಮನಾಭ ಭಟ್, ವೈ.ಗುರುರಾಜ ಭಟ್, ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವ ಸಮಿತಿಯ ಪದಾಧಿಕಾರಿಗಳು, ಮುಂಬೈ, ಬೆಂಗಳೂರು ಸಹಿತ ವಿವಿಧ ಉಪಸಮಿತಿಗಳ ಸಂಚಾಲಕರು, ಸದಸ್ಯರು ಊರಿನ ಹತ್ತು ಸಮಸ್ತರು, ಭಕ್ತರು ಇದ್ದರು.

ಇಂದು ಬ್ರಹ್ಮಕುಂಭಾಭಿಷೇಕ

ಇಂದು (ಮೇ 2) ಅಷ್ಟೋತ್ತರಶತ ನಾರಿಕೇಲ ಗಣಯಾಗ, ಮಹಾರುದ್ರಯಾಗ, ಗಣಪತಿ ದೇವರ ತತ್ವಕಲಶ ಪ್ರತಿಷ್ಠೆ, ತತ್ವಯಾಗ ಈಶ್ವರ ದೇವರ ಬ್ರಹ್ಮಕುಂಭ ಸಹಿತ ಸಹಸ್ರದ್ರವ್ಯ ಕಲಶಾಧಿವಾಸ, ಅಧಿ ವಾಸಯಾಗ, ಕಲಶಾಭಿಷೇಕ ಆರಂಭಗೊಂಡು ದಿವಾ ಘಂಟೆ 8.05ಕ್ಕೆ ಒದಗುವ ವೃಷಭಲಗ್ನ ಸುಮುಹೂರ್ತದಲ್ಲಿ ಬ್ರಹ್ಮಕುಂಭಾಭಿಷೇಕವು ಜರಗಲಿದೆ. ಶ್ರೀ ಪಲಿಮಾರು ಮಠಾಧೀಶ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ಮತ್ತು ಕಿರಿಯ ಶ್ರೀ ಶ್ರೀ ವಿದ್ಯಾರಾಜೇಶ್ವರತೀರ್ಥ ಶ್ರೀಪಾದರ ದಿವ್ಯಸಾನಿಧ್ಯ ಮತ್ತು ಸಂಸ್ಥಾನ ಪೂಜೆಯು ನೆರವೇರಲಿದೆ.

ಪಡುಬಿದ್ರಿ, ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಧಾರ್ಮಿಕ ಸಭಾ ಕಾರ್ಯಕ್ರಮ

ಶುದ್ಧ ಸಂಕಲ್ಪದಿಂದ ಮಹತ್ಕಾರ್ಯ ಈಡೇರಿದೆ: ಸೋದೆ ಶ್ರೀ

ಪಡುಬಿದ್ರಿ: ಜನ್ಮಾಂತರದ ಪುಣ್ಯದಿಂದ ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವದಂತಹ ಧಾರ್ಮಿಕ ಕೆಲಸಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗಲಿದೆ. ಆ ನಿಟ್ಟಿನಲ್ಲಿ ಡಾ.ಕೆ. ಪ್ರಕಾಶ್ ಶೆಟ್ಟಿ ಅವರ ಗಟ್ಟಿತನದ ಶುದ್ಧ ಸಂಕಲ್ಪದಿಂದ ಎಲ್ಲಾ ಸಮಾಜದವರು ಪಾಲ್ಗೊಂಡು ನಡೆಸಿದ ಮಹತ್ಕಾರ್ಯದಿಂದ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನವು ಅತ್ಯಲ್ಪ ಅವಧಿಯಲ್ಲಿ ಅಭೂತಪೂರ್ವವಾಗಿ ಜೀರ್ಣೋದ್ಧಾರಗೊಂಡು ಬ್ರಹ್ಮಕಲಶೋತ್ಸವ ಸಂಭ್ರಮವನ್ನು ಕಾಣುವಂತಾಗಿದೆ ಎಂದು ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು ಹೇಳಿದರು.

ದಾನಿಗಳಿಗೆ ಸನ್ಮಾನ

ಶ್ರೀಗಳವರು ಶುಕ್ರವಾರ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ನಡೆಯುತ್ತಿರುವ ಬ್ರಹ್ಮಕಲ ಶೋತ್ಸವದ ಸುಧರ್ಮ ಪ್ರಕಾಶ ವೇದಿಕೆಯಲ್ಲಿ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ, ದಾನಿಗಳನ್ನು ಸನ್ಮಾನಿಸಿ, ಬಳಿಕ ಆಶೀರ್ವಚನ ನೀಡಿದರು.

ಶ್ರೀ ಅದಮಾರು ಮಠದ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು, ಸಮಾಜ ಗಟ್ಟಿಯಾಗುವಲ್ಲಿ ದೇವಳಗಳ ಪಾತ್ರ ಹಿರಿದು. ಗಟ್ಟಿಯಾದ ಮನಸ್ಸಂಕಲ್ಪದ ಜೊತೆಗೆ ನಾಯಕತ್ವದ ಕರ್ತೃತ್ವದ ಶಕ್ತಿ ಮತ್ತು ಭಗವಂತನ ಅನುಗ್ರಹದಿಂದ ಪಡುಬಿದ್ರಿ ದೇವಸ್ಥಾನವು ಕ್ಷಿಪ್ರವಾಗಿ ಜೀರ್ಣೋದ್ಧಾರಗೊಂಡು ಬ್ರಹ್ಮಕಲಶೋತ್ಸವ ವೈಭವ ಕಾಣುವಂತಾಗಿದೆ. ಅದರ ಪುಣ್ಯ ಸಂಪಾದನೆ ಊರಿನ ಜನತೆ ಪಡೆದಿದ್ದಾರೆ. ವಿಜೃಂಭಣೆಯು ಮುಂದುವರೆಯಲಿ ಪ್ರತಿಯೊಬ್ಬರ ಹೃದಯದಲ್ಲಿ ಭಗವಂತನ ನೆಲೆಸಲಿ ಎಂಬ ಸಂದೇಶವನ್ನು ನೀಡಿದರು.



> ಕರಾವಳಿ ಪ್ರಾಂತ್ಯ ದೇವಳಗಳ ನಾಡು. ನಮ್ಮ ಪರಂಪರೆಯ ಎಲ್ಲಾ ದೇವರುಗಳನ್ನು ನಾವು ಆರಾಧಿಸುವ ಸತ್ಸಂಪ್ರದಾಯವನ್ನು ಮುಂದುವರೆಸಬೇಕಿದೆ. ಆ ನಿಟ್ಟಿನಲ್ಲಿ ದೇವಳಗಳ ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವವು ನಮ್ಮ ಊರಿನ ಹೆಮ್ಮೆ ಹಾಗೂ ಮಹತ್ತರ ಫಲಪ್ರದಾಯಕವಾಗಿದೆ.
>
> ● ಶ್ರೀ ವಿಶವಲ್ಲಭತೀರ್ಥ ಶ್ರೀಪಾದರು

ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ ಕುದ್ರೋಳಿ ಗೋಕರ್ಣನಾಥೇಶ್ವರ ದೇವಸ್ಥಾನದ ಕೋಶಾಧಿಕಾರಿ ಪದ್ಮರಾಜ್ ಆರ್. ಮಾತನಾಡಿದರು. ಕರ್ಣಾಟಕ ಬ್ಯಾಂಕ್ ಸಿಎಸ್‌ಆರ್ ಅನುದಾನದಡಿ ರೂ.34 ಲಕ್ಷ ಮೊತ್ತವನ್ನು ದೇವಳದ ಪುಷ್ಕರಣಿಯ ಅಭಿವೃದ್ಧಿಗೆ ಎಜಿಎಂ ರವಿ ವೈದ್ಯ ಅವರು ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಉದ್ಯಮಿ ಡಾ. ಕೆ. ಪ್ರಕಾಶ್ ಶೆಟ್ಟಿ ಅವರಿಗೆ ಹಸ್ತಾಂತರಿಸಿದರು. ಅಧ್ಯಕ್ಷತೆ ವಹಿಸಿದ್ದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಉದ್ಯಮಿ ಡಾ. ಕೆ. ಪ್ರಕಾಶ್ ಶೆಟ್ಟಿ ಮಾತನಾಡಿದರು.

ದೇವಸ್ಥಾನದ ತಂತ್ರವರ್ಯ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯ, ಅರ್ಚಕ ವೃಂದ, ಸೇವಕ ವೃಂದ, ದಾನಿಗಳು, ವಿವಿಧ ಸಮಾಜದ ಮುಖ್ಯಸ್ಥರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಂಸದಕ್ಯಾ. ಬ್ರಿಜೇಶ್ ಚೌಟ, ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಯಶ್‌ಪಾಲ್ ಸುವರ್ಣ, ಡಾ. ಭರತ್ ಶೆಟ್ಟಿ ಮಾತನಾಡಿದರು. ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ ಕಾಪು ದೇವಸ್ಥಾನದ ಅಭಿವೃದ್ಧಿ ಸಮಿತಿಯ ಸಾಯಿರಾಧ ರವಿ ಶೆಟ್ಟಿ ನಂದಿಕೂರು ದೇವಸ್ಥಾನದ ಮುಕ್ತೇಸರರು ಮತ್ತು ಪ್ರಧಾನ ಅರ್ಚಕ ಮಧ್ವರಾಯ ಭಟ್, ಬೆಳ್ಮಣ್ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಮುಕ್ತೇಸರರು ಮತ್ತು ಪ್ರಧಾನ ಅರ್ಚಕ ವಿಶ್ವೇಶ್ ಭಟ್, ಪ್ರಮುಖರಾದ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು, ನವೀನ್ ಚಂದ್ರ ಜೆ. ಶೆಟ್ಟಿ ಪಡುಬಿದ್ರಿ, ಇನ್ನ ಕುರ್ಕಿಲ್ ಬೆಟ್ಟು ಸಂತೋಷ್ ಶೆಟ್ಟಿ ಪುಣೆ, ಮಹೇಶ್ ಶೆಟ್ಟಿ ಮುಂಬೈ, ಪದ್ಮನಾಭ ಬಂಗೇರ, ಅಣ್ಣು ಮೂಲ್ಯ ಪಡುಬಿದ್ರಿ, ಮುಂಬೈ ಪಾಡ ಖಾರ್‌ದಾನ್ ಶ್ರೀ ದುರ್ಗಾಪರಮೇಶ್ವರೀ ಮಂದಿರದ ಪುರುಷೋತ್ತಮ ಭಟ್, ಬೋಳ ರಘುರಾಮ್ ಶೆಟ್ಟಿ, ಚಂದ್ರಶೇಖರ್ ಶೆಟ್ಟಿ ಸರಸ್ವತಿ ಸುಬ್ಬಯ್ಯ ಶೆಟ್ಟಿ ಭವಾನಿ ರಘುರಾಮ ಶೆಟ್ಟಿ ಇದ್ದರು.

ಬ್ರಹ್ಮಕಲಶೋತ್ಸವ ಸಮಿತಿಯ ಪ್ರ. ಕಾರ್ಯದರ್ಶಿ ಮುರಳಿನಾಥ ಶೆಟ್ಟಿ ದಾನಿಗಳನ್ನು ಪರಿಚಯಿಸಿದರು. ಡಾ. ರಾಘವೇಂದ್ರ ರಾವ್ ನಿರೂಪಿಸಿದರು.

ಬೈಂದೂರು ಟೌನ್ ಕ್ರೆಡಿಟ್ ಸೊಸೈಟಿ: ಗಣಕಯಂತ್ರ ವಿಭಾಗದ ಲೋಕಾರ್ಪಣೆ



ಬೈಂದೂರು: ಯಾವುದೇ ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿಯ ಪಾರದರ್ಶಕವಾದ ಸ್ವಚ್ಛ ಆಡಳಿತ, ಸಿಬ್ಬಂದಿ ವರ್ಗದ ಪ್ರಾಮಾಣಿಕ ಸೇವಾ ಮನೋಭಾವನೆಯ ವ್ಯವಹಾರದಿಂದ ಗ್ರಾಹಕರ ವಿಶ್ವಾಸಗಳಿಸುವ ಮೂಲಕ ಸಾರ್ಥಕತೆಯ ಯಶಸ್ಸು ಕಾಣುತ್ತವೆ ಎಂದು ಖಂಬದಕೋಣೆ ರೈತರ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಅಧ್ಯಕ್ಷ ಎಸ್. ಪ್ರಕಾಶ್ಚಂದ್ರ ಶೆಟ್ಟಿ ಹೇಳಿದರು.

ಗುರುವಾರಯಡ್ತರೆಯಲ್ಲಿಬೈಂದೂರು ಟೌನ್ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯ ನೂತನ ಕೇಂದ್ರದಲ್ಲಿ ಗಣಕಯಂತ್ರ ವಿಭಾಗವನ್ನು ಉದ್ಘಾಟಿಸಿ ಮಾತನಾಡಿದರು.

ವತ್ತಿನೆಣೆ ಶ್ರೀ ಗುರುರಾಘವೇಂದ್ರ ಸ್ವಾಮಿ ಮಠದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸೂಲಿಯಣ್ಣ ಶೆಟ್ಟಿ ಸಂಸ್ಥೆಯ ನೂತನ ಕೇಂದ್ರವನ್ನು ಉದ್ಘಾಟಿಸಿದರು. ಶಾಸಕ ಗುರುರಾಜ ಗಂಟಿಹೊಳೆ ಶುಭಹಾರೈಸಿದರು ಉದ್ಯಮಿ ನಾರಾಯಣ ಪ್ರಭು ಮಣಿಪಾಲ ಭದ್ರತಾ ಕೋಶವನ್ನು, ಬೈಂದೂರು ಹೋಲಿಕ್ರಾಸ್ ಚರ್ಚಿನ ಉಪಾಧ್ಯಕ್ಷ ಸ್ಟೀಫನ್ ಡಯಾಸ್ ಸಿಇಒ ಕೊಠಡಿ ಉದ್ಘಾಟಿಸಿದರು. ಕಟ್ಟಡದ ಮಾಲಕ ಸುರೇಶ ಹೋಬಳಿದಾರ್, ಉದ್ಯಮಿಗಳಾದ ನಾಗರಾಜ ಕಿಣಿ ಮಣಿಪಾಲ, ಯು. ಪಾಂಡುರಂಗ ಪಡಿಯಾರ್, ಇಸ್ರೋ ಕೇಂದ್ರದ ವಿಜ್ಞಾನಿ ಭಾಸ್ಕರ ಮಂಜ, ಸಂಸ್ಥೆಯ ನಿರ್ದೇಶಕರಾದ ಐ. ನಾರಾಯಣ, ತಿಯೋದರ ಫೆರ್ನಾಂಡೀಸ್, ಎಲ್ಸನ್ ಡಯಾಸ್, ಯೋಗೀಶ್ ಭಟ್, ಸುನೀಲ್ ಜಿ. ಪೂಜಾರಿ, ಗಿರೀಶ್ ಮೊಗವೀರ, ದಿನೇಶ ಗಾಣಿಗ. ಅನಿಲ್ ಶೇಟ್, ರಾಜಾರಾಮ ಪಡಿಯಾರ್, ಸುನಂದ ಗೋಪಾಲ ಗಾಣಿಗ, ಅನುಸೂಯ ಎಸ್., ಸಿಬ್ಬಂದಿಗಳಾದ ತನೋಜ್, ಅಮೃತಾ ಉಪಸ್ಥಿತರಿದ್ದರು ಸಂಸ್ಥೆಯ ಅಧ್ಯಕ್ಷ ರಾಜೇಶ ಪೈ ಪ್ರಾಸ್ತಾವಿಸಿದರು. ಉಪಾಧ್ಯಕ್ಷ ನರಸಿಂಹ ನಾಯಕ್ ಸ್ವಾಗತಿಸಿ, ಸಿಇಒ ರಾಮ ಪೂಜಾರಿ ಸಿ. ವಂದಿಸಿದರು.

ಹಟ್ಟಿಯಂಗಡಿ ವಿದ್ಯಾರ್ಥಿಗಳ ಸಾಧನೆ



ಕುಂದಾಪುರ: ಹಟ್ಟಿಯಂಗಡಿಯ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆ 2025–26ನೇ ಶೈಕ್ಷಣಿಕ ವರ್ಷದಲ್ಲಿ ಐಸಿಎಸ್‌ಇ 10ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಸತತ 23ನೇ ಬಾರಿ ಶೇ. 100 ಫಲಿತಾಂಶ ದಾಖಲಿಸಿದೆ. ಈ ಮೂಲಕ ಶೇ.100 ಫಲಿತಾಂಶ ದಾಖಲಿಸಿರುವ ಸಾಧನೆ ಮಾಡಿರುವುದು ಕುಂದಾಪುರ ತಾಲೂಕಿನ ಏಕೈಕ ಐಸಿಎಸ್‌ಇ ಪಠ್ಯಕ್ರಮದ ಶಾಲೆ ಎಂಬ ಹಿರಿಮೆಗೆ ಪಾತ್ರವಾಗಿದೆ.



ಈ ವರ್ಷ 270 ವಿದ್ಯಾರ್ಥಿಗಳು ಐಸಿಎಸ್‌ಇ 10ನೇ ವರ್ಗದ ವಾರ್ಷಿಕ ಪರೀಕ್ಷೆಗೆ ಹಾಜರಾಗಿದ್ದು, 180 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 88 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿತೇರ್ಗಡೆಯಾಗಿದ್ದಾರೆ. ಗ್ರೀಷ್ಮಾ ಬಿ. ಮತ್ತು ಅಹನ ಜಿ. ಶೇ. 98 ಅಂಕದೊಂದಿಗೆ ಪ್ರಥಮ ಸ್ಥಾನ, ಶಮಿತ್ ದೇವಾಡಿಗ, ಪೃಥ್ವಿರಾಜ್ ಶೆಟ್ಟಿ, ಚಿನ್ಮಯ್ ಮತ್ತು ದೀಕ್ಷಿತ್ ಶೇ. 97.20 ದ್ವಿತೀಯ ಸ್ಥಾನ ಹಾಗೂ ಅದಿತಿ ಪೂಜಾರಿ, ಆದಿತ್ಯ, ಅನನ್ಯ ಸಿ. ಹಿರೇಮಠ, ಅರ್ಪಿತಾ ಮೂಲಿಮನೆ, ಅವನಿ ಎ. ಶೆಟ್ಟಿ ಶೇ. 97 ಅಂಕದೊಂದಿಗೆ ತೃತೀಯ ಸ್ಥಾನವನ್ನು ಪಡೆದಿದ್ದಾರೆ.

ಕೋಟ: ಐ.ಟಿ.ಐ ಪ್ರವೇಶ ಪ್ರಕಟಣೆ

ಕೋಟ: 2026–26ನೇ ಸಾಲಿನ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಬಿದ್ಕಲ್ಕಟ್ಟೆಯಲ್ಲಿ ವೃತ್ತಿ ಪರ ಕೋರ್ಸ್‌ಗಳಿಗೆ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ, ಪಿ.ಯು.ಸಿ ಉತ್ತೀರ್ಣ/ ಅನುತ್ತೀರ್ಣರಾದ ಅರ್ಹ ವಿದ್ಯಾರ್ಥಿ ಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಸಮೀಪದ ಐ.ಟಿ.ಐ ಗಳಲ್ಲಿ ಅಥವಾ www.cite.karnataka.gov.in ವಿಳಾಸದಲ್ಲಿ ಅರ್ಜಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗೆ ಪ್ರಾಚಾರ್ಯರು ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬಿದ್ಕಲ್ಕಟ್ಟೆ. ಮೊಬೈಲ್.ನಂ: 8123730460 ಅನ್ನು ಸಂಪರ್ಕಿಸಬಹುದಾಗಿದೆ.

ಶಾಂತ ಸಮಾಜಕ್ಕೆ ಗೌತಮ ಬುದ್ಧರ ಸಂದೇಶ ಪಾಲನೆ ಅಗತ್ಯ: ಗಫೂರ್



ಉಡುಪಿ: ಗೌತಮ ಬುದ್ಧರು ಉತ್ತಮ ಬದುಕನ್ನು ರೂಪಿಸಲು ಅವಶ್ಯವಿರುವ ಸಂದೇಶವನ್ನು ನೀಡಿದವರು, ಇಂದಿನ ಕಾಲದಲ್ಲಿ ನಡೆಯುತ್ತಿರುವ ಅನೇಕ ಅಹಿತಕರ ಘಟನೆಗಳನ್ನು ತಡೆಗಟ್ಟಿ ಸಮಾಜದಲ್ಲಿರುವ ಅಹಿಂಸೆ ಅಸಮಾನತೆ ಮೌಢ್ಯಗಳನ್ನು ದೂರಗೊಳಿಸಿ, ಸಮಾಜವನ್ನು ಒಗ್ಗೂಡಿಸುವಲ್ಲಿ ಬುದ್ಧರ ಅಹಿಂಸೆ ಸತ್ಯದ ಸಂದೇಶಗಳು ಸಹಕಾರಿ ಯಾಗಿದೆ ಎಂದು ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ ಗಫೂರ್ ಹೇಳಿದರು.

ಅವರು ಶುಕ್ರವಾರ ಉಡುಪಿ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಉಡುಪಿ ಜಿಲ್ಲೆ ಬುದ್ಧಿಸ್ಟ್ ಸೊಸೈಟಿ ಆಫ್ ಇಂಡಿಯಾ ಉಡುಪಿ ಇವರ ಸಹಯೋಗದಲ್ಲಿ ನಡೆದ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮ ಬೆಂಗಳೂರು ಅಧ್ಯಕ್ಷ ಮಂಜುನಾಥ ಪೂಜಾರಿ ಮಾತನಾಡಿದರು. ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬೌದ್ಧ ಚಿಂತಕ ರಮೇಶ್ ರಘುರಾಮ ಭಗವಾನ್ ಬುದ್ಧರ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಈ ಸಂದರ್ಭ ವಿವಿಧ ಸ್ಪರ್ಧೆಯ ವಿಜೇತರಿಗೆ ಬಹುಮಾನವನ್ನು ವಿತರಿಸಲಾಯಿತು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಜಿಲ್ಲಾ ಬುದ್ಧಿಸ್ಟ್ ಸೊಸೈಟಿ ಆಫ್ ಇಂಡಿಯಾ ಅಧ್ಯಕ್ಷ ಅಜೆಯ್ ಕುಮಾರ್ ಎಸ್, ಕಾಲೇಜಿನ ಉಪನ್ಯಾಸಕ ನಾಗರಾಜ್ ಜಿ ಎಸ್, ಬುದ್ಧಿಸ್ಟ್ ಸೊಸೈಟಿ ಆಫ್ ಇಂಡಿಯಾ ಸದಸ್ಯರು, ಭಗವಾನ್ ಬುದ್ಧ ತತ್ವ ಅನುಯಾಯಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ ಪ್ರಾಸ್ತವಿಕ ನುಡಿಗಳನ್ನಾಡಿದರು. ವರ್ಷಾ ಬಿ. ಕೋಟ್ಯಾನ್ ನಿರೂಪಿಸಿದರು.



ಬುದ್ಧ ಪೂರ್ಣಿಮೆಯ ಪೂರ್ವಭಾವಿಯಾಗಿ ಮಣಿಪಾಲದ ಮುನಿಯಾಲು ಆಯುರ್ವೇದ ಸಂಸ್ಥೆಯ ಅಧ್ಯಕ್ಷ ಡಾ. ಎಂ. ವಿಜಯ ಭಾನು ಶೆಟ್ಟಿ ಅವರು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಭಗವಾನ್ ಬುದ್ಧರ ಬೋಧನೆಗಳ ಸಾರಾಂಶವಾದ 'ತ್ರಿಪಿಟಕ' ಹಾಗೂ ಕ್ಯಾನ್ಸರ್ ಕುರಿತಾದ 'ಸಮ್ಯಕ್‌ಸಂಬುದ್ಧ ಮತ್ತು ಜಂಬೂ ದ್ವೀಪ' ಸೇರಿದಂತೆ ತಮ್ಮ ವಿವಿಧ ಕೃತಿಗಳನ್ನು ಹಸ್ತಾಂತರಿಸಿದರು.



ಕಾರ್ಕಳದ ಕಲ್ಯಾ ಗ್ರಾಮದ ಮುಂಡೆ ಬಾರು ಎಂಬಲ್ಲಿ ಸುಧಾಕರ ಆಚಾರ್ಯ ಅವರ ಫರ್ನಿಚರ್ ಅಂಗಡಿಗೆ ಆಕಸ್ಮಿಕ ಬೆಂಕಿ ಬಿದ್ದು 3 ಲಕ್ಷ ರೂ. ಅಂದಾಜು ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ.

ಉಡುಪಿ ತಾಲೂಕಿನ ಎಸ್ಸೆಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಕನ್ನಡದಲ್ಲಿ ನೂರಕ್ಕೆ ನೂರು ಅಂಕ ಪಡೆದ ಸುಮಾರು 50 ಮಂದಿ ವಿದ್ಯಾರ್ಥಿಗಳಿಗೆ ಗೌರವ

ನಾಳೆ ಉಡುಪಿಯಲ್ಲಿ ಹದಿನಾರನೇ ಕನ್ನಡ ಸಾಹಿತ್ಯ ಸಮ್ಮೇಳನ ಸಂಭ್ರಮ, ಸಾಧಕರಿಗೆ ಸನ್ಮಾನ

ಉಡುಪಿ: ಉಡುಪಿ ತಾಲೂಕು ಹದಿನಾರನೇ ಕನ್ನಡ ಸಾಹಿತ್ಯ ಸಮ್ಮೇಳನ ಸಾಹಿತ್ಯ–ಸಂಸ್ಕೃತಿ–ಕಲೋತ್ಸವವು ಮೇ 3ರಂದು ಉಡುಪಿಯ ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಕೆಮ್ತೂರು ದೊಡ್ಡಣ್ಣ ಶೆಟ್ಟಿ ವೇದಿಕೆಯಲ್ಲಿ ನಡೆಯಲಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ಉಡುಪಿ ತಾಲೂಕು ಅಧ್ಯಕ್ಷ ರವಿರಾಜ್ ಎಚ್‌ಪಿ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಡಾ. ಭಾಸ್ಕರಾನಂದ ಕುಮಾರ್ ಅವರ ಸಮ್ಮೇಳನಾಧ್ಯಕ್ಷತೆಯಲ್ಲಿ ನಡೆಯುವ ಈ ಸಮ್ಮೇಳನವು ಬೆಳಗ್ಗೆ 8.30ಕ್ಕೆ ಮೆರವಣಿಗೆಯೊಂದಿಗೆ ಪ್ರಾರಂಭವಾಗುತ್ತದೆ. ನಂತರ ಧ್ವಜಾರೋಹಣ, ಸಾಹಿತಿ ರಾಮದಾಸ್ ನೆನಪಿನ ಪುಸ್ತಕ ಮಳಿಗೆ, ಗಮಕ ಸೌರಭ, ಚಿತ್ರ ಕಲಾವಿದ ಆಸ್ಟ್ರೋಮೋಹನ್ ಹಾಗೂ ಜನಾರ್ಧನ ಕೊಡವೂರು ಸಂಪಾದಿತ 'ಚಿತ್ರಮಯ ಉಡುಪಿ'



ಉದ್ಘಾಟನೆ, ನಿತ್ಯಾನಂದ ನಾಯಕ್ ಅವರ ಮುರಲ್ ಕಲಾಕೃತಿಗಳ ಪ್ರದರ್ಶನದ ಉದ್ಘಾಟನೆ ನಡೆಯಲಿದೆ.

ನಂತರ 10ಕ್ಕೆ ಸಮ್ಮೇಳನ ಅಧ್ಯಕ್ಷರ ಪರಿಚಯದ ನುಡಿ ಚಿತ್ರ ಬಿಡುಗಡೆಯೊಂದಿಗೆ ಸಮ್ಮೇಳನದ ಉದ್ಘಾಟನಾ ಸಮಾರಂಭ ನೆರವೇರಲಿದೆ. ಸಮ್ಮೇಳನದ ಉದ್ಘಾಟನೆಯನ್ನು ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಮೋಹನ್ ಆಳ್ವ ನೆರವೇರಿಸಲಿದ್ದು ಗಣ್ಯರು ಭಾಗವಹಿಸಲಿದ್ದಾರೆ. ಇದೇ ಸಮಯದಲ್ಲಿ ಕಸಾಪ ಉಡುಪಿ ತಾಲೂಕು ಗೌರವ ಪುರಸ್ಕಾರವನ್ನು ವಿವಿಧ ಕ್ಷೇತ್ರದ ಸಾಧಕ ತಿಲಕನಾಥ್ ಮಂಜೇಶ್ವರ, ಗೋಪಾಲ್ ಭಟ್ ಎಂ., ವಿಮಲಾ ಚಂದ್ರಶೇಖರ್, ಮರವಂತೆ ನಾಗರಾಜ್ ಹೆಬ್ಬಾರ್, ಕೆ.ರಂಜನ್, ಲಕ್ಷ್ಮಿ ಹರಿಶ್ಚಂದ್ರ, ಅ.ರಾ. ಪ್ರಭಾಕರ್ ಪೂಜಾರಿ, ವಿಘ್ನೇಶ್ವರ ಅಡಿಗ, ಪಿ.ಎಂ. ವೇಣು ಗೋಪಾಲ್ ಹೆಬ್ಬಾರ್, ಶ್ರೀಕಾಂತ್ ಭಟ್ ವಿದ್ಯಾಲತಾ ಯು. ಶೆಟ್ಟಿ ಇವರಿಗೆ ನೀಡಿ ಗೌರವಿಸಲಾಗುವುದು. ನಂತರ ಪಾಡಿಗಾರು ಲಕ್ಷ್ಮೀನಾರಾಯಣ ಉಪಾಧ್ಯಾಯ ಅವರಿಂದ ಗೀತ ಗಾಯನ ನಡೆದು, ಉಡುಪಿ ತಾಲೂಕಿನ ಎಸ್ಸೆಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಕನ್ನಡದಲ್ಲಿ ನೂರಕ್ಕೆ ನೂರು ಅಂಕಗಳನ್ನು ಪಡೆದ ಸುಮಾರು 50 ಮಂದಿ ವಿದ್ಯಾರ್ಥಿಗಳನ್ನು ಗೌರವಿಸಲಾಗುವುದು.

12ಕ್ಕೆ ಬಹುಮುಖಿ ಕನ್ನಡ ಕವಿ ಗೋಷ್ಠಿ ನಡೆಯಲಿದ್ದು ಇದರ ಆಶಯ ನುಡಿಯನ್ನು ಡಾ. ರಶ್ಮಿ ಅಮ್ಮೆಂಬಳ ಹಾಗೂ ಸಮನ್ವಯವನ್ನು ಸುಧಾ ಆಡುಕಳ ನಡೆಸಿಕೊಡಲಿದ್ದಾರೆ. ಮಧ್ಯಾಹ್ನ 1.15 ರಿಂದ ಹೆಜ್ಜೆಗೆಜ್ಜೆ ಉಡುಪಿ – ಮಣಿಪಾಲ ಇವರಿಂದ 'ನೃತ್ಯ ಸಿಂಚನ' ಕಾರ್ಯಕ್ರಮ ನಡೆಯಲಿದೆ. ನಂತರ ಸುಹಾಸಂ ಉಡುಪಿ ಇದರ ಅಧ್ಯಕ್ಷೆ ಸಂಧ್ಯಾ ಶೆಣೈ ಉಡುಪಿ ಇವರಿಂದ ಹಾಸ್ಯ ಸಮಯ 'ಆಪ್ತಮಿತ್ರರ ಕಚಗುಳಿ' ನಡೆಯಲಿದೆ.

ಮಧ್ಯಾಹ್ನ 2.20ಕ್ಕೆ ವಿಚಾರಗೋಷ್ಠಿಯಲ್ಲಿ ನಿತ್ಯಾನಂದ ಪತ್ರೆ, ಪ್ರೊ. ಕೊಕ್ಕರ್ಣೆ ಸುರೇಂದ್ರನಾಥ್ ಶೆಟ್ಟಿ ಗುರುರಾಜ್ ಸನಿಲ್ ಅವರು ಭಾಗವಹಿಸಲಿದ್ದಾರೆ. ಮಧ್ಯಾಹ್ನ 3:35ಕ್ಕೆ ಸಮ್ಮೇಳನಾಧ್ಯಕ್ಷ ಡಾ.ಭಾಸ್ಕರಾನಂದ ಕುಮಾರ್ ಅವರೊಂದಿಗೆ ಮುಖಾಮುಖಿ ನಡೆಯಲಿದ್ದು, ಬನ್ನಂಜೆ ಸಂಜೀವ ಸುವರ್ಣ, ಮುರಳಿ ಕಡೆಕಾರ್ ಉದ್ಯಾವರ ನಾಗೇಶ್, ಡಾ. ಕಾತ್ಯಾಯಿನಿ ಕುಂಜಿಬೆಟ್ಟು ಭಾಗವಹಿಸಲಿದ್ದಾರೆ. ಸಂಜೆ 4:30ರಿಂದ ಸಮಾರೋಪ ಸಮಾರಂಭ ನಡೆಯಲಿದ್ದು ಡಾ. ಗಣನಾಥ್ ಶೆಟ್ಟಿ ಎಕ್ಕಾರ್ ಸಮಾರೋಪ ಭಾಷಣ ಮಾಡಲಿದ್ದಾರೆ. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 23 ಮಂದಿ ಗಣ್ಯರನ್ನು ಮತ್ತು 5 ಸಂಘ ಸಂಸ್ಥೆಗಳನ್ನು ಗುರುತಿಸಿ ಗೌರವಿಸಲಾಗುವುದು. ಸಂಜೆ 6 ಗಂಟೆಗೆ ಸರಿಯಾಗಿ ರಾಜೇಶ್ ಭಟ್ ಪಣಿಯಾಡಿ ಅವರ ನಿರ್ದೇಶನದ 'ಕತ್ತಲೆ ರಾಜ್ಯದ ಮರ್ಕಟ ರಾಜ' ಎಂಬ ಮಕ್ಕಳ ನಾಟಕ ಪ್ರದರ್ಶನಗೊಳ್ಳುವುದು ಎಂದು ರವಿರಾಜ್ ಎಚ್‌ಪಿ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಕಸಾಪ ಉಡುಪಿ ತಾಲೂಕು ಗೌರವ ಸಲಹೆಗಾರರಾದ ವಿಶ್ವನಾಥ್ ಶೆಣೈ, ಭುವನಪ್ರಸಾದ್ ಹೆಗ್ಡೆ ಗೌರವ ಕಾರ್ಯದರ್ಶಿ ರಂಜನಿ ವಸಂತ್, ಸ್ವಾಗತ ಸಮಿತಿ ಕಾರ್ಯದರ್ಶಿ ಸತೀಶ್ ಕೊಡವೂರು, ಕಾನೂನು ಸಲಹೆಗಾರ ವಿನಯ್ ಆಚಾರ್ಯ ಮುಂಡ್ಕೂರು, ಸಾಂಸ್ಕೃತಿಕ ಕಾರ್ಯದರ್ಶಿ ವಸಂತ್ ಉಪಸ್ಥಿತರಿದ್ದರು.